ಸೋಮವಾರ, ಮಾರ್ಚ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 66 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

‘ನೈಸರ್ ಮತ್ತು ಸೈಬ್ಸ್’ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಮೂಲ ವಿಜ್ಞಾನ ವಿಷಯದಲ್ಲಿ ಇಂಟಿಗ್ರೇಟೆಡ್ ಎಂಎಸ್ಸಿ ಪದವಿಯನ್ನು ಆರಂಭಿಸಿದ್ದು, ಇದರ ಪ್ರವೇಶ ಪ್ರಕ್ರಿಯೆ ಕುರಿತ ವಿವರ ಇಲ್ಲಿದೆ.

ಆಳ-ಅಗಲ
ಉಕ್ರೇನ್ ಗಡಿಯಲ್ಲಿ ನ್ಯಾಟೊ ಶಸ್ತ್ರ ಕೋಠಿ

ಮನೆಗಳಿಗೆ ಪಡಿತರ ವಿತರಣೆ ಪ್ರಸ್ತಾವ ಕೈಬಿಡಲಾಗಿದೆ: ಕತ್ತಿ 6
ರಣಜಿ: ನಾಕೌಟ್ ಹಂತಕ್ಕೆ ಕರ್ನಾಟಕ 13
ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಚರ್ಚೆ
ಒಟಿಟಿ; ಕಥೆ ಹೇಳುವವರ ಮುಕ್ತ ಮಾಧ್ಯಮ 5

ಗೃಹ ಇಲಾಖೆಯಲ್ಲಿ ವರ್ಗಾವಣೆ ದಂಧೆ ಜೋರು • ಭಾರಿ ಹಣಕ್ಕೆ ಹುದ್ದೆ ಮಾರಾಟ?

ಕಾಸು ಕೊಟ್ಟರಷ್ಟೇ ‘ಪೊಲೀಸ್ ಬಾಸ್’

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಕಾನೂನು ಹಾಗೂ ಸಮಾಜದ ರಕ್ಷಕರಾಗಿರುವ ಕೆಲ ಪೊಲೀಸರೇ, ಮಾಫಿಯಾ ಜೊತೆ ಕೈ ಜೋಡಿಸಿ ‘ಭಕ್ಷಕ’ರಾಗಿ ಜನರನ್ನು ಕಾಡುತ್ತಿರುವ ದೂರುಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿವೆ. ಕಾಸು ಕೊಟ್ಟು ಆಯಕಟ್ಟಿನ ಸ್ಥಾನ ಗಿಟ್ಟಿಸುವ ಪೊಲೀಸರು, ಹಣ ಮರು ಸಂಪಾದಿಸಲು ಹುಡುಕುವ ದಾರಿಗಳು ಅನೇಕ. ಹಣದ ಹಪಾಹಪಿಗೆ ಬಿದ್ದಿರುವ ಕೆಲ ಪೊಲೀಸರ ಬೆನ್ನು ಹತ್ತಿದಾಗ ‘ವರ್ಗಾವಣೆ ದಂಧೆ’ಯ ಕರಾಳ ಮುಖ ತೆರೆದುಕೊಳ್ಳುತ್ತದೆ.

ಜಗಳ, ಹಲ್ಲೆ, ಕೊಲೆ, ಕಳವು, ಸುಲಿಗೆಯಂಥ ಅಪರಾಧ ಕೃತ್ಯಗಳು ನಡೆದಾಗ ಜನರಿಗೆ ನೆನಪಾಗುವುದು ‘ಪೊಲೀಸರು’. ನೊಂದ ಜೀವಗಳಿಗೆ ನ್ಯಾಯ ಕೊಡಿಸುವ ಜವಾಬ್ದಾರಿಯೂ ಅವರದ್ದು. ಇತ್ತೀಚಿನ ದಿನಗಳಲ್ಲಿ ಪೊಲೀಸರ ವೃತ್ತಿನಿಷ್ಠೆ ಹಾಗೂ ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ ಎಂಬ ಚರ್ಚೆ ಸಾರ್ವಜನಿಕರ ವಲಯದಲ್ಲಿದೆ.

‘ಸಿವಿಲ್ ವ್ಯಾಜ್ಯಗಳಲ್ಲಿ ಮಧ್ಯಪ್ರವೇಶಿಸಬಾರದು’ ಎಂದು ನ್ಯಾಯಾಲಯ ಹಲವು ಸಲ ಆದೇಶ ನೀಡಿದೆ. ಜೊತೆಗೆ, ಸರ್ಕಾರದಿಂದಲೂ ನಿಯಮಾವಳಿ ರೂಪಿಸಲಾಗಿದೆ. ಇದಕ್ಕೆ ಕ್ಯಾರೆ ಎನ್ನದ ಕೆಲ ಪೊಲೀಸರು, ಭೂವ್ಯಾಜ್ಯಗಳಲ್ಲಿ (ಸಿವಿಲ್) ನಿಯಮಬಾಹಿರವಾಗಿ ಹಸ್ತಕ್ಷೇಪ ಮಾಡಿ ಭಾರಿ ಮೊತ್ತದ ಹಣ ಸಂಪಾದಿಸುವುದು ಭ್ರಷ್ಟಾಚಾರದ ಪ್ರಮುಖ ಮಾರ್ಗವಾಗಿದೆ. ಬಡವರು, ಮಧ್ಯಮವರ್ಗದವರು ವ್ಯಾಜ್ಯಗಳನ್ನು ಹಿಡಿದು ಹೋದರೆ, ಲಂಚ ಕೊಡುವುದು ತಪ್ಪದು; ಕೊನೆಗೆ ಭೂಮಿಯೂ ಉಳಿಯದು ಎಂಬ ವಾತಾವರಣ ಸೃಷ್ಟಿಯಾಗಿದೆ.

ಕೈ ತುಂಬ ‘ಮಾಮೂಲಿ’ ಸಿಗುವ ಠಾಣೆ ಹಾಗೂ ಆಯಕಟ್ಟಿನ ಹುದ್ದೆಗಳನ್ನು ಪಡೆಯಲು ಪಿಎಸ್ಐ, ಇನ್‌ಸ್ಪೆಕ್ಟರ್, ಎಸಿಪಿ/ ಡಿವೈಎಸ್ಪಿಗಳಲ್ಲಿ ಪೈಪೋಟಿ

ಭಾವು ಪತ್ತಾರ್

ಭ್ರಷ್ಟಾಚಾರ ಜನರಿಗೆ ಪ್ರಹಾರ

ಹೆಚ್ಚಾಗಿದೆ. ವರ್ಗಾವಣೆಗೆ ಅಗತ್ಯವಾದ ಜನಪ್ರತಿನಿಧಿಗಳ ‘ಮಿನಿಟ್ಸ್’ಗಳನ್ನು (ಶಿಫಾರಸು ಪತ್ರ) ದುಡ್ಡು ಕೊಟ್ಟು ಖರೀದಿಸುತ್ತಿರುವ ಕೆಲ ಪೊಲೀಸರು, ತಮ್ಮಿಷ್ಟದ ಠಾಣೆಗಳ ಬಾಸ್ ಆಗುತ್ತಿದ್ದಾರೆ. ಹಣ ನೀಡದ ಹಾಗೂ ಜಾತಿ ಬೆಂಬಲವಿಲ್ಲದ ಪೊಲೀಸರು, ‘ನಾನ್ ಎಕ್ಸಿಕ್ಯುಟಿವ್’ ಹುದ್ದೆಗಳಲ್ಲೇ ಕಾಲ ಕಳೆಯುತ್ತಿದ್ದಾರೆ ಎಂಬುದನ್ನು ಕೆಲ ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ.

ಕೆಲ ಜಿಲ್ಲಾ ಎಸ್ಪಿ, ಕಮಿಷನರ್ ಹಾಗೂ ವಲಯಗಳ ಐಜಿಪಿ ಹುದ್ದೆಗಳಿಗೂ ಜಾತಿ, ಹಣ ಬಲದ ವರ್ಗಾವಣೆ ಇರುವುದಾಗಿ ಹೇಳುವ ಕೆಲ ಪೊಲೀಸರು, ಅಂಥ ವ್ಯವಸ್ಥೆಯನ್ನು ಪ್ರಶ್ನಿಸಲು ಭಯಪಡುತ್ತಿದ್ದಾರೆ.

‘ಲಕ್ಷ ಹಾಗೂ ಕೋಟಿಗಟ್ಟಲೇ ಹಣ ಕೊಟ್ಟು ಈ ಹುದ್ದೆಗೆ ಬಂದಿದ್ದೇನೆ’ ಎಂದು ಮುಲಾಜಿಲ್ಲದೇ ಹೇಳಿಕೊಳ್ಳುವ ಕೆಲ ಪೊಲೀಸರು, ವರ್ಷದ ಸೇವಾವಧಿಯಲ್ಲೇ ದುಪ್ಪಟ್ಟು ಹಣ ಸಂಪಾದಿಸಲು ‘ನ್ಯಾಯ’ವನ್ನೇ ಮಾರಾಟಕ್ಕಿಟ್ಟಿದ್ದಾರೆ’ ಎಂದು ಹೆಸರು ಹೇಳಲಿಚ್ಛಿಸದ ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

‘ಮಾದಕ ವಸ್ತು (ಡ್ರಗ್ಸ್), ರಿಯಲ್ ಎಸ್ಟೇಟ್, ಭೂಗತ ಲೋಕ, ವೇಶ್ಯಾವಾಟಿಕೆ, ಸ್ಪಾಗಳು, ಮೀಟರ್ ಬಡ್ಡಿ, ಪಬ್ ಹಾಗೂ ಬಾರ್, ಹೋಟೆಲ್ ಹಾಗೂ ಇತರೆ ಮಾಫಿಯಾಗಳ ಜೊತೆ ಸಂಪರ್ಕವಿಟ್ಟುಕೊಂಡು, ಅದರಿಂದಲೇ ‘ಕಾಣಿಕೆ’ ಪಡೆದು ಜೇಬು ತುಂಬಿಸಿಕೊಳ್ಳುತ್ತಿದ್ದಾರೆ.’

‘ಬೀದಿ– ಬದಿ ವ್ಯಾಪಾರಿಗಳು, ತಳ್ಳುಗಾಡಿಯವರು, ಅವಧಿ ಮೀರಿ ತಡರಾತ್ರಿವರೆಗೆ ವಹಿವಾಟು ನಡೆಸುವವರು, ತಿಂಡಿ–ತಿನಿಸು ಮಾರುವವರು ಸೇರಿದಂತೆ ದಿನದ ದುಡಿಮೆ ನಂಬಿದವರಿಗೆಲ್ಲ ಪೊಲೀಸರು ‘ಮಾಮೂಲಿ’ ನಿಗದಿಪಡಿಸಿದ್ದಾರೆ. ಠಾಣೆ ಮುಖ್ಯಸ್ಥರೇ, ಸಿಬ್ಬಂದಿಯನ್ನು ಮಾಮೂಲಿ ವಸೂಲಿಗೆಂದೇ ನೇಮಿಸಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ’ ಎಂದೂ ಅವರು ಆರೋಪಿಸಿದರು.

6ನೇ ಪುಟ ನೋಡಿ
ಇನ್ನೊಂದು ಸುದ್ದಿ 6

ಯಾವ ಹುದ್ದೆಗೆ ಎಷ್ಟು ಲಂಚ?

₹10 ಲಕ್ಷದಿಂದ ₹30 ಲಕ್ಷ ಪಿಎಸ್ಐ	₹20 ಲಕ್ಷದಿಂದ ₹1 ಕೋಟಿ ಇನ್‌ಸ್ಪೆಕ್ಟರ್	₹25 ಲಕ್ಷದಿಂದ ₹1 ಕೋಟಿ ಎಸಿಪಿ
₹25 ಲಕ್ಷದಿಂದ ₹1 ಕೋಟಿ ಡಿವೈಎಸ್ಪಿ	₹50 ಲಕ್ಷದಿಂದ ₹1 ಕೋಟಿ ಎಸ್ಪಿ	₹1 ಕೋಟಿಯಿಂದ ₹5 ಕೋಟಿ ಡಿಸಿಪಿ

‘ರಕ್ಷಣೆ ಸಿಗದೇ ಜನರ ಒದ್ದಾಟ’

ಜಾತಿ, ಧರ್ಮರಹಿತವಾದ ಪೊಲೀಸ್ ಇಲಾಖೆ ಇತ್ತೀಚಿನ ದಿನಗಳಲ್ಲಿ ದಿಕ್ಕುತಪ್ಪಿದೆ. ರಾಜಕಾರಣಿಗಳ ಕಾನೂನುಬಾಹಿರ ಹಸ್ತಕ್ಷೇಪದಿಂದ ಅಧಿಕಾರ ದುರುಪಯೋಗವಾಗುತ್ತಿದ್ದು, ರಕ್ಷಣೆ ಸಿಗದೇ ಜನ ಒದ್ದಾಡುತ್ತಿದ್ದಾರೆ. ಪ್ರತಿಯೊಬ್ಬ ಪೊಲೀಸ್‌ಗೂ ಮೂರು ವರ್ಷ ಸೇವಾವಧಿ ನಿಗದಿಪಡಿಸಬೇಕು. ಪೊಲೀಸರ ವರ್ಗಾವಣೆಯನ್ನು ನಿರ್ಧರಿಸುವ ಅಧಿಕಾರವಿರುವ ಪೊಲೀಸ್ ಮಹಾನಿರ್ದೇಶಕ ಹುದ್ದೆಯ ನೇಮಕಕ್ಕೆ ಸಮಿತಿ ರಚಿಸಬೇಕು. ಅದು ರಾಜಕೀಯದಿಂದ ಮುಕ್ತವಾಗಿರಬೇಕು. ಆಗ ವರ್ಗಾವಣೆ ದಂಧೆ ಬಂದ್ ಆಗುತ್ತದೆ.

ಎಸ್.ಟಿ. ರಮೇಶ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ

ಕೈಗೊಂಬೆಯಾದ ‘ಪೊಲೀಸ್ ಸಿಬ್ಬಂದಿ ಮಂಡಳಿ’



ಸುಪ್ರೀಂಕೋರ್ಟ್ 2006ರಲ್ಲಿ ನೀಡಿರುವ ಆದೇಶವನ್ನು ತಿರುಚಿರುವ ರಾಜ್ಯ ಸರ್ಕಾರಗಳು, ತಮ್ಮಿಷ್ಟದಂತೆ ವರ್ಗಾವಣೆ ನಡೆಸುತ್ತಿವೆ. ವರ್ಗಾವಣೆ ಜವಾಬ್ದಾರಿ ಹೊತ್ತುಕೊಂಡಿರುವ ಪೊಲೀಸ್ ಸಿಬ್ಬಂದಿ ಮಂಡಳಿ, ಸ್ವಾತಂತ್ರ ಕಳೆದುಕೊಂಡು ಸರ್ಕಾರ ಸೂಚಿಸಿದಂತೆಯೇ ವರ್ಗಾವಣೆ ನಡೆಸುತ್ತಿವೆ. ರಾಜಕಾರಣಿಗಳ ಮಿನಿಟ್ಸ್ ಹಾಗೂ ಜಾತಿ ಆಧಾರದಲ್ಲಿ ವರ್ಗಾವಣೆ ನಡೆಸದೇ ಅರ್ಹತೆ ಮತ್ತು ದಕ್ಷತೆಗಳನ್ನು ಮಾನದಂಡವನ್ನಾಗಿ ಇಟ್ಟುಕೊಂಡರೆ ವ್ಯವಸ್ಥೆ ಬದಲಾಗುತ್ತದೆ

ಡಾ.ಡಿ.ವಿ. ಗುರುಪ್ರಸಾದ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ

‘ಭ್ರಷ್ಟಾಚಾರ ನಿಯಂತ್ರಣಕ್ಕೆ ನಿರಂತರ ಯತ್ನ’

ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರದ ಪಿಡುಗು ದಿಢೀರನೆ ಹುಟ್ಟಿಕೊಂಡಿದ್ದಲ್ಲ.

ದೀರ್ಘ ಕಾಲದಿಂದಲೂ ಇದೆ. ಅದನ್ನು ನಿಯಂತ್ರಿಸಲು ನಿರಂತರ ಪ್ರಯತ್ನ ಮಾಡುತ್ತಿದ್ದೇನೆ. ಲಂಚಕ್ಕೆ ಬೇಡಿಕೆ ಇಡುವ ಮತ್ತು ಪಡೆಯುವ ಪೊಲೀಸರೂ ಶಿಕ್ಷೆಗೊಳಗಾಗಬೇಕು. ಆಗ ಮಾತ್ರವೇ ಪರಿಸ್ಥಿತಿ ಸುಧಾರಿಸಲು ಸಾಧ್ಯ. ಆ ದಿಸೆಯಲ್ಲಿ ನಮ್ಮ ಸರ್ಕಾರ ಬದ್ಧತೆಯಿಂದ ಕೆಲಸ ಮಾಡುತ್ತಿದೆ.

ಆದರ್ಶಗಳ ಪಾಲನೆ ಮೇಲಿನಿಂದ ಕೆಳಹಂತದವರೆಗೂ ವಿಸ್ತರಣೆಯಾಗಬೇಕು. ನನಗೂ ಭ್ರಷ್ಟಾಚಾರಕ್ಕೂ ಸಂಬಂಧವಿಲ್ಲ. ಜನರು ಕೂಡ ಪೊಲೀಸರನ್ನು ಈ ಕುರಿತು ಪ್ರಶ್ನಿಸಬೇಕು. ಒಂದು ದಿನ ಅಥವಾ ಒಂದು ತಿಂಗಳಲ್ಲಿ ಎಲ್ಲವೂ ನಿಯಂತ್ರಣಕ್ಕೆ ಬರುತ್ತದೆ ಎನ್ನಲಾಗದು. ಆದರೆ, ಜನರಲ್ಲಿ ಜಾಗೃತಿ ಮೂಡಿದರೆ ಬದಲಾವಣೆ ಸಾಧ್ಯವಿದೆ.

ಆರಗ ಜ್ಞಾನೇಂದ್ರ, ಗೃಹಸಚಿವ

2030: ವೃದ್ಧರೇ ಹೆಚ್ಚು ಯುವಶಕ್ತಿಗೆ ಕುತ್ತು

• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ಕರ್ನಾಟಕದಲ್ಲಿನ ಒಟ್ಟು ಫಲವಂತಿಕೆ ದರವು (ಟಿಎಫ್ಆರ್) ದೇಶದ ಫಲವಂತಿಕೆ ದರಕ್ಕಿಂತ ವೇಗವಾಗಿ ಕುಸಿತ ಕಾಣುತ್ತಿದ್ದು, ಇದೇ ರೀತಿ ಮುಂದುವರಿದರೆ 2030ರ ವೇಳೆಗೆ ಜನನ ಪ್ರಮಾಣಕ್ಕಿಂತ ಮರಣ ಪ್ರಮಾಣವೇ ಹೆಚ್ಚಾಗಲಿದೆ. ಇದರಿಂದ ಒಟ್ಟಾರೆ ಜನಸಂಖ್ಯೆಯಲ್ಲಿ ವೃದ್ಧರ ಪ್ರಮಾಣ ಶೇ 15ಕ್ಕೆ ಹೆಚ್ಚಲಿದ್ದು, ದುಡಿಯುವ ಕೈಗಳ ಸಂಖ್ಯೆ ಗಣನೀಯವಾಗಿ ಕುಸಿಯಲಿದೆ.

2021–22ನೇ ಸಾಲಿನ ಕರ್ನಾಟಕ ಆರ್ಥಿಕ ಸಮೀಕ್ಷೆಯು ಈ ಸಮಸ್ಯೆಯನ್ನು ವಿಶ್ಲೇಷಿಸಿದೆ.

ಇತ್ತೀಚಿನ ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ (ಎನ್ಎಫ್ಎಚ್ಎಸ್‌–5) ಅಂಕಿ ಅಂಶಗಳೂ ರಾಜ್ಯದ ಜನಸಂಖ್ಯೆ ಗುಣಲಕ್ಷಣಗಳು ಸಾಕಷ್ಟು ಬದಲಾಗುತ್ತಿರುವುದನ್ನು ಹೇಳುತ್ತಿವೆ. ಸಾಮಾಜಿಕ– ಆರ್ಥಿಕ ಬೆಳವಣಿಗೆಯ ವಿಶ್ಲೇಷಣೆ ಮಾಡುವಾಗ ಇದನ್ನು ಪರಿಗಣಿಸಬೇಕಾಗುತ್ತದೆ. ಈ ಬೆಳವಣಿಗೆಯಿಂದ ಉಂಟಾಗಲಿರುವ ಸಮಸ್ಯೆ ನಿಭಾಯಿಸಲು ಉನ್ನತ ಕೌಶಲಯುತ ದುಡಿಯುವ ವರ್ಗವನ್ನು ಸೃಷ್ಟಿಸುವ ಕಾರ್ಯ ತುರ್ತಾಗಿ ಆಗಬೇಕು ಎಂದು ಸಮೀಕ್ಷೆಯಲ್ಲಿ ಸಲಹೆ ನೀಡಲಾಗಿದೆ.

ಯಾವುದೇ ಅಭಿವೃದ್ಧಿಶೀಲ ಆರ್ಥಿಕ ವ್ಯವಸ್ಥೆಯಲ್ಲಿ ಟಿಎಫ್ಆರ್ ಶೇ 2.3ರಷ್ಟು ಹಾಗೂ ಅಭಿವೃದ್ಧಿ ಹೊಂದಿರುವ ವ್ಯವಸ್ಥೆಯಲ್ಲಿ ಶೇ 2.1ರಷ್ಟು ಇರಬೇಕು. ಆದರೆ, ಜನಸಂಖ್ಯಾ ಬೆಳವಣಿಗೆ ದರ ಈಗಾಗಲೇ ತುತ್ತ ತುದಿ ತಲುಪಿ ಆಗಿದೆ. ಇದು ಮುಂದಿನ ದಶಕದಲ್ಲಿ ಯುವಜನರ ಸಂಖ್ಯೆ ಕಡಿಮೆಯಾಗಿ, ವೃದ್ಧರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುವುದಕ್ಕೆ ಕಾರಣವಾಗಲಿದೆ.

11ನೇ ಪುಟ ನೋಡಿ

ಉಕ್ರೇನ್: ಕೊನೆಯ ಹಂತದ ತೆರವು ಕಾರ್ಯಾಚರಣೆಗೆ ಚಾಲನೆ

ನವದೆಹಲಿ (ಪಿಟಿಐ): ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳ ತೆರವಿಗೆ ಸರ್ಕಾರವು ಸೋಮವಾರ, ‘ಆಪರೇಷನ್ ಗಂಗಾ’ದ ಕೊನೆಯ ಹಂತದ ಕಾರ್ಯಾಚರಣೆ ನಡೆಸಲಿದೆ. ಈ ಕಾರ್ಯಾಚರಣೆಗೆ ಭಾನುವಾರದಿಂದಲೇ ಚಾಲನೆ ನೀಡಲಾಗಿದೆ.

‘ಉಕ್ರೇನ್‌ನಲ್ಲಿ ಇರುವ ಭಾರತೀಯರು ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರ ಒಳಗೆ ಹಂಗೆರಿಯ ಬುಡಾಪೆಸ್ಟ್‌ಗೆ ತಲುಪಬೇಕು’ ಎಂದು ಉಕ್ರೇನ್‌ನಲ್ಲಿನ ಭಾರತದ ರಾಯಭಾರ ಕಚೇರಿ ಭಾನುವಾರ ಮಧ್ಯಾಹ್ನ ಟ್ವೀಟ್ ಮಾಡಿದೆ. ‘ಆಪರೇಷನ್ ಗಂಗಾ ವಿಮಾನಗಳ ಕಾರ್ಯಾಚರಣೆಯ ಕೊನೆಯ ಹಂತಕ್ಕೆ ಚಾಲನೆ ನೀಡಲಾಗಿದೆ. ಉಕ್ರೇನ್‌ನಲ್ಲಿ ತಾವೇ ವ್ಯವಸ್ಥೆ ಮಾಡಿಕೊಂಡು ನೆಲೆಸಿರುವವರು ತಕ್ಷಣವೇ ಬುಡಾಪೆಸ್ಟ್‌ನತ್ತ ಹೊರಡಬೇಕು’ ಎಂದು ಟ್ವೀಟ್‌ನಲ್ಲಿ ಸೂಚಿಸಲಾಗಿದೆ.

ಇದಕ್ಕೂ ಮುನ್ನ ಭಾನುವಾರ ಬೆಳಿಗ್ಗೆ, ‘ಉಕ್ರೇನ್‌ನಲ್ಲಿ ಉಳಿದಿರುವ ಭಾರತೀಯರು ತೆರವು ಅರ್ಜಿಯನ್ನು ಭರ್ತಿ ಮಾಡಿ’ ಎಂದು ರಾಯಭಾರ ಕಚೇರಿಯು ಟ್ವೀಟ್ ಮಾಡಿತ್ತು. ಟ್ವೀಟ್‌ನಲ್ಲಿ ಗೂಗಲ್ ಅರ್ಜಿಯ ಲಿಂಕ್ ಲಗತ್ತಿಸಿತ್ತು. ಅದರ ಬೆನ್ನಲ್ಲೇ, ಕೊನೆಯ ಹಂತದ ಕಾರ್ಯಾಚರಣೆಯ ವಿವರಗಳನ್ನು ವಿದೇಶಾಂಗ ಸಚಿವಾಲಯವು ಪ್ರಕಟಿಸಿದೆ. ‘ಈ ಕಾರ್ಯಾಚರಣೆಯ ಭಾಗವಾಗಿ ಉಕ್ರೇನ್‌ನ ನೆರೆಯ ದೇಶಗಳಿಂದ ಸೋಮವಾರ ಒಟ್ಟು ಎಂಟು ವಿಮಾನಗಳನ್ನು ನಿಯೋಜಿಸಲಾಗಿದೆ’ ಎಂದು ನಾಗರಿಕ ವಿಮಾನಯಾನ ಸಚಿವಾಲಯವು ಹೇಳಿದೆ.

10ನೇ ಪುಟ ನೋಡಿ
ವಿಶೇಷ ಪುಟ 10

ಟೆಸ್ಟ್ ಕ್ರಿಕೆಟ್‌ನಲ್ಲಿ ಗರಿಷ್ಠ ವಿಕೆಟ್: ಕಪಿಲ್ ಹಿಂದಿಕ್ಕಿದ ಅಶ್ವಿನ್

ಪ್ರಜಾವಾಣಿ ವಾರ್ತೆ

ಮೊಹಾಲಿ: ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿಹೆಚ್ಚು ವಿಕೆಟ್ ಪಡೆದ ಭಾರತದ ಎರಡನೇ ಆಟಗಾರ ಎನಿಸಿಕೊಂಡರು.

ಇಲ್ಲಿ ಭಾನುವಾರ ಮುಕ್ತಾಯಗೊಂಡ ಶ್ರೀಲಂಕಾ ಎದುರಿನ ಪಂದ್ಯದಲ್ಲಿ ಚರಿತ್ ಅಸಲಂಕಾ ಅವರ ವಿಕೆಟ್ ಪಡೆಯುವ ಮೂಲಕ ಅಶ್ವಿನ್ ಈ ಸಾಧನೆ ಮಾಡಿದರು. ವೇಗದ ಬೌಲರ್ ಕಪಿಲ್ ದೇವ್ ಅವರ 434 ವಿಕೆಟ್‌ಗಳ ದಾಖಲೆಯನ್ನು ಹಿಂದಿಕ್ಕಿದರು. ಪಂದ್ಯದಲ್ಲಿ ಒಟ್ಟು ಆರು ವಿಕೆಟ್ ಉರುಳಿಸಿದ ಅವರ ಖಾತೆಯಲ್ಲಿ ಈಗ 436 ವಿಕೆಟ್‌ಗಳಿವೆ. 619 ವಿಕೆಟ್ ಗಳಿಸಿರುವ ಲೆಗ್ ಸ್ಪಿನ್ನರ್ ಅನಿಲ್ ಕುಂಬ್ಳೆ ಅವರು ಭಾರತದ ಪರ ಹೆಚ್ಚು ವಿಕೆಟ್ ಪಡೆದವರ ಸಾಲಿನಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಒಟ್ಟಾರೆ ಅತಿಹೆಚ್ಚು ವಿಕೆಟ್ ಗಳಿಸಿದವರ ಪಟ್ಟಿಯಲ್ಲಿ ಅಶ್ವಿನ್ 9ನೇ ಸ್ಥಾನದಲ್ಲಿದ್ದಾರೆ. ಅನಿಲ್ ಕುಂಬ್ಳೆ ಅವರಿಗೆ ಈ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವಿದೆ. ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ (800), ಆಸ್ಟ್ರೇಲಿಯಾದ ಶೇನ್ ವಾರ್ನ್ (708) ಮತ್ತು ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ (640) ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿದ್ದಾರೆ.

ಪಂಜಾಬ್: ಬಿಎಸ್‌ಎಫ್ ಶಿಬಿರದಲ್ಲಿ ಸಹೋದ್ಯೋಗಿಗಳ ಮೇಲೆ ಗುಂಡಿನ ದಾಳಿ

ಗುಂಡು ಹಾರಿಸಿದ ಯೋಧ ಸೇರಿ ಐವರ ಸಾವು

ಅಮೃತಸರ(ಪಿಟಿಐ): ಪಂಜಾಬ್‌ನ ಅತ್ತಾರಿ–ವಾಘಾ ಗಡಿ ಬಳಿಯ ಸೇನಾ ಶಿಬಿರದಲ್ಲಿ ಭಾನುವಾರ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಯೋಧ ನಡೆಸಿದ ಗುಂಡಿನ ದಾಳಿಯಲ್ಲಿ ನಾಲ್ವರು ಸಿಬ್ಬಂದಿ ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಾಯಗೊಂಡಿದ್ದಾರೆ. ಘಟನೆಯಲ್ಲಿ ಗುಂಡು ಹಾರಿಸಿದ ಯೋಧನೂ ಮೃತಪಟ್ಟಿದ್ದಾರೆ.

ಗುಂಡಿನ ದಾಳಿ ನಡೆಸಿದ ಆರೋಪಿ ಯೋಧ ಎಸ್.ಕೆ.ಸಾತೆಪ್ಪ (35) ಕರ್ನಾಟಕದವರು. ಸಾತೆಪ್ಪ ಸ್ವತಃ ಗುಂಡು ಹಾರಿಸಿಕೊಂಡಿದ್ದಾನೆಯೇ ಅಥವಾ ಬೇರೆಯವರು ಹಾರಿಸಿದ ಗುಂಡು ತಗುಲಿ ಮೃತಪಟ್ಟಿದ್ದಾನೆಯೇ ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ ಎಂದು ಬಿಎಸ್‌ಎಫ್ ಮೂಲಗಳು ಹೇಳಿವೆ.

ಭಾರತ–ಪಾಕಿಸ್ತಾನ ಅಂತರ ರಾಷ್ಟ್ರೀಯ ಗಡಿಯಿಂದ 12 ಕಿ.ಮೀ. ದೂರದಲ್ಲಿ, ಅಮೃತಸರ ಜಿಲ್ಲೆಯ ಖಾಸಾ ಪ್ರದೇಶದಲ್ಲಿರುವ 144ನೇ ಬೆಟಾಲಿಯನ್ ಶಿಬಿರದಲ್ಲಿ ಬೆಳಿಗ್ಗೆ 9.30 ಹಾಗೂ 9.45ಗಂಟೆ ನಡುವೆ ಈ ಘಟನೆ ಸಂಭವಿಸಿದೆ ಎಂದು ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಆರ್ಥಿಕ ಸಮೀಕ್ಷೆಯಲ್ಲಿ ಉಲ್ಲೇಖ

ಅನಧಿಕೃತ ಬಡಾವಣೆ: ₹19,622 ಕೋಟಿ ವಂಚನೆ!

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳು ವಿಪರೀತ ಎನ್ನುವ ರೀತಿ ತಲೆಯೆತ್ತಿವೆ. ಇದರಿಂದಾಗಿ ಸುಮಾರು 19,291 ಎಕರೆ ಭೂಮಿ ದುರ್ಬಳಕೆಯಾಗಿದ್ದು, ಈ ಅಕ್ರಮದಿಂದಾಗಿ ₹ 19,622 ಕೋಟಿ ಮೊತ್ತದ ತೆರಿಗೆ ವಂಚನೆ ನಡೆದಿದೆ.

ವಿಧಾನಮಂಡಲದಲ್ಲಿ ಮಾರ್ಚ್ 4ರಂದು ಮಂಡಿಸಿದ ‘ಕರ್ನಾಟಕ ಆರ್ಥಿಕ ಸಮೀಕ್ಷೆ 2021–22’ರಲ್ಲಿ ಈ ಅನಧಿಕೃತ ಬಡಾವಣೆಗಳ ನಿರ್ಮಾಣದ ಬಗ್ಗೆ ವಿವರಗಳಿವೆ. ಉದ್ಯಾನಗಳಿಗಾಗಿ ಮೀಸಲಿಟ್ಟಿದ್ದ 1,929 ಎಕರೆ ಹಾಗೂ ರಸ್ತೆಗಾಗಿ ಮೀಸಲಿಟ್ಟಿದ್ದ 964 ಎಕರೆ ಭೂಮಿ ಅನಧಿಕೃತ ಬಡಾವಣೆಗಳಿಗೆ ಬಳಕೆಯಾಗಿವೆ.

ನಿಯಮಬಾಹಿರವಾದ ಅಭಿವೃದ್ಧಿಯ ಪ್ರಮಾಣ ಒಟ್ಟು ನಗರ ಪ್ರದೇಶದ ಶೇ 30ರಿಂದ ಶೇ 40ರಷ್ಟು ಇದೆ. ಯೋಜನಾ ಪ್ರಾಧಿಕಾರ, ನಗರಾಭಿವೃದ್ಧಿ ಪ್ರಾಧಿಕಾರ, ನಗರ ಸ್ಥಳೀಯ ಸಂಸ್ಥೆಗಳು, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯನ್ನು ಮೀರಿ ಅನಧಿಕೃತ ಬೆಳವಣಿಗೆಗಳು ನಡೆದಿವೆ. ಅನಧಿಕೃತ ಬಡಾವಣೆಗಳು, ಕಾಲೊನಿಗಳು ಹಾಗೂ ಕಂದಾಯ ಬಡಾವಣೆಗಳ ನಿರ್ಮಾಣಕ್ಕೆ ಒತ್ತುವರಿ ಮಾಡಿದ್ದರಿಂದಾಗಿ ನೈಸರ್ಗಿಕ ಚರಂಡಿಗಳು, ಕೆರೆಗಳು, ಜಲಾನಯನ ಪ್ರದೇಶಗಳು, ಉದ್ಯಾನಗಳು ಹಾಗೂ ಬಯಲು ಪ್ರದೇಶಗಳು ಕಣ್ಮರೆಯಾಗಿವೆ.

ರಾಜಧಾನಿಯಲ್ಲಿ ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿ ಅಭಿವೃದ್ಧಿ ನಿಷೇಧಿಸಿ ಸುಪ್ರೀಂ ಕೋರ್ಟ್ ಆದೇಶದ ನೀಡಿದ್ದರೂ ಇಡೀ ಜಲಾನಯನ ಪ್ರದೇಶ ಅಕ್ರಮ ಬಡಾವಣೆಗಳಿಗೆ ಬಳಕೆಯಾಗಿದೆ.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಭದ್ರತೆಗೆ ಖಾಸಗಿ ಸಂಸ್ಥೆಗಳ ಜೊತೆ ಸಹಯೋಗ: ಅಮಿತ್ ಶಾ 11

‘ಮೇಕೆದಾಟು: ಕಾಂಗ್ರೆಸ್ ಒತ್ತಡಕ್ಕೆ ಮಣಿದಿಲ್ಲ’ 6



ಮಣಿಪಾಲ್ ಆಸ್ಪತ್ರೆಗಳ ಸಮೂಹದ ಡಾ. ಬಲ್ಲಾಳ್ ಕಳವಳ

'ಮೂತ್ರಪಿಂಡ ಆರೋಗ್ಯ ಕಡೆಗಣನೆ'

ಪ್ರಜಾವಾಣಿ ವಾರ್ತೆ

ಡಾ. ಸುದರ್ಶನ್ ಬಲ್ಲಾಳ್ ಅವರು ಸೈಕ್ಲೋಥಾನ್‌ಗೆ ಚಾಲನೆ ನೀಡಿದರು. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಇದ್ದರು.

ಬೆಂಗಳೂರು: 'ಮೂತ್ರಪಿಂಡದ ಬಗ್ಗೆ ಜನರಿಗೆ ಅಷ್ಟಾಗಿ ಜಾಗೃತಿಯಿಲ್ಲ. ಇದರಿಂದಾಗಿ ಅದರ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸದೇ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಿದ್ದಾರೆ' ಎಂದು ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್ ಅವರು ಕಳವಳ ವ್ಯಕ್ತಪಡಿಸಿದರು.

ಮಣಿಪಾಲ್ ಆಸ್ಪತ್ರೆಗಳ ಸಮೂಹವು ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸೈಕ್ಲೋಥಾನ್‌ಗೆ ಚಾಲನೆ ನೀಡಿ, ಮಾತನಾಡಿದರು. 'ಮೂತ್ರಪಿಂಡದ ಸಮಸ್ಯೆಗಳನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಬೇಕು. ಇಲ್ಲವಾದಲ್ಲಿ ಅದರ ಕಾರ್ಯನಿರ್ವಹಣೆ ಕಡಿಮೆ ಮಟ್ಟಕ್ಕಿಳಿದು, ದೇಹದಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಹೊರಹಾಕಲು ಅಸಮರ್ಥವಾಗುತ್ತವೆ' ಎಂದು ಹೇಳಿದರು.

'ನಮ್ಮ ದೇಹದಲ್ಲಿ ಮಿದುಳು ಮತ್ತು ಹೃದಯದಂತೆ ಮೂತ್ರಪಿಂಡ ಕೂಡ ಸೂಕ್ಷ್ಮವಾದ ಅಂಗ. ರಕ್ತ ಶುದ್ಧಿ ಕಾರ್ಯದ ನಂತರ ಮೂತ್ರದ ಮೂಲಕ ದೇಹದಲ್ಲಿನ ತ್ಯಾಜ್ಯವನ್ನು ಹೊರಹಾಕಲು ಈ ಅಂಗ ಸಹಕಾರಿ. ದೇಹದಲ್ಲಿನ ಲವಣಾಂಶಗಳು, ನೀರಿನಾಂಶಗಳು, ಆಮ್ಲ ಮತ್ತು ಪ್ರತ್ಯಾಮ್ಲಗಳನ್ನು ಸಮತೋಲನದಲ್ಲಿ ಇರಿಸುತ್ತದೆ. ಹಾಗಾಗಿ, ಮೂತ್ರಪಿಂಡದ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ, ನಿಯಮಿತವಾಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಸಮಸ್ಯೆಯನ್ನು ಪತ್ತೆ ಹಚ್ಚುವುದು ತಡವಾದಲ್ಲಿ ಡಯಾಲಿಸಿಸ್, ಅಂಗಾಂಗ ಕಸಿ ಮಾಡಬೇಕಾಗುತ್ತದೆ' ಎಂದು ತಿಳಿಸಿದರು.

'ನಮ್ಮ ಆಸ್ಪತ್ರೆಗಳಲ್ಲಿ ನಾಲ್ಕು ವರ್ಷಗಳಲ್ಲಿ 507 ಮೂತ್ರಪಿಂಡ ಕಸಿ ನಡೆಸಲಾಗಿದೆ. ದಿನಕ್ಕೆ 342 ಡಯಾಲಿಸಿಸ್ ನಡೆಸಲಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದರು.

ಹಳೆ ವಿಮಾನ ನಿಲ್ದಾಣ ರಸ್ತೆ, ಮಿಲ್ಲರ್ಸ್ ರಸ್ತೆ, ಹೆಬ್ಬಾಳ, ಯಶವಂತಪುರ, ಮಲ್ಲೇಶ್ವರ, ಜಯನಗರ, ಸರ್ಜಾಪುರ ರಸ್ತೆ, ವರ್ತೂರು ರಸ್ತೆ, ವೈಟ್‌ಫೀಲ್ಡ್ ಸೇರಿದಂತೆ ನಗರದ 10 ಕಡೆ ಸೈಕ್ಲೋಥಾನ್ ನಡೆಸಲಾಯಿತು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ದುಸ್ಥಿತಿಯಲ್ಲಿ ಮುಖ್ಯರಸ್ತೆ

ಮಾಗಡಿ ರಸ್ತೆ ಬಳಿ ಇರುವ ಸುಂಕದಕಟ್ಟೆ–ಪೀಣ್ಯ ಕೈಗಾರಿಕಾ ಪ್ರದೇಶ ಮುಖ್ಯರಸ್ತೆಯು ದುಸ್ಥಿತಿಯಲ್ಲಿದೆ. ಹಲವು ವರ್ಷಗಳಿಂದ ಹಾಳಾಗಿರುವ ಈ ರಸ್ತೆ ಸರಿಪಡಿಸಲು ಯಾರೂ ಮುಂದಾಗಿಲ್ಲ. ಇದೇ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳ ಸಂಚಾರ ಹೆಚ್ಚು.

ಮಳೆಗಾಲದಲ್ಲಿ ಈ ರಸ್ತೆ ಸಂಪೂರ್ಣವಾಗಿ ಕೆಸರುಮಯಗೊಂಡು, ವಾಹನ ಸವಾರರು ಹೈರಾಣಾಗುತ್ತಾರೆ. ಇದನ್ನು ಮುಖ್ಯರಸ್ತೆ ಎಂದು ಕರೆಯಲು ಸಾಧ್ಯವೇ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ರಸ್ತೆ ಸರಿಪಡಿಸಲು ಕ್ರಮ ಕೈಗೊಳ್ಳಬೇಕು. ಸಾವಿರಾರು ಜನ ಪ್ರಯಾಣಿಸುವ ರಸ್ತೆ ದುರಸ್ತಿ ಮಾಡಿ.

ರತ್ನಾಕರ, ಸಾರ್ವಜನಿಕ

ಸುಂಕದಕಟ್ಟೆ–ಪೀಣ್ಯ ಕೈಗಾರಿಕಾ ಪ್ರದೇಶ ಮಾರ್ಗದ ಸ್ಥಿತಿ

ವೆಂಕಟಾಪುರ ರಸ್ತೆ ಸರಿಪಡಿಸಿ

ಕೋರಮಂಗಲದ ವೆಂಕಟಾಪುರ 8ನೇ ಅಡ್ಡರಸ್ತೆಯು ಬಹಳ ದಿನಗಳಿಂದ ಹಾಳಾಗಿದೆ. ಕಾಮಗಾರಿಗಾಗಿ ಇಲ್ಲಿನ ಡಾಂಬರು ರಸ್ತೆಗಳನ್ನು ಅಗೆಯಲಾಗಿತ್ತು. ಆದರೆ, ಕಾಮಗಾರಿ ಮುಗಿದ ನಂತರ ಸರಿಯಾಗಿ ಮುಚ್ಚದ ಕಾರಣ ಡಾಂಬರು ಕಿತ್ತು ಬಂದಿದೆ. ಒಳಚರಂಡಿ ಮಾರ್ಗವೂ ರಸ್ತೆಯಲ್ಲಿ ಉಬ್ಬುಗಳಾಗಿ ನಿರ್ಮಾಣವಾಗಿವೆ.

ಜನರ ಅನುಕೂಲಕ್ಕಾಗಿ ಕಾಮಗಾರಿ ನಡೆಸಿದ್ದರು. ಈಗ ಅದೇ ಕಾಮಗಾರಿಯಿಂದ ಜನರಿಗೆ ಸಮಸ್ಯೆ ಎದುರಾಗಿದೆ. ಈ ರಸ್ತೆಗಳು ವಾಹನ ಸಂಚಾರಕ್ಕೆ ಯೋಗ್ಯವಲ್ಲದ ಸ್ಥಿತಿಗೆ ತಲುಪಿದ್ದು, ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿಲ್ಲ. ಗುಂಡಿಗಳನ್ನು ಮುಚ್ಚಿ ಸೂಕ್ತವಾದ ರಸ್ತೆ ನಿರ್ಮಿಸಿಕೊಡಿ.

ರಘು, ಸ್ಥಳೀಯ ನಿವಾಸಿ



ಕೋರಮಂಗಲದ ವೆಂಕಟಾಪುರದಲ್ಲಿ ಹದಗೆಟ್ಟ ರಸ್ತೆ.

ಸ್ವಚ್ಛಗೊಂಡ ರಾಜಕಾಲುವೆ

ವರದಿ ಪರಿಣಾಮ

ಮೇಡಹಳ್ಳಿಯಲ್ಲಿ ರಾಜಕಾಲುವೆ ಸ್ವಚ್ಛಗೊಳಿಸಿರುವುದು.

ಬಸವನಪುರ ವಾರ್ಡ್ ವ್ಯಾಪ್ತಿಯ ಮೇಡಹಳ್ಳಿ ಇಂದಿರಾ ಕ್ಯಾಂಟೀನ್ ಬಳಿ ಕಸ ತುಂಬಿಕೊಂಡಿದ್ದ ರಾಜಕಾಲುವೆಯನ್ನು ಸ್ವಚ್ಛಗೊಳಿಸಲಾಗಿದೆ.

'ರಾಜಕಾಲುವೆಯಲ್ಲಿ ಸಂಗ್ರಹಗೊಂಡಿದ್ದ ಕಸ ತೆರವಿನಿಂದ ಕೊಳಚೆ ನೀರು ಸರಾಗವಾಗಿ ಹರಿಯುತ್ತಿದ್ದು, ದುರ್ನಾತದಿಂದ ಮುಕ್ತಿ ಪಡೆದಿದ್ದೇವೆ' ಎಂದು ಸ್ಥಳೀಯರು ಸಂತಸ ವ್ಯಕ್ತಪಡಿಸಿದ್ದಾರೆ.

'ರಾಜಕಾಲುವೆಗೆ ತಡೆಗೋಡೆ ನಿರ್ಮಿಸಿಲ್ಲ ಹಾಗೂ ಸರಿಯಾದ ನಿರ್ವಹಣೆ ಇಲ್ಲದ ಕಾರಣ, ಕಸ ಹಾಗೂ ಪ್ಲಾಸ್ಟಿಕ್ ವಸ್ತುಗಳಿಂದ ತುಂಬಿಕೊಂಡಿದೆ. ಇದರಿಂದ ಚರಂಡಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಒಂದೇ ಜಾಗದಲ್ಲಿ ನಿಂತು ದುರ್ನಾತ ಬೀರುತ್ತಿದೆ. ಪಕ್ಕದಲ್ಲೇ ಇರುವ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರ ಸೇವಿಸಲು ಬರುವ ಸಾರ್ವಜನಿಕರು ವಾಸನೆಯಿಂದ ಕಿರಿಕಿರಿ ಅನುಭವಿಸುತ್ತಿದ್ದಾರೆ' ಎಂದು ಸ್ಥಳೀಯರು ದೂರಿದ್ದರು.

ಈ ಬಗ್ಗೆ 'ಕಸ ತುಂಬಿಕೊಂಡ ರಾಜಕಾಲುವೆ' ಶೀರ್ಷಿಕೆಯಡಿ ಕಳೆದ ಸೋಮವಾರದ 'ಕುಂದು ಕೊರತೆ' ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಪಾಲಿಕೆ ಅಧಿಕಾರಿಗಳು ರಾಜಕಾಲುವೆ ಸ್ವಚ್ಛಗೊಳಿಸಲು ಕ್ರಮ ಕೈಗೊಂಡಿದ್ದಾರೆ.

ರಾಜಕಾಲುವೆ ಮೇಲ್ಭಾಗ ಮುಚ್ಚಿ



ಜನತಾ ಕಾಲೊನಿಯಲ್ಲಿ ತೆರೆದುಕೊಂಡಿರುವ ರಾಜಕಾಲುವೆ.

ಜ್ಞಾನಭಾರತಿ ವಾರ್ಡ್ ವ್ಯಾಪ್ತಿಯ ಕೆಂಗುಂಟೆ ಜನತಾ ಕಾಲೊನಿ ನಿವಾಸಿಗಳಿಗೆ ಇಲ್ಲಿನ ರಾಜಕಾಲುವೆ ತಲೆನೋವಾಗಿ ಪರಿಣಮಿಸಿದೆ. ರಾಜಕಾಲುವೆ ತೆರೆದುಕೊಂಡಿರುವುದರಿಂದ ಸ್ಥಳೀಯರು ರೋಗರುಜಿನ ಹರಡುವ ಭೀತಿಯಲ್ಲೇ ಜೀವನ ನಡೆಸುತ್ತಿದ್ದಾರೆ.

ಮಕ್ಕಳು ಹಾಗೂ ವೃದ್ಧರು ರಾಜಕಾಲುವೆಗೆ ಆಯತಪ್ಪಿ ಬೀಳುವ ಸ್ಥಿತಿ ನಿರ್ಮಾಣವಾಗಿದೆ. ಸೊಳ್ಳೆಗಳ ಕಾಟವೂ ವಿಪರೀತ. ರಾಜಕಾಲುವೆಯ ಮೇಲ್ಭಾಗವನ್ನು ಕಾಂಕ್ರೀಟ್‌ನಿಂದ ಮುಚ್ಚಿದರೆ, ಸ್ಥಳೀಯರು ನಿರಾತಂಕಗೊಳ್ಳುತ್ತಾರೆ. ಪಾಲಿಕೆ ಅಧಿಕಾರಿಗಳು ತಕ್ಷಣ ಈ ಬಗ್ಗೆ ಗಮನಹರಿಸಬೇಕು ಎಂದು ಕೋರಿಕೆ.

ತುಕಾರಾಂ, ಮಲ್ಲತ್ತಹಳ್ಳಿ

ದಾರಿಯಲ್ಲಿ ಕಸ: ಸ್ವಚ್ಛಗೊಳಿಸಿ

ಜೆ.ಪಿ.ನಗರ 8ನೇ ಹಂತದ ಕೊತ್ತನೂರು ದಿಣ್ಣೆ ಬಳಿ ಇರುವ ಆರಾಧನಾ ಬಡಾವಣೆಯಲ್ಲಿ ದಾರಿಯುದ್ದಕ್ಕೂ ಕಸದ ರಾಶಿ ಕಂಡುಬರುತ್ತದೆ. ರಸ್ತೆ ಕಿರಿದಾಗಿರುವುದರಿಂದ ಕಸ ರಸ್ತೆಗೆ ಹರಡುತ್ತದೆ. ಇದನ್ನು ರಸ್ತೆ ಎನ್ನುವ ಬದಲಿಗೆ ಕಸದ ತಾಣ ಎನ್ನಬಹುದು. ಸ್ಥಳೀಯರು ಅಸಹಾಯಕರಾಗಿ ಕಸದಲ್ಲೇ ಹೆಜ್ಜೆ ಹಾಕಿ ಸಾಗುತ್ತಾರೆ. ಪಾದಚಾರಿಗಳ ನಡಿಗೆಗೂ ಕಸ ಅಡ್ಡಿಯಾಗಿದೆ. ಕಸದಲ್ಲಿ ಪ್ಲಾಸ್ಟಿಕ್ ವಸ್ತುಗಳೇ ಹೆಚ್ಚಾಗಿದ್ದು, ಅವು ಜಾನುವಾರುಗಳ ದೇಹ ಸೇರುತ್ತಿವೆ. ಸ್ಥಳೀಯ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ರಸ್ತೆಯನ್ನು ಕಸದಿಂದ ಮುಕ್ತಗೊಳಿಸಬೇಕು. ಇಲ್ಲಿ ಕಸ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳಬೇಕು.

ಪುಷ್ಪಾ, ಸ್ಥಳೀಯ ನಿವಾಸಿ

ಕೊತ್ತನೂರು ದಿಣ್ಣೆಯ ಆರಾಧನಾ ಬಡಾವಣೆಯಲ್ಲಿ ರಸ್ತೆಬದಿ ಕಸದ ರಾಶಿ.

'ಮಣ್ಣನ್ನು ಉಳಿಸಿ' ಆಂದೋಲನ

ಬೆಂಗಳೂರು: ಈಶ ಫೌಂಡೇಷನ್‌ನ ಸಂಸ್ಥಾಪಕ ಸದ್ಗುರು ಜಗ್ಗಿ ವಾಸುದೇವ್ ಅವರು ಮಣ್ಣಿನ ಸಂರಕ್ಷಣೆ ಕುರಿತು ಜಾಗತಿಕವಾಗಿ ಅರಿವು ಮೂಡಿಸಲು 'ಸೇವ್ ಸಾಯಿಲ್' (ಮಣ್ಣನ್ನು ಉಳಿಸಿ) ಆಂದೋಲನ ಆರಂಭಿಸಿದ್ದಾರೆ.

ಆಂದೋಲನದ ಭಾಗವಾಗಿ 100 ದಿನಗಳಲ್ಲಿ 27 ರಾಷ್ಟ್ರಗಳಲ್ಲಿ 30 ಸಾವಿರ ಕಿ.ಮೀಗಳವರೆಗೆ ಮೋಟಾರ್ ಸೈಕಲ್‌ನಲ್ಲಿ ಏಕಾಂಗಿಯಾಗಿ ಪ್ರಯಾಣಿಸಲಿದ್ದಾರೆ. ಪ್ರಯಾಣದ ವೇಳೆ 27 ರಾಷ್ಟ್ರಗಳ ನಾಯಕರನ್ನು ಭೇಟಿಯಾಗಿ ಮಣ್ಣಿನ ಉಳಿವಿನ ಬಗ್ಗೆ ಚರ್ಚಿಸಲಿದ್ದಾರೆ.

'ಮಣ್ಣಿಗೆ ಸಂಬಂಧಿಸಿದಂತೆ 192 ದೇಶಗಳಲ್ಲಿ ಒಂದು ನೀತಿ ತರುವ ಪ್ರಯತ್ನವೇ ಈ ಆಂದೋಲನ. ಮುಂದಿನ ಪೀಳಿಗೆಗಾಗಿ ಮಣ್ಣನ್ನು ಉಳಿಸುವುದು ನಮ್ಮ ಜವಾಬ್ದಾರಿ. ಇದಕ್ಕಾಗಿ ಮಣ್ಣಿನ ಪ್ರಕಾರ, ಕೃಷಿ ಅವಲಂಬಿಸಿರುವ ಆ ದೇಶದ ಸಂಪ್ರದಾಯಗಳನ್ನು ಒಳಗೊಂಡಂತೆ ಪ್ರತಿ ದೇಶಕ್ಕೆ ಹೊಂದಿಕೆಯಾಗುವಂತೆ ಪ್ರತ್ಯೇಕ ನೀತಿಗಳನ್ನು ರೂಪಿಸಿ ದಾಖಲಿಸಿದ್ದೇವೆ' ಎಂದು ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

TENDER NOTICE

Hilton Bangalore Embassy GolfLinks | Hilton Bengaluru Embassy Manyata Business Park | Hilton Garden Inn Bengaluru Embassy Manyata Business Park

Hilton Bangalore Embassy GolfLinks, Hilton & Hilton Garden Inn.... Bengaluru, Embassy Manyata Business Park invites sealed tender bids from reliable and established vendors in Bengaluru on a rate contract basis for **12 Months** commencing from **1st April 2022 to 31st March 2023** to supply of following :

Food & Beverage Supplies

1. Provisions, Spices, Groceries & Dry Fruits.
2. Tinned, Canned & Bottled Food Products.
3. Fresh Vegetables, Fruits & Exotic Vegetables, Peeled Garlic, Bean Sprouts, Peeled Shallots / Onions, Mushrooms.
4. Lamb & Lamb Products.
5. Tenderloin
6. Fresh Milk & Dairy Products
7. Imported Meats & Sea Food Products.
8. Chicken, Poultry Products & Farm Fresh Eggs.
9. Fresh Fish & Seafood.
10. Imported Tinned, Canned & Bottled Food Products.
11. Ice Cream & Kulfis
12. Frozen Sea Food.

Non Food Supplies

1. Office General Printing & Stationery
2. House Keeping, Laundry & Cleaning Supplies.
3. Cooking, Industrial Gas & Gel Fuel
4. Charcoal / Water Tanker
5. Fresh Flowers and Flower Designs.
6. Hiring of AV Equipments and Banquet CCG / Furniture.
7. Safety Equipment
8. Courier Services
9. Electrical, Plumbing, Paint & Hardware Consumables.
10. Motor Rewinding / Glass & Mirrors Fixing.
11. Guest Supplies.
12. Goods Transport Vehicle Providers
13. Glass / Floor Cleaning.
14. Engineering Supplies (Electrical, Hardware & Plumbing & Painting)

Tender Forms and other Particulars can be obtained on payment of **Rs. 1000/-** for each category and are available with the **Cluster Purchase Manager at Hilton Bangalore Embassy GolfLinks** between **10.00 am to 5.00 pm from 07th March 2022 till 12th March 2022. The Last Date for Submitting Tenders is 15th March 2022. The Tenders is subject to following** : 1. The Rates finalized for the Twelve Months will not change under any circumstances. 2. The rates must be inclusive of delivery charges until our stores premises; tax should be shown separately on the invoices if applicable. 3. The Hotel reserves the right to reject any or all tenders without any reasons whatsoever and no representation shall be entertained on this account.

Sealed tenders must be addressed to the attention of : Cluster Purchase Manager, Hilton & Hilton Garden Inn.... Bengaluru, Embassy Manyata Business Park, Nagawara, Hebbal Outer Ring Road, Bangalore - 560 045.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

JOB OPPORTUNITIES

Part-Time Jobs

THOSE WHO Are Lost Job, MNC Provide Work From Home 30 to 35K: 7019215243/ 9886641282

Teachers/ Professors

Sri Krishna International Education Trust ®
SRI KRISHNA DEGREE COLLEGE
Affiliated to Bengaluru City University
#2(p), ITI Layout, BSK 3rd Stage, Bengaluru – 560 085
FACULTY RECRUITMENT
Applications are invited to teach UG Programmes in the following subjects:
Commerce and Management | Computer Science | Hindi | Sanskrit
Qualification PG Degree in relevant subject. Candidates with Ph.D/ NET/ SLET are preferred. Apply within seven days.
Contact: Principal- 9945330589 Phone:080 26795644/ 26796020 Email: skies.skc@gmail.com Visit: www.skdc.edu.in

St. Benedict's Accademy Asirvanam, Anchepalya, Mysore Road, Bangalore-74
REQUIRES Trained & Experienced **TEACHERS** For Kindergarten, Primary & High School To teach Maths, Science, English, Kanada, Social, Hindi, Computer, PT.
OFFICE STAFF & DRIVERS
Call: 9740245828
Mail your resume to: jeromeosb@gmail.com

BUSINESS

Business to Business

Financial Services

"URGENT LOAN Avail @ 3.5%. per Annum Personal, Business, Project all types loan in just 5 days OM SAI FINANCE LTD. Call/ WhatsApp: 8826494700."

Business Offers

Finance

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

Commerical

Kanakapura Road

BDA COMMERCIAL Site for Sale at JP Nagar 9th Phase, 3rd Block, Avalahalli 2kms from Kanakapura Road, Doddakallasandra Metro Station, 40x60 North Facing, 60Ft Road. 8660800061

Sites

Doddabalapur

BUY 30X40/ 40x60 Plots. Just Pay 1 Lakh Remaining from Bank Loan/ Instalment Facility. Doddaballapura Town Best Investment Opportunity: 9591146666

AUTOMOTIVE

Automobile Services

Auto Consultants

CERAMIC COATING: USA make chemical application. OFFER PRICE Rs. 24990 all inclusive (Reg 35k) including windshield coat and full interior detail. Expires 31st March 2022. Book appointment: MidCity Motors 8147853841 Open 7am.

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

REAL ESTATE SELLING

House

Mysore Road

NEW 30X50 East 3 Floor 1.25Cr Mysore Road Christ Collage 30X40 East Site Nagarabhavi: 9036401369

JOB
To Place your Classified Ads Contact: 9886213331

Classifieds
Book Your Classifieds Ads
Online Log in to dhclassifieds.com
For More Details Call 9880856233 | 9886213331
Email: Santhoshkumar@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಶೇ 7.5 ಮೀಸಲಾತಿಗೆ ಒತ್ತಾಯಿಸಿ ಸತ್ಯಾಗ್ರಹ • ಶೆಡ್‌ನಲ್ಲೇ ಅಹೋರಾತ್ರಿ ಧರಣಿ

ವಾಲ್ಮೀಕಿ ಸ್ವಾಮೀಜಿ ಹೋರಾಟ 25ನೇ ದಿನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಸಮುದಾಯಕ್ಕೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 7.5 ಮೀಸಲಾತಿ ನೀಡುವಂತೆ ಆಗ್ರಹಿಸಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಸತ್ಯಾಗ್ರಹ ಭಾನುವಾರ 25ನೇ ದಿನ ಪೂರೈಸಿದೆ. ಸ್ವಾಮೀಜಿಯವರನ್ನು ಬೀದಿಯಲ್ಲಿ ಕೂರುವಂತೆ ಮಾಡಿರುವ ರಾಜ್ಯ ಸರ್ಕಾರದ ವಿರುದ್ಧ ಸಮುದಾಯದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವರದಿ ಶಿಫಾರಸುಗಳನ್ನು ಜಾರಿಗೆ ತರಬೇಕು' ಎಂಬುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಫೆ. 9ರಿಂದ ಪ್ರಸನ್ನಾನಂದ ಸ್ವಾಮೀಜಿ ಸತ್ಯಾಗ್ರಹ ನಡೆಸುತ್ತಿದ್ದಾರೆ.

ಉದ್ಯಾನದಲ್ಲಿ ಚಿಕ್ಕದೊಂದು ಶೆಡ್ ನಿರ್ಮಿಸಲಾಗಿದ್ದು, ಅಲ್ಲಿಯೇ ಸ್ವಾಮೀಜಿ ನಿತ್ಯವೂ ಕುಳಿತುಕೊಳ್ಳುತ್ತಿದ್ದಾರೆ. ಶೆಡ್‌ನಲ್ಲೇ ಪೂಜೆ ನೆರವೇರಿಸಿ ಪ್ರಸಾದ ಸ್ವೀಕರಿಸುತ್ತಿದ್ದಾರೆ. 'ಸಮುದಾಯಕ್ಕೆ ನ್ಯಾಯ ಸಿಗುವವರೆಗೂ ಸತ್ಯಾಗ್ರಹ ಕೈಬಿಡುವುದಿಲ್ಲ' ಎಂದು ಸ್ವಾಮೀಜಿ ಪಟ್ಟು ಹಿಡಿದಿದ್ದಾರೆ.

'ರಾಜ್ಯದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ಸಮುದಾಯದ ಸ್ವಾಮೀಜಿ, 25 ದಿನಗಳಿಂದ ಉದ್ಯಾನದಲ್ಲಿ ಕುಳಿತಿದ್ದಾರೆ. ಅವರ ಬಳಿ ಬಂದು ಮಾತನಾಡುವ ಸೌಜನ್ಯವೂ ಮುಖ್ಯಮಂತ್ರಿ ಅವರಿಗಿಲ್ಲ. ಸ್ವಾಮೀಜಿಯವರನ್ನು ಬೀದಿಯಲ್ಲಿ ಕೂರಿಸಿರುವ ಈ ಸರ್ಕಾರಕ್ಕೆ ನಾಚಿಕೆಯಾಗಬೇಕು. ಸ್ವಾಮೀಜಿ ಕರೆ ನೀಡಿದರೆ ಸಾಕು, ಯಾವ ಹೋರಾಟಕ್ಕಾದರೂ ನಾವು ಸಿದ್ಧ' ಎಂದು ವಾಲ್ಮೀಕಿ ಸಮುದಾಯದ ಆಪಾದಿಸಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸತ್ಯಾಗ್ರಹ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಉದ್ಯಾನದಲ್ಲಿರುವ ಶೆಡ್‌ನಲ್ಲೇ ಭಾನುವಾರ ಲಿಂಗ ಪೂಜೆ ಮಾಡಿದರು – ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್

ಆದೇಶ ಪ್ರತಿ ಸಿಗುವವರೆಗೂ ಸತ್ಯಾಗ್ರಹ: 'ಮೀಸಲಾತಿ ನಿಗದಿ ಸಂಬಂಧ ಸರ್ಕಾರವೇ ರಚಿಸಿದ್ದ ಆಯೋಗ ಈಗಾಗಲೇ ವರದಿ ನೀಡಿದೆ. ಅದರ ಶಿಫಾರಸುಗಳನ್ನು ಜಾರಿಗೆ ತರಲು ಮಾತ್ರ ಸರ್ಕಾರ ಹಿಂದೇಟು ಹಾಕುತ್ತಿದೆ. ಶಿಕ್ಷಣ ಹಾಗೂ ಉದ್ಯೋಗದಲ್ಲಿ ಶೇ 7.5 ಮೀಸಲಾತಿ ಸಿಗುವವರೆಗೂ ಸತ್ಯಾಗ್ರಹ ಕೈಬಿಡುವುದಿಲ್ಲ' ಎಂದು ಪ್ರಸನ್ನಾನಂದ ಸ್ವಾಮೀಜಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರೋಗ್ಯ ಸೇರಿದಂತೆ ಎಲ್ಲ ಕ್ಷೇತ್ರದಲ್ಲೂ ನಮ್ಮ ಸಮುದಾಯ ಅತ್ಯಂತ ಕೆಳಸ್ತರದಲ್ಲಿದೆ. ನಮಗೆ ಸಾಮಾಜಿಕ ನ್ಯಾಯ ಬೇಕಿದೆ. ಹೀಗಾಗಿ, ಮೀಸಲಾತಿ ಕೇಳುತ್ತಿದ್ದೇವೆ' ಎಂದೂ ಹೇಳಿದರು.

'ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಸಂದರ್ಭದಲ್ಲೂ ಮೀಸಲಾತಿಗಾಗಿ 'ರಾಜನಹಳ್ಳಿಯಿಂದ ರಾಜಧಾನಿ ಚಲೊ' ಹೋರಾಟ ಮಾಡಲಾಗಿತ್ತು. ಅಂದಿನ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಪರವಾಗಿ ಮಾತುಕತೆಗೆ ಬಂದಿದ್ದ ಉಪಮುಖ್ಯಮಂತ್ರಿ ಜಿ. ಪರಮೇಶ್ವರ, ಮೀಸಲಾತಿ ಭರವಸೆ ನೀಡಿ ಈಡೇರಿಸಲಿಲ್ಲ. ನಂತರ, ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಮೀಸಲಾತಿ ಬಗ್ಗೆ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗ ರಚಿಸಿದ್ದರು. ವರದಿ ಬರುತ್ತಿದ್ದಂತೆ ಮೀಸಲಾತಿ ಆದೇಶ ಹೊರಡಿಸುವ ಭರವಸೆ ನೀಡಿದ್ದರು. ವರದಿ ಬಂದರೂ ಶಿಫಾರಸು ಜಾರಿಗೆ ಕ್ರಮ ಕೈಗೊಳ್ಳಲಿಲ್ಲ. ಇದು ನಮ್ಮ ಸಮುದಾಯಕ್ಕೆ ಮಾಡಿದ ಅನ್ಯಾಯ' ಎಂದು ಅಸಮಾಧಾನ ವ್ಯಕ್ತಪಡಿಸಿದರು. 'ಆಯೋಗದ ವರದಿ ಜಾರಿಗೆ ಅಡ್ಡಿಗಳಿಲ್ಲ. ಆದರೂ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಇದರ ಹಿಂದಿನ ಉದ್ದೇಶವೇನು ಎಂಬುದು ಗೊತ್ತಿಲ್ಲ. ವರದಿ ಜಾರಿಗೆ ಹಲವು ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಭರವಸೆಯನ್ನಷ್ಟೇ ನೀಡುತ್ತಿರುವ ಸರ್ಕಾರ, ನಂತರ ಮೌನವಾಗುತ್ತಿದೆ. ಹೀಗಾಗಿ, ಈ ಬಾರಿ ನಮ್ಮ ಸತ್ಯಾಗ್ರಹ ನಿರಂತರ' ಎಂದೂ ಸ್ವಾಮೀಜಿ ಹೇಳಿದರು.

24 ಗಂಟೆಯೂ ಭದ್ರತೆ

ಉದ್ಯಾನದಲ್ಲೇ ಸ್ವಾಮೀಜಿ ಕುಳಿತಿರುವುದರಿಂದ ದಿನದ 24 ಗಂಟೆಯೂ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ಇಬ್ಬರು ಪಿಎಸ್‌ಐ ನೇತೃತ್ವದ ತಂಡಗಳು, ಉದ್ಯಾನದಲ್ಲೇ ಮೊಕ್ಕಾಂ ಹೂಡಿವೆ.

ಸತ್ಯಾಗ್ರಹ ಸ್ಥಳಕ್ಕೆ ಬರಲು ಮುಖ್ಯಮಂತ್ರಿಗೆ ಆಗದಿದ್ದರೆ, ಜವಾನನ ಕೈಯಲ್ಲಾದರೂ ಮೀಸಲಾತಿ ನಿಗದಿ ಆದೇಶ ಪ್ರತಿ ಕೊಟ್ಟು ಕಳುಹಿಸಲಿ. ಸತ್ಯಾಗ್ರಹ ಬಿಟ್ಟು ರಾಜನಹಳ್ಳಿಗೆ ಹೋಗುತ್ತೇನೆ

ಪ್ರಸನ್ನಾನಂದ ಸ್ವಾಮೀಜಿ
ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ

ಇಂದ್ರಧನುಷ್ ಲಸಿಕಾ ಅಭಿಯಾನ ಇಂದಿನಿಂದ

ಬೆಂಗಳೂರು: ಪೋಲಿಯೊ ಸೇರಿದಂತೆ ವಿವಿಧ ರೋಗಗಳ ತಡೆಗೆ ಇಂದ್ರಧನುಷ್ 4.0 ಅಭಿಯಾನದಡಿ ಆರೋಗ್ಯ ಇಲಾಖೆಯು ಮಾ.7ರಿಂದ ರಾಜ್ಯದ 11 ಜಿಲ್ಲೆಗಳಲ್ಲಿ ಮೂರು ಸುತ್ತಿನ ಲಸಿಕಾ ಅಭಿಯಾನ ಹಮ್ಮಿಕೊಂಡಿದೆ.

ಈವರೆಗೂ ಲಸಿಕೆ ಪಡೆಯದ ಹಾಗೂ ಬಿಟ್ಟುಹೋದ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಈ ಅಭಿಯಾನದಡಿ ಲಸಿಕೆ ನೀಡಲಾಗುತ್ತದೆ. ಮಾ.7, ಏ.4 ಹಾಗೂ ಮೇ 9ರಂದು ನಿಗದಿತ ದಿನಾಂಕದ 7 ಕಾರ್ಯದಿನಗಳು ಈ ಅಭಿಯಾನ ನಡೆಯಲಿದೆ.

ಬೀದರ್, ಗದಗ, ದಕ್ಷಿಣ ಕನ್ನಡ, ಕಲಬುರಗಿ, ಬಳ್ಳಾರಿ, ಬೆಂಗಳೂರು ನಗರ, ವಿಜಯಪುರ, ದಾವಣಗೆರೆ, ಬಿಬಿಎಂಪಿ, ಬಾಗಲಕೋಟೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅಭಿವೃದ್ಧಿ ಹೊಂದದ ಪ್ರದೇಶಗಳಲ್ಲಿ ಅಭಿಯಾನ ನಡೆಯಲಿದೆ ಮೊದಲನೇ ಸುತ್ತಿನಲ್ಲಿ 30,234 ಮಕ್ಕಳು ಹಾಗೂ 7,521 ಗರ್ಭಿಣಿಯರನ್ನು ತಲುಪುವ ಗುರಿ ಹಾಕಿಕೊಳ್ಳಲಾಗಿದೆ ಎಂದು ಇಲಾಖೆ ತಿಳಿಸಿದೆ.

ಬಾಲ ಕ್ಷಯ, ಪೋಲಿಯೊ, ಹೆಪಟೈಟಿಸ್ ಬಿ, ಗಂಟಲು ಮಾರಿ, ನಾಯಿ ಕೆಮ್ಮು, ಧನುರ್ವಾಯು, ಇನ್‌ಪ್ಲೂಯೆಂಜಾ (ಹಿಬ್), ರೋಟಾ ವೈರಸ್, ಅತಿಸಾರ, ಇರುಳು ಕುರುಡು, ದಡಾರ, ರುಬೆಲ್ಲ, ಗಂಟಲುಮಾರಿ ಮತ್ತು ಮಿದುಳು ಜ್ವರ ತಡೆಗೆ ಲಸಿಕೆ ಹಾಗೂ ಚುಚ್ಚುಮದ್ದುಗಳನ್ನು ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

'ಗ್ಲಾಕೋಮಾ: ಕಣ್ಣಿನ ನರಗಳಿಗೆ ಹಾನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಲಾಕೋಮಾ ಕಾಯಿಲೆಯು ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ನರಗಳಿಗೆ ಹಾನಿ ಮಾಡುತ್ತದೆ. ಆರಂಭಿಕ ಹಂತದಲ್ಲೇ ತಪಾಸಣೆ ನಡೆಸಿ, ಚಿಕಿತ್ಸೆ ಪಡೆದುಕೊಂಡಲ್ಲಿ ಅಂಧತ್ವ ತಡೆಯಲು ಸಾಧ್ಯ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇಲಾಖೆಯು ಹಮ್ಮಿಕೊಂಡಿರುವ ವಿಶ್ವ ಗ್ಲಾಕೋಮಾ ಸಪ್ತಾಹಕ್ಕೆ ಭಾನುವಾರ ಚಾಲನೆ ದೊರೆತಿದ್ದು, ಇದೇ 12ರವರೆಗೆ ನಡೆಯಲಿದೆ. 'ಗ್ಲಾಕೋಮಾಗೆ ಒಳಗಾದವರಿಗೆ ಮಾಹಿತಿಯನ್ನು ದೃಷ್ಟಿಯಿಂದ ಮಿದುಳಿಗೆ ಸಾಗಿಸುವ ಹಂತದಲ್ಲಿನ ನರಗಳಿಗೆ ಹಾನಿ ಆಗುತ್ತದೆ. ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮದಡಿ ಉಚಿತವಾಗಿ ಕಣ್ಣಿನ ತಪಾಸಣೆಗಳನ್ನು ನಡೆಸಲಾಗುತ್ತಿದೆ' ಎಂದು ಇಲಾಖೆ ಹೇಳಿದೆ.

'ರೋಗ ಲಕ್ಷಣಗಳಿಲ್ಲದೆ ದೃಷ್ಟಿಯನ್ನು ಹಾನಿಗೊಳಿಸುವ ಕಾಯಿಲೆ ಗ್ಲಾಕೋಮಾ. 40 ವಯಸ್ಸಿನ ನಂತರ ಪ್ರತಿಯೊಬ್ಬರು ವರ್ಷಕ್ಕೊಮ್ಮೆ ಕಣ್ಣಿನ ಒತ್ತಡವನ್ನು ಪರೀಕ್ಷಿಸಿಕೊಳ್ಳಬೇಕು. ಮಧುಮೇಹ, ರಕ್ತದೊತ್ತಡ ಹಾಗೂ ಸಮೀಪ ದೃಷ್ಟಿದೋಷವಿರುವವರಲ್ಲಿ ಗ್ಲಾಕೋಮಾ ಆಗುವ ಸಂಭವ ಹೆಚ್ಚಾಗಿರುತ್ತದೆ. ಪದೇ ಪದೇ ಕನ್ನಡಕದ ಸಂಖ್ಯೆ ಬದಲಾಯಿಸಬೇಕಾದ್ದಲ್ಲಿ ಕಡ್ಡಾಯವಾಗಿ ಕಣ್ಣಿನ ಒತ್ತಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಗ್ಲಾಕೋಮಾದಲ್ಲಿ ನೇರ ದೃಷ್ಟಿಯು ಸರಿಯಾಗಿದ್ದರೂ ದೃಷ್ಟಿ ವಲಯವು ಕುಗ್ಗುತ್ತಾ ಹೋಗುತ್ತದೆ' ಎಂದು ತಿಳಿಸಿದೆ.

'ಕುಟುಂಬದ ಪೋಷಕರು ಗ್ಲಾಕೋಮಾದಿಂದ ಬಳಲುತ್ತಿದ್ದರೆ ಇತರ ಸದಸ್ಯರು ಕಡ್ಡಾಯವಾಗಿ ಕಣ್ಣಿನ ಒತ್ತಡ ಪರೀಕ್ಷೆ ಮಾಡಿಸಿಕೊಳ್ಳಬೇಕು. ಸೂಕ್ತ ಚಿಕಿತ್ಸೆ ಪಡೆಯದಿದ್ದಲ್ಲಿ ಶಾಶ್ವತ ಅಂಧತ್ವ ಉಂಟಾಗಬಹುದು. ಸರಿಯಾದ ಸಮಯದಲ್ಲಿ ಸೂಕ್ತ ಚಿಕಿತ್ಸೆ ಪಡೆಯುವುದು ಅಗತ್ಯ' ಎಂದು ಸಲಹೆ ನೀಡಿದೆ.

'ಈ ಬಗ್ಗೆ ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ 104 ಸಂಪರ್ಕಿಸಬಹುದು' ಎಂದು ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಗಿರಿಜಾಶಂಕರ ಕಲ್ಯಾಣೋತ್ಸವ: ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಆಯೋಜನೆ ಮತ್ತು ಸ್ಥಳ–ನಂದೀಶ್ವರ ದೇವಾಲಯ, ಮರಿಯಪ್ಪನಪಾಳ್ಯ ವೃತ್ತ, ಜ್ಞಾನಭಾರತಿ, ಬೆಳಿಗ್ಗೆ 9ರಿಂದ

ಇಂದ್ರಧನುಷ್ 4.0 ಅಭಿಯಾನಕ್ಕೆ ಚಾಲನೆ: ಆರೋಗ್ಯ ಸಚಿವ ಕೆ.ಸುಧಾಕರ್, ಸ್ಥಳ–ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಆವರಣ, ಶಿವಾಜಿನಗರ, ಬೆಳಿಗ್ಗೆ 9.30

ಬೆಂಗಳೂರು–ಇಂಡಿಯಾ ನ್ಯಾನೋ ಮೇಳ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿ–ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ನೇತೃತ್ವ–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಆಯೋಜನೆ–ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ, ಸ್ಥಳ–ಗ್ರ್ಯಾಂಡ್ ಬಾಲ್‌ರೂಂ, ಹೋಟೆಲ್ ಶಾಂಗ್ರಿಲಾ, ವಸಂತನಗರ, ಬೆಳಿಗ್ಗೆ 10

ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆಯೋಜನೆ–ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, ಸ್ಥಳ–ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

'ವಹ್ನಿ' ನೃತ್ಯ ಕಾರ್ಯಕ್ರಮ: ಸಂಜಯ್ ಶಾಂತಾರಾಂ, ಅತಿಥಿಗಳು–ಸುದರ್ಶನ ಶೆಟ್ಟಿ, ರತ್ನಾ ಸುಪ್ರಿಯ ಶ್ರೀಧರನ್, ಆಯೋಜನೆ–ಶಿವಪ್ರಿಯ ನೃತ್ಯಶಾಲೆ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6

ಭಾವಾಂತರಂಗ ನಾಟಕೋತ್ಸವ: ನಾಟಕ–ದೊರೆ ಈಡಿಪಸ್, ನಿರ್ದೇಶನ–ಶಶಿಧರ ಭಾರಿಘಾಟ್, ಆಯೋಜನೆ–ಭಾಗವತರು ಸಾಂಸ್ಕೃತಿಕ ಸಂಘಟನೆ, ಸ್ಥಳ–ಬಯಲು ರಂಗಮಂದಿರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15ಕ್ಕೆ

'ವಹ್ನಿ' ನೃತ್ಯ ಕಾರ್ಯಕ್ರಮ: ಸಂಜಯ್ ಶಾಂತಾರಾಂ, ಅತಿಥಿಗಳು–ಸುದರ್ಶನ ಶೆಟ್ಟಿ, ರತ್ನಾ ಸುಪ್ರಿಯ ಶ್ರೀಧರನ್, ಆಯೋಜನೆ–ಶಿವಪ್ರಿಯ ನೃತ್ಯಶಾಲೆ, ಸ್ಥಳ–ಎಡಿಎ ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 6

ಸಂಜಯ್ ಶಾಂತಾರಾಂ

ಬಾಂಧವ್ಯದ ಸೇತುವೆ ಕಳಕೊಂಡ ಹುಡುಗಿಯ ದಿಟ್ಟ ಕಥನ ‘ಬ್ರಿಜ್’

● ಪ್ರವೀಣ್ ಕುಮಾರ್ ಪಿ.ವಿ.

ಬ್ರಿಜ್ ಸಿನಿಮಾದ ದೃಶ್ಯ

ಬೆಂಗಳೂರು: ಧುತ್ತೆಂದು ಎದುರಾಗುವ ಸಂಕಷ್ಟಗಳೆಲ್ಲವನ್ನೂ ಅವುಡುಕಚ್ಚಿಕೊಂಡು ದಿಟ್ಟವಾಗಿ ಎದುರಿಸುವ ಅಸ್ಸಾಮಿನ ಹದಿಹರೆಯದ ಹುಡುಗಿಯ ಹೋರಾಟದ ಬದುಕಿನ ಕಥನವೇ ‘ಬ್ರಿಜ್’ ಸಿನಿಮಾ. ಸ್ಮಾರ್ಟ್‌ಪೋನ್ ಯುಗದಲ್ಲೂ ಹಳ್ಳಿಯ ಹೆಣ್ಣು ಮಕ್ಕಳ ಬದುಕು ಎಷ್ಟು ಸಂಕೀರ್ಣ ಎಂಬುದನ್ನು ನಿರ್ದೇಶಕ ಕೃಪಾಲ್ ಕಲಿಟ ಅವರು ಈ ಅಸ್ಸಾಮಿ ಸಿನಿಮಾದಲ್ಲಿ ಕಾವ್ಯಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಬೆಂಗಳೂರು ಚಲನಚಿತ್ರೋತ್ಸವದಲ್ಲಿ ಭಾನುವಾರ ಪ್ರದರ್ಶನಗೊಂಡ ಈ ಭಾರತೀಯ ಸಿನಿಮಾ ಸಿನಿಪ್ರಿಯರ ಗಮನ ಸೆಳೆಯಿತು.

ತಂದೆ, ತಾಯಿ, ಬಾಲ್ಯದ ಖುಷಿ, ಮದುವೆ.... ಹೀಗೆ ಬದುಕಿನ ಸರ್ವಸ್ವವನ್ನು ಕಳೆದುಕೊಂಡರೂ ಛಲ ಬಿಡದೆ, ಸ್ವಾಭಿಮಾನ ತೊರೆಯದೆ ಬದುಕು ಕಟ್ಟಿಕೊಳ್ಳುವ ಗಟ್ಟಿಗಿತ್ತಿ ಹೆಣ್ಣು ಕಥಾನಾಯಕಿ ಜೋನಾಕಿ. ಜಗತ್ತು ಎಷ್ಟೇ ಮುಂದುವರಿದರೂ ಕನಿಷ್ಠ ಪಕ್ಷ ಸೇತುವೆಯ ಸಂಪರ್ಕವನ್ನೂ ಪಡೆಯಲು ಸಾಧ್ಯವಾಗದೇ ‘ದ್ವೀಪ’ವಾಗಿಯೇ ಉಳಿದ ಅಸ್ಸಾಮಿನ ಹಳ್ಳಿಯೊಂದರ ಗೋಳಿನ ಕತೆಯ ಜೊತೆ ಹೆಣ್ಣನ್ನು ಎಡೆಬಿಡದೆ ‘ಕಾಡುವ’ ವ್ಯವಸ್ಥೆಯ ವಿವಿಧ ಆಯಾಮಗಳನ್ನು ಜೋಡಿಸಿ ಅವರು ಕತೆ ಹೇಳಿದ ಪರಿ ಮನಮುಟ್ಟುವಂತಿದೆ.

ಬಣ್ಣದ ಕನಸುಗಳನ್ನು ಕಾಣುವ ವಯಸ್ಸಿನಲ್ಲಿ ಪ್ರವಾಹದಲ್ಲಿ ಅಪ್ಪನನ್ನು ಕಳೆದುಕೊಳ್ಳುವ ಜೋನಾಕಿ ಕುಟುಂಬದ ನೊಗ ಹೆಗಲೇರಿಸಿಕೊಳ್ಳಬೇಕಾಗುತ್ತದೆ. ಅಪಸ್ಮಾರದಿಂದ ಬಳಲುವ ತಾಯಿ ಪುತುಳಿಯನ್ನು ಹಾಗೂ ಪ್ರಾಥಮಿಕ ಶಾಲೆಯಲ್ಲಿ ಕಲಿಯುವ ತಮ್ಮ ಬಾಪುಕಾನ್ ಸಾಕುವ ಹೊಣೆ ಹೊತ್ತ ಬಳಿಕ ಆಕೆಯ ಕನಸುಗಳೆಲ್ಲ ಕಮರುತ್ತವೆ.

ದ್ವೀಪದಲ್ಲಿರುವ ಊರನ್ನು ಸಂಪರ್ಕಿಸಲು ಇದ್ದ ಬಿದಿರಿನ ಸೇತುವೆ ಪ್ರವಾಹದಲ್ಲಿ ಕೊಚ್ಚಿಹೋಗುತ್ತದೆ. ಬಾಳೆದಿಂಡಿನ ತೆಪ್ಪವನ್ನೇ ನದಿ ದಾಟಲು ಆಶ್ರಯಿಸಬೇಕಾಗುತ್ತದೆ. ಸಂಪರ್ಕ ಕಡಿದುಕೊಂಡ ಈ ದ್ವೀಪದ ಯುವತಿಯರನ್ನು ಮದುವೆಯಾಗಲು ಪರವೂರಿನವರು ಹಿಂದೇಟು ಹಾಕುತ್ತಾರೆ. ಹೊಲ ಊಳುತ್ತಾ ಬೇಸಾಯ ಮಾಡುತ್ತಾ ಬದುಕುತ್ತಿರುವ ಜೋನಾಕಿಯ ದಿಟ್ಟತನದ ಕತೆಯನ್ನೇ ಜಗತ್ತಿನೆದುರು ತೆರೆದಿಡುವ ಪತ್ರಕರ್ತನೇ ಆಕೆಯನ್ನು ಮದುವೆಯಾಗಲು ಮುಂದಾಗುವ ಮೂಲಕ ಆಕೆಯಲ್ಲಿ ಮತ್ತೆ ಆಸೆಗಳನ್ನು ತುಂಬುತ್ತಾನೆ. ಊರಿಗೆ ಸೇತುವೆ ಇಲ್ಲದಿರುವುದರಿಂದ ಆಕೆಯ ಆ ಕನಸಿಗೂ ಕಲ್ಲು ಬೀಳುತ್ತದೆ.

ಈ ನಡುವೆ ಊರಿನ ಶ್ರೀಮಂತ ಕುಟುಂಬದ ಯುವಕನಿಂದ ಲೈಂಗಿಕ ಕಿರುಕುಳವನ್ನೂ ಎದುರಿಸುವ ಜೊನಾಕಿ, ತಾನು ಮಾಡದ ತಪ್ಪಿಗೆ ಪಂಚಾಯಿತಿಗೆ ₹ 20 ಸಾವಿರ ದಂಡವನ್ನು ತೆರಬೇಕಾಗುತ್ತದೆ. ಇದಕ್ಕಾಗಿ ಎತ್ತುಗಳನ್ನೂ ಮಾರಬೇಕಾಗುತ್ತದೆ.

ಸೇತುವೆ ಕಳೆದುಕೊಂಡ ಊರಿನಂತೆಯೇ, ತಂದೆ ತಾಯಿಯನ್ನು ಕಳೆದುಕೊಳ್ಳುವ ಜೊನಾಕಿ ಬದುಕೂ ದ್ವೀಪದಂತಾಗುತ್ತದೆ. ಧುತ್ತೆಂದು ಎದುರಾಗುವ ಪ್ರವಾಹ ಇಡೀ ಊರನ್ನೇ ಸರ್ವನಾಶ ಮಾಡುತ್ತದೆ. ಅಂತೆಯೇ, ತನ್ನ ಬದುಕಿನಲ್ಲಿ ಪದೇ ಪದೇ ಎದುರಾಗುವ ಭೀಕರ ಪ್ರವಾಹಗಳನ್ನು ಜೊನಾಕಿ ಹೇಗೆ ದಿಟ್ಟವಾಗಿ ಎದುರಿಸುತ್ತಾಳೆ ಎಂಬುದೇ ಈ ಸಿನಿಮಾದ ಕಥಾ ಹಂದರ. ಆಕೆಯ ಛಲ, ಹತಾಶೆ, ತಳಮಳ, ಧೃಡ ಮನಸ್ಸಿನ ಛಾಯೆಗಳೇ ಕ್ಯಾನ್ವಾಸನ್ನು ಆವರಿಸಿವೆ.

ಇದು ಕೃಪಾಲ್ ಅವರ ಚೊಚ್ಚಲ ಸಿನಿಮಾ ಎಂದೆನಿಸುವುದೇ ಇಲ್ಲ. ಚೌಕಟ್ಟಿನೊಳಗಿನ ಪ್ರತಿಯೊಂದು ಚಿತ್ರಣವೂ ಒಂದೊಂದು ಕತೆ ಹೇಳುತ್ತದೆ. ಛಾಯಾಗ್ರಹಣವೂ ಚೆನ್ನಾಗಿದೆ. ಶಿವರಾಣಿ ಕಲಿಟ ನಿರ್ವಹಿಸಿದ ಜೊನಾಕಿ ಪಾತ್ರವನ್ನೂ ಬಹುಕಾಲ ಕಾಡುತ್ತದೆ. ಆಕೆಯ ತಾಯಿಯ (ಪುಟುಲಿ) ಪಾತ್ರಕ್ಕೆ ಅನಿಂದಿತಾ ದಾಸ್, ಆಕೆಯ ತಮ್ಮನ (ಬಾಪುಕಿನ್) ಪಾತ್ರಕ್ಕೆ ಬಾಲನಟ ಪಾರ್ಥ ಪ್ರೋತಿಮ್ ಬೋರಾ ಜೀವ ತುಂಬಿದ್ದಾರೆ.

‘ಬ್ರಹ್ಮಪುತ್ರಾ ಮಹಾನದಿಯ ಉಪನದಿ ಚಾರುಕುರಿಯ ಪ್ರತಿವರ್ಷವೂ ಪ್ರವಾಹವನ್ನು ಸೃಷ್ಟಿಸುತ್ತದೆ. ಪ್ರವಾಹದಿಂದ ಜನರ ಬದುಕುಗಳು ಛಿದ್ರಗೊಂಡ ಪ್ರತ್ಯೇಕ ಘಟನೆಗಳನ್ನು ಪೋಣಿಸಿ ಕತೆ ಹಣೆದಿದ್ದೇನೆ. ‘ಬ್ರಿಜ್’ ನೈಜ ಘಟನೆ ಆಧರಿತ ಸಿನಿಮಾ’ ಎಂದು ಕೃಪಾಲ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಿನಿಮಾ ಬಜೆಟ್ ಕೇವಲ ₹ 30 ಲಕ್ಷ’

ಕೃಪಾಲ್ ಕಲಿಟ

‘ಈ ಸಿನಿಮಾ ಕೇವಲ ₹ 30 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಈ ಚಿತ್ರೀಕರಣಕ್ಕೆ 14 ತಿಂಗಳು ಬೇಕಾಯಿತು. ಅಸ್ಸಾಮಿನಲ್ಲಿ ಒಟ್ಟು ಆರು ಋತುಗಳನ್ನು ಗುರುತಿಸುತ್ತೇವೆ. ಪ್ರತಿಯೊಂದು ಋತುವನ್ನೂ ಸಹಜ ವಾತಾವರಣದಲ್ಲೇ ಚಿತ್ರೀಕರಿಸಿದ್ದೇವೆ. ಈ ಚಿತ್ರವನ್ನು 2022ರ ಅಕ್ಟೋಬರ್‌ನಲ್ಲಿ ದುರ್ಗಾಪೂಜೆ ಸಂದರ್ಭದಲ್ಲಿ ಬಿಡುಗಡೆ ಮಾಡಲಿದ್ದೇವೆ’ ಎಂದು ಕೃಪಾಲ್ ‘ಪ್ರಜಾವಾಣಿ’ಗೆ ತಿಳಿಸಿದರು. 7ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನ ಕಂಡಿರುವ ಈ ಚಿತ್ರ ಅನೇಕ ಪ್ರಶಸ್ತಿಗಳನ್ನೂ ಬಾಚಿಕೊಂಡಿದೆ.

‘ದೇವದ ಕಾಡಿ’ನಲ್ಲಿ ಧಿಕ್ಕಾರದ ಕೂಗು

ಬೆಂಗಳೂರು: ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಧಿಕ್ಕಾರದ ಘೋಷಣೆ ಮೊಳಗಿಸಿದ ಘಟನೆ ನಡೆದಿದೆ.

ಚಾಮರಾಜಪೇಟೆಯ ರಾಜ್ ಕುಮಾರ್ (ಅಂಬರೀಷ್ ಕಲಾಭವನ) ಚಿತ್ರಮಂದಿರದಲ್ಲಿ ಮಧ್ಯಾಹ್ನ ಕೊಡವ ಭಾಷೆಯ ‘ದೇವದ ಕಾಡು’ (Devada Kaad) ಪ್ರದರ್ಶನದ ಬಳಿಕ ಈ ಘಟನೆ ನಡೆದಿದೆ. ಇದು ಕೊಡವ ಸಂಸ್ಕೃತಿಗೆ ಅಪಚಾರ ಮಾಡುವ ಸಿನಿಮಾ ಎಂದು ಪ್ರಕಾಶ್ ಕಾರ್ಯಪ್ಪ ಎಂಬುವವರು ಆಕ್ರೋಶ ವ್ಯಕ್ತಪಡಿಸಿದರು. ಸಿನಿಮಾ ಶೀರ್ಷಿಕೆಗೂ ಇದಕ್ಕೂ ಸಂಬಂಧವೇ ಇಲ್ಲ. ಕೊಡಗಿನ ಆಚಾರ ವಿಚಾರಗಳು ಉತ್ಕೃಷ್ಟವಾಗಿದ್ದು, ಅದನ್ನು ತಳಮಟ್ಟಕ್ಕೆ ಇಳಿಸಿ ಚಿತ್ರೀಕರಣ ಮಾಡಿರುವುದು ಕೊಡವರಿಗೆ ಮಾಡಿದ ಅಪಮಾನ. ಈ ಸಿನಿಮಾ ಅಂತರರಾಷ್ಟ್ರೀಯ ಚಿತ್ರೋತ್ಸವ ತನಕ ಹೇಗೆ ಬಂತು? ಎಂದು ಚಿತ್ರ ನಿರ್ದೇಶಕರು, ಕಲಾವಿದರ ಸಮ್ಮುಖದಲ್ಲೇ ಪ್ರಶ್ನಿಸಿದರು.

ಚಿತ್ರ ನಿರ್ಮಾಣದ ಹಿಂದಿನ ಕಥೆ ತೆರೆದಿಟ್ಟ ನಿರ್ದೇಶಕರು

ತಾಯಿಯ ಆಸೆ ಸಿನಿಮಾವಾದಾಗ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾನುಭವ... ಕಂಡ ಘಟನೆಗಳು... ಕೌಟುಂಬಿಕ ಹಿನ್ನೆಲೆ ಇವು ಒಬ್ಬೊಬ್ಬ ನಿರ್ದೇಶಕರಿಗೆ ಸಿನಿಮಾ ಮಾಡಲು ಸ್ಫೂರ್ತಿ ಕೊಟ್ಟಿವೆ. 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಮಾರ್ಚ್ 5ರಂದು ಪ್ರದರ್ಶನಗೊಂಡ ಕನ್ನಡ ಚಿತ್ರಗಳ ನಿರ್ದೇಶಕರು ಚಿತ್ರ ನಿರ್ಮಾಣದ ಹಿಂದಿನ ಕತೆಗಳನ್ನು ಪತ್ರಿಕಾಗೋಷ್ಠಿ ಸಹಿತ ಸಂವಾದದಲ್ಲಿ ತೆರೆದಿಟ್ಟರು.

‘ಮಗಳು ಹಾಗೂ ಅವಳ ಗೆಳತಿ ಸಿನಿಮಾ ನೋಡಲು ಹೋಗಿ ವಾಪ zಸಾಗುವಾಗ ತಡವಾದ ಘಟನೆಯೇ ‘ಸ್ಟಾಕರ್’ ಸಿನಿಮಾಕ್ಕೆ ಸ್ಫೂರ್ತಿಯಾಯಿತು’ ಎಂದು ನಿರ್ದೇಶಕ ಕಿಶೋರ್ ಭಾರ್ಗವ್ ಅನುಭವ ತೆರೆದಿಟ್ಟರು.

‘ಎಷ್ಟೋ ಹೆಣ್ಣುಮಕ್ಕಳು ಸ್ಟಾಕರ್‌ಗಳ ಕಾಟದ ಬಗ್ಗೆ ಹೇಳಿಕೊಳ್ಳಲಾಗದೆ ಕೆಲಸ ತೊರೆದ, ಊರು ಬಿಟ್ಟ ಘಟನೆಗಳು ನಡೆದಿವೆ. ಅವೆಲ್ಲವನ್ನೂ ಸಂಶೋಧಿಸಿ ಅತ್ಯಂತ ಕಡಿಮೆ ಬಜೆಟ್‌ನಲ್ಲಿ ಈ ಸಿನಿಮಾ ಮಾಡಿದ್ದೇನೆ. ಅಂದಹಾಗೆ ಈ ಮೂಲ ಕಲ್ಪನೆಯನ್ನು ನಾಗತಿಹಳ್ಳಿ ಚಂದ್ರಶೇಖರ್ ಅವರ ಟೆಂಟ್ ಶಾಲೆಯ ವಿದ್ಯಾರ್ಥಿಯೊಬ್ಬರು ಹಂಚಿಕೊಂಡರು. ನಾನೇ ನಿರ್ದೇಶಿಸುವಂತೆ ಕೋರಿದರು’ ಎಂದು ನೆನಪನ್ನು ತೆರೆದಿಟ್ಟರು.

‘ಸ್ವಾತಂತ್ರ್ಯ ಹೋರಾಟದಲ್ಲಿ ಅದೆಷ್ಟೋ ಜನ ತಮಗರಿವಿಲ್ಲದೇ ಹೋರಾಟದಲ್ಲಿ ತೊಡಗಿದ್ದರು. ಅವರ ಹೆಸರು ಬೆಳಕಿಗೆ ಬರಲೇ ಇಲ್ಲ. ಅಂಥ ಪಾತ್ರಗಳನ್ನು ಮುಂದಿಟ್ಟುಕೊಂಡು ಸಿನಿಮಾ ಮಾಡಿದೆ. ನನ್ನ ಬಳಿ ದೊಡ್ಡ ಬಜೆಟ್ ಕೂಡಾ ಇರಲಿಲ್ಲ. ಅದೇ ಈ ಸಿನಿಮಾ ನಿರ್ಮಾಣಕ್ಕೆ ಕಾರಣವಾಯಿತು’ ಎಂದರು ‘ಭುಗಿಲು’ ಸಿನಿಮಾ ನಿರ್ದೇಶಕ ಚಂದ್ರಕಾಂತ ಕೊಡಪಾಡಿ.


ಒರಾಯನ್ ಮಾಲ್ ನಲ್ಲಿ 'ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ರಂಗಕರ್ಮಿ ಕೆ.ವಿ.ನಾಗರಾಜಮೂರ್ತಿ ಮತ್ತು ಚಲನಚಿತ್ರ ನಿರ್ದೇಶಕ ಎಂ.ಎಸ್ ಸತ್ಯು ಮಾತುಕತೆ ನಡೆಸಿದರು. ಸಾಹಿತಿ ದೊಡ್ಡರಂಗೇಗೌಡ, ನಟ ಮಂಡ್ಯ ರಮೇಶ್, ನಟಿ ಪ್ರೇರಣಾ ಕಂಬಮ್ ಮತ್ತು ನಟ ಸುಮುಖ್ ಇದ್ದರು – ಪ್ರಜಾವಾಣಿ ಚಿತ್ರ

ಚಿತ್ರೋತ್ಸವದಲ್ಲಿ ಇಂದು

- **ಒರಾಯನ್ ಮಾಲ್:** ತೆರೆ ಸಂಖ್ಯೆ 4ರಲ್ಲಿ ಕನ್ನಡ ಚಿತ್ರಗಳು: ಬೆಳಿಗ್ಗೆ 10ಕ್ಕೆ ಮುನ್ನುಡಿ, ಮಧ್ಯಾಹ್ನ 1ಕ್ಕೆ ಕೇಕ್, 3.15ಕ್ಕೆ ಗವಿಸಿದ್ಧ 6.30ಕ್ಕೆ ಮಾನ
- **ತೆರೆ ಸಂಖ್ಯೆ 5ರಿಂದ 10:** ವಿಶ್ವದ ವಿವಿಧ ಚಿತ್ರಗಳ ಪ್ರದರ್ಶನ
- **ತೆರೆ ಸಂಖ್ಯೆ 11ರ ಆಡಿಟೋರಿಯಂ:** ಮಧ್ಯಾಹ್ನ 2ಕ್ಕೆ ಬಾಳೇ ಬಂಗಾರ– ಮೇಕಿಂಗ್ ಆಫ್ ಎ ಸೂಪರ್ ಸ್ಟಾರ್– ಭಾರತಿ ವಿಷ್ಣುವರ್ಧನ್ ಅವರೊಂದಿಗೆ ಮಾತುಕತೆ
- **ಸುಚಿತ್ರಾ ಅಕಾಡೆಮಿ, ಬನಶಂಕರಿ:** ಬೆಳಿಗ್ಗೆ 10ಕ್ಕೆ ಜಿಹಾದ್ ಮಧ್ಯಾಹ್ನ 12.30ಕ್ಕೆ ರಕ್ತಗುಲಾಬಿ 3ಕ್ಕೆ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಬಂಧಿಸಿದ ಚಿತ್ರ. ಸಂಜೆ 5ರಿಂದ ವಿಶ್ವ ಚಲನಚಿತ್ರ ಪ್ರದರ್ಶನ
- **ಡಾ.ರಾಜ್‌ಕುಮಾರ್ ಭವನ ಚಾಮರಾಜಪೇಟೆ – ಕನ್ನಡ ಚಿತ್ರಗಳು:** ಮಧ್ಯಾಹ್ನ 1ಕ್ಕೆ ದಾರಿ ಯಾವುದಯ್ಯಾ ವೈಕುಂಠಕೆ, ಸಂಜೆ 4ಕ್ಕೆ ರತ್ನನ್ ಪ್ರಪಂಚ, 7ಕ್ಕೆ ರುಗ್ಣ.

‘ತಾಯಿಯ ಕೊನೆಯ ಆಸೆಯಂತೆ ‘ಶ್ರೀ ಜಗನ್ನಾಥ ದಾಸರು’ ಚಿತ್ರ ನಿರ್ಮಿಸಿದೆ. ಚಿತ್ರ ಸೆಟ್ಟೇರುತ್ತಿದ್ದಂತೆಯೇ ಎಲ್ಲವೂ ಪವಾಡದಂತೆಯೇ ನಡೆದುಹೋಯಿತು. ಹಾಕಿದ ಬಂಡವಾಳವೂ ವಾಪಸ್ ಬಂದು ಚಿತ್ರ ಹೌಸ್‌ಫುಲ್ ಪ್ರದರ್ಶನ ಕಂಡಿದೆ’ ಎಂದು ಸಂತೃಪ್ತಿ ವ್ಯಕ್ತಪಡಿಸಿದರು ನಿರ್ಮಾಪಕ ಮಧುಸೂದನ ಹವಾಲ್ದಾರ್.

‘ಜಗತ್ತಿನ ಸಂಕೀರ್ಣ ಸಮಸ್ಯೆಯತ್ತ ಬೆಳಕು ಚೆಲ್ಲಿದೆ ‘ಅಲೆಮಾರಿ’. ಆಧುನಿಕ ಕಾಲಘಟ್ಟದಲ್ಲಿಯೂ ಇದೇ ರೀತಿ ಅಲೆದಾಡುತ್ತಲೇ ಬದುಕಬೇಕೇ? ಎಂಬ ಪ್ರಶ್ನೆ ನನ್ನನ್ನು ಕಾಡಿದೆ. ಅದೆಷ್ಟೋ ಜನಾಂಗಗಳು ಹೀಗೇ ಬದುಕುತ್ತಿವೆ. ಹೆಸರು, ಊರೂ ಗೊತ್ತಿಲ್ಲದ ಜನರು ಅವರು. ಅವರ ಬದುಕಿನ ಚಿತ್ರವೇ ‘ಗಿಳಿಯು ಪಂಜರದೊಳಿಲ್ಲ’’ ಎಂದು ವಿವರಿಸಿದರು ನಿರ್ದೇಶಕ ಪಿ.ಆರ್. ರಾಮದಾಸ ನಾಯ್ಡು.

‘ಈ ಚಿತ್ರದಲ್ಲಿ ಗಿಳಿಶಾಸ್ತ್ರದವನನ್ನು ಮುಂದಿಟ್ಟುಕೊಂಡು ಕಥಾ ಹಂದರ ರೂಪಿಸಿದ್ದೇನೆ. ಈ ಗಿಳಿಶಾಸ್ತ್ರದವರು ಬಳಸುವ ಗಿಳಿಯ ಪ್ರಭೇದದ ಮೇಲೂ ಅವರ ಪಂಗಡವನ್ನು ಗುರುತಿಸುತ್ತಾರೆ. ಗಿಳಿಯನ್ನು ಶಾಸ್ತ್ರ ಹೇಳಲು ಬಳಸುವಂತಿಲ್ಲ. ಹಾಗೆ ಮಾಡಿದರೆ ಜೈಲು ಶಿಕ್ಷೆ ಇದೆ. ಹಾಗಿದ್ದೂ ಅವರು ಈ ರೀತಿ ಏಕೆ ಬದುಕಬೇಕು? ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬಹುದಲ್ಲವೇ ಎಂಬುದನ್ನು ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದೇನೆ’ ಎಂದರು ನಾಯ್ಡು.

‘ಜಗತ್ತಿನಲ್ಲಿ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ. ನಮ್ಮ ವ್ಯವಸ್ಥೆ ಅದನ್ನು ನಿರ್ಲಕ್ಷಿಸುತ್ತಲೇ ಇದೆ. ಇದು ಒಂದಿಡೀ ತಲೆಮಾರಿನ ಮೇಲೆ ಪರಿಣಾಮ ಬೀರುತ್ತದೆ. ಕೋವಿಡ್ ಕಾಲದಲ್ಲಂತೂ ಈ ಸಮಸ್ಯೆಯನ್ನು ಸಂಪೂರ್ಣ ನಿರ್ಲಕ್ಷಿಸಲಾಯಿತು. ಆದ್ದರಿಂದ ಈ ಸಂಕೀರ್ಣ ವಿಷಯದ ಮೇಲೆ ಬೆಳಕು ಚೆಲ್ಲುವ ಸಿನಿಮಾವೇ ‘ನಮ್ಮ ಚಿಲ್ಡ್ರನ್ಸ್ ಇಂಡಿಯಾ ಡಾಟ್ ಕಾಂ’ ಎಂದು ನಿರ್ದೇಶಕ ನಂಜುಂಡೇಗೌಡ ಎನ್. ಆರ್. ಅನುಭವ ಬಿಚ್ಚಿಟ್ಟರು.

‘ಪರಿವರ್ತನೆಯ ಹೊಸ ಶಕೆಗೆ ಮುನ್ನುಡಿ ಬರೆದ ವಿವೇಕಾನಂದ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ‘ಭಗವದ್ಗೀತೆಯಲ್ಲಿ ಜೀವನದ ಹಲವು ಮೌಲ್ಯಗಳಿವೆ’
- ‘ಭಗವದ್ಗೀತೆಯಲ್ಲಿರುವ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು’
- ‘ಮಕ್ಕಳು ಮನಸ್ಸು ನಿಗ್ರಹಿಸುವುದನ್ನು ಕಲಿತುಕೊಳ್ಳಬೇಕು’

ಬೆಂಗಳೂರು: ‘ಸ್ವಾಮಿ ವಿವೇಕಾನಂದ ದೇಶದಲ್ಲಿ ಪರಿವರ್ತನೆಯ ಹೊಸ ಶಕೆಗೆ ಮುನ್ನುಡಿ ಬರೆದಿದ್ದರು. 39 ವರ್ಷಗಳ ಜೀವಿತಾವಧಿಯಲ್ಲಿ ಇಡೀ ಜಗತ್ತಿನ ದೃಷ್ಟಿಕೋನ ಬದಲಿಸಿದ್ದ ಅವರು ‘ನನ್ನ ತನದ ಅರಿವಿನ’ ಕುರಿತು ಜಾಗೃತಿ ಮೂಡಿಸುವ ಮೂಲಕ ದೇಶದಲ್ಲಿ ಸಂಚಲನ ಸೃಷ್ಟಿಸಿದ್ದರು’ ಎಂದು ನೃಪತುಂಗ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ಬಳ್ಳಿ ತಿಳಿಸಿದರು.

ಸಮರ್ಥ ಭಾರತ ಹಾಗೂ ದಿ ಮಿಥಿಕ್ ಸೊಸೈಟಿಯು ಕಾಲೇಜು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭದಲ್ಲಿ ಭಾನುವಾರ ಮಾತನಾಡಿದರು.

‘ಒಳಿತಿನ ಬಗೆಗಿನ ಚಿಂತನೆ ನಮ್ಮ ವಿಚಾರಗಳಾಗಿ ಬದಲಾಗುತ್ತವೆ. ಮನುಷ್ಯನ ಮಾತಿನ ಲಹರಿ, ವಿಚಾರ ಧಾರೆಗಳು ಒಂದಲ್ಲ ಒಂದು ಬಗೆಯಲ್ಲಿ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ ಒಳ್ಳೆಯ ತನ ಪಸರಿಸಲು ಮುಂದಾಗಬೇಕು’ ಎಂದರು.

ಮಿಥಿಕ್ ಸೊಸೈಟಿ ಗೌರವ ಕಾರ್ಯದರ್ಶಿ ವಿ.ನಾಗರಾಜ್, ‘ಜನರ ನೆಮ್ಮದಿ, ಸಂತೋಷಕ್ಕಾಗಿ ಪೊಲೀಸರು ಹಾಗೂ ಸೈನಿಕರು ಅಪಾರ ತ್ಯಾಗ ಮಾಡುತ್ತಾರೆ. ನಿಂದನೆಗಳನ್ನು ಸಹಿಸಿಕೊಂಡು ಹಗಲಿರುಳು ಶ್ರಮಿಸುತ್ತಾರೆ. ಅವರ ಸಮಾಜಮುಖಿ ಜೀವನ ಎಲ್ಲರಿಗೂ ಮಾದರಿಯಾಗಬೇಕು’ ಎಂದರು.

ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪ ಮೌದ್ಗಿಲ್, ‘ಭಗವದ್ಗೀತೆ ಹಲವು ಜೀವನ ಮೌಲ್ಯಗಳನ್ನು ಒಳಗೊಂಡಿದೆ. ಅವುಗಳನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳಬೇಕು. ಮಹಾನುಭಾವರ ವಿಚಾರಧಾರೆಗಳನ್ನು ಮಕ್ಕಳಿಗೆ ಕಲಿಸಬೇಕು. ಮನಸ್ಸು ನಿಗ್ರಹಿಸುವುದನ್ನು ಕಲಿಯಬೇಕು’ ಎಂದರು.

‘ಬಿ ಗುಡ್–ಡೂ ಗುಡ್’ ಅಭಿಯಾನದ ಅಂಗವಾಗಿ ‘ಸ್ವಾತಂತ್ರ್ಯ ಸಂಗ್ರಾಮದ ಮೇಲೆ ಸ್ವಾಮಿ ವಿವೇಕಾನಂದರ ವಿಚಾರಗಳ ಪ್ರಭಾವ’ ವಿಷಯದ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಹೊಸದುರ್ಗದ ಪನ್ನಗ ಪಿ.ರಾಯ್ಕರ್ ಪ್ರಥಮ ಬಹುಮಾನ ಪಡೆದರು. ಸುರತ್ಕಲ್‌ನ ರೆಶೆಲ್ ಬ್ರೆಟ್ನಿ ಫರ್ನಾಂಡೀಸ್ ಹಾಗೂ ಮೈಸೂರಿನ ಗೋಕುಲಂನ ಅಖಿಲೇಶ್ ವಿದ್ಯಾವಸ್ತು ಅವರು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದರು. 20 ಮಂದಿ ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಯುದ್ಧವಿಮಾನಗಳಿಗೆ ಆಸರೆ: ಉಕ್ರೇನ್ ನೆರೆಯ ರಾಷ್ಟ್ರಗಳಿಗೆ ರಷ್ಯಾ ಎಚ್ಚರಿಕೆ

ನ್ಯೂಯಾರ್ಕ್ (ಎಪಿ): ಉಕ್ರೇನ್‌ನ ಯುದ್ಧವಿಮಾನಗಳಿಗೆ ಆಶ್ರಯ ನೀಡುವ ಅಕ್ಕಪಕ್ಕದ ರಾಷ್ಟ್ರಗಳಿಗೆ ಸ್ಪಷ್ಟ ಎಚ್ಚರಿಕೆ ನೀಡಿರುವ ರಷ್ಯಾ, ಇಂತಹ ಯುದ್ಧವಿಮಾನಗಳು ರಷ್ಯಾ ವಿರುದ್ಧ ಕಾರ್ಯಾಚರಣೆ ನಡೆಸಿದ್ದೇ ಆದರೆ ಆಯಾ ದೇಶವೂ ಸಹ ರಷ್ಯಾ ವಿರುದ್ಧ ಯುದ್ಧದಲ್ಲಿ ತೊಡಗಿದೆ ಎಂದೇ ಪರಿಗಣಿಸಬೇಕಾಗುತ್ತದೆ ಎಂದು ಹೇಳಿದೆ.

ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಇಗೋರ್ ಕೊನಶೆಂಕೋವ್ ಅವರು ಭಾನುವಾರ ಈ ಎಚ್ಚರಿಕೆ ನೀಡಿದ್ದು, ರೊಮೇನಿಯಾ ಮತ್ತು ಇತರ ಕೆಲವು ನೆರೆಹೊರೆಯ ದೇಶಗಳಲ್ಲಿ ಉಕ್ರೇನ್‌ನ ಯುದ್ಧವಿಮಾನಗಳನ್ನು ಮರುನಿಯೋಜಿಸಿರುವುದನ್ನು ರಷ್ಯಾ ಗಮನಿಸಿದೆ ಎಂದು ಹೇಳಿದ್ದಾರೆ.

ಅಣು ಸ್ಥಾವರ ಸುರಕ್ಷತೆ: ಉಕ್ರೇನ್‌ನ ಅಣುಶಕ್ತಿ ಸ್ಥಾವರಗಳ ಸುರಕ್ಷತೆಯ ಕುರಿತು ಮಾತುಕತೆಗಾಗಿ ತ್ರಿಪಕ್ಷೀಯ ಸಭೆ ನಡೆಸುವುದನ್ನು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಸ್ವಾಗತಿಸಿದ್ದಾರೆ ಎಂದು ಕ್ರೆಮ್ಲಿನ್ ತಿಳಿಸಿದೆ.

ಪರಮಾಣು ಸುರಕ್ಷತೆಯ ಬಗ್ಗೆ ಜಾಗತಿಕವಾಗಿ ಕಾಳಜಿ ಹೆಚ್ಚುತ್ತಿರುವ ನಡುವೆ ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ರಷ್ಯಾ ಮತ್ತು ಉಕ್ರೇನ್ ಮಧ್ಯೆ ತ್ರಿಪಕ್ಷೀಯ ಸಭೆ ನಡೆಸಲು ನಿರ್ಧರಿಸಿದ್ದನ್ನು ಸ್ವಾಗತಿಸಿರುವ ಪುಟಿನ್, ವಿಡಿಯೊ ಲಿಂಕ್ ಮೂಲಕ ಅಥವಾ ಮೂರನೇ ದೇಶದಲ್ಲಿ ಸಭೆ ನಡೆಸಬಹುದು ಎಂದು ಹೇಳಿದ್ದಾರೆ.

ಈ ವಿಷಯ ಕುರಿತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಜೊತೆಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ ನಂತರ ಪುಟಿನ್ ತಮ್ಮ ಹೇಳಿಕೆ ನೀಡಿದ್ದಾರೆ ಎಂದು ಕ್ರೆಮ್ಲಿನ್ ತಿಳಿಸಿದೆ.

‘ಗುಂಡಿನ ದಾಳಿಯಲ್ಲಿ ಗಾಯಗೊಂಡಿದ್ದ ಹರ್ಜೋತ್ ಸಿಂಗ್ ಇಂದು ಭಾರತಕ್ಕೆ’

ನವದೆಹಲಿ (ಪಿಟಿಐ): ಉಕ್ರೇನ್‌ನ ಕೀವ್ ನಗರದಲ್ಲಿ ರಷ್ಯಾ ನಡೆಸಿದ ಗುಂಡಿನ ದಾಳಿಯಿಂದ ಗಾಯಗೊಂಡಿದ್ದ ಭಾರತೀಯ ವಿದ್ಯಾರ್ಥಿ ಹರ್ಜೋತ್ ಸಿಂಗ್ ಸೋಮವಾರ ದೆಹಲಿಗೆ ಮರಳಲಿದ್ದಾರೆ ಎಂದು ಕೇಂದ್ರ ನಾಗರಿಕ ವಿಮಾನಯಾನ ರಾಜ್ಯ ಸಚಿವ ವಿ.ಕೆ. ಸಿಂಗ್ ಹೇಳಿದ್ದಾರೆ.

‘ಹರ್ಜೋತ್ ಸಿಂಗ್ ಮರಳಿ ಭಾರತಕ್ಕೆ ಬರುವುದನ್ನು ಕುತೂಹಲದಿಂದ ಕಾಯುತ್ತಿದ್ದೇವೆ. ನಮಗೆ ಬಹಳ ಸಂತೋಷವಾಗಿದೆ’ ಎಂದು ದೆಹಲಿಯಲ್ಲಿರುವ ಅವರ ಕುಟುಂಬದವರು ಹೇಳಿದ್ದಾರೆ.

31 ವರ್ಷದ ಹರ್ಜೋತ್ ಸಿಂಗ್ ಅವರು ತಮ್ಮ ಇಬ್ಬರು ಸ್ನೇಹಿತರೊಂದಿಗೆ ಫೆಬ್ರವರಿ 27 ರಂದು ಕೀವ್‌ನಿಂದ ಹೊರಡುವ ಪ್ರಯತ್ನದಲ್ಲಿದ್ದಾಗ ಸಂಭವಿಸಿದ ಗುಂಡಿನ ದಾಳಿಯಲ್ಲಿ ಗಾಯಗೊಂಡಿದ್ದರು. ಅವರ ಎದೆಗೆ ಒಂದು ಗುಂಡು ಸೇರಿದಂತೆ ನಾಲ್ಕು ಗುಂಡುಗಳು ತಗುಲಿದ್ದವು.

ಸುಮಿ: 700 ವಿದ್ಯಾರ್ಥಿಗಳ ತೆರವಿಗೆ ಭಾರತ ಪ್ರಯತ್ನ

ನವದೆಹಲಿ (ಪಿಟಿಐ): ಉಕ್ರೇನ್‌ನ ಈಶಾನ್ಯ ನಗರವಾದ ಸುಮಿ ಪ್ರದೇಶದಲ್ಲಿ ಶೆಲ್ ಮತ್ತು ವೈಮಾನಿಕ ದಾಳಿಗಳು ತೀವ್ರಗೊಂಡಿದ್ದು, ಇಲ್ಲಿ ಸಿಕ್ಕಿರುವ 700ಕ್ಕೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳನ್ನು ತೆರವುಗೊಳಿಸುವ ಪ್ರಯತ್ನಗಳನ್ನು ಭಾರತ ಮುಂದುವರಿಸಿದೆ.

ಹಂಗೆರಿಯಲ್ಲಿರುವ ಭಾರತೀಯ ರಾಯಭಾರ ಕಚೇರಿಯು ವಿದ್ಯಾರ್ಥಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯ ಕೊನೆಯ ಹಂತದಲ್ಲಿದೆ. ಬುಡಾಪೆಸ್ಟ್‌ಗೆ ತಲುಪಲು ಭಾರತೀಯರಿಗೆ ಈಗಾಗಲೇ ಸೂಚಿಸಲಾಗಿದೆ.

ಸೂರ್ಯಕಾಂತಿ ಎಣ್ಣೆಯ ಬೆಲೆ ಹೆಚ್ಚಳ

ಬೆಂಗಳೂರು: ಉಕ್ರೇನ್ ಬಿಕ್ಕಟ್ಟಿನ ಕಾರಣ ರಾಜ್ಯದಲ್ಲಿ ಸೂರ್ಯಕಾಂತಿ ಎಣ್ಣೆಯ ಬೆಲೆ ಏರುಗತಿಯಲ್ಲಿದ್ದು, ಒಂದು ವಾರದಲ್ಲಿ ಲೀಟರ್ ದರ ₹130 ರಿಂದ ₹170ಕ್ಕೆ ಹೆಚ್ಚಳವಾಗಿದೆ.

ಭಾರತಕ್ಕೆ ಉಕ್ರೇನ್ ದೇಶವು ಸೂರ್ಯಕಾಂತಿ ಎಣ್ಣೆಯನ್ನು ಪೂರೈಸುವ ಪ್ರಮುಖ ದೇಶವಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಿಂದಾಗಿ ಪೂರೈಕೆಯ ಸರಪಳಿಯಲ್ಲಿ ವ್ಯಾಪಾರಸ್ಥರಿಗೆ ಅಡೆತಡೆ ಎದುರಾಗಿದೆ. ಇದರಿಂದ ಸೂರ್ಯಕಾಂತಿ ಎಣ್ಣೆಯ ಬೆಲೆಯಲ್ಲಿ ಹೆಚ್ಚಳ ಕಂಡು ಬಂದಿದೆ. ಯುದ್ಧವು ಉಲ್ಬಣಗೊಳ್ಳುತ್ತಿರುವುದರಿಂದ ಮುಂಬರುವ ದಿನಗಳಲ್ಲಿ ಎಣ್ಣೆಯ ಬಿಸಿ ಮತ್ತಷ್ಟು ತಟ್ಟಲಿದೆ ಎಂದು ವ್ಯಾಪಾರಿಗಳು ಎಚ್ಚರಿಸಿದ್ದಾರೆ.

ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಅಡಿಯಲ್ಲಿ ಸೂರ್ಯಕಾಂತಿ ಎಣ್ಣೆಯು ಎಲ್ಲಾ ಅಡುಗೆ ಎಣ್ಣೆ ಆಮದುಗಳಲ್ಲಿ ಸುಮಾರು ಶೇ 15 ರಷ್ಟು ಪಾಲು ಹೊಂದಿದೆ.

‘ಕರ್ನಾಟಕವು 25,000–30,000 ಟನ್ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಪೂರೈಕೆಯಲ್ಲಿನ ಕೊರತೆಯು ಬೆಲೆಯ ಹೆಚ್ಚಳಕ್ಕೆ ಕಾರಣವಾಗಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಸೂರ್ಯಕಾಂತಿ ಎಣ್ಣೆಯ ಸಗಟು ದರ ಲೀಟರ್‌ಗೆ ₹40ರಷ್ಟು ಏರಿಕೆಯಾಗಿದೆ. ಆದರೆ ಇದು ಇನ್ನೂ ಸಂಪೂರ್ಣವಾಗಿ ಚಿಲ್ಲರೆ ಮಾರುಕಟ್ಟೆ ಮೇಲೆ ಪರಿಣಾಮ ಬೀರಿಲ್ಲ’ ಎಂದು ಯಲಹಂಕದ ಕೃಷ್ಣಂ ಆಯಿಲ್ ಟ್ರೇಡರ್ಸ್‌ನ ಕೃಷ್ಣಂ ಶಶಿಧರ್ ಹೇಳಿದರು.

ಗುಂಡು ಹಾರಿಸಿದ ಯೋಧ ಸೇರಿ ಐವರ ಸಾವು

ಒಂದನೇ ಪುಟದಿಂದ

‘ಹಿಂದಿನ ರಾತ್ರಿ ಸಾತೆಪ್ಪ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಾನು ಚೇತರಿಸಿಕೊಂಡಿದ್ದು, ಮನೆಗೆ ಕಳಿಸುವಂತೆ ಆತ ಭಾನುವಾರ ಬೆಳಿಗ್ಗೆ ವೈದ್ಯರಿಗೆ ತಿಳಿಸಿದ್ದ. ಶಿಬಿರಕ್ಕೆ ಮರಳಿದ ನಂತರ, ಶಸ್ತ್ರಾಗಾರದಿಂದ ಬಂದೂಕು ತೆಗೆದುಕೊಂಡು ಮನಬಂದಂತೆ ಗುಂಡು ಹಾರಿಸಲಾರಂಭಿಸಿದ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಆರೋಪಿ ತನ್ನ ಕರ್ತವ್ಯದ ಅವಧಿಗೆ ಸಂಬಂಧಿಸಿ ಅಸಮಾಧಾನಗೊಂಡಿದ್ದ ಎನ್ನಲಾಗಿದೆ. ಶಿಬಿರದ ಆವರಣದಲ್ಲಿ ನಿಲುಗಡೆ ಮಾಡಲಾಗಿದ್ದ ಉನ್ನತ ಅಧಿಕಾರಿ ವಾಹನದ ಮೇಲೂ ಆತ ಗುಂಡಿನ ದಾಳಿ ನಡೆಸಿದ್ದಾನೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇದೊಂದು ದುರದೃಷ್ಟಕರ ಘಟನೆ. ಗಾಯಗೊಂಡಿರುವ ಯೋಧನನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆತನ ಸ್ಥಿತಿ ಗಂಭೀರವಾಗಿದೆ’ ಎಂದು ಬಿಎಸ್‌ಎಫ್ ವಕ್ತಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಎಸ್‌ಎಫ್‌ನ ಪಂಜಾಬ್ ಘಟಕದ ಐಜಿ ಆಸೀಫ್ ಜಲಾಲ್, ‘ಕರ್ತವ್ಯದ ವಿಷಯವಾಗಿ ಆರೋಪಿ ಹಾಗೂ ಮೃತ ಯೋಧರ ನಡುವೆ ಯಾವುದೇ ವೈಷಮ್ಯ ಇರಲಿಲ್ಲ’ ಎಂದರು. ‘ಘಟನೆ ಕುರಿತು ತನಿಖೆ ನಡೆಸಲು ಆದೇಶಿಸಲಾಗಿದೆ. ಬಿಎಸ್‌ಎಫ್ ಹಿರಿಯ ಅಧಿಕಾರಿಗಳು ಹಾಗೂ ಪಂಜಾಬ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿದ್ದಾರೆ’ ಎಂದೂ ಅವರು ತಿಳಿಸಿದ್ದಾರೆ.

ಅನಧಿಕೃತ ಬಡಾವಣೆ: ₹19,622 ಕೋಟಿ ವಂಚನೆ!

ಒಂದನೇ ಪುಟದಿಂದ

ಅರ್ಕಾವತಿ, ವೃಷಭಾವತಿ, ಕಾವೇರಿ ಹಾಗೂ ಇತರ ನದಿಗಳಿಗೆ ಸಂಸ್ಕರಿಸದ ಕೊಳಚೆ ನೀರು ಬಿಡಲಾಗುತ್ತಿದೆ ಹಾಗೂ ಕೈಗಾರಿಕಾ ತ್ಯಾಜ್ಯಗಳನ್ನು ಸುರಿಯಲಾಗುತ್ತಿದೆ. ಅನಧಿಕೃತ ಬಡಾವಣೆಗಳಿಂದಾಗಿ ನಗರಗಳ ಒಟ್ಟಾರೆ ಅಭಿವೃದ್ಧಿಯ ಸಮೀಕರಣವು ಸಂಪೂರ್ಣವಾಗಿ ತೊಂದರೆಗೆ ಒಳಗಾಗುತ್ತಿದೆ ಎಂದು ಸಮೀಕ್ಷೆ ಕಳವಳ ವ್ಯಕ್ತಪಡಿಸಿದೆ.

ಕರ್ನಾಟಕ ಭೂ ಕಂದಾಯ ಕಾಯ್ದೆಯಲ್ಲಿ ಹಸಿರು ಪಟ್ಟಿ ಪರಿಕಲ್ಪನೆಯನ್ನು ಮರು ಪರಿಚಯಿಸುವ ಅಗತ್ಯ ಇದೆ. ರಾಜ್ಯದಲ್ಲಿ 63 ನಗರ ಸ್ಥಳೀಯ ಸಂಸ್ಥೆಗಳು ಆಟದ ಮೈದಾನಗಳನ್ನು ಹೊಂದಿಲ್ಲ. ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹಳ ಸಣ್ಣ ಪ್ರದೇಶದಲ್ಲಿ ಆಟದ ಮೈದಾನಗಳಿವೆ. ಬೆಂಗಳೂರು ನಗರವು 1,331 ಎಕರೆಯಲ್ಲಿ ಆಟದ ಮೈದಾನಗಳನ್ನು ಹೊಂದಿದೆ. ಇದು ನಗರದ ಒಟ್ಟು ವಿಸ್ತೀರ್ಣದ ಶೇ 1.87ರಷ್ಟು ಮಾತ್ರ.

ರಾಜ್ಯದಲ್ಲಿ 312 ಸ್ಥಳೀಯ ಸಂಸ್ಥೆಗಳಿವೆ. 114 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಾತ್ರ ಮಹಾಯೋಜನೆಗಳಿವೆ (ಮಾಸ್ಟರ್ ಪ್ಲಾನ್). 14 ನಗರಗಳಲ್ಲಿ ಮಾತ್ರ ಸಮಗ್ರ ನಗರ ಮಹಾ ಯೋಜನೆ (ಸಿಎಂಪಿ) ಇದೆ. ಆದರೆ, ಬೆಂಗಳೂರು ನಗರ ರಚನಾ ಯೋಜನೆ ಹೊರತುಪಡಿಸಿ ನಗರ ಪ್ರದೇಶಗಳಿಗೆ ಸಂಬಂಧಿಸಿ ಪ್ರಾದೇಶಿಕವಾಗಿ ಒಂದೇ ಒಂದು ಯೋಜನೆಯೂ ಇಲ್ಲ ಎಂದು ತಿಳಿಸಲಾಗಿದೆ.

ನಗರ ವ್ಯಾಪ್ತಿಯಲ್ಲಿ ಅಕ್ರಮ ಬಡಾವಣೆ (ವಿಸ್ತೀರ್ಣ ಎಕರೆಗಳಲ್ಲಿ)

ಪ್ರಾಧಿಕಾರಗಳು	ಪ್ರಾಧಿಕಾರ ಸಂಖ್ಯೆ	ಅನಧಿಕೃತ ಬಡಾವಣೆ	ಉದ್ಯಾನ ಮಾಯ	ರಸ್ತೆ ಕಣ್ಮರೆ
ನಗರಾಭಿವೃದ್ಧಿ ಪ್ರಾಧಿಕಾರ	30	4,560.54	456.05	228.03
ಯೋಜನಾ ಪ್ರಾಧಿಕಾರ	40	3,041.98	304.20	152.10
ನಗರ ಸ್ಥಳೀಯ ಸಂಸ್ಥೆ	40	3,042	304.20	152.10
ಬಿಎಂಆರ್‌ಡಿಎ	1	5,488.10	548.81	274.41
ಬಿಎಂಐಸಿಎಪಿಎ	1	139	13.90	6.95
ಬಿಡಿಎ	1	3,019.68	301.97	150.98
ಒಟ್ಟು	-	19,291.3	1,929.13	964.57

ವಿವಿಧೆಡೆ ನಿರಂತರ ರಸ್ತೆ ಅಗೆತ: ಸ್ಥಳೀಯ ನಿವಾಸಿಗಳ ಆಕ್ರೋಶ

ಮಲ್ಲೇಶ್ವರ ನಾಗರಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ನಿರಂತರವಾಗಿ ರಸ್ತೆ ಹಾಗೂ ಪಾದಚಾರಿ ಮಾರ್ಗ ಅಗೆಯುತ್ತಿರುವುದನ್ನು ಖಂಡಿಸಿ ಸ್ಥಳೀಯ ನಿವಾಸಿಗಳು ಭಾನುವಾರ ಪ್ರತಿಭಟನೆ ನಡೆಸಿದರು.

ಕಾಲ್ನಡಿಗೆ ಜಾಥದ ಮೂಲಕ ಸ್ಥಳೀಯ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಕಚೇರಿಗೆ ತೆರಳಿದ ನಿವಾಸಿಗಳು ಅವರ ಬಳಿ ಅಳಲು ತೋಡಿಕೊಂಡರು.

ಕೋವಿಡ್ ಸಮಯದಲ್ಲಿ ಕಾಮಗಾರಿಗಳನ್ನು ಮುಗಿಸಲು ಸಾಕಷ್ಟು ಸಮಯ ಲಭಿಸಿತ್ತು. ಹೀಗಿದ್ದರೂ ಗುತ್ತಿಗೆದಾರರು ವಿಳಂಬ ನೀತಿ ಅನುಸರಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಲ್ಲೇಶ್ವರ ಸೋಷಿಯಲ್ ಸದಸ್ಯರು ಹಾಗೂ ಸ್ಥಳೀಯ ನಾಗರಿಕರು ವಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು–ಪ್ರಜಾವಾಣಿ ಚಿತ್ರ

‘5 ವರ್ಷಗಳಿಂದ ಮಲ್ಲೇಶ್ವರದ ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿ ಹೆಸರಿನಲ್ಲಿ ನಿರಂತರವಾಗಿ ರಸ್ತೆ, ಪಾದಚಾರಿ ಮಾರ್ಗಗಳನ್ನು ಅಗೆಯಲಾಗುತ್ತಿದೆ. ಇಷ್ಟು ವರ್ಷ ಇದನ್ನೆಲ್ಲಾ ತಾಳ್ಮೆಯಿಂದಲೇ ಸಹಿಸಿಕೊಂಡಿದ್ದೇವೆ. ಬೆಳಿಗ್ಗೆ ಕಚೇರಿಗೆ ಹೋದಾಗ ಸುಸ್ಥಿತಿಯಲ್ಲಿರುವ ರಸ್ತೆಯನ್ನು ಸಂಜೆ ವೇಳೆಗಾಗಲೇ ಅಗೆದು ಬಿಟ್ಟಿರುತ್ತಾರೆ. ಯಾವ ರಸ್ತೆಯ ಮೂಲಕ ಮನೆ ತಲುಪಬೇಕು ಎಂಬುದೇ ಗೊತ್ತಾಗುವುದಿಲ್ಲ.

ಬಿಬಿಎಂಪಿ, ಬೆಸ್ಕಾಂ ಹಾಗೂ ಜಲಮಂಡಳಿಯವರು ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದಾರೆ’ ಎಂದು ಮಲ್ಲೇಶ್ವರ ಸೋಷಿಯಲ್‌ನ ಸುಚಿತ್ರ ದೀಪ್ ಹಾಗೂ ರವಿ ಆಚಾರ್ಯ ದೂರಿದರು.

‘ರಸ್ತೆ ಅಗೆದಿರುವುದರಿಂದ ಅಲ್ಲಲ್ಲಿ ಗುಂಡಿಗಳು ನಿರ್ಮಾಣವಾಗಿವೆ. ಮಕ್ಕಳು ಹಾಗೂ ವೃದ್ಧರು ಓಡಾಡುವುದೇ ಸವಾಲಾಗಿದೆ. ದೂಳಿನಿಂದಾಗಿ ಉಸಿರಾಟದ ಸಮಸ್ಯೆಯೂ ಎದುರಾಗುತ್ತಿದೆ’ ಎಂದು ಆರೋಪಿಸಿದರು.

ಸ್ಥಳೀಯ ನಿವಾಸಿ ಪ್ರೀತಿ ಸುಂದರ್‌ರಾಜನ್, ‘17 ಮತ್ತು 18ನೇ ತಿರುವಿನ ರಸ್ತೆಗಳನ್ನು ಇತ್ತೀಚೆಗೆ ದುರಸ್ತಿಗೊಳಿಸಲಾಗಿತ್ತು. ಅವುಗಳನ್ನು ಮತ್ತೆ ಅಗೆಯಲಾಗಿದೆ. ರಸ್ತೆಯ ಅವಶೇಷಗಳನ್ನು ಅಲ್ಲಲ್ಲಿ ರಾಶಿ ಹಾಕಲಾಗಿದೆ. ಅಭಿವೃದ್ಧಿಯ ಅಗತ್ಯದ ಬಗ್ಗೆ ನಮಗೆ ಅರಿವಿದೆ. ಆದರೆ ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಪಕ್ಷೀಯವಾಗಿ ಕೆಲಸಗಳನ್ನು ಮಾಡಲಾಗುತ್ತಿದೆ. ಬಿಬಿಎಂಪಿ ಮೂರು ತಿಂಗಳಿಂದ ವಾರ್ಡ್ ಸಮಿತಿ ಸಭೆಗಳನ್ನು ನಡೆಸಿಲ್ಲ. ಮುಗಿಯದ ಈ ಕಾಮಗಾರಿಗಳಿಂದಾಗಿ ನಾವು ರೋಸಿ ಹೋಗಿದ್ದೇವೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸ್ಮಾರ್ಟ್ ಮಲ್ಲೇಶ್ವರ ನನ್ನ ಗುರಿ: ಅಶ್ವತ್ಥನಾರಾಯಣ

‘ಮುಂದಿನ 30 ವರ್ಷಗಳ ಅಗತ್ಯತೆ ಗಮನದಲ್ಲಿಟ್ಟುಕೊಂಡು ಕ್ಷೇತ್ರ ವ್ಯಾಪ್ತಿಯಲ್ಲಿ ಒಳಚರಂಡಿ, ನೀರಿನ ಕೊಳವೆ, ಮ್ಯಾನ್ ಹೋಲ್, ಓ.ಎಫ್.ಸಿ. ಡಕ್ ನಿರ್ಮಾಣ ಸೇರಿದಂತೆ ವಿವಿಧ ಕೆಲಸಗಳನ್ನು ಮಾಡಲಾಗುತ್ತಿದೆ. ಮುಂದಿನ ಮೂರು ತಿಂಗಳಲ್ಲಿ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತದೆ’ ಎಂದು ಡಾ.ಸಿ.ಎನ್.ಅಶ್ವತ್ಥನಾರಾಯಣ ಭರವಸೆ ನೀಡಿದರು.

‘ಸ್ಮಾರ್ಟ್ ಮಲ್ಲೇಶ್ವರ ನನ್ನ ಗುರಿ. ಅಭಿವೃದ್ಧಿ ನೆಪದಲ್ಲಿ ರಸ್ತೆ, ಒಳಚರಂಡಿ, ಕೊಳವೆ ಮಾರ್ಗ, ವಿದ್ಯುತ್ ಕಂಬಗಳನ್ನು ಪದೇ ಪದೇ ಅಗೆಯುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಈ ಬಗ್ಗೆ ನನಗೂ ಬೇಸರವಿದೆ. ಇನ್ನೆರಡು ತಿಂಗಳು ಇದನ್ನು ಸಹಿಸಿಕೊಳ್ಳಬೇಕು. ಅಭಿವೃದ್ಧಿ ಕಾರ್ಯಕ್ಕೆ ಎಲ್ಲರೂ ಸಹಕರಿಸಬೇಕು’ ಎಂದು ಮನವಿ ಮಾಡಿದರು.

ಹೋರಾಟಗಾರ್ತಿ ಕೋಲ್ಕತ್ತದ ಅನಿಂದ್ಯಾ ಹಾಜ್ರ

‘ಲೈಂಗಿಕ ಅಲ್ಪಸಂಖ್ಯಾತರಿಗೆ ಘನತೆಯ ಬದುಕು ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿನ ವ್ಯವಸ್ಥೆ ಬದಲಾಗುವವರೆಗೂ ಲೈಂಗಿಕ ಅಲ್ಪಸಂಖ್ಯಾತರು ಹೋರಾಟ ನಡೆಸಬೇಕು. ಪ್ರತಿರೋಧಗಳನ್ನು ಹೋರಾಟದ ಮೂಲಕವೇ ಎದುರಿಸಬೇಕು’ ಎಂದು ಲೈಂಗಿಕ ಅಲ್ಪಸಂಖ್ಯಾತ ಹೋರಾಟಗಾರ್ತಿ ಕೋಲ್ಕತ್ತದ ಅನಿಂದ್ಯಾ ಹಾಜ್ರ ಹೇಳಿದರು.

ಕಾಜಾಣ ಮತ್ತು ರಂಗಪಯಣ ಸಹಯೋಗದೊಂದಿಗೆ ಭಾನುವಾರ ಆಯೋಜಿಸಿದ್ದ ಸಾಮಾಜಿಕ ಹೋರಾಟಗಾರ್ತಿ ಅಕ್ಕೈ ಪದ್ಮಸಾಲಿ ಅವರ ಜೀವನ ಆಧಾರಿತ ‘ಅಕ್ಕೈ’ ನಾಟಕ ಪ್ರದರ್ಶನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಲೈಂಗಿಕ ಅಲ್ಪಸಂಖ್ಯಾತರಿಗೆ ಅನುಕಂಪ ಬೇಕಾಗಿಲ್ಲ. ಘನತೆಯಿಂದ ಬದುಕುವ ಅವಕಾಶ ಕಲ್ಪಿಸಬೇಕು. ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಸಬಲೀಕರಣಗೊಳಿಸಬೇಕು’ ಎಂದು ಪ್ರತಿಪಾದಿಸಿದರು.

ನಗರದಲ್ಲಿ ಭಾನುವಾರ ನಯನ ಸೂಡ ಅವರ ಅಭಿನಯದ ‘ಅಕ್ಕೈ’ ನಾಟಕ ಪ್ರದರ್ಶನಗೊಂಡಿತು– ಪ್ರಜಾವಾಣಿ ಚಿತ್ರ

ಅಮೆರಿಕದ ನಾಗರಿಕ ಹಕ್ಕುಗಳ ಹೋರಾಟಗಾರ್ತಿ ರೋಜಾ ಪಾರ್ಕ್ ಅವರ ಹೋರಾಟವನ್ನು ಉಲ್ಲೇಖಿಸಿದ ಅವರು, ‘ಗುರಿ ಈಡೇರುವವರೆಗೂ ರೋಜಾ ಪಾರ್ಕ್ ಹೋರಾಟ ಕೈಬಿಡಲಿಲ್ಲ. ಅದೇ ರೀತಿ, ನಾವು ಮೌನವಹಿಸಬಾರದು. ನಮ್ಮ ಅಸ್ತಿತ್ವ ಮತ್ತು ಸಮಸ್ಯೆಗಳ ಬಗ್ಗೆ ಮಾತನಾಡಬೇಕು. ಈ ಮೂಲಕ ಧ್ರುವೀಕರಣಗೊಂಡ ಸಮಾಜದಲ್ಲಿ ನಮ್ಮ ಮತ್ತು ಇತರರ ನಡುವಣ ಅಂತರ ಕಡಿಮೆ ಮಾಡಬೇಕು’ ಎಂದು ಸಲಹೆ ನೀಡಿದರು.

‘ಲೈಂಗಿಕ ಅಲ್ಪಸಂಖ್ಯಾತರ ಬದುಕು ಮತ್ತು ಸಾವಿಗೂ ಮಾನ್ಯತೆ ಇಲ್ಲದಂತಾಗಿದೆ. ಈ ಸನ್ನಿವೇಶ ಬದಲಾಯಿಸಲು ಶ್ರಮಿಸಬೇಕು. ನಮ್ಮ ಅಸ್ತಿತ್ವ ಕಂಡುಕೊಳ್ಳಲು ರಾಜಕೀಯ ಕ್ಷೇತ್ರವೂ ಮುಖ್ಯ ವೇದಿಕೆಯಾಗಿದೆ. ಒಳಗೊಳ್ಳುವಿಕೆ ಜಗತ್ತಿನಲ್ಲಿ ವಿಭಿನ್ನ ಅಸ್ಮಿತೆಯ ಜನರಿದ್ದಾರೆ. ಆದರೆ, ನಮ್ಮ ಜೀವನ ಮಾತ್ರ ಸಂಕೀರ್ಣವಾಗಿದೆ. ನಮ್ಮನ್ನು ಒಪ್ಪಿಕೊಳ್ಳುವಂತೆ ಮನಸ್ಸುಗಳನ್ನು ಬದಲಾಯಿಸಬೇಕು’ ಎಂದು ಹೇಳಿದರು.

ನಿರ್ದೇಶಕ ಬೇಲೂರು ರಘುನಂದನ್ ಮಾತನಾಡಿ, ‘ಮಗು ಜನಿಸಿದಾಗ ವಿಶ್ವಮಾನವನಾಗಿರುತ್ತದೆ. ಆದರೆ, ಬೆಳೆದಂತೆ ಅಲ್ಪಮಾನವನಾಗುತ್ತದೆ. ಅದೇ ರೀತಿ, ಸಮಾಜ ಎಷ್ಟೇ ಅಲ್ಪನನ್ನಾಗಿ ಮಾಡಲು ಪ್ರಯತ್ನಿಸಿದರೂ ಛಲದಿಂದ ಎಲ್ಲರಂತೆ ಬದುಕಿ ತೋರಿಸಿ ಸಮಾನತೆಗಾಗಿ ಹೋರಾಟ ಮಾಡಿದವರು ಅಕ್ಕೈ ಪದ್ಮಸಾಲಿ’ ಎಂದು ಪ್ರಶಂಸಿಸಿದರು.

‘ಸಮಾಜವನ್ನು ವಿಭಿನ್ನ ದಿಕ್ಕಿನಲ್ಲಿ ಆಲೋಚಿಸುವಂತೆ ಅರ್ಥ ಮಾಡಿಸುವ ನಿಟ್ಟಿನಲ್ಲಿ ಅಕ್ಕೈ ಜೀವನಾಧಾರಿತ ಕೃತಿಯನ್ನು ರಂಗಕ್ಕೆ ತರಲಾಗಿದೆ. ನಾವೆಲ್ಲರೂ ಸಮಾನರು ಎನ್ನುವ ಸಂದೇಶವನ್ನು ನಾಟಕ ಸಾರುತ್ತದೆ’ ಎಂದು ವಿವರಿಸಿದರು.

‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಮಾತನಾಡಿ, ‘ಭಾರತೀಯ ಸಮಾಜ ಇಂದಿಗೂ ಒಳಗೊಳ್ಳುವಿಕೆ ತತ್ವ ಹೊಂದಿಲ್ಲ. ಸಂಕೀರ್ಣವಾದ ಸಮಾಜವಾಗಿದೆ. ಲೈಂಗಿಕ ಅಲ್ಪಸಂಖ್ಯಾತರು ಸಹ ನಮ್ಮವರು ಎಂದು ಪರಿಗಣಿಸಿ ನಾಗರಿಕ ಸಮಾಜವೇ ಅವರ ಪರ ಹೋರಾಟ ನಡೆಸಬೇಕು ಮತ್ತು ಅವರಿಗಾಗಿಯೇ ಬಜೆಟ್ ಮಂಡಿಸಬೇಕು’ ಎಂದರು.

ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ನಾಯಕಿ ಸೌಮ್ಯ ಮಾತನಾಡಿ, ‘ಇಡೀ ಸಮಾಜ ನಮ್ಮನ್ನು ತಾತ್ಸಾರ ಮನೋಭಾವದಿಂದ ಕಾಣುತ್ತಿದೆ. ವಾಹಿನಿಗಳಲ್ಲಿ ಮತ್ತು ಸಿನಿಮಾಗಳಲ್ಲಿ ನಮ್ಮ ಸಮುದಾಯದ ವೇಷಭೂಷಣ ತೊಟ್ಟು ಅಪಹ್ಯಾಸ ಮಾಡಲಾಗುತ್ತಿದೆ. ಒಳ್ಳೆಯ ಮನುಷ್ಯರಿಗೆ ಮಾತ್ರ ನಮ್ಮ ನೋವು, ದುಃಖಗಳು ಅರ್ಥವಾಗುತ್ತವೆ’ ಎಂದು ಅಳಲು ತೋಡಿಕೊಂಡರು.

ಅಕ್ಕೈ ಪದ್ಮಸಾಲಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವ (ಮೌಲ್ಯಮಾಪನ) ಡಾ. ಡೊಮಿನಿಕ್ ಡಿ, ಬೇಲೂರು ತಹಶೀಲ್ದಾರ್ ಉಲಿವಾಲ ಮೋಹನ್ ಕುಮಾರ್, ಅಕ್ಕೈ ಪದ್ಮಶಾಲಿ ಅವರ ಸಹೋದರ ಪ್ರದೀಪ್ ಇದ್ದರು.

ಕದ್ದ ಹಣದಲ್ಲಿ ಖರೀದಿಸಿದ್ದ 14 ಚೂಡಿದಾರ್ ಜಪ್ತಿ

ನೆರೆಮನೆಯಲ್ಲಿ ಕಳ್ಳತನ: ಅಕ್ಕ–ತಂಗಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಮನೆಯಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಅಕ್ಕ–ತಂಗಿ ಸೇರಿ ಮೂವರನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

‘ಸುಮಯಾ ತಾಜ್ (28), ಈಕೆಯ ಅಕ್ಕ ನಾಜೀಮಾ ತಾಜ್ (32) ಹಾಗೂ ಸಂಬಂಧಿ ಅಕ್ಬರ್ ಪಾಷಾ (38) ಬಂಧಿತರು. ಅವರಿಂದ ₹ 4.29 ಲಕ್ಷ ನಗದು, 51 ಗ್ರಾಂ ಚಿನ್ನಾಭರಣ, 150 ಗ್ರಾಂ ಬೆಳ್ಳಿ ಸಾಮಗ್ರಿ ಹಾಗೂ 14 ಚೂಡಿದಾರ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೋಲಾರದ ಆರೋಪಿಗಳು, ಕೆಲಸಕ್ಕಾಗಿ ನಗರಕ್ಕೆ ಬಂದಿದ್ದರು. ಜಯನಗರ 1ನೇ ಹಂತದ ದಯಾನಂದನಗರದಲ್ಲಿ ವಾಸವಿದ್ದರು. ಬಹುಮಹಡಿ ಕಟ್ಟಡದ ಕೆಳ ಮಹಡಿಯಲ್ಲಿ ಸುಮಯಾ ಬಾಡಿಗೆಗಿದ್ದರು. 2ನೇ ಮಹಡಿಯಲ್ಲಿ ದೂರುದಾರ ಜಬೀವುಲ್ಲಾ ಕುಟುಂಬವಿತ್ತು. ಅದೇ ಕಟ್ಟಡದ ಎದುರು ಮನೆಯಲ್ಲಿ ನಾಜೀಮಾ ನೆಲೆಸಿದ್ದರು.’

‘ಜಬೀವುಲ್ಲಾ ಮನೆಯಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದರು. ಮಗಳ ಮದುವೆಗೆಂದು ಲಾರಿ ಮಾರಿ, ಅದರಿಂದ ಬಂದಿದ್ದ ₹ 10 ಲಕ್ಷವನ್ನು ಮನೆಯಲ್ಲಿ ತಂದಿಟ್ಟಿದ್ದರು. ಮಹಡಿ ಬಳಿ ಆಟವಾಡುತ್ತಿದ್ದ ಅವರ ಮಗ, ‘ನಮ್ಮ ಮನೆಯಲ್ಲಿ ಹೆಚ್ಚು ಹಣವಿದೆ’ ಎಂದು ಹೇಳುತ್ತಿದ್ದ. ಅದನ್ನು ಕೇಳಿಸಿಕೊಂಡಿದ್ದ ಸುಮಯಾ ತಾಜ್, ಅಕ್ಕ ನಾಜೀಮಾಳಿಗೆ ವಿಷಯ ತಿಳಿಸಿದ್ದಳು. ಅವರಿಬ್ಬರು ಅಕ್ಬರ್ ಪಾಷಾ ಜೊತೆ ಸೇರಿ ಕಳ್ಳತನಕ್ಕೆ ಸಂಚು ರೂಪಿಸಿದ್ದರು’ ಎಂದರು.

ರಾಡ್‌ನಿಂದ ಬೀರು ಒಡೆದಿದ್ದ ಆರೋಪಿಗಳು: ‘ಜಬೀವುಲ್ಲಾ ಮನೆಗೆ ಆಗಾಗ ಹೋಗಿ ಬರುತ್ತಿದ್ದ ಆರೋಪಿ ಸುಮಯಾ, ಹಣವಿಟ್ಟಿದ್ದ ಬೀರು ಬಗ್ಗೆ ತಿಳಿದುಕೊಂಡಿದ್ದಳು. ಫೆ. 19ರಂದು ಜಬೀವುಲ್ಲಾ, ಅವರ ಪತ್ನಿ ಹಾಗೂ ಮಗಳು ಹೊರಗಡೆ ಹೋಗಿದ್ದರು. ಮನೆಗೆ ಬೀಗ ಹಾಕಿರಲಿಲ್ಲ. ಮಗ ಮಾತ್ರ ಮಹಡಿಯಲ್ಲಿ ಆಟವಾಡುತ್ತಿದ್ದ. ಆತನ ಗಮನ ಬೇರೆಡೆ ಸೆಳೆದು ಆರೋಪಿಗಳು ಮನೆಯೊಳಗೆ ನುಗ್ಗಿದ್ದರು’ ಎಂದು ಪೊಲೀಸರು ಹೇಳಿದರು.

‘ಬೀರುವನ್ನು ರಾಡ್‌ನಿಂದ ಒಡೆದಿದ್ದ ಆರೋಪಿಗಳು, ₹ 2.34 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ₹ 10 ಲಕ್ಷ ನಗದು ಕದ್ದು ಪರಾರಿಯಾಗಿದ್ದರು’ ಎಂದೂ ತಿಳಿಸಿದರು.

‘ಮನೆ ಸಮೀಪದ ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ ಆರೋಪಿಗಳ ಸುಳಿವು ಸಿಕ್ಕಿತ್ತು’ ಎಂದರು.

ಬಟ್ಟೆ ಖರೀದಿ: ‘ಐಷಾರಾಮಿ ಜೀವನ ನಡೆಸುವುದಕ್ಕಾಗಿ ಆರೋಪಿಗಳು ಕೃತ್ಯ ಎಸಗಿದ್ದರು. ಕದ್ದ ₹ 10 ಲಕ್ಷವನ್ನು ತಮ್ಮಲ್ಲೇ ಹಂಚಿಕೊಂಡಿದ್ದರು. ಅಕ್ಕ–ತಂಗಿ ಇಬ್ಬರೂ 14 ಚೂಡಿದಾರ್ ಬಟ್ಟೆಗಳನ್ನು ಖರೀದಿಸಿದ್ದರು. ಸ್ವಲ್ಪ ಹಣವನ್ನು ಕೋಲಾರದಲ್ಲಿರುವ ತಂದೆಗೆ ಕೊಟ್ಟಿದ್ದರು’ ಎಂದರು.

ಅಪರಾಧ ಸುದ್ದಿ

ಕ್ಯಾಮೆರಾ ಬಾಡಿಗೆ ಪಡೆದು ಪರಾರಿ

ಬೆಂಗಳೂರು: ಬೆಲೆಬಾಳುವ ಕ್ಯಾಮೆರಾಗಳನ್ನು ಬಾಡಿಗೆಗೆ ಪಡೆದು, ವಾಪಸು ನೀಡದೇ ಪರಾರಿಯಾಗುತ್ತಿದ್ದ ಆರೋಪಿ ಪುರುಷೋತ್ತಮ್ ಎಂಬಾತನನ್ನು ಚಂದ್ರಾಲೇಔಟ್ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ಸ್ಟುಡಿಯೊವೊಂದಕ್ಕೆ ಫೆ. 22ರಂದು ಬಂದಿದ್ದ ಆರೋಪಿ, ಕ್ಯಾಮೆರಾ ಬಾಡಿಗೆಗೆ ಪಡೆದುಕೊಂಡು ಪರಾರಿಯಾಗಿದ್ದ. ಈ ಬಗ್ಗೆ ಸ್ಟುಡಿಯೊ ಮಾಲೀಕ ದೂರು ನೀಡಿದ್ದರು. ಆರೋಪಿಯನ್ನು ಬಂಧಿಸಿ, ₹ 3.65 ಲಕ್ಷ ಮೌಲ್ಯದ 3 ಕ್ಯಾಮೆರಾ ಹಾಗೂ ಬಿಡಿಭಾಗಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

32 ಕೆ.ಜಿ ಗಾಂಜಾ ಜಪ್ತಿ: ಇಬ್ಬರ ಬಂಧನ

ಬೆಂಗಳೂರು: ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ಅವರಿಂದ 32 ಕೆ.ಜಿ 40 ಗ್ರಾಂ ಗಾಂಜಾ ಜಪ್ತಿ ಮಾಡಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ಮನ್ಸೂರ್ ಹಾಗೂ ಅಲಿಬಾ ಬಂಧಿತರು. ಇವರಿಬ್ಬರು ದ್ವಿಚಕ್ರ ವಾಹನದಲ್ಲಿ ಮಾ. 4ರಂದು ಗಾಂಜಾ ಸಾಗಿಸುತ್ತಿದ್ದರು. ಪಾದರಾಯನಪುರದ ರೈಲ್ವೆ ಸೇತುವೆ ಬಳಿ ಅವರಿಬ್ಬರನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

ಯಲಹಂಕ: ಡ್ರಗ್ಸ್ ಮಾರಾಟ– ಬಂಧನ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ನೈಜೀರಿಯಾ ಪ್ರಜೆಗಳು ಸೇರಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾದ ವೂಜಾ, ಡ್ಯಾನಿಯೆಲ್, ಮೊಹಮ್ಮದ್ ಮುಕ್ತಿಯಾರ್ ಹಾಗೂ ತಸ್ಲೀಮ್ ಬಂಧಿತರು. ಅವರಿಂದ ₹ 2.85 ಲಕ್ಷ ಮೌಲ್ಯದ 105 ಗ್ರಾಂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಿದ್ದಾರೆ’ ಎಂದು ಪೊಲೀಸರು ಹೇಳಿದರು.

ಬೆಂಕಿ: ಮಹಡಿಯಿಂದ ಬಿದ್ದು ಗಾಯ

ಬೆಂಗಳೂರು: ಮಾರತ್ತಹಳ್ಳಿಯಲ್ಲಿರುವ ಬಹುಮಹಡಿ ಕಟ್ಟಡವೊಂದರಲ್ಲಿ ಶನಿವಾರ ರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಬೆಂಕಿ ನಂದಿಸುವ ವೇಳೆ ಅಗ್ನಿಶಾಮಕ ಸಿಬ್ಬಂದಿಯೊಬ್ಬರು ನಾಲ್ಕನೇ ಮಹಡಿಯಿಂದ ಬಿದ್ದು ಗಾಯಗೊಂಡಿದ್ದಾರೆ.

‘ಬಹುಮಹಡಿಯಲ್ಲಿ ಸಾಫ್ಟ್‌ವೇರ್ ಕಂಪನಿಯಲ್ಲಿ ಶನಿವಾರ ರಾತ್ರಿ 10 ಗಂಟೆ ಸುಮಾರಿಗೆ ಐದನೇ ಮಹಡಿ ಕೊಠಡಿಯೊಂದರಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಕಿ ಹೊತ್ತಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಬೆಂಕಿ ಕೆನ್ನಾಲಗೆ ಹೆಚ್ಚಾಗಿ, ಪೀಠೋಪಕರಣಗಳು ಸುಟ್ಟಿದ್ದವು. ನಂತರ ಮಹಡಿಯಲ್ಲೆಲ್ಲ ಬೆಂಕಿ ಆವರಿಸಿತ್ತು. ಆರನೇ ಮಹಡಿಗೂ ಹೊಗೆ ಹಾಗೂ ಬೆಂಕಿ ವ್ಯಾಪಿಸಿತ್ತು. ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ, ನಾಲ್ಕು ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು’ ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

‘ಏರಿಯಲ್ ಲ್ಯಾಂಡರ್ ಮೂಲಕ ನಾಲ್ಕನೇ ಮಹಡಿ ಏರಿದ್ದ ಸಿಬ್ಬಂದಿ ವಿನಯ್, ಬೆಂಕಿ ನಂದಿಸುತ್ತಿದ್ದರು. ಇದೇ ವೇಳೆ ಆಯತಪ್ಪಿ ಕೆಳಗೆ ಬಿದ್ದಿದ್ದರು. ಅವರ ಕೈ, ಕಾಲು ಹಾಗೂ ತಲೆಗೆ ಪೆಟ್ಟಾಗಿದೆ. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದೂ ತಿಳಿಸಿದರು.

ಸುದ್ದಿ 2 ನಿಮಿಷ

ಕಾರಾಗೃಹ ಸಿಬ್ಬಂದಿ ಜತೆ ಕ್ರಿಕೆಟ್ ಬ್ಯಾಟ್, ಬಾಲ್ ಹಿಡಿದ ಕೈದಿಗಳು

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಮನಪರಿವರ್ತನೆಗೆ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಇದರ ಭಾಗವಾಗಿ ಕಾರಾಗೃಹ ಸಿಬ್ಬಂದಿ ಹಾಗೂ ಕೈದಿಗಳ ನಡುವೆ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಯಿತು.

ಕಾರಾಗೃಹದೊಳಗಿನ ಆವರಣದಲ್ಲಿರುವ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ಸಿಬ್ಬಂದಿ ಹಾಗೂ ಕೈದಿಗಳ ತಂಡಗಳು ಕ್ರಿಕೆಟ್ ಪಂದ್ಯವನ್ನಾಡಿದರು. ಇದರಲ್ಲಿ ಸಿಬ್ಬಂದಿ ತಂಡ ವಿಜಯಶಾಲಿಯಾಯಿತು.

ಕ್ರಿಕೆಟ್ ಪಂದ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಮೈದಾನದ ಸುತ್ತಲು ಹೆಚ್ಚಿನ ಸಂಖ್ಯೆಯಲ್ಲಿ ಕೈದಿಗಳು ಜಮಾಯಿಸಿದ್ದರು. ಚಪ್ಪಾಳೆ ತಟ್ಟಿ ಎರಡೂ ತಂಡಗಳ ಆಟಗಾರರನ್ನು ಹುರಿದುಂಬಿಸಿದರು. ಕೆಲ ಕೈದಿಗಳು, ಬ್ಯಾಟಿಂಗ್ ಹಾಗೂ ಬಾಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ತೋರಿದರು. ಆದರೆ, ಸಿಬ್ಬಂದಿ ತಂಡದವರ ಪ್ರದರ್ಶನದ ಎದುರು ಸೋಲುಪ್ಪಿಕೊಂಡರು.

‘ಕ್ರೀಡೆಯಿಂದ ಆರೋಗ್ಯ, ಆರೋಗ್ಯದಿಂದ ಉತ್ತಮ ಆಯುಷ್ಯ’ ಎಂಬ ಮಾತಿನಂತೆ, ಜೈಲಿನಲ್ಲಿ ಕ್ರೀಡಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಾನುವಾರ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಕೈದಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು’ ಎಂದು ಜೈಲಿನ ಅಧಿಕಾರಿಯೊಬ್ಬರು ಹೇಳಿದರು.

ದಾಬಸ್‌ಪೇಟೆ: ರಸ್ತೆ ಬದಿಗಳಲ್ಲಿ ಕಸ

ದಾಬಸ್ ಪೇಟೆ: ಪಟ್ಟಣಕ್ಕೆ ಹೊಂದಿಕೊಂಡಂತೆ ಮಧುಗಿರಿ ರಸ್ತೆ, ದೊಡ್ಡಬಳ್ಳಾಪುರ ರಸ್ತೆ, ಶಿವಗಂಗೆ ರಸ್ತೆ, ತುಮಕೂರು-ಬೆಂಗಳೂರು ರಸ್ತೆ ಬದಿಗಳ ಇಕ್ಕೆಲಗಳು ಕಸದ ತಾಣಗಳಾಗಿವೆ.

ರಾಶಿ ರಾಶಿ ಕಸ ಬಿದ್ದಿದ್ದು, ವಾಹನ ಸವಾರರಿಗೆ ಅಡಚಣೆಯಾಗುತ್ತಿದೆ. ಮನೆ ಹಾಗೂ ಅಂಗಡಿಗಳಲ್ಲಿನ ಕಸವನ್ನು ರಸ್ತೆ ಪಕ್ಕದ ಕೆಲವು ಜಾಗಗಳಲ್ಲಿ ತಂದು ಸುರಿಯುತ್ತಿದ್ದಾರೆ. ರಾತ್ರಿ ವೇಳೆಯಲ್ಲೇ ಕಸ ಎಸೆದು ಹೋಗುತ್ತಿದ್ದಾರೆ. ಕಸದಲ್ಲಿ ಪ್ಲಾಸ್ಟಿಕ್ ಇರುವುದರಿಂದ ಗಾಳಿ ಬಂದಾಗ ಅದು ತೂರಿಕೊಂಡು ರಸ್ತೆ ತುಂಬೆಲ್ಲಾ ಬೀಳುತ್ತಿದೆ.

ಕಸದ ರಾಶಿಗೆ ಬೆಂಕಿ ಹಚ್ಚುತ್ತಿರುವುದರಿಂದ ದುರ್ವಾಸನೆ ಹಾಗೂ ದಟ್ಟ ಹೊಗೆ ಆವರಿಸಿಕೊಂಡು ವಾಹನ ಸವಾರರನ್ನೂ ಹೈರಾಣಗಿಸಿದೆ. ಮಧುಗಿರಿ, ಶಿವಗಂಗೆ ರಸ್ತೆ ಆಜುಬಾಜಿನಲ್ಲಿ ಅರಣ್ಯ ಇಲಾಖೆಯು ಸಸಿಗಳನ್ನು ನೆಟ್ಟಿದೆ. ಕಸದ ರಾಶಿಗೆ ಬೆಂಕಿ ಹಚ್ಚುತ್ತಿರುವುದರಿಂದ ಹಲವು ಗಿಡಗಳು ಸುಟ್ಟು ಹೋಗಿವೆ.

‘ಹೋಟೆಲ್, ಅಡುಗೆ ಮನೆ, ಮಾಂಸದಂಗಡಿಗಳ ತ್ಯಾಜ್ಯಗಳನ್ನು ಇಲ್ಲೇ ಸುರಿಯುತ್ತಿರುವುದರಿಂದ ಆಹಾರ ಹುಡುಕಿಕೊಂಡು ಬೀದಿ ನಾಯಿಗಳು ಬರುತ್ತಿವೆ. ನಾಯಿಗಳು ಕಚ್ಚಾಡುತ್ತಾ ರಸ್ತೆಗೆ ಬಂದು ದ್ವಿಚಕ್ರ ವಾಹನ ಸವಾರರಿಗೆ ಅಪಘಾತಗಳಿಗೆ ಕಾರಣವಾಗುತ್ತಿವೆ’ ಎಂದು ವಾಹನ ಸವಾರ ಕಿರಣ್ ದೂರಿದರು.

ಹೊನ್ನೇನಹಳ್ಳಿ, ಆಗಲಕುಪ್ಪೆ, ಸೋಂಪುರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗೆ ಬರುತ್ತದೆ. ಕಸದ ತೊಟ್ಟಿಗಳನ್ನಿಟ್ಟು ಕಸ ಸಂಗ್ರಹಿಸಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

ಠೇವಣಿದಾರರ ಜತೆಗೆ ಸಂಸದ ತೇಜಸ್ವಿ ಸೂರ್ಯ ಹಾಗೂ ಶಾಸಕ ರವಿಸುಬ್ರಹ್ಮಣ್ಯ ಚರ್ಚಿಸಿದರು

ಸಿಬಿಐ ತನಿಖೆ ನಡೆಸದಿದ್ದರೆ ಆಮರಣಾಂತ ಉಪವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರೀ ಗುರುರಾಘವೇಂದ್ರ ಕೋ-ಆಪರೇಟಿವ್ ಹಾಗೂ ವಸಿಷ್ಠ ಸೌಹಾರ್ದ ಸಹಕಾರಿ ಬ್ಯಾಂಕ್‌ಗಳಲ್ಲಿ ನಡೆದಿರುವ ಅವ್ಯವಹಾರದ ತನಿಖೆಯನ್ನು 15ರಿಂದ 20 ದಿನಗಳ ಒಳಗೆ ಸಿಬಿಐಗೆ ವಹಿಸಬೇಕು. ಇಲ್ಲದಿದ್ದರೆ ಸಂಸದ ತೇಜಸ್ವಿ ಸೂರ್ಯ ಹಾಗೂ ಬಸವನಗುಡಿ ಶಾಸಕ ಎಲ್. ರವಿಸುಬ್ರಹ್ಮಣ್ಯ ಅವರ ಮನೆ ಮುಂದೆ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುತ್ತೇವೆ’ ಎಂದು ಠೇವಣಿದಾರರು ಎಚ್ಚರಿಸಿದ್ದಾರೆ.

‘ಬ್ಯಾಂಕ್‌ಗಳಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ನಾವು ಬೀದಿಗೆ ಬಿದ್ದಿದ್ದೇವೆ. ಈ ವಿಚಾರದಲ್ಲಿ ಶಾಸಕರು ಹಾಗೂ ಸಂಸದರು ನಮ್ಮ ಪರವಾಗಿ ನಿಲ್ಲಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲು ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ ಠೇವಣಿದಾರರು ಶಾಸಕ ರವಿಸುಬ್ರಹ್ಮಣ್ಯ ನಿವಾಸದ ಎದುರು ಭಾನುವಾರ ಪ್ರತಿಭಟನೆ ನಡೆಸಿದರು.

‘ಅವ್ಯವಹಾರ ನಡೆದು 2 ವರ್ಷವಾದರೂ ಸರಿಯಾದ ತನಿಖೆ ನಡೆದಿಲ್ಲ. ನಮ್ಮ ಹಣ ಪೂರ್ಣಪ್ರಮಾಣದಲ್ಲಿ ಕೈಸೇರಿಲ್ಲ. ವಸಿಷ್ಠ ಬ್ಯಾಂಕ್ ಹಗರಣದ ಕುರಿತು ಶಾಸಕರು ಹಾಗೂ ಸಂಸದರು ಚಕಾರ ಎತ್ತುತ್ತಿಲ್ಲ’ ಎಂದು ಪ್ರತಿಭಟನಕಾರರು ದೂರಿದರು.

‘40 ನಿಮಿಷಗಳ ಬಳಿಕ ಶಾಸಕರ ಮನೆಗೆ ಬಂದ ತೇಜಸ್ವಿ ಸೂರ್ಯ ತಮಗೆ ಬೇಕಾದ 10 ಮಂದಿಯನ್ನು ಮನೆಯೊಳಗೆ ಕರೆದುಕೊಂಡು ಹೋದರು. ಸುಮಾರು 2 ಗಂಟೆಯಾದರೂ ಹೊರಗೆ ಬರಲಿಲ್ಲ. ನಮ್ಮ ಜೊತೆಗಿದ್ದ ವೃದ್ಧರು ಅವರು ಬರುವವರೆಗೂ ಪಾದಚಾರಿ ಮಾರ್ಗದ ಮೇಲೆ ಕಾದು ಕುಳಿತುಕೊಳ್ಳಬೇಕಾಯಿತು’ ಎಂದು ಶ್ರೀ ಗುರುರಾಘವೇಂದ್ರ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆ ಮುಖ್ಯ ಪೋಷಕ ಡಾ.ಶಂಕರ ಗುಹಾ ದ್ವಾರಕನಾಥ್ ಬೆಳ್ಳೂರು ಆರೋಪಿಸಿದರು. ‘ತನಿಖೆಯನ್ನು ಸಿಬಿಐಗೆ ಏಕೆ ಒಪ್ಪಿಸುತ್ತಿಲ್ಲ? ಬ್ಯಾಂಕ್ ಹಾಗೂ ಸೊಸೈಟಿ ಅವ್ಯವಹಾರದ ವಿರುದ್ಧ ಏಕೆ ಧ್ವನಿ ಎತ್ತುತ್ತಿಲ್ಲ? ಡಿಐಸಿಜಿಸಿ ಹಣವನ್ನು ಕೊಡಿಸಿ ಅದನ್ನೇ ನಿಮ್ಮ ದೊಡ್ಡ ಸಾಧನೆ ಎಂಬಂತೆ ಏಕೆ ಬಿಂಬಿಸುತ್ತಿದ್ದೀರಿ? ಎಂಬ ಪ್ರಶ್ನೆಗಳಿಗೆ ಸಂಸದರು ಹಾಗೂ ಶಾಸಕರು ಉತ್ತರ ನೀಡಲಿಲ್ಲ’ ಎಂದರು.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,79,508 ▲ ಒಟ್ಟು ಸೋಂಕಿತರು (17,79,362 ನಿನ್ನೆಯ ವಿವರ)

2,425 ▲	17,60,149 ▲	16,933 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ	
ಹೊಸ ಪ್ರಕರಣ	146 ▼
ಗುಣಮುಖ	138 ▼
ಸಾವು	02 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಶ್ರೀರಾಮ ಲಲಿತಾ ಕಲಾ ಮಂದಿರವು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಗೀತ ಕಲಾವಿದೆ ಮಾನಸಿ ಪ್ರಸಾದ್ ಅವರು ಸಂಗೀತ ಕಛೇರಿ ನಡೆಸಿಕೊಟ್ಟರು – ಪ್ರಜಾವಾಣಿ ಚಿತ್ರ

13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಚರ್ಚೆ

ಒಟಿಟಿ; ಕಥೆ ಹೇಳುವವರ ಮುಕ್ತ ಮಾಧ್ಯಮ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕನ್ನಡದಲ್ಲಿ ಬೆಳೆಯದ ಒಟಿಟಿ
- ಕಥೆಯ ನಿರೂಪಣೆಯೇ ಭಿನ್ನ
- ಅಭಿವ್ಯಕ್ತಿಗೆ ಅಡೆತಡೆ ಇಲ್ಲ

ಬೆಂಗಳೂರು: ಓವರ್ ದಿ ಟಾಪ್ ವೇದಿಕೆಗಳು ಕಥೆ ಹೇಳುವವರ ಮತ್ತು ಬರಹಗಾರರ ಮಾಧ್ಯಮ...

ಇದು 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾನುವಾರ 'ಒರಿಜಿನಲ್ ಕಂಟೆಂಟ್ ಕ್ರಿಯೇಷನ್ ಆ್ಯಂಡ್ ಅಕ್ವಿಸಿಷನ್ ಇನ್ ಒಟಿಟಿಸ್' ವಿಷಯದ ಮೇಲಿನ ಗೋಷ್ಠಿಯಲ್ಲಿ ಆ ಕ್ಷೇತ್ರದ ವಿಷಯ ಪರಿಣತರ ಒಕ್ಕೊರಲ ಮಾತು.

'ಒಟ್ಟಾರೆ ಸಿನಿಮಾ ಅಥವಾ ಟೆಲಿವಿಷನ್ ಕಾರ್ಯಕ್ರಮ ನಿರ್ಮಾಣಗಳಲ್ಲಿ ಒಂದೆಡೆ ವಿಜ್ಞಾನ ಮತ್ತೊಂದೆಡೆ ವ್ಯವಹಾರ ಇದೆ. ಕೊನೆಗೂ ಅದು ಮಾರುಕಟ್ಟೆಯಾಗಿ ವೀಕ್ಷಕನನ್ನು ತಲುಪಲೇಬೇಕು. ಅದಕ್ಕಾಗಿ ಒಟಿಟಿಯನ್ನು ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿದ್ದೇವೆ. ಇಲ್ಲಿ ಕಥೆ ಹೇಳುವವರಿಗೆ ಸ್ವಾತಂತ್ರ್ಯವಿದೆ' ಎಂದು ಜೀ 5ನ ಕನ್ನಡ ಸರಣಿಗಳ ಮುಖ್ಯಸ್ಥ ಪ್ರದೀಪ್ ಕುಮಾರ್ ವಿಶ್ಲೇಷಿಸಿದರು.

'ವಿಷಯ (ಕಂಟೆಂಟ್) ನಿರ್ಮಾಪಕರು ಪ್ರೇಕ್ಷಕನನ್ನು ತಲುಪಲು ಮುಕ್ತ ವೇದಿಕೆ. ಏಕೆಂದರೆ ಇಲ್ಲಿ ಸಿನಿಮಾದ ವಿತರಣೆ, ಪ್ರದರ್ಶನಗಳ ಸಮಸ್ಯೆ, ಚಿತ್ರಮಂದಿರಗಳ ಲಭ್ಯತೆ ಇತ್ಯಾದಿ ತಲೆನೋವುಗಳು ಕಡಿಮೆ. ಯಶಸ್ಸು ಅಥವಾ ಸೋಲಿನ ಆತಂಕ ಇಲ್ಲಿಯೂ ಇದೆ. ಚಿತ್ರಮಂದಿರಗಳಲ್ಲಿ ಎರಡು ಗಂಟೆಗಳಲ್ಲಿ ಹೇಳಲಾಗದ್ದನ್ನು ಇಲ್ಲಿ ಸರಣಿಯ ರೂಪದಲ್ಲಿ ಹೇಳಬಹುದು' ಎಂದರು ಅಮೆಝಾನ್ ಪ್ರೈಮ್ ವಿಡಿಯೋದ ಕಂಟೆಂಟ್ ಲೈಸೆನ್ಸಿಂಗ್ ವಿಭಾಗದ ಮುಖ್ಯಸ್ಥ ಮನೀಷ್ ಮೆಂಘಾನಿ.

'ಹಣದ ಹಿಂದೆ ಹೋದ ಕೆಲವು ನಿರ್ಮಾಪಕರು ಸಿನಿಮಾ ಕಂಟೆಂಟನ್ನು ಭ್ರಷ್ಟಗೊಳಿಸಿದ್ದಾರೆ. ಬೇರೆಡೆಗೆ ಹೋಲಿಸಿದರೆ ನಮ್ಮಲ್ಲಿ ಒಳ್ಳೆಯ ಬರಹಗಾರರಿದ್ದಾರೆ. ಒಟಿಟಿ ಒರಿಜಿನಲ್ಸ್‌ಗೆ ಕತೆ ಹೇಳುವ ರೀತಿಯನ್ನು ಸ್ವಲ್ಪ ಬದಲಾಯಿಸಬೇಕಾಗುತ್ತದೆ' ಎಂದು ಕಲರ್ಸ್ ಕನ್ನಡ ವಾಹಿನಿಯ ಬಿಸಿನೆಸ್ ಹೆಡ್ ಪರಮೇಶ್ವರ ಗುಂಡ್ಕಲ್ ಹೇಳಿದರು.

'ಕಥೆಗಳಿಗೆ ಬೇಡಿಕೆ ಇದೆ. ಬರಹಗಾರರು ತಮ್ಮ ಕಥೆಯನ್ನು ಒಂದು ಸಾಲಿನಲ್ಲಿ (ಸಂಕ್ಷಿಪ್ತವಾಗಿ) ಪ್ರಸ್ತುತಪಡಿಸುವ ಸಾಮರ್ಥ್ಯ ಹೊಂದಿರಬೇಕು. ಅಥವಾ ನಿರ್ಮಾಣವಾದ ವಿಷಯವನ್ನು ಚಿತ್ರಮಂದಿರದಲ್ಲೇ ಬಂದು ನೋಡಿ ಎಂದು ಹೇಳುವ ಹಟಮಾರಿತನ ಇರಬಾರದು. ಏಕೆಂದರೆ ಒಟಿಟಿ ನಿರ್ವಾಹಕರು ತಾಂತ್ರಿಕ ಪರಿಣತಿಯನ್ನು ಹೊಂದಿದವರೇ ಆಗಿದ್ದಾರೆ. ಆದ್ದರಿಂದ ಒಳ್ಳೆಯ ಕಥೆ/ ವಿಷಯವನ್ನು ಒಟಿಟಿ ವೇದಿಕೆಯವರು ಹುಡುಕುತ್ತಲೇ ಇರುತ್ತಾರೆ' ಎಂದು ಪರಮೇಶ್ವರ ಹೇಳಿದರು.

'ಒಟಿಟಿ ಎಂದರೆ ಒಂದರ್ಥದಲ್ಲಿ ಸಿನಿಮಾ ಮತ್ತು ಟಿವಿ ನಡುವೆ ಮದುವೆಯಾದಂತಿದೆ. ಹಾಗೆಂದು ಮೂಲ ಕಥೆಯನ್ನು ತುಂಬಾ ತಿರುಚಬಾರದು ಮೂಲ ಬರಹಗಾರನ ಆಶಯವನ್ನು ಗೌರವಿಸಬೇಕು' ಎಂದರು ಜೀ 5ನ ಹಿಂದಿ ಸರಣಿಗಳ ವಿಭಾಗದ ಉಪಾಧ್ಯಕ್ಷೆ ಪ್ರಗತಿ ದೇಶ್‌ಮುಖ್.

'ಡಬ್ಬಿಂಗ್ ಆದ ವಸ್ತುವನ್ನು ನೋಡುವವರು ತುಂಬಾ ಕಡಿಮೆ. ಅದೊಂದು ಲಾಭದಾಯಕ ಕ್ಷೇತ್ರವಾಗಿ ಇಲ್ಲ. ಒಂದಿಷ್ಟು ಜನ ಅದನ್ನು ನೋಡುವವರಿದ್ದಾರೆ ಅಷ್ಟೇ. ಕನ್ನಡದ ಮಟ್ಟಿಗೆ ಒಟಿಟಿ ಇನ್ನಷ್ಟೇ ಬೆಳೆಯಬೇಕಿದೆ' ಎಂದರು ಪ್ರದೀಪ್ ಕುಮಾರ್.

'ಮುಬಿ'ಯ ಏಷ್ಯಾ ವಿಭಾಗದ ಕಾರ್ಯಕ್ರಮ ನಿರ್ದೇಶಕಿ ಸ್ವೆಟ್ಲಾನಾ ನೌಡಿಯಾಳ್ ಭಾಗವಹಿಸಿದ್ದರು. ಅಭಿಷೇಕ್ ಅಯ್ಯಂಗಾರ್ ಚರ್ಚೆಯನ್ನು ನಡೆಸಿಕೊಟ್ಟರು.

13ನೇ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ 'ಒರಿಜಿನಲ್ ಕಂಟೆಂಟ್ ಕ್ರಿಯೇಷನ್ ಆ್ಯಂಡ್ ಅಕ್ವಿಸಿಷನ್ ಇನ್ ಒಟಿಟಿಸ್' ವಿಷಯದ ಮೇಲಿನ ಗೋಷ್ಠಿಯಲ್ಲಿ ಜೀ 5 ಹಿಂದಿ ಸರಣಿಗಳ ವಿಭಾಗದ ಉಪಾಧ್ಯಕ್ಷೆ ಪ್ರಗತಿ ದೇಶ್‌ಮುಖ್ ಮಾತನಾಡಿದರು. (ಎಡದಿಂದ) ಕಲರ್ಸ್ ಕನ್ನಡ ವಾಹಿನಿಯ ಬಿಸಿನೆಸ್ ಹೆಡ್ ಪರಮೇಶ್ವರ ಗುಂಡ್ಕಲ್, ಜೀ 5ನ ಕನ್ನಡ ಸರಣಿಗಳ ಮುಖ್ಯಸ್ಥ ಪ್ರದೀಪ್ ಕುಮಾರ್, 'ಮುಬಿ'ಯ ಏಷ್ಯಾ ವಿಭಾಗದ ಕಾರ್ಯಕ್ರಮ ನಿರ್ದೇಶಕಿ ಸ್ವೆಟ್ಲಾನಾ ನೌಡಿಯಾಳ್ ಮತ್ತು ಅಮೆಝಾನ್ ಪ್ರೈಮ್ ವಿಡಿಯೋದ ಕಂಟೆಂಟ್ ಲೈಸೆನ್ಸಿಂಗ್ ವಿಭಾಗದ ಮುಖ್ಯಸ್ಥ ಮನೀಷ್ ಮೆಂಘಾನಿ ಇದ್ದರು. ಪ್ರಜಾವಾಣಿ ಚಿತ್ರ

ಕಾರವಾರದ ದೇವಬಾಗ ಕಡಲತೀರದಲ್ಲಿ ಭಾನುವಾರ ಮೊಟ್ಟೆಗಳಿಂದ ಹೊರಬಂದ 'ಆಲಿವ್ ರಿಡ್ಲೆ' ಕಡಲಾಮೆಯ ಮರಿಗಳು. ಒಟ್ಟು 103 ಮರಿಗಳನ್ನು ಅರಣ್ಯ ಇಲಾಖೆಯ ಅಧಿಕಾರಿಗಳು ಸಮುದ್ರಕ್ಕೆ ಸೇರಿಸಿದರು –ಪ್ರಜಾವಾಣಿ ಚಿತ್ರ

ಹರ್ಷ ಕುಟುಂಬಕ್ಕೆ ಚೆಕ್ ವಿತರಣೆ

ಶಿವಮೊಗ್ಗ: 'ಬಜರಂಗದಳ ಕಾರ್ಯಕರ್ತ ಹರ್ಷನ ಹತ್ಯೆ ಆರೋಪಿಗಳಿಗೆ ಮರಣದಂಡನೆ ಶಿಕ್ಷೆಯಾಗಬೇಕಿದೆ. ಯಾವುದೇ ಕಾರಣಕ್ಕೂ ಆರೋಪಿಗಳು ಹೊರಬರದಂತೆ ನೋಡಿಕೊಳ್ಳಲಾಗುವುದು' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಹರ್ಷನ ಮನೆಗೆ ಭಾನುವಾರ ಭೇಟಿ ನೀಡಿದ್ದ ಅವರು, ಕುಟುಂಬಕ್ಕೆ ಸಾಂತ್ವನ ಹೇಳಿ, ರಾಜ್ಯ ಸರ್ಕಾರದಿಂದ ನೀಡಿದ ₹ 25 ಲಕ್ಷ ಚೆಕ್ ಹಸ್ತಾಂತರಿಸಿದರು.

ಬಳಿಕ, ಸುದ್ದಿಗಾರರ ಜೊತೆ ಮಾತನಾಡುತ್ತಾ, 'ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎಲ್ಲರೂ ಒಂದೇ ತಾಯಿಯ ಮಕ್ಕಳಂತೆ ಒಗ್ಗಟ್ಟಿನಿಂದ ಬಾಳಬೇಕು. ಶಾಂತಿ ಸುವ್ಯವಸ್ಥೆಗೆ ಭಂಗವಾದಂತೆ ನೋಡಿಕೊಳ್ಳಬೇಕು' ಎಂದು ಸಲಹೆ ಮಾಡಿದರು.

ಒಳನೋಟ

ಕೈಕೊಟ್ಟ ಕೇಂದ್ರ ಸರ್ಕಾರ

ಬೆಂಗಳೂರು: 'ಪೋಷಣ ಅಭಿಯಾನ 'ಅಪೌಷ್ಟಿಕ' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಮಾರ್ಚ್ 6) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಫಲಾನುಭವಿಗಳನ್ನು ತಲುಪಲಿ

'ಮಾತೃವಂದನಾ' ಯೋಜನೆ ಮತ್ತು 'ಪೋಷಣಾ ಅಭಿಯಾನ'ವು ಬಡ ಕುಟುಂಬಗಳ ಮಕ್ಕಳಿಗೆ ಅಪೌಷ್ಟಿಕತೆ ತಡೆಯಲು ಇರುವ ಉತ್ತಮ ಯೋಜನೆಗಳು. ಇಂತಹ ಮಹತ್ತರ ಯೋಜನೆಗಳಿಗೆ ಅನುದಾನ ನೀಡದೆ ಇರುವುದು ದುರದೃಷ್ಟಕರ. ಸದೃಢ ಮಕ್ಕಳಿಂದ ಮಾತ್ರ ಸದೃಢ ಭಾರತ ಎಂಬುದನ್ನು ಸರ್ಕಾರಗಳು ಅರಿಯಬೇಕು. ಫಲಾನುಭವಿಗಳನ್ನು ತಲುಪದ ಯೋಜನೆಗಳು ಇದ್ದೂ ಏನು ಪ್ರಯೋಜನ?

ಬಸವಪ್ರಸಾದ ಶಂಕರ ಸಂಕಪಾಳ,- ಬೆಳಗಾವಿ

ತರಾತುರಿ ಆಸಕ್ತಿ ಬೇಡ

ದೇಶವನ್ನು ಅಪೌಷ್ಟಿಕತೆಯಿಂದ ಮುಕ್ತಗೊಳಿಸಲು ರೂಪಿಸಿರುವ ಯೋಜನೆಗಳು ಗುರಿ ತಲುಪುವಲ್ಲಿ ವಿಫಲವಾಗಿವೆ. ಸಂಪತ್ತಿನಲ್ಲಿ ದೇಶ ಮುನ್ನುಗ್ಗುತ್ತಿದ್ದರೂ ಹಸಿವು ಮತ್ತು ಅಪೌಷ್ಟಿಕತೆ ನಿವಾರಿಸುವಲ್ಲಿ ಸೋತಿರುವುದು ವಿಪರ್ಯಾಸ. ಯೋಜನೆ ಜಾರಿಗೆ ತೋರುವ ತರಾತುರಿ ಆಸಕ್ತಿ, ಯೋಜನೆ ಸಮರ್ಪಕವಾಗಿ ನಿರ್ವಹಿಸುವಲ್ಲಿಯೂ ಇರಬೇಕು. ದೂರದೃಷ್ಟಿಯ ಯೋಜನೆಗಳನ್ನು ನೆಪಮಾತ್ರಕ್ಕೆ ಜಾರಿಗೊಳಿಸಬಾರದು. ಆಶಯದಂತೆ ಜನರ ಹಸಿವು ನೀಗಿಸಬೇಕು.

ಅರ್ಚನಾ, ಬೆಂಗಳೂರು

ಯೋಜನೆಗಳ ಮಾಹಿತಿ ಇಲ್ಲ

ಸಣ್ಣ ವಯಸ್ಸಿಗೆ ತಾಯ್ತನ, ಅಪೌಷ್ಟಿಕತೆಯಂತಹ ಸಮಸ್ಯೆಗಳನ್ನು ತಡೆಯಲು ಹೆಣ್ಣುಮಕ್ಕಳ ವಿವಾಹದ ವಯಸ್ಸನ್ನು 21ಕ್ಕೆ ಹೆಚ್ಚಿಸಬೇಕು. ಸರ್ಕಾರ ಜಾರಿ ಮಾಡಿರುವ 'ಮಾತೃವಂದನಾ'ದಂತಹ ಯೋಜನೆಗಳ ಬಗ್ಗೆ ಫಲಾನುಭವಿಗಳಿಗೆ ಮಾಹಿತಿಯೇ ಇಲ್ಲ. ಮಹಿಳೆಯರ ಆರೋಗ್ಯ ರಕ್ಷಣೆಗೆ ಸರ್ಕಾರ ವಿಶೇಷ ಆದ್ಯತೆ ನೀಡಬೇಕು. ದೇಶದಲ್ಲಿ ಮಹಿಳಾ ಸಬಲೀಕರಣ ಆಗಬೇಕು.

ಬೀರಪ್ಪ ಬಸಾಪುರಿ, ಧಾರವಾಡ

ಬಾಲ್ಯವಿವಾಹ ತಡೆಯಿರಿ

ಸರ್ಕಾರ ಪ್ರತಿವರ್ಷ ಹಲವು ಯೋಜನೆಗಳನ್ನು ಜಾರಿ ಮಾಡುತ್ತದೆ. ಆದರೆ, ಅದೇ ಯೋಜನೆಗಳು ಅನುದಾನ ಸಿಗದೆ ನರಳುತ್ತವೆ. ಇದರಿಂದಾಗಿ ಯೋಜನೆಗಳ ಫಲ ಯೋಗ್ಯರಿಗೆ ಸಿಗುತ್ತಿಲ್ಲ. ಹಳ್ಳಿಗಳಲ್ಲಿ ಬಾಲ್ಯವಿವಾಹ ಈಗಲೂ ಜಾರಿಯಲ್ಲಿದೆ. ಶಾಲಾ ಹಂತದಲ್ಲೇ ಮದುವೆಯ ಮೂಗುದಾರ ಹಾಕಿ, ಕೂಪಕ್ಕೆ ತಳ್ಳುವುದು ನಡೆಯುತ್ತಲೇ ಇವೆ. ಇದರ ನಿಯಂತ್ರಣಕ್ಕೆ ವಿಶೇಷ ಗಮನಹರಿಸಬೇಕು.

ಭೀಮಾಶಂಕರ ಎಸ್. ಝುಳಕಿ, ಕಲಬುರಗಿ

ಆರೋಗ್ಯ ಜೀವನ ಕಲಿಸಿ

ಮಕ್ಕಳ ಆಹಾರಕ್ಕೂ ಮತ್ತು ಬುದ್ಧಿಮತ್ತೆಗೂ ನೇರ ಸಂಬಂಧವಿದೆ ಎಂದು ಸಂಶೋಧನೆಗಳು ಹೇಳುತ್ತವೆ. ದೇಶದ ಅಭಿವೃದ್ಧಿಯು ಮಕ್ಕಳ ಬೆಳವಣಿಗೆಯನ್ನು ಆಧರಿಸಿರುತ್ತದೆ ಎಂಬುದೂ ಸತ್ಯ. ಆದರೆ, ಪೌಷ್ಟಿಕ ಆಹಾರ ಪೂರೈಸುವ ಯೋಜನೆಯೇ ಅಪೌಷ್ಟಿಕತೆಯಿಂದ ನರಳುತ್ತಿರುವುದು ದುರಂತ. ಬಾಲ ಅಮ್ಮಂದಿರ ದಯನೀಯ ಸ್ಥಿತಿಗೆ ಕೂಡಲೇ ಪರಿಹಾರ ಕಂಡುಕೊಳ್ಳಬೇಕು. ಮಕ್ಕಳು ಮತ್ತು ಅಮ್ಮಂದಿರ ಬದುಕು ಹಸನು ಮಾಡಲು ನಿರಂತರ ದುಡಿಯುತ್ತಿರುವ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರನ್ನು ಸಶಕ್ತಗೊಳಿಸಿ.

ಮೆಹಬೂಬ್ ಮಠದ, ಕೊಪ್ಪಳ

ತಾಯಿಯ ಆರೋಗ್ಯ ಕಾಪಾಡಿ

ತಾಯಿ ಮತ್ತು ಶಿಶುವಿನ ಆರೋಗ್ಯ ಕಾಪಾಡುವುದು ಯೋಜನೆಯ ಉದ್ದೇಶವಾದರೂ ಅದರ ಸದುಪಯೋಗ ಸಮರ್ಪಕವಾಗಿ ಆಗದಿರುವುದು ವಿಪರ್ಯಾಸ. ಸರ್ಕಾರ ತನ್ನ ಜವಾಬ್ದಾರಿ ನಿಭಾಯಿಸುವಲ್ಲಿ ಎಡವಿದೆ. ತಾಯಿಯ ಆರೋಗ್ಯ ಕಾಪಾಡಿದರೆ, ಮಗುವೂ ಆರೋಗ್ಯವಾಗಿರುತ್ತದೆ. ಯೋಜನೆಯ ಫಲ ತಾಯಿಗೆ ಸಿಗುವಂತೆ ಕ್ರಮ ಕೈಗೊಳ್ಳಿ.

ಅನಿತಾ, ಗೋಕಾಕ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಬಿಳಿಕಲ್ಲು ಕ್ವಾರಿ ಕುಸಿತ; ಉಳಿದಿಬ್ಬರ ಶವ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ತಾಲ್ಲೂಕಿನ ಮಡಹಳ್ಳಿ ಗ್ರಾಮದ ಬಿಳಿಕಲ್ಲು ಕ್ವಾರಿಯಲ್ಲಿ ಸಂಭವಿಸಿದ ಗುಡ್ಡ ಕುಸಿತದಲ್ಲಿ ಮಣ್ಣು ಬಂಡೆಗಳ ಅಡಿಯಲ್ಲಿ ಸಿಲುಕಿದ್ದ ಇನ್ನಿಬ್ಬರು ಕಾರ್ಮಿಕರ ಮೃತದೇಹಗಳನ್ನು ಭಾನುವಾರ ಹೊರಕ್ಕೆ ತೆಗೆಯಲಾಗಿದೆ.

ದುರ್ಘಟನೆಯಲ್ಲಿ ಮೂವರು ಕಾರ್ಮಿಕರು ಕಲ್ಲು-ಬಂಡೆಗಳ ಅಡಿಯಲ್ಲಿ ಸಿಲುಕಿದ್ದರು. ಈ ಪೈಕಿ ಅಜೀಂ ಉಲ್ಲಾ ಎಂಬ ಕಾರ್ಮಿಕನ ಶವ ಶನಿವಾರವೇ ಪತ್ತೆಯಾಗಿತ್ತು. ಉಳಿದಿಬ್ಬರ ಪತ್ತೆಗಾಗಿ ತೆಗೆಯುವುದಕ್ಕಾಗಿ ಕಾರ್ಯಾಚರಣೆ ಮುಂದುವರಿಸಲಾಗಿತ್ತು.

ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸಿಬ್ಬಂದಿ ಭಾನುವಾರ ಬೆಳಿಗ್ಗೆಯಿಂದ ಕಾರ್ಯಾಚರಣೆ ನಡೆಸಿ ಸಂಜೆ 4.30ರ ಸುಮಾರಿಗೆ ಉತ್ತರ ಪ್ರದೇಶದ ಗೋರಖ್‌ಪುರದ ಮಿರಾಜ್ ಮೃತದೇಹ ಹೊರ ತೆಗೆದರು. ರಾತ್ರಿ 8.45ರಕ್ಕೆ ಸರ್ಫರಾಜ್ ಅವರ ಶವ ಹೊರತೆಗೆದರು.

ತಂಡ ರಚನೆ: ಈ ಮಧ್ಯೆ, ಚಾಮರಾಜನಗರದಲ್ಲಿರುವ ಎಲ್ಲಾ ಗಣಿಗಳ ತಪಾಸಣೆಗೆ ಗಣಿ ಇಲಾಖೆ ಭೂವಿಜ್ಞಾನಿಗಳನ್ನು ಒಳಗೊಂಡ ಎಂಟು ತಂಡ ರಚಿಸಿದೆ. ಸೋಮವಾರದಿಂದ ಈ ತಂಡ ಗಣಿಗಳ ಸಮಗ್ರ ತಪಾಸಣೆ ನಡೆಸಿ ಸರ್ಕಾರಕ್ಕೆ ವರದಿ ನೀಡಲಿದೆ.

ಅಗ್ನಿ ಅವಘಡ; ಮೃತರ ಸಂಖ್ಯೆ 15ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ದೋರನಹಳ್ಳಿ ಗ್ರಾಮದ ಯುಕೆಪಿ ಕ್ಯಾಂಪ್‌ನಲ್ಲಿ ಫೆಬ್ರುವರಿ 25ರಂದು ಸೀಮಂತ ಕಾರ್ಯಕ್ರಮದ ವೇಳೆ ಸಂಭವಿಸಿದ್ದ ಅನಿಲ ಸೋರಿಕೆಯಿಂದ ಸಂಭವಿಸಿದ ಅಗ್ನಿ ಅವಘಡದಲ್ಲಿ ಮೃತರ ಸಂಖ್ಯೆ 15ಕ್ಕೆ ಏರಿದೆ.

ತೀವ್ರವಾಗಿ ಗಾಯಗೊಂಡಿದ್ದ ಚಂದ್ರಶೇಖರ ಮಲ್ಲಪ್ಪ ಮಲಗೊಂಡ (45) ಭಾನುವಾರ ಕೊನೆಯುಸಿರೆಳೆದರು. ಮೊದಲ ದಿನ ಇಬ್ಬರು ಮಕ್ಕಳು ಸೇರಿ ಮೂವರು ಮೃತಪಟ್ಟು, 15 ಮಂದಿ ಗಾಯಗೊಂಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ವಿವಿಧ ಸಂಘ ಸಂಸ್ಥೆಗಳು ಸರ್ಕಾರಕ್ಕೆ ಒತ್ತಾಯಿಸಿವೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹೆಸರಿಗಷ್ಟೇ 'ಜನಸ್ನೇಹಿ', ಒಳಗೆ ಕಾಲಿಟ್ಟರೆ 'ಧನದಾಹಿ' • ಲಂಚ ಪ್ರಶ್ನಿಸಿದರೆ ಕರ್ತವ್ಯಕ್ಕೆ ಅಡ್ಡಿ ಪ್ರಕರಣದ ಎಚ್ಚರಿಕೆ

ಠಾಣೆ 'ಮಾಮೂಲಿ' ವ್ಯವಸ್ಥೆ; ಜನ ಹೈರಾಣ

• ಸಂತೋಷ ಜಿಗಳಿಕೊಪ್ಪ

ಭಾವು ಪತ್ತಾರ್

ಬೆಂಗಳೂರು: 'ಜನಸ್ನೇಹಿ ಪೊಲೀಸ್' ವ್ಯವಸ್ಥೆ ಜಾರಿಗೆ ತರಬೇಕಾದ ಹಲವು ಠಾಣೆಗಳು, ಇತ್ತೀಚಿನ ದಿನಗಳಲ್ಲಿ 'ಹಣ ಹಾಗೂ ರಾಜಕಾರಣಿ ಸ್ನೇಹಿ' ಆಗಿ ಮಾರ್ಪಡುತ್ತಿರುವ ಆರೋಪಗಳು ಹೆಚ್ಚಾಗಿವೆ. ಜೇಬು ಖಾಲಿ ಇರಿಸಿಕೊಂಡು ಕೈಯಲ್ಲೊಂದು ದೂರಿನ ಪ್ರತಿ ಹಿಡಿದು ಬರುವ ಜನ, ಠಾಣೆಯೊಳಗೆ ಕಾಲಿಡಲು ಭಯಪಡುತ್ತಿದ್ದಾರೆ. ಇದಕ್ಕೆ ಕಾರಣ ಪೊಲೀಸರ 'ಮಾಮೂಲಿ' ವ್ಯವಸ್ಥೆ.

ವರ್ಗಾವಣೆ ದಂಧೆ ಮೂಲಕ ಲಕ್ಷಗಟ್ಟಲೇ ಹಣ ಕೊಟ್ಟು ಠಾಣೆಗೆ ಬರುವ ಕೆಲ ಪೊಲೀಸ್ ಅಧಿಕಾರಿಗಳು, 'ಮಾಮೂಲಿ' ಬರುವ ಪ್ರಕರಣಗಳಿಗಷ್ಟೇ ಒತ್ತು ನೀಡುತ್ತಿದ್ದಾರೆ. ಠಾಣೆ ವ್ಯಾಪ್ತಿಯಲ್ಲಿ ಹಣ ವಸೂಲಿಗೆಂದೇ ಕೆಳ ಹಂತದ ಸಿಬ್ಬಂದಿಯನ್ನು ನೇಮಕ ಮಾಡುತ್ತಿದ್ದಾರೆ. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿಯನ್ನೂ ಬಳಸಿಕೊಳ್ಳುತ್ತಿರುವ ದೂರುಗಳಿವೆ.

'ಠಾಣೆ ವ್ಯಾಪ್ತಿಯಲ್ಲಿ ನಿಯಮ ಮೀರಿ ವ್ಯಾಪಾರ ನಡೆಸುವವರು ಹಾಗೂ ಅಕ್ರಮ ಚಟುವಟಿಕೆಯಲ್ಲಿ ತೊಡಗುವವರಿಗೆ ಮಾಮೂಲಿ ನಿಗದಿ ಮಾಡಲಾಗಿದೆ. ಅವರೆಲ್ಲರ ಬಳಿ ಹಣ ಸಂಗ್ರಹಿಸುವ ಕೆಲ ಸಿಬ್ಬಂದಿ, ಅದನ್ನು ಠಾಣೆ ಮುಖ್ಯಸ್ಥರಿಗೆ ತಂದುಕೊಡುತ್ತಾರೆ. ನಂತರ, ಅದು ಹಲವರಿಗೆ ತಲುಪುತ್ತದೆ. ಯಾರಿಗೂ ಎಷ್ಟು ಹೋಯಿತು ಎಂಬುದು ಮಾತ್ರ ಗೊತ್ತಾಗುವುದಿಲ್ಲ' ಎಂದು ವ್ಯವಸ್ಥೆಯಿಂದ ಬೇಸತ್ತ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆಲ ಠಾಣೆಗಳಲ್ಲಿ ಸೆಂಟ್ರಿಯಿಂದ ಹಿಡಿದು ಮುಖ್ಯಸ್ಥರವರೆಗೂ ಹಣವೇ ಮುಖ್ಯವಾಗಿದೆ. ಕೈ ಬಿಸಿ ಮಾಡಿದರೆ ಮಾತ್ರ ಎಫ್‌ಐಆರ್ ದಾಖಲು, ತ್ವರಿತ ತನಿಖೆ ಎಂಬಂತಾಗಿದೆ. 'ಸಂಧಾನ'ದ ಮೂಲಕವೇ ಸಮಸ್ಯೆ ಬಗೆಹರಿಸಿ ಹಣ ಪಡೆಯುವ ಸಿಬ್ಬಂದಿಯೂ ಇದ್ದಾರೆ. ಹಣದಾಸೆಗಾಗಿ ಡ್ರಗ್ಸ್, ವೇಶ್ಯಾವಾಟಿಕೆ ಹಾಗೂ ಇತರೆ ಮಾಫಿಯಾಗಳೊಂದಿಗೆ ಕೈ ಜೋಡಿಸುತ್ತಿರುವವರು ಹೆಚ್ಚಿದ್ದಾರೆ. ದೂರುದಾರ ಹಾಗೂ ಆರೋಪಿಗಳನ್ನು ಹಂಚಿಕೊಂಡು, ಸಾಧ್ಯವಾದಷ್ಟು ಹಣ ಕೀಳುವ ಸಿಬ್ಬಂದಿಯೂ ಇದ್ದಾರೆ' ಎಂದೂ ವಿವರಿಸಿದರು.

ಠಾಣೆ ವ್ಯವಸ್ಥೆ ಬಗ್ಗೆ ಬೇಸರ ವ್ಯಕ್ತಪಡಿಸಿದ ಸಾರ್ವಜನಿಕರೊಬ್ಬರು, 'ಠಾಣೆಯೊಳಗೆ ಕಾಲಿಟ್ಟ ಕೂಡಲೇ 'ನಿಮಗೆ ಸಹಾಯ ಬೇಕೆ?' ಎಂಬ ಫಲಕ ಕಾಣುತ್ತದೆ. ಅಲ್ಲಿ ಸಮಸ್ಯೆ ಹೇಳಿಕೊಂಡರೆ, ಬೇರೊಬ್ಬ ಸಿಬ್ಬಂದಿ ಬಳಿ ಕಳುಹಿಸುತ್ತಾರೆ. ಸಮಸ್ಯೆ ಆಲಿಸುವ ಅವರು, 'ನಿಮ್ಮ ಬಳಿ ಹಣವಿದೆಯಾ? ಹಣ ನೀಡಲು ಆಗುತ್ತದೆಯಾ?' ಎಂಬುದನ್ನು ವಿಚಾರಿಸಿಯೇ ಮುಂದಕ್ಕೆ ಕಳಿಸುತ್ತಾರೆ. ಇಲ್ಲದಿದ್ದರೆ, ನಾಳೆ ಬನ್ನಿ ಎಂದು ಸಾಗಹಾಕುತ್ತಾರೆ' ಎಂದರು.

ಠಾಣೆಗೆ ಚಹಾಪುಡಿ, ಸಕ್ಕರೆ, ಹಾಲು: 'ಲಕ್ಷ ರೂಪಾಯಿ ಮೌಲ್ಯದ ಶ್ವಾನ ಕಳುವಾದ ಬಗ್ಗೆ ದೂರು ನೀಡಲು ಠಾಣೆಗೆ ಹೋಗಿದ್ದೆ. ದೂರು ಮಾತ್ರ ಪಡೆದಿದ್ದ ಪೊಲೀಸರು, ಎಫ್‌ಐಆರ್ ದಾಖಲಿಸಲು ₹ 500 ಕೇಳಿದರು. ಅದನ್ನು ಪ್ರಶ್ನಿಸಿದ್ದಕ್ಕೆ, 'ನಾಳೆ ಬನ್ನಿ, ನಾಡಿದ್ದು ಬನ್ನಿ' ಎನ್ನುತ್ತಲೇ ಕಾಲ ಕಳೆದರು. ಠಾಣೆಗೆ ಸಕ್ಕರೆ, ಚಹಾಪುಡಿ, ಹಾಲು ಬೇಕೆಂದು ಹೇಳಿ ನನ್ನಿಂದಲೇ ಕೆಲ ದಿನ ತರಿಸಿಕೊಂಡರು' ಎಂದು ಬೆಂಗಳೂರಿನ ನಿವಾಸಿಯೊಬ್ಬರು ದೂರಿದರು.

ಪ್ರಕರಣಗಳಲ್ಲೂ 'ಮಾಮೂಲಿ': 'ಜಪ್ತಿ ಮಾಡಿದ ವಸ್ತುಗಳು, ವಾಹನಗಳನ್ನು ಬಿಡುಗಡೆ ಮಾಡಲೂ ಕೆಲ ಠಾಣೆಗಳಲ್ಲಿ ಮಾಮೂಲಿ ನಿಗದಿ ಮಾಡಲಾಗಿದೆ. ಇದನ್ನು ಪ್ರಶ್ನಿಸಿದರೆ, ಕರ್ತವ್ಯಕ್ಕೆ ಅಡ್ಡಿ ಆರೋಪದಡಿ ಪ್ರಕರಣ ದಾಖಲಿಸುವುದಾಗಿ ಬೆದರಿಸುತ್ತಾರೆ' ಎಂದು ನಿವಾಸಿಯೊಬ್ಬರು ತಿಳಿಸಿದರು.

'ಮನೆಯಲ್ಲಿ 120 ಗ್ರಾಂ ಚಿನ್ನಾಭರಣ ಕಳವಾಗಿತ್ತು. ಆರೋಪಿಯನ್ನು ಬಂಧಿಸಿದ್ದಾಗಿ ಹೇಳಿದ್ದ ಪೊಲೀಸರು, 80 ಗ್ರಾಂ ಚಿನ್ನ ಮಾತ್ರ ಜಪ್ತಿ ಮಾಡಿದ್ದಾಗಿ ಹೇಳಿದ್ದರು. ಆದರೆ, ನ್ಯಾಯಾಲಯಕ್ಕೆ 120 ಗ್ರಾಂ ಚಿನ್ನವೆಂದು ಹೇಳಿ ಆದೇಶ ತನ್ನಿ ಎಂದಿದ್ದರು. ಈ ವ್ಯತ್ಯಾಸ ಏಕೆ? ಎಂದು ಪ್ರಶ್ನಿಸಿದಾಗ, 'ಮಾಮೂಲಿ'ಯೆಂದು ಬಾಯಿ ಮುಚ್ಚಿಸಿದರು' ಎಂದೂ ಹೇಳಿದರು.

ಕ್ಯಾಮೆರಾ ಅಳವಡಿಸಿ, ನಿಗಾ ಇರಿಸಿ: 'ಪ್ರತಿಯೊಂದು ಠಾಣೆಯಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಸಿಬ್ಬಂದಿ ಮೇಲೆ ನಿಗಾ ಇರಿಸುವ ವ್ಯವಸ್ಥೆ ಬರಬೇಕು. ಯಾವೆಲ್ಲ ಪೊಲೀಸರು, ಯಾರೆಲ್ಲ ಆರೋಪಿಗಳ ಜೊತೆ ಕೈಜೋಡಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸಾರ್ವಜನಿಕರು ಒತ್ತಾಯಿಸುತ್ತಾರೆ.

'ಪ್ರಾಮಾಣಿಕ ಪೊಲೀಸರಿಗೆ ಸಂಕಷ್ಟ'

'ತಿಂಗಳ ಸಂಬಳವನ್ನೇ ನಂಬಿರುವ ಹಲವು ಪೊಲೀಸರು ಇಲಾಖೆಯಲ್ಲಿದ್ದಾರೆ. ಕೆಲವರ ಭ್ರಷ್ಟಾಚಾರ ಹಾಗೂ ಅಶಿಸ್ತು, ಇಡೀ ಇಲಾಖೆಗೆ ಕೆಟ್ಟ ಹೆಸರು ತರುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಬಡ ಹಾಗೂ ಮಧ್ಯಮ ವರ್ಗದವರೇ ಹೆಚ್ಚಾಗಿ ಪೊಲೀಸ್ ಇಲಾಖೆ ಸೇರುತ್ತಿದ್ದಾರೆ. ಅಧಿಕಾರ ಸಿಕ್ಕ ಕೂಡಲೇ ತಮ್ಮ ಹಿನ್ನೆಲೆಯನ್ನೇ ಮರೆತು, ಅವರೆಲ್ಲ ಜನರ 'ಭಕ್ಷಕ'ರಾಗುತ್ತಿದ್ದಾರೆ. ಪ್ರಾಮಾಣಿಕ ಪೊಲೀಸರನ್ನೂ ಹೀನಾಯವಾಗಿ ನಡೆಸಿಕೊಂಡು ಸಂಕಷ್ಟಕ್ಕೆ ದೂಡುವವರೂ ಠಾಣೆಯಲ್ಲಿದ್ದಾರೆ. ಠಾಣೆ ವ್ಯವಸ್ಥೆ ಸುಧಾರಣೆಯಾಗಬೇಕಾದರೆ, ಪ್ರಾಮಾಣಿಕ ಅಧಿಕಾರಿಗಳು ಮುಖ್ಯಸ್ಥರಾಗಬೇಕು. ವರ್ಗಾವಣೆ ದಂಧೆಗೆ ಲಗಾಮು ಹಾಕಬೇಕು' ಎಂದೂ ತಿಳಿಸಿದರು.

₹ 6 ಕೋಟಿ ಮೌಲ್ಯದ ಸ್ವತ್ತು ಕಳವು

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿರುವ ಡಿಸಿಸಿ ಬ್ಯಾಂಕ್ ಶಾಖೆಯಲ್ಲಿ ₹ 4.37 ಕೋಟಿ ನಗದು, 1.63 ಕೋಟಿ ಮೌಲ್ಯದ 3 ಕೆ.ಜಿ. 184 ಗ್ರಾಂ. ಚಿನ್ನಾಭರಣವನ್ನು ಶನಿವಾರ ತಡರಾತ್ರಿ ಕಳವು ಮಾಡಲಾಗಿದೆ.

'ನಕಲಿ ಕೀ ಬಳಸಿ ಕಳವು ಮಾಡಲಾಗಿದೆ. ಕಳವಾದ ಸ್ವತ್ತುಗಳ ಮೌಲ್ಯ ಒಟ್ಟು ₹6.01 ಕೋಟಿ ಎಂದು ಅಂದಾಜಿಸಲಾಗಿದೆ' ಎಂದು ಹಿರಿಯ ಶಾಖಾ ವ್ಯವಸ್ಥಾಪಕ ಪ್ರಮೋದ ಯಲಿಗಾರ ದೂರು ನೀಡಿದ್ದಾರೆ.

ಸುದ್ದಿ 2 ನಿಮಿಷ

ಮನೆಗಳಿಗೆ ಪಡಿತರ ವಿತರಣೆ ಪ್ರಸ್ತಾವ ಕೈಬಿಟ್ಟ ಸರ್ಕಾರ

ಹುಕ್ಕೇರಿ (ಬೆಳಗಾವಿ ಜಿಲ್ಲೆ): 'ಮನೆ ಮನೆಗೆ ಪಡಿತರ ವಿತರಣೆ ಪ್ರಸ್ತಾವ ಕೈಬಿಡಲಾಗಿದೆ' ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಉಮೇಶ್ ಕತ್ತಿ ತಿಳಿಸಿದರು.

ತಾಲ್ಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, 'ನೆರೆಯ ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ ಮನೆ ಮನೆಗೆ ಪಡಿತರ ವಿತರಣೆ ಯೋಜನೆ ವಿಫಲವಾಗಿದೆ' ಎಂದರು.

'ಕಿರಿದಾದ ಓಣಿಗಳಲ್ಲಿ ವಾಹನಗಳು ಸಂಚರಿಸಲು ಆಗುವುದಿಲ್ಲ. ಒಂದು ಕಡೆ ವಾಹನ ನಿಲ್ಲಿಸಿ ಪಡಿತರ ತೆಗೆದುಕೊಂಡು ಹೋಗುವಂತೆ ತಿಳಿಸಲಾಗುತ್ತಿದೆ. ಜನರು ನಿಗದಿಪಡಿಸಿದ ಸ್ಥಳಕ್ಕೆ ಹೋಗದ ಕಾರಣ ಹಂಚಿಕೆಯಲ್ಲಿ ತೊಂದರೆ ಆಗುತ್ತಿದೆ ಎನ್ನುವುದು ಅಲ್ಲಿ ಅಧ್ಯಯನ ನಡೆಸಿದ ಇಲಾಖೆಯ ಅಧಿಕಾರಿಗಳ ತಂಡಕ್ಕೆ ತಿಳಿದುಬಂದಿದೆ' ಎಂದು ಹೇಳಿದರು.

'ಪಕ್ಕದ ರಾಜ್ಯಗಳಲ್ಲಿನ ಸ್ಥಿತಿಗತಿ ನೋಡಿ, ನಮ್ಮಲ್ಲಿ ಅಂತಹ ಯೋಜನೆ ಬೇಡ ಎಂಬ ನಿರ್ಧಾರಕ್ಕೆ ಬರಲಾಗಿದೆ. ಈಗಿರುವ ಪದ್ಧತಿಯಲ್ಲಿಯೇ ನ್ಯಾಯಬೆಲೆ ಅಂಗಡಿಗಳ ಮೂಲಕವೇ ಪಡಿತರ ವಿತರಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.

'ಪಿಎಫ್ಐ, ಎಸ್‌ಡಿಪಿಐ ಸಂಘಟನೆಗಳ ಮೇಲೆ ನಿಗಾ'

ಶಿರಸಿ: 'ಶಾಂತಿ ಕದಡುವ ಕೆಲಸಮಾಡುವ ಪಿಎಫ್‌ಐ., ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸುವ ಬದಲು ಅವುಗಳ ಚಟುವಟಿಕೆ ಮೇಲೆ ನಿಗಾ ಇಡುವುದು ಮುಖ್ಯ. ಅದರತ್ತ ಗಮನಹರಿಸಿದ್ದೇವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಭಾನುವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಸಂಘಟನೆಗಳ ನಿಷೇಧ ನಿರ್ಣಯವನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕು. ಈ ಸಂಘಟನೆಗಳ ಚಟುವಟಿಕೆಗಳ ಮಾಹಿತಿಗಳನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗುತ್ತಿದೆ' ಎಂದು ತಿಳಿಸಿದರು.

'ಶಿವಮೊಗ್ಗ, ಆಳಂದ ಘಟನೆ ಹೊರತುಪಡಿಸಿ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಉತ್ತಮವಾಗಿದೆ. ಚುನಾವಣೆ ಸಮೀಪಿಸಿದಾಗ ಸಣ್ಣಪುಟ್ಟ ಘಟನೆಗಳು ರಾಜಕೀಯ ತಿರುವು ಪಡೆಯುವುದು ಸಹಜ. ಎಲ್ಲ ಪಕ್ಷಗಳು ಘಟನೆಗಳ ಲಾಭ ಪಡೆಯಲು ಹವಣಿಸುತ್ತವೆ' ಎಂದರು.

ಕಾಸು ಕೊಟ್ಟರಷ್ಟೇ 'ಪೊಲೀಸ್ ಬಾಸ್'

ಒಂದನೇ ಪುಟದಿಂದ...

ವಸೂಲಿಗೆ ದಾರಿ: 'ದುಷ್ಟರು, ಸಮಾಜ ಘಾತುಕರು ಹಾಗೂ ಅಪರಾಧಿಗಳ ಜೊತೆಗೆ ಪೊಲೀಸರ ಸಂಪರ್ಕ ಹೆಚ್ಚಿರುತ್ತದೆ. ಬಂಧನದಿಂದ ಹಿಡಿದು ನ್ಯಾಯಾಲಯದಲ್ಲಿ ವಿಚಾರಣೆ ಮುಗಿಯುವವರೆಗೂ ಆರೋಪಿಗಳ ನಂಟು ಇರುತ್ತದೆ. ಇಂಥ ಸಂದರ್ಭದಲ್ಲೇ ಪೊಲೀಸರು, ವಸೂಲಿಗೆ ಇಳಿಯುತ್ತಾರೆ. ಇದಕ್ಕೆ ಸಿಸಿಬಿ ಪೊಲೀಸರೂ ಹೊರತಾಗಿಲ್ಲ. ಹಣ ವಸೂಲಿ ಸಂಬಂಧ ಸಿಸಿಬಿ ಹಾಗೂ ಸಿವಿಲ್ ಠಾಣೆ ಪೊಲೀಸರ ನಡುವೆ ಯಾವಾಗಲೂ ತಿಕ್ಕಾಟ ಇದ್ದೇ ಇರುತ್ತದೆ' ಎಂದು ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ಹೇಳಿದರು.

'ಲಂಚ ನೀಡುವವರನ್ನು ಕಾನೂನಿನಿಂದ ಪಾರು ಮಾಡಲು ಪ್ರಯತ್ನಿಸುವ ಕೆಲ ಪೊಲೀಸರು, ನಿಯಮಗಳು ಹಾಗೂ ಸುಪ್ರೀಂಕೋರ್ಟ್ ಆದೇಶವನ್ನೂ ಮೀರಿ ಠಾಣೆಯಲ್ಲೇ ಸಂಧಾನ ನಡೆಸುತ್ತಾರೆ. ಎಫ್‌ಐಆರ್ ಆಗದಂತೆ ನೋಡಿಕೊಂಡು, ತಮ್ಮವರನ್ನು ರಕ್ಷಿಸುತ್ತಾರೆ. ಆಸ್ತಿ, ಕುಟುಂಬ ವ್ಯಾಜ್ಯಗಳಲ್ಲೂ ಇಂಥ ಸಂಧಾನದಿಂದ ಎರಡೂ ಕಡೆಯವರಿಂದಲೂ ಲಕ್ಷಗಟ್ಟಲೇ ಹಣ ವಸೂಲಿ ಮಾಡುವವವರು ಇಲಾಖೆಯಲ್ಲಿದ್ದಾರೆ. ಇಂಥವರಿಂದಲೇ ಪೊಲೀಸರ ಮೇಲಿನ ನಂಬಿಕೆಯನ್ನು ಜನರು ಕಳೆದುಕೊಳ್ಳುತ್ತಿದ್ದಾರೆ' ಎಂದೂ ಬೇಸರಿಸಿದರು.

ಸೇವಾವಧಿಯೂ ಕಾರಣ: 'ಒಂದು ಹುದ್ದೆಯ ಕನಿಷ್ಠ ಸೇವಾವಧಿಯನ್ನು ಎರಡು ವರ್ಷ ಖಾತ್ರಿಗೊಳಿಸಿ, ಪೊಲೀಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ರಾಜಕೀಯ ಹಸ್ತಕ್ಷೇಪ ಮತ್ತು ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವಂತೆ ಸುಪ್ರೀಂ ಕೋರ್ಟ್ ಹೇಳಿತ್ತು. ಅದರ ಜಾರಿಗೆ ಕರ್ನಾಟಕ ಸರ್ಕಾರ ಕಾಯ್ದೆಯನ್ನೂ ತಂದಿತ್ತು. ನಂತರ ಅದನ್ನು ಒಂದು ವರ್ಷಕ್ಕೆ ಇಳಿಸಿತು. ಇದುವೇ ವರ್ಗಾವಣೆ ದಂಧೆಗೆ ಪ್ರಮುಖ ಕಾರಣ' ಎಂದೂ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರು ಹೇಳಿದರು.

'ಒಬ್ಬ ಅಧಿಕಾರಿ ವರ್ಷ ಪೂರೈಸುವುದನ್ನೇ ಕಾಯುವ ಮತ್ತೊಬ್ಬ, ಜನಪ್ರತಿನಿಧಿಗಳ ಹಿಂದೆ ಬಿದ್ದು 'ಮಿನಿಟ್ಸ್' ಖರೀದಿಸುತ್ತಾನೆ. ಇಂಥ ಮಿನಿಟ್ಸ್‌ಗಳ ಆಧಾರದಲ್ಲೇ ವರ್ಗಾವಣೆ ಪಟ್ಟಿ ಸಿದ್ಧಪಡಿಸುವ ಸರ್ಕಾರ, ಅದನ್ನೇ ಅಧಿಕಾರಿಗಳ ವರ್ಗಾವಣೆ ನಿರ್ವಹಿಸುವ ಪೊಲೀಸ್ ಸಿಬ್ಬಂದಿ ಮಂಡಳಿಗೆ ಕಳುಹಿಸುತ್ತದೆ. ಮಂಡಳಿಯ ಹಿರಿಯ ಅಧಿಕಾರಿಗಳು, ಕಣ್ಣುಮುಚ್ಚಿ ಸಹಿಮಾಡಿ ಕಳುಹಿಸುತ್ತಾರೆ. ವರ್ಗಾವಣೆ ಆದೇಶವಾದ ನಂತರ, ಯಾರಾದರೂ ಹೆಚ್ಚು ಹಣ ಕೊಟ್ಟರೆ ಪಟ್ಟಿಯನ್ನೇ ಬದಲಾಯಿಸಲಾಗುತ್ತದೆ.'

'ಒಂದು ವರ್ಷದಲ್ಲಿ ಹೆಚ್ಚು ದುಡಿಯಬೇಕೆಂಬ ಆಸೆಗೆ ಬಿದ್ದು, ಜನಸಾಮಾನ್ಯರ ಸುಲಿಗೆ ಮಾಡುತ್ತಾರೆ. 'ಹಣವಿದ್ದರಷ್ಟೇ ಠಾಣೆ' ಎಂಬ ವಾತಾವರಣ ನಿರ್ಮಿಸಿ ಬಡವರು ಹಾಗೂ ಜನಸಾಮಾನ್ಯರು ಪೊಲೀಸರತ್ತ ಬರದಂತೆ ಮಾಡುತ್ತಾರೆ. ಠಾಣೆ ವ್ಯಾಪ್ತಿಯಲ್ಲಿ ತಮ್ಮದೇ ತಂಡ ಕಟ್ಟಿಕೊಂಡು, ಅವರ ಮೂಲಕವೂ ವಸೂಲಿ ಮಾಡಿಸುತ್ತಾರೆ' ಎಂದರು.

'ಜಾತಿ, ಹಣ ಬಲದಿಂದಲೇ ಶೇ 99ರಷ್ಟು ವರ್ಗಾವಣೆ'

'ಸರ್ಕಾರಗಳೇ ವರ್ಗಾವಣೆಗೆ ಇಂತಿಷ್ಟು ಹಣ ನಿಗದಿ ಮಾಡಿದೆ. ಜಾತಿ ಪ್ರಭಾವ ಹಾಗೂ ಹಣದಿಂದಲೇ ಪೊಲೀಸ್ ಇಲಾಖೆ ಶೇ 99ರಷ್ಟು ವರ್ಗಾವಣೆ ನಡೆಯುತ್ತಿದೆ' ಎಂದು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ನನ್ನ ಪರಿಚಯಸ್ಥ ಡಿವೈಎಸ್ಪಿಯೊಬ್ಬರು, ₹ 1.20 ಕೋಟಿ ಕೊಟ್ಟು ವರ್ಗಾವಣೆ ಮಾಡಿಸಿಕೊಂಡಿದ್ದಾರೆ. ಅವರೀಗ, ಅದರ ವಸೂಲಿಗೆ ಅಕ್ರಮಗಳ ಜೊತೆ ಕೈ ಜೋಡಿಸುತ್ತಿದ್ದಾರೆ. ಕೆಳ ಹಂತದ ಸಿಬ್ಬಂದಿಯಿಂದಲೂ ಮಾಮೂಲಿಗೆ ಬೇಡಿಕೆ ಇರಿಸುತ್ತಿದ್ದಾರೆ. ಈ ರೀತಿಯಾದರೆ, ವ್ಯವಸ್ಥೆ ಸುಧಾರಣೆ ಹೇಗೆ' ಎಂದೂ ಅವರು ತಿಳಿಸಿದರು.

'ಕರ್ತವ್ಯಲೋಪ ಹಾಗೂ ಇತರೆ ಕಾರಣ ನೀಡಿ ಕೆಲ ಪೊಲೀಸರನ್ನು ಅಮಾನತು ಮಾಡಲಾಗುತ್ತದೆ. ವಿಚಾರಣೆ ನೆಪದಲ್ಲಿ ಹಣ ವಸೂಲಿಯೂ ಇರುತ್ತದೆ. ಅಮಾನತು ಪ್ರಕರಣಗಳನ್ನು ಜನ ಹೆಚ್ಚು ನೆನಪಿಟ್ಟುಕೊಳ್ಳುವುದಿಲ್ಲ. ತಪ್ಪು ಮಾಡಿದ ಪೊಲೀಸ್, ಹಣ ಕೊಟ್ಟು ಮತ್ತೆ ಒಳ್ಳೆಯ ಹುದ್ದೆಯನ್ನೇ ಗಿಟ್ಟಿಸಿಕೊಂಡಿರುತ್ತಾನೆ' ಎಂದೂ ಹೇಳಿದರು.

'ಗುರಿ ತಲುಪಲು ಸಂಚಾರ ಪೊಲೀಸರ ವಸೂಲಿ'

'ಸಿವಿಲ್ ಠಾಣೆಗಳ ಹುದ್ದೆಗಳಿಗೆ ಹೆಚ್ಚಿನ ಬೇಡಿಕೆ ಇದೆ. ಸಂಚಾರ ಠಾಣೆಗಳಲ್ಲಿ ಕೆಲಸ ಮಾಡಲು ಹೆಚ್ಚಾಗಿ ಯಾರೂ ಇಷ್ಟಪಡುವುದಿಲ್ಲ. ಆದರೆ, ಇಲ್ಲಿಯೂ ಸಂಚಾರ ಪೊಲೀಸರಿಗೆ ಗುರಿ ನಿಗದಿ ಮಾಡಿ ದಂಡ ವಸೂಲಿ ಮಾಡಿಸುವ ಅಧಿಕಾರಿಗಳಿದ್ದಾರೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದರು.

'ಪ್ರತಿಯೊಂದು ಠಾಣೆ ವ್ಯಾಪ್ತಿಯಲ್ಲೂ ಪಿಎಸ್‌ಐ, ಎಎಸ್‌ಐ ನೇತೃತ್ವದಲ್ಲಿ ದಂಡ ವಸೂಲಿ ಕಾರ್ಯಾಚರಣೆ ನಡೆಯುತ್ತದೆ. ಬಹುತೇಕ ಸವಾರರು, ಇದ್ದಷ್ಟು ಹಣವನ್ನು ಕೊಟ್ಟು ಮುಂದೆ ಸಾಗುತ್ತಾರೆ. ಅದೇ ಹಣ ಕೈ ಕೈ ಬದಲಿಸಿ ಆಯಕಟ್ಟಿನ ಸ್ಥಳದ ಅಧಿಕಾರಿಗೂ ತಲುಪುತ್ತವೆ. ಇತ್ತೀಚೆಗೆ ದಂಡ ಹೆಚ್ಚಳ ಮಾಡಿರುವುದು ಅಕ್ರಮ ವಸೂಲಿಗೆ ದಾರಿಯಾಗಿದೆ' ಎಂದೂ ದೂರಿದರು.

'ಬಡ್ಡಿಗೆ ಹಣ ತಂದು ವರ್ಗಾವಣೆ'

'ವರ್ಗಾವಣೆ ದಂಧೆ ಮೂಲಕ ಆಯಕಟ್ಟಿನ ಹುದ್ದೆ ಏರುತ್ತಿರುವ ಬಹುತೇಕ ಪೊಲೀಸರು, ಬಡ್ಡಿಗೆ ಸಾಲ ತಂದು ಲಂಚ ಕೊಡುತ್ತಿದ್ದಾರೆ. ಬೆಂಗಳೂರಿನ ಠಾಣೆಯೊಂದರ ಇನ್‌ಸ್ಪೆಕ್ಟರ್, ತನ್ನ ಬಳಿ ಇದ್ದ ₹ 25 ಲಕ್ಷ ಹಾಗೂ ₹ 65 ಲಕ್ಷ ಬಡ್ಡಿಗೆ ಸಾಲ ತಂದು ಒಟ್ಟು ₹ 90 ಲಕ್ಷ ಕೊಟ್ಟಿದ್ದಾರೆ' ಎಂದೂ ಪೊಲೀಸ್ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

'ಸಾಲ ತೀರಿಸುವ ಜವಾಬ್ದಾರಿ ಇನ್‌ಸ್ಪೆಕ್ಟರ್ ಮೇಲಿದೆ. ಅವರ ಠಾಣೆ ವ್ಯಾಪ್ತಿಯಲ್ಲಿ ಉತ್ತಮ 'ಮಾಮೂಲಿ'ಯೂ ಬರುತ್ತದೆ. ಹೀಗಾಗಿ, ಅವರು ನಿತ್ಯವೂ ಲಕ್ಷಗಟ್ಟಲೇ ಹಣ ವಸೂಲಿ ಮಾಡುತ್ತಿದ್ದಾರೆ. ಕೆಲವರಿಗೆ ಕೊಟ್ಟು, ಉಳಿದಿದ್ದನ್ನು ತಾವಿಟ್ಟುಕೊಂಡು ಸಾಲ ತೀರಿಸುತ್ತಿದ್ದಾರೆ' ಎಂದೂ ತಿಳಿಸಿದರು.

ಟಗರು ಬಂತು ಟಗರು...

ದಾವಣಗೆರೆಯ ಐತಿಹಾಸಿಕ ಶ್ರೀ ಚೌಡೇಶ್ವರಿ ದೇವಿ ಜಾತ್ರೆ ಅಂಗವಾಗಿ ಅರುಣ ಚಿತ್ರಮಂದಿರದ ಮುಂಭಾಗದ ಮೈದಾನದಲ್ಲಿ ಭಾನುವಾರ ಚೌಡೇಶ್ವರಿ ದೇವಿ ದೇವಸ್ಥಾನ ಸಮಿತಿಯು ಆಯೋಜಿಸಿದ್ದ ಟಗರು ಕಾಳಗದ ನೋಟ

–ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಹೈಟೆಕ್ ಪ್ಲಾನೆಟೋರಿಯಂಗೆ ಶಂಕುಸ್ಥಾಪನೆ

ಕಾಸ್ಮೋಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (ಕಾಸ್ಮಾಸ್) ಹಾಗೂ ದೇಶದ ಮೊದಲ ಹೈಟೆಕ್ ಪ್ಲಾನೆಟೋರಿಯಂಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಶಂಕುಸ್ಥಾಪನೆ ನೆರವೇರಿಸಿದರು. ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಪ್ರೊ.ಕೆ.ವಿಜಯರಾಘವನ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಸಂಸದ ಪ್ರತಾಪಸಿಂಹ, ಅಣುಶಕ್ತಿ ವಿಭಾಗದ ಕಾರ್ಯದರ್ಶಿ ಕೆ.ಎನ್.ವ್ಯಾಸ, ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್, ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆ ನಿರ್ದೇಶಕಿ ಪ್ರೊ.ಅನ್ನಪೂರ್ಣಿ ಸುಬ್ರಹ್ಮಣ್ಯಂ, ಕುಲಸಚಿವ ಪ್ರೊ.ಆರ್.ಶಿವಪ್ಪ ಇದ್ದಾರೆ

ಮೈಸೂರು: ಭಾರತೀಯ ಖಗೋಳ ಭೌತ ವಿಜ್ಞಾನ ಸಂಸ್ಥೆಯ ಕಾಸ್ಮೋಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ (ಕಾಸ್ಮಾಸ್) ಹಾಗೂ ದೇಶದ ಮೊದಲ ಹೈಟೆಕ್ ಪ್ಲಾನೆಟೋರಿಯಂಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರು ವಿಶ್ವವಿದ್ಯಾಲಯವು ಮೂರು ಎಕರೆ ಭೂಮಿಯನ್ನು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಗೆ ನೀಡಿದೆ. ವಿ.ವಿ ಸಹಯೋಗದಲ್ಲಿ ಸಂಸ್ಥೆ ಸ್ಥಾಪಿಸುತ್ತಿರುವ ಮೊದಲ ಪ್ಲಾನೆಟೋರಿಯಂ ಎಂಬ ಶ್ರೇಯಕ್ಕೂ ಇದು ಪಾತ್ರವಾಗಿದೆ. ದೇಶದ 41ನೇ ಪ್ಲಾನೆಟೋರಿಯಂ ಇದಾಗಲಿದೆ. ಈ ಹೈಟೆಕ್ ಪ್ಲಾನೆಟೋರಿಯಂ ಅನ್ನು ₹ 81 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

ಶಂಕುಸ್ಥಾಪನೆ ನೆರವೇರಿಸಿದ ನಿರ್ಮಲಾ ಸೀತಾರಾಮನ್ ಅವರು, ದತ್ತಾಂಶಗಳ ಸಂಗ್ರಹಣೆಯಷ್ಟೇ ಅದರ ಬಳಕೆಯೂ ಮುಖ್ಯ ಎಂದರು.

'ವಿಜ್ಞಾನದ ಕ್ಷೇತ್ರದಲ್ಲಿ ಸಾಕಷ್ಟು ದತ್ತಾಂಶ ಸಂಗ್ರಹಿಸಲಾಗುತ್ತಿದೆ. ಆದರೆ, ಅವುಗಳನ್ನು ದೇಶ, ಮನುಕುಲದ ಒಳಿತಿಗೆ ಬಳಸುವ ವಿಧಾನ ಕಂಡುಹಿಡಿಯುವಲ್ಲಿ ಹಿಂದೆ ಬೀಳುತ್ತಿದ್ದೇವೆ. ದತ್ತಾಂಶಗಳನ್ನು ಸಮರ್ಪಕವಾಗಿ ವಿಶ್ಲೇಷಿಸಿ ಬಳಕೆ ಮಾಡಬೇಕಿದೆ' ಎಂದು ಹೇಳಿದರು.

'ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು ಸಾಕಷ್ಟು ತೊಡಗಿಸಿಕೊಳ್ಳಬೇಕು' ಎಂದರು.

'ಜಿಎಸ್‌ಟಿ ಪಾಲು ಕಡಿಮೆ ಏಕೆ'

ಮೈಸೂರು: 'ರಾಜ್ಯಕ್ಕೆ ನೀಡುತ್ತಿರುವ ಜಿಎಸ್‌ಟಿ ಪಾಲನ್ನು ಕಡಿಮೆ ಮಾಡಿರುವುದೇಕೆ' ಎಂದು ವಿದ್ಯಾರ್ಥಿಯೊಬ್ಬರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಪ್ರಶ್ನಿಸಿದರು.

ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವೆ, 'ಒಂದು ಸಣ್ಣ ರಾಜ್ಯದಿಂದ ಕಡಿಮೆ ಜಿಎಸ್‌ಟಿ ಸಂಗ್ರಹವಾಗುತ್ತಿದೆ ಎಂದು ಅದನ್ನು ನಿರ್ಲಕ್ಷಿಸಲಾಗದು. ಒಕ್ಕೂಟ ವ್ಯವಸ್ಥೆಯಲ್ಲಿ ಅಭಿವೃದ್ಧಿ ವಿಚಾರದಲ್ಲಿ ಎಲ್ಲ ರಾಜ್ಯಗಳನ್ನೂ ಸಮಾನವಾಗಿ ಕೇಂದ್ರ ಕಾಣಬೇಕಿದೆ. ಈ ನಿಟ್ಟಿನಲ್ಲಿ ನೀನು ಇನ್ನಷ್ಟು ಅಭ್ಯಸಿಸಬೇಕಿದೆ. ನಂತರ, ಇದು ಅರ್ಥವಾಗಲಿದೆ' ಎಂದರು.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಹೈಟೆಕ್ ಪ್ಲಾನೆಟೋರಿಯಂಗೆ ಶಂಕುಸ್ಥಾಪನೆ ನೆರವೇರಿಸಿದ ಕಾರ್ಯಕ್ರಮ ಇದಕ್ಕೆ ಸಾಕ್ಷಿಯಾಯಿತು. ಸಚಿವೆ ನಿರ್ಗಮಿಸುವ ವೇಳೆ ವಿದ್ಯಾರ್ಥಿಗಳು ಮುಗಿಬಿದ್ದು ಸೆಲ್ಫಿ ತೆಗೆದುಕೊಂಡರು.

ದಾವಣಗೆರೆ ಜಿಲ್ಲೆ ಬಸವಾಪಟ್ಟಣದ ಗುತ್ತಿಗೆದಾರ ಸನಾವುಲ್ಲಾ ಅವರ ಪುತ್ರಿ ನಫೀಸಾ ಅಂಜುಂ ಅವರ ವಿವಾಹ ಕಮ್ಮಾರಗಟ್ಟೆ ಗ್ರಾಮದ ಗೌಸ್‌ಪೀರ್ ಅವರೊಂದಿಗೆ ಭಾನುವಾರ ವೀರಶೈವ ಜಂಗಮರಾದ ಕೆ.ಎಂ.ವೀರಯ್ಯ ಅವರ ಮನೆಯಲ್ಲಿ ನಡೆಯಿತು. ರೈತ ಮುಖಂಡ ತೇಜಸ್ವಿ ಪಟೇಲ್, ಬಿಜೆಪಿ ಮುಖಂಡರಾದ ಬಿ.ಎಂ. ವಾಗೀಶಸ್ವಾಮಿ, ಬಿ.ಜಿ.ಸಚಿನ್ ಸೇರಿ ನೂರಾರು ಹಿಂದೂ–ಮುಸ್ಲಿಮರು ಪಾಲ್ಗೊಂಡು ವಧು–ವರರಿಗೆ ಆಶೀರ್ವದಿಸಿದರು. ಕೋಮು ಸೌಹಾರ್ದಕ್ಕಾಗಿಯೇ ವಿವಾಹವನ್ನು ಸನಾವುಲ್ಲಾ ಅವರು ಹಿಂದೂ ಸ್ನೇಹಿತರ ಮನೆಯಲ್ಲಿ ನೆರವೇರಿಸಿದರು

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
3ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ,
ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01.
ಸಂ: ಮಾಹಆ 26 ಆಡಳಿತ 2022 ದಿನಾಂಕ: 23.02.2022

ಸಂಕ್ಷಿಪ್ತ ಅಧಿಸೂಚನೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಂಜೂರಾದ ವಿಲೇಖನಾಧಿಕಾರಿ 01 ಹುದ್ದೆಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಪ್ರಥಮತಃ 06 ತಿಂಗಳ ಅವಧಿಗೆ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯೋಗದ ವೆಬ್‌ಸೈಟ್ **www.kshrc.karnataka.gov.in** ನಲ್ಲಿ ಅಧಿಸೂಚನೆ ಹಾಗೂ ಅರ್ಜಿ ಪ್ರಪತ್ರದ ವಿವರಗಳನ್ನು ಪ್ರಕಟಿಸಲಾಗಿದೆ. ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ: **21.03.2022.**

ವಾಸಾಸಂಇ/ಉನಿ.ನ/3606/ಎಂಸಿಎ/2021–22 ಸಹಿ/– ಕಾರ್ಯದರ್ಶಿ

ನೀರಾವರಿ ಯೋಜನೆ: ರಾಜಿ ಇಲ್ಲ • ಕಳಸಾ ಬಂಡೂರಿ ಕಾಮಗಾರಿ ಶೀಘ್ರ : ಬೊಮ್ಮಾಯಿ

ಮೇಕೆದಾಟು: ಕಾಂಗ್ರೆಸ್ ಒತ್ತಡಕ್ಕೆ ಮಣಿದಿಲ್ಲ

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಹುಬ್ಬಳ್ಳಿ: 'ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ಕುಡಿಯುವ ನೀರು ಹಾಗೂ ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ಈ ವಿಚಾರದಲ್ಲಿ ಯಾವುದೇ ರಾಜಿಯಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮೇಕೆದಾಟು ಯೋಜನೆಯ ಕಾಮಗಾರಿ ತ್ವರಿತವಾಗಿ ಆರಂಭಿಸಲು ಬಜೆಟ್‌ನಲ್ಲಿ ಅನುದಾನ ನೀಡಿದ್ದು, ಈ ಸಂಬಂಧ ಕಾಂಗ್ರೆಸ್ ಪಾದಯಾತ್ರೆಯ ಒತ್ತಡಕ್ಕೆ ಮಣಿದಿಲ್ಲ' ಎಂದರು..

'ಮೇಕೆದಾಟು ಯೋಜನೆ ಇವತ್ತಿನದಲ್ಲ. ಕರ್ನಾಟಕ ವಿದ್ಯುತ್ ನಿಗಮವು 1996ರಲ್ಲಿ ಯೋಜನೆಯ ಡಿಪಿಆರ್ ಸಿದ್ಧಪಡಿಸಲು ಮುಂದಾಗಿತ್ತು. ಆದರೆ, ಐದು ವರ್ಷಗಳಾದರೂ ಸಿದ್ಧಗೊಂಡಿರಲಿಲ್ಲ. ನಂತರ ಸಿದ್ಧಗೊಂಡಿದ್ದ ಡಿಪಿಆರ್ ಬದಲಿಸುವಂತೆ 2012ರಲ್ಲಿ ನಾನು ಜಲ ಸಂಪನ್ಮೂಲ ಸಚಿವನಾಗಿದ್ದಾಗ ಸೂಚಿಸಿದ್ದೆ. ಇದೀಗ ಅಂತಿಮ ಹಂತಕ್ಕೆ ಬಂದಿದೆ' ಎಂದರು.

'ಯಾವುದೇ ನದಿ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಲು ನಿಗದಿತ ಮಾನದಂಡಗಳಿವೆ. ಕೃಷ್ಣಾ ನದಿ ಯೋಜನೆಯನ್ನು ಆ ಮಾನದಂಡಗಳಡಿ ತರಲು ಅಗತ್ಯವಿರುವ ತಾಂತ್ರಿಕ ಕಾರ್ಯಗಳನ್ನು ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಬಳಿಕ, ರಾಷ್ಟ್ರೀಯ ಯೋಜನೆಯ ಮಾನ್ಯತೆ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದರು.

ಅಂತಿಮ ಹಂತದಲ್ಲಿ: 'ಕಳಸಾ ಬಂಡೂರಿ ಯೋಜನೆಗೆ ಅರಣ್ಯ ಇಲಾಖೆಯ ನಿರಾಪೇಕ್ಷಣ ಪತ್ರ ಸಿಗಬೇಕಿದ್ದು, ಅಂತಿಮ ಹಂತದಲ್ಲಿದೆ. ಈ ಬಗ್ಗೆ ಈಗಾಗಲೇ ಕೇಂದ್ರ ಜಲಶಕ್ತಿ ಸಚಿವರೊಂದಿಗೆ ಚರ್ಚಿಸಿದ್ದು, ಅಧಿವೇಶನದ ನಂತರ ಮತ್ತೆ ಭೇಟಿ ಮಾಡುವೆ' ಎಂದರು.

'ನಮ್ಮ ಪಾಲಿನ 12 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಯಾವುದೇ ಅಡ್ಡಿ ಇಲ್ಲ. ಒಟ್ಟಾರೆ ನೀರು ಹಂಚಿಕೆ ಬಗ್ಗೆ ಸುಪ್ರೀಂ ಕೋರ್ಟ್‌ನಿಂದ ತೀರ್ಪು ಬರಬೇಕಿದೆ. ತೀರ್ಪನ್ನು ರಾಜ್ಯ ಸೇರಿದಂತೆ ಮಹಾರಾಷ್ಟ್ರ ಮತ್ತು ಗೋವಾ ಒಪ್ಪಿಕೊಳ್ಳಬೇಕಾಗುತ್ತದೆ' ಎಂದರು.

'ಉತ್ತರ ಕರ್ನಾಟಕ ಭಾಗದಲ್ಲಿ ತಯಾರಾಗುವ ಕೈಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಲು ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ ನಿರ್ಮಾಣ ಅಗತ್ಯವಾಗಿದೆ. ಪರಿಸರದ ಸವಾಲುಗಳನ್ನು ಇದೇ ವರ್ಷದಲ್ಲಿ ಪರಿಹರಿಸಿಕೊಂಡು ಕಾಮಗಾರಿ ಆರಂಭಿಸಲು ಪ್ರಯತ್ನಿಸಲಾಗುವುದು' ಎಂದು ಭರವಸೆ ನೀಡಿದರು.

'ಕೇಂದ್ರ ಸರ್ಕಾರ ನುಣುಚಿಕೊಳ್ಳುತ್ತಿದೆ'

ಬೆಂಗಳೂರು: ಮೇಕೆದಾಟು ಯೋಜನೆಗೆ ಅನುಮತಿ ನೀಡಬೇಕಾದ ಕೇಂದ್ರ ಸರ್ಕಾರವೇ, ಅದನ್ನು ವಿವಾದವಾಗಿ ಬಿಂಬಿಸುವ ಮೂಲಕ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ಕೇಂದ್ರ ಜಲ ಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮೇಕೆದಾಟು ಯೋಜನೆ ಕುರಿತಂತೆ ಶನಿವಾರ ನೀಡಿದ್ದ ಹೇಳಿಕೆಗೆ ಭಾನುವಾರ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, 'ಕೇಂದ್ರ ಸಚಿವರೇ 'ವಿವಾದ' ಎನ್ನುವ ಮೂಲಕ ನಮ್ಮ ಕುಡಿಯುವ ನೀರಿನ ಯೋಜನೆಗೆ ಬಿಕ್ಕಟ್ಟಿನ ಲೇಪನ ಹಚ್ಚಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ವಾಸ್ತವ ಏನು ಎಂಬುದನ್ನು ನಾನು ಬಹಳ ಹಿಂದೆಯೇ ಹೇಳಿದ್ದೆ. ಮೇಕೆದಾಟು ಯೋಜನೆಯ ಪ್ರಸ್ತಾವ ಈಗ ಕೇಂದ್ರ ಸರ್ಕಾರದ ಅಧೀನದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಮುಂದೆ ಕೊಳೆಯುತ್ತಿದೆ. ಅದಕ್ಕೆ ಒಪ್ಪಿಗೆ ನೀಡದೇ ಬಿಟ್ಟು, ಕರ್ನಾಟಕ ಮತ್ತು ತಮಿಳುನಾಡು ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದಿದ್ದಾರೆ. ಹಾಗಾದರೆ, ಯೋಜನೆಗೆ ಒಪ್ಪಿಗೆ ನೀಡುವ ವಿಚಾರದಲ್ಲಿ ಕೇಂದ್ರ ಸರ್ಕಾರದ ಪಾತ್ರವೇ ಇಲ್ಲವೆ' ಎಂದು ಪ್ರಶ್ನಿಸಿದ್ದಾರೆ.

'ಮೇಕೆದಾಟು ಯೋಜನೆಗೆ ₹ 1,000 ಕೋಟಿ ಅನುದಾನ ನೀಡಿರುವುದಾಗಿ ಬಿಜೆಪಿ ಬೀಗುತ್ತಿದೆ. ನಮ್ಮ ಪಾದಯಾತ್ರೆಯಿಂದಲೇ ಅನುದಾನ ದೊರಕಿದೆ ಎಂದು ಕಾಂಗ್ರೆಸ್‌ನವರು ಕುಣಿಯುತ್ತಿದ್ದಾರೆ. ಇಬ್ಬರೂ ಈಗ ಕೇಂದ್ರ ಸಚಿವರ ಹೇಳಿಕೆ ಕುರಿತು ಏನು ಪ್ರತಿಕ್ರಿಯೆ ನೀಡುತ್ತಾರೆ' ಎಂದು ಕೇಳಿದ್ದಾರೆ. ಕೇಂದ್ರ ಸಚಿವರ ಹೇಳಿಕೆಯು ಮೇಕೆದಾಟು ವಿಚಾರದಲ್ಲಿ ಬಿಜೆಪಿಯ ನಿಲುವಿನ ಕುರಿತು ಸಂಶಯ ಮೂಡಿಸಿದೆ. ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಡಿಎಂಕೆಯ ಮಿತ್ರ ಪಕ್ಷವಾಗಿರುವ ಕಾಂಗ್ರೆಸ್ ಕೂಡ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು. ಅವರು ತಮಿಳುನಾಡು ಸರ್ಕಾರವನ್ನು ಒಪ್ಪಿಸಬೇಕು ಎಂದು ಒತ್ತಾಯಿಸಿದರು.

'ಯಾರ ಮಧ್ಯಸ್ಥಿಕೆಯ ಅಗತ್ಯವಿಲ್ಲ'

ರಾಮನಗರ: 'ಮೇಕೆದಾಟು ವಿಚಾರದಲ್ಲಿ ಯಾರ ಮಧ್ಯಸ್ಥಿಕೆ ಅವಶ್ಯಕತೆ ಇಲ್ಲ. ಕೇಂದ್ರ ಸರ್ಕಾರ ಕೂಡಲೇ ಯೋಜನೆಗೆ ಅನುಮತಿ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒತ್ತಾಯಿಸಿದ್ದಾರೆ.

'ಮೇಕೆದಾಟು ವಿಚಾರದಲ್ಲಿ ನಾವೇನು ಮಾಡುವ ಹಾಗಿಲ್ಲ. ಮಾತುಕತೆ ಮೂಲಕವೇ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂಬ ಕೇಂದ್ರ ಜಲಸಂಪನ್ಮೂಲ ಸಚಿವರ ಹೇಳಿಕೆ ಖಂಡನೀಯ. ಕುಡಿಯುವ ನೀರಿನ ಯೋಜನೆಗೆ ಯಾರ ಅನುಮತಿ ಬೇಕಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ತಮಿಳುನಾಡಿನವರು ಈ ಬಗ್ಗೆ ರಾಜಕೀಯ ಮಾಡುತ್ತಲೇ ಬಂದಿದ್ದಾರೆ. ಅವರು ಇದಕ್ಕೆ ಒಪ್ಪುವುದೂ ಇಲ್ಲ' ಎಂದರು.

ಕನಕಪುರದಲ್ಲಿ ಭಾನುವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕೇಂದ್ರ ಸಚಿವರು ಹೀಗೆ ಮಾತನಾಡುವಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮೌನವಾಗಿ ಸಮ್ಮತಿಸಿರುವುದು ಸರಿಯಲ್ಲ. ಇದು ರಾಜ್ಯಕ್ಕೆ ಆಗಿರುವ ಅವಮಾನ. ಅವರು ಕೇಂದ್ರದಿಂದ ಎನ್ ಒಸಿ ಪಡೆಯಬೇಕು ಎಲ್ಲವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಸಂಸದ ಡಿ.ಕೆ.ಸುರೇಶ್ ಮಾತನಾಡಿ, 'ಚರ್ಚೆ ಮಾಡುವುದಿದ್ದರೆ ನಾವ್ಯಾಕೆ ಕೇಂದ್ರದ ಬಳಿ ಹೋಗಬೇಕಿತ್ತು. ತಮಿಳುನಾಡು ಬಳಿ ಮಾತನಾಡುವ ಅಗತ್ಯ ಇಲ್ಲ. ಈ ವಿಚಾರದಲ್ಲಿ ಅನವಶ್ಯಕವಾಗಿ ಗೊಂದಲ ಸೃಷ್ಟಿಸಬಾರದು' ಎಂದರು.

ಕೇಂದ್ರ, ರಾಜ್ಯ ಸರ್ಕಾರಗಳು ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿವೆ. ನೀರಾವರಿ ಸಚಿವರು ಕೂಡಲೇ ಕಾವೇರಿ ನೀರಾವರಿ ಸಮಿತಿ ಸಭೆ ಕರೆದು ಅನುಮೋದನೆ ನೀಡಬೇಕು ಎಂದು ಅವರು ಆಗ್ರಹಿಸಿದರು.

'ಪಂಚಮಸಾಲಿ ಮೀಸಲಾತಿ: ಅವಸರ ಪಟ್ಟರೆ ಸಂಕಷ್ಟ'

ಪ್ರಜಾವಾಣಿ ವಾರ್ತೆ

ವಚನಾನಂದ ಸ್ವಾಮೀಜಿ

ಹರಿಹರ: 'ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿರುವ ಪಂಚಮಸಾಲಿ ಸಮುದಾಯದವರಿಗೆ ನ್ಯಾಯಯುತವಾಗಿ 2ಎ ಮೀಸಲಾತಿ ದೊರೆಯಬೇಕು. ಆದರೆ ಮೀಸಲಾತಿ ದೊರಕಿಸಲು ಅವಸರ ಪಟ್ಟರೆ ಸಂಕಷ್ಟ ಎದುರಾಗಬಹುದು' ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ ವಚನಾನಂದ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹನಗವಾಡಿ ಸಮೀಪದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಭಾನುವಾರ ನಡೆದ ರಾಜ್ಯ ಪಂಚಮಸಾಲಿ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

'ಸಮಾಜಕ್ಕೆ 2ಎ ಮೀಸಲಾತಿಗಾಗಿ ಎಲ್ಲ ರೀತಿಯ ಹೋರಾಟಕ್ಕೆ ಸಿದ್ಧವಾಗಿದ್ದೇವೆ. ಈ ದಿಸೆಯಲ್ಲಿ ಹಿಂದುಳಿದ ಆಯೋಗದ ಮುಂದೆ ನಮ್ಮ ವಾದ ಮಂಡನೆ ಮಾಡುತ್ತಿದ್ದೇವೆ. ಹೋರಾಟದಿಂದ ಹಿಂದೆ ಬಿದ್ದಿಲ್ಲ. ಆದರೆ ಹಾದಿ, ಬೀದಿ ಹೋರಾಟ ಮಾಡಿ ಅವಸರದಲ್ಲಿ ಮೀಸಲಾತಿ ಪಡೆದರೆ ಸಂಕಷ್ಟ ಎದುರಾಗಬಹುದು. ಮಹಾರಾಷ್ಟ್ರದಲ್ಲಿ ಮರಾಠಿ ಜನಾಂಗದವರಿಗೆ ಮೀಸಲಾತಿ ಘೋಷಿಸಿದರೂ ಲಾಭ ದೊರೆಯದಂತಾಗಿದೆ. ಅಂತಹ ಸ್ಥಿತಿ ನಮಗೂ ಎದುರಾಗಬಾರದು ಎಂದು ಸಂಯಮದಿಂದ ಹೆಜ್ಜೆ ಇಡುತ್ತಿದ್ದೇವೆ' ಎಂದು ಹೇಳಿದರು.

'ನಾವು ವಿಐಪಿ ಸ್ವಾಮೀಜಿಯೇ. ಇದರಲ್ಲಿ ತಪ್ಪೇನಿದೆ? ವಿಐಪಿ ಎಂದರೆ ವೆರಿ ಇಂಪಾರ್ಟೆಂಟ್ ಪಂಚಮಸಾಲಿ ಸ್ವಾಮೀಜಿ' ಎಂದು ಹೇಳುವ ಮೂಲಕ ತಮ್ಮನ್ನು ವಿಐಪಿ, ಹೈಫೈ ಸ್ವಾಮೀಜಿ ಎನ್ನುವವರಿಗೆ ವಚನಾನಂದ ಸ್ವಾಮೀಜಿ ತಿರುಗೇಟು ನೀಡಿದರು.

ಏ.20ರಿಂದ 24ರವರೆಗೆ ಹರ ಜಾತ್ರೆ: ಏ.20ರಿಂದ 24ರವರೆಗೆ ಹರಜಾತ್ರೆ ಮಹೋತ್ಸವ ಆಚರಿಸಲಾಗುವುದು. ಈ ಬಾರಿ ಉದ್ಯೋಗ ಮೇಳ ನಡೆಸಲಿದ್ದು, 100 ಖಾಸಗಿ ಕಂಪನಿಗಳು ಭಾಗವಹಿಸಲು ಒಪ್ಪಿಗೆ ಸೂಚಿಸಿವೆ ಎಂದು ಸ್ವಾಮೀಜಿ ಹೇಳಿದರು.

ಎರಡು ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶಾವಕಾಶ

'ಮೂಲ ವಿಜ್ಞಾನ'ದಲ್ಲಿ ಇಂಟಿಗ್ರೇಟೆಡ್ ಎಂಎಸ್‌ಸಿ

ದೇಶದ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಾದ 'ನೈಸರ್ (NIESR) ಮತ್ತು ಸೈಬ್ಸ್(CEBS)' ಸಂಸ್ಥೆಗಳು ಮೂಲ ವಿಜ್ಞಾನ ವಿಷಯದಲ್ಲಿ ಇಂಟಿಗ್ರೇಟೆಡ್ ಎಂ.ಎಸ್ಸಿ ಪದವಿ ಕಲಿಯಲು ಅವಕಾಶ ಕಲ್ಪಿಸಿವೆ. ಪದವಿ ಪ್ರವೇಶ ಪ್ರಕ್ರಿಯೆ ಕುರಿತ ವಿವರ ಇಲ್ಲಿದೆ.

ಶ್ರುತಿ ಬಿ. ರಾಜ್

ಕೇಂದ್ರ ಸರ್ಕಾರ ಮೂಲ ವಿಜ್ಞಾನದಲ್ಲಿ ಅತ್ಯುತ್ತಮ ಸಂಶೋಧಕ ಸಮೂಹ ನಿರ್ಮಾಣಕ್ಕಾಗಿ 2007ರಲ್ಲಿ ಎರಡು ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿತು. ಅವುಗಳೆಂದರೆ, ಒಡಿಶಾದ ಭುವನೇಶ್ವರದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ರಿಸರ್ಚ್ (NISER) ಮತ್ತು ಮುಂಬೈನಲ್ಲಿರುವ ಆಟೊಮಿಕ್ ಎನರ್ಜಿ ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಬೇಸಿಕ್ ಸೈನ್ಸ್ (CEBS).

ಈ ಸಂಸ್ಥೆಗಳಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತ ವಿಷಯಗಳೊಂದಿಗೆ ಐದು ವರ್ಷಗಳ ಅವಧಿಯಲ್ಲಿ ಸಂಯೋಜಿತ (ಇಂಟಿಗ್ರೇಟೆಡ್) ಎಂಎಸ್‌ಸಿ ಪದವಿ ಕಲಿಯಲು ಅವಕಾಶವಿದೆ. ಈ ಶಿಕ್ಷಣ ಸಂಸ್ಥೆಗಳು ಪ್ರಸಕ್ತ ಸಾಲಿನ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಅರ್ಜಿ ಸಲ್ಲಿಕೆಗೆ ಮೇ 18 ಕೊನೆಯ ದಿನವಾಗಿದೆ.

ಶೈಕ್ಷಣಿಕ ಅರ್ಹತೆ

2020-21ನೇ ಸಾಲಿನಲ್ಲಿ ದ್ವಿತೀಯ ಪಿಯುಸಿ ಪೂರ್ಣಗೊಳಿಸಿದ ಹಾಗೂ ಪ್ರಸಕ್ತ (2021-22) ಸಾಲಿನಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

ಸಾಮಾನ್ಯ ವರ್ಗದ ಅಭ್ಯರ್ಥಿಗಳು ದ್ವಿತೀಯ ಪಿಯುಸಿ ಮುಖ್ಯ ಪರೀಕ್ಷೆಯಲ್ಲಿ ಶೇ 60ರಷ್ಟು ಅಂಕ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಶೇ 55ರಷ್ಟು ಅಂಕವನ್ನು ಪಡೆದಿರಬೇಕು.

ಸಾಮಾನ್ಯ ವರ್ಗದ ಅಭ್ಯರ್ಥಿಗಳು 1ನೇ ಆಗಸ್ಟ್, 2002ರ ನಂತರ ಜನಿಸಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.

ಪ್ರವೇಶ ಪ್ರಕ್ರಿಯೆ

ಎನ್‌ಐಎಸ್‌ಇಆರ್ ಮತ್ತು ಸಿಇಬಿಎಸ್‌ಗಳ ಪ್ರವೇಶಕ್ಕಾಗಿ ನ್ಯಾಷನಲ್ ಎಂಟ್ರೆನ್ಸ್ ಸ್ಕ್ರೀನಿಂಗ್ ಟೆಸ್ಟ್ (NEST) ಎಂಬ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಇದರಲ್ಲಿ ಭೌತಶಾಸ್ತ್ರ, ಜೀವಶಾಸ್ತ್ರ, ರಾಸಾಯನ ಶಾಸ್ತ್ರ ಮತ್ತು ಗಣಿತಶಾಸ್ತ್ರ ಪ್ರತಿ ವಿಭಾಗದಲ್ಲಿ 50 ಪ್ರಶ್ನೆಗಳಿರುತ್ತವೆ. ಒಟ್ಟು 200 ಅಂಕಗಳ ಒಂದು ಪತ್ರಿಕೆಯಿರುತ್ತದೆ.

ಕಂಪ್ಯೂಟರ್ ಆಧಾರಿತ ಬಹು ಆಯ್ಕೆ ಮಾದರಿಯ ಈ ಪರೀಕ್ಷೆಯು 3 ಗಂಟೆ 30 ನಿಮಿಷದ ಕಾಲಾವಧಿಯದ್ದಾಗಿದೆ. ಈ ವರ್ಷದ ಪ್ರವೇಶ ಪರೀಕ್ಷೆ ಜೂನ್ 18ರಂದು, ದೇಶದಾದ್ಯಂತ 115 ಪರೀಕ್ಷೆ ಕೇಂದ್ರಗಳಲ್ಲಿ ನಡೆಯಲಿದೆ. ನಮ್ಮ ರಾಜ್ಯದಲ್ಲಿ ಬೆಂಗಳೂರು, ಹುಬ್ಬಳ್ಳಿ, ಮಂಗಳೂರು ಮತ್ತು ಮೈಸೂರಿನ ಕೇಂದ್ರಗಳಲ್ಲಿ ಪ್ರವೇಶ ಪರೀಕ್ಷೆ ನಡೆಯಲಿದೆ.

ಎರಡೂ ಸಂಸ್ಥೆಗಳಲ್ಲಿರುವ ಕೋರ್ಸ್‌ಗಳ ಪ್ರವೇಶಕ್ಕೆ 257 ಅಭ್ಯರ್ಥಿಗಳಿಗಷ್ಟೇ ಅವಕಾಶ. ಇವುಗಳಲ್ಲಿ ಶೇ 27 ಸ್ಥಾನಗಳು ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ, ಶೇ 15ರಷ್ಟು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಹಾಗೂ ಶೇ 7.5ರಷ್ಟು ಪರಿಶಿಷ್ಟ ವರ್ಗದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ.

ಪರೀಕ್ಷಾ ಸಿದ್ಧತೆ

ಸಿಬಿಎಸ್‌ಸಿ ಪರೀಕ್ಷೆ ಮಂಡಳಿಯ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪಠ್ಯಕ್ರಮವನ್ನು ಆಧರಿಸಿ ಪ್ರವೇಶ ಪರೀಕ್ಷೆ ನಡೆಯುತ್ತದೆ. 'Syllabus for NEST - 22 website' ನಲ್ಲಿ ಪ್ರವೇಶ ಪರೀಕ್ಷೆ ಪಠ್ಯಕ್ರಮ ಹಾಗೂ ಕಳೆದ ಐದು ವರ್ಷದ ಹಿಂದಿನ ಪ್ರಶ್ನೆ ಪತ್ರಿಕೆಗಳಿವೆ. ಈ ಪರೀಕ್ಷೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳಾದ ಜೆಇಇ / ಎನ್‌ಇಇಟಿ ಪರೀಕ್ಷಗಳಿಗಿಂತ ಸ್ವಲ್ಪ ಭಿನ್ನವಾಗಿದ್ದು, ವಿದ್ಯಾರ್ಥಿಗಳಲ್ಲಿರುವ ಮೂಲ ವಿಜ್ಞಾನದ ಬಗೆಗಿನ ಆಳವಾದ ಜ್ಞಾನವನ್ನು ಪರೀಕ್ಷಿಸಲಾಗುತ್ತದೆ.

ಪ್ರವೇಶ ಪರೀಕ್ಷೆಯಲ್ಲಿ ನಾಲ್ಕು ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಮೂರು ವಿಭಾಗದ ಅಂಕಗಳನ್ನು ಮಾತ್ರ ಆಯ್ಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಮೂರು ವಿಷಯಗಳಲ್ಲಿ ಹೆಚ್ಚು ಅಂಕಗಳಿಸಲು ಪ್ರಯತ್ನಿಸಬೇಕು.

ಪ್ರವೇಶ ಪರೀಕ್ಷೆಗೆ ಸಿದ್ಧತೆ ನಡೆಸುವ ಅಭ್ಯರ್ಥಿಗಳು ಅಧಿಕೃತ ಪಠ್ಯಕ್ರಮಕ್ಕೆ ಅನುಗುಣವಾಗಿ ಪ್ರೌಢಶಾಲಾ ಹಂತದ ವಿಜ್ಞಾನ ವಿಷಯ ಹಾಗೂ ಸಿಬಿಎಸ್‌ಸಿಯ ಪ್ರಥಮ ಹಾಗೂ ದ್ವಿತೀಯ ಪಿಯುಸಿಯ ಪುಸ್ತಕಗಳನ್ನು ಅಭ್ಯಸಿಸಬೇಕು. ಈ ಪ್ರವೇಶ ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಹೆಚ್ಚು ತರಬೇತಿ ಕೇಂದ್ರಗಳು ಲಭ್ಯವಿಲ್ಲ. ಹಾಗಾಗಿ, ವಿದ್ಯಾರ್ಥಿಗಳು ಲಭ್ಯವಿರುವ ಡಿಜಿಟಲ್ ಮಾಹಿತಿಯ ಜೊತೆಗೆ, ಹಿಂದಿನ ಪ್ರಶ್ನೆ ಪತ್ರಿಕೆಗಳು ಹಾಗೂ ಅಧ್ಯಯನ ಸಾಮಗ್ರಿಗಳನ್ನು ಬಳಸಿಕೊಂಡು ಪ್ರವೇಶ ಪರೀಕ್ಷೆಗೆ ಸ್ವಯಂ ಸಿದ್ಧತೆ ಮಾಡಿಕೊಳ್ಳಬೇಕು.

ಕೋರ್ಸ್, ಪ್ರವೇಶ ಪರೀಕ್ಷೆ ಕುರಿತ ಹೆಚ್ಚಿನ ಮಾಹಿತಿಗೆ https://www.nestexam.in/ ಜಾಲತಾಣ ನೋಡಿ.



ಇಂಟಿಗ್ರೇಟೆಡ್ ಪದವಿಯ ವೈಶಿಷ್ಟ್ಯ

ಕರ್ನಾಟಕ ಸೇರಿದಂತೆ ದೇಶದ ವಿವಿಧ ರಾಜ್ಯಗಳಲ್ಲಿರುವ ವಿವಿಗಳಲ್ಲೂ ಇದೇ ರೀತಿಯ ಇಂಟಿಗ್ರೇಟೆಡ್ ಪದವಿ ಕೋರ್ಸ್ ಇದೆ. ಆದರೆ, ಎನ್.ಇ.ಎಸ್.ಟಿ. ಪ್ರವೇಶ ಪರೀಕ್ಷೆಯ ಮೂಲಕ ನೈಸರ್, ಸೈಬ್ಸ್ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶಕ್ಕೆ ಆಯ್ಕೆಯಾದವರಿಗೆ, ಆರಂಭದಿಂದ ಕೋರ್ಸ್ ಪೂರ್ಣಗೊಳಿಸುವವರೆಗೂ ಉಚಿತ ಶಿಕ್ಷಣ ನೀಡಲಾಗುತ್ತದೆ. ಅಷ್ಟೇ ಅಲ್ಲ, ಕೇಂದ್ರ ಸರ್ಕಾರದ ಆಟೊಮಿಕ್ ಎನರ್ಜಿ ವಿಭಾಗದ 'ದಿಶಾ' ಕಾರ್ಯಕ್ರಮದ ಅಡಿಯಲ್ಲಿ ₹60,000 ವಿದ್ಯಾರ್ಥಿ ವೇತನ ನೀಡಲಾಗುತ್ತದೆ. ಅದರೊಂದಿಗೆ ಪ್ರತಿ ವರ್ಷ ₹20,000 ಸಮ್ಮರ್ ಇಂಟರ್ನ್‌ಶಿಪ್ ಸಹಾಯಧನ ನೀಡಲಾಗುತ್ತದೆ. ಇದು ಇಂಟಿಗ್ರೇಟೆಡ್ ಪದವಿಯ ವೈಶಿಷ್ಟ್ಯ.

ಅಂತರರಾಷ್ಟ್ರೀಯ ಗುಣಮಟ್ಟದ ಬೋಧನಾ ಮತ್ತು ಸಂಶೋಧನಾ ಸೌಲಭ್ಯವಿರುವ ಈ ಸಂಸ್ಥೆಗಳಲ್ಲಿ ಹೆಚ್ಚು ಅಂಕಗಳೊಂದಿಗೆ ಕೋರ್ಸ್ ಪೂರೈಸಿದವರಿಗೆ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳಲ್ಲಿ ನೇರ ಉದ್ಯೋಗಾವಕಾಶ ದೊರೆಯುತ್ತದೆ. ಜೊತೆಗೆ, ಸರ್ಕಾರಿ ಹಾಗೂ ಖಾಸಗಿ ವಲಯದಲ್ಲೂ ಉತ್ತಮ ಉದ್ಯೋಗಾವಕಾಶವಿದೆ.

'ದೂರಶಿಕ್ಷಣ ಪದವಿ'ಯನ್ನು ಉದ್ಯೋಗಕ್ಕೇಕೆ ಪರಿಗಣಿಸುವುದಿಲ್ಲ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

- **1. ದೂರಶಿಕ್ಷಣದ ಮೂಲಕ ಪಡೆದ ಪದವಿಯನ್ನು ಖಾಸಗಿ ಬ್ಯಾಂಕಿನಲ್ಲಿ ಉದ್ಯೋಗಕ್ಕೇಕೆ ಪರಿಗಣಿಸುವುದಿಲ್ಲ? ದಯವಿಟ್ಟು ತಿಳಿಸಿ.**

ಪ್ರಕಾಶ್ ಕಡೂರ್, ಊರು ತಿಳಿಸಿಲ್ಲ

ಯುಜಿಸಿ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯ ನಡೆಸುವ ದೂರ ಶಿಕ್ಷಣದಿಂದ ಪದವಿ ಪೂರ್ಣಗೊಳಿಸಿದರೆ ಬ್ಯಾಂಕ್ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಅರ್ಹತೆ ಇರುತ್ತದೆ. ಆದರೆ, ಕಲಿಕೆಯ ದೃಷ್ಟಿಯಿಂದ ರೆಗ್ಯುಲರ್ ಮತ್ತು ದೂರಶಿಕ್ಷಣ ಕೋರ್ಸ್‌ಗಳಲ್ಲಿ ವ್ಯತ್ಯಾಸವಿರುವುದು ಸಹಜ.

ಆದ್ದರಿಂದ, ವೈಯಕ್ತಿಕ ಸಂದರ್ಶನದಲ್ಲಿ ವಿಷಯದ ಕುರಿತು ಸಂದರ್ಶಕರು ಉದ್ದೇಶಪೂರ್ವಕವಾಗಿ ಒತ್ತಡ ತರುವಂಥ ಪ್ರಶ್ನೆಗಳನ್ನೂ, ಸನ್ನಿವೇಶಗಳನ್ನೂ ಸೃಷ್ಟಿಸಿ, ಅಭ್ಯರ್ಥಿಗಳ ಕಲಿಕೆಯ ಮಟ್ಟ, ವೃತ್ತಿ ಸಂಬಂಧಿತ ಕೌಶಲಗಳು ಹಾಗೂ ವ್ಯಕ್ತಿತ್ವವನ್ನು ಪರಿಶೀಲಿಸುವುದು ಸಾಮಾನ್ಯ. ಇಂತಹ ಒತ್ತಡ ತರುವ ಪ್ರಶ್ನೆಗಳಿಂದ ಕಂಗಾಲಾಗದೆ, ಆತ್ಮವಿಶ್ವಾಸದಿಂದ ಉತ್ತರಿಸುವುದರಿಂದ ನಿಮ್ಮ ವ್ಯಕ್ತಿತ್ವದ ಪ್ರೌಢತೆ ಎದ್ದುಕಾಣುತ್ತದೆ. ಆದ್ದರಿಂದ, ಸಂದರ್ಶನದಲ್ಲಿ ಕೇಳುವ ಪ್ರಶ್ನೆಗಳನ್ನು ನಿರೀಕ್ಷಿಸಿ, ಸೂಕ್ತವಾಗಿ ತಯಾರಾಗುವುದೇ ನಿಮ್ಮ ಕಾರ್ಯತಂತ್ರವಾಗಿರಬೇಕು. ಈ ಕುರಿತು ಹೆಚ್ಚಿನ ಮಾರ್ಗದರ್ಶನಕ್ಕಾಗಿ ವೀಕ್ಷಿಸಿ: https://www.youtube.com/watch?v=T_z3ngIeyWk

- **2. ನಾನು ಬಿಕಾಂ ಪದವಿ ಪಡೆದಿದ್ದು, ಬಿ.ಇಡಿ ಮಾಡಬೇಕು ಎಂದುಕೊಂಡಿದ್ದೇನೆ. ಆಮೇಲೆ, ನಾನು ಶಿಕ್ಷಕ ವೃತ್ತಿಯನ್ನು ಅನುಸರಿಸಬಹುದೇ? ಹಾಗೂ ಯಾವ ವಿಷಯವನ್ನು ಬೋಧಿಸಬಹುದು?**

ಹೆಸರು, ಊರು ತಿಳಿಸಿಲ್ಲ

ನಮಗಿರುವ ಮಾಹಿತಿಯಂತೆ ಬಿಕಾಂ, ಬಿ.ಇಡಿ ನಂತರ ಟಿಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮೇಲೆ ಪದವಿ ಕೋರ್ಸ್‌ನಲ್ಲಿ ಓದಿರುವ ಪ್ರಮುಖ ವಿಷಯಗಳನ್ನು ಪ್ರೌಢಶಾಲೆಗಳಲ್ಲಿ ಬೋಧಿಸಬಹುದು. ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://collegedunia.com/courses/bachelor-of-education-bed/how-to-become-a-teacher#2

- **3. ಎನ್‌ಐಒಎಸ್ ಸರ್ಟಿಫಿಕೇಟ್ ಅನ್ನು ಎಲ್ಲಿ ಪಡೆದುಕೊಳ್ಳಬೇಕು? ಸಂಪೂರ್ಣ ಮಾಹಿತಿ ತಿಳಿಸಿ.**

ಅನಿಲ್ ಕುಮಾರ್, ಬೀದರ್

ಎನ್‌ಐಒಎಸ್(ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಒಪನ್ ಸ್ಕೂಲಿಂಗ್) ಸರ್ಟಿಫಿಕೇಟ್ ಪಡೆದುಕೊಳ್ಳುವ ಮಾಹಿತಿಗಾಗಿ ಗಮನಿಸಿ: https://nios.ac.in/student-information-section/procedure-for-obtaining-duplicate-certificate.aspx

- **4. ನಾನು ಒಂದನೇ ತರಗತಿಯಿಂದ ಐದನೇ ತರಗತಿವರೆಗೆ ಕನ್ನಡದಲ್ಲಿ ಮತ್ತು ಆರನೆಯ ತರಗತಿಯಿಂದ ಹತ್ತನೇ ತರಗತಿವರೆಗೆ ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ್ದೇನೆ. ಪಿಯುಸಿ ಪರೀಕ್ಷೆಯನ್ನು ಕನ್ನಡ ಮಾಧ್ಯಮದಲ್ಲಿ ಕಲಿತಿರುವೆ. ನಾನು ಅರ್ಜಿ ಹಾಕುವಾಗ ಯಾವ ಮಾಧ್ಯಮ ಎಂದು ನಮೂದಿಸಬೇಕು? ತಿಳಿಸಿ.**

ಹೆಸರು, ಊರು ತಿಳಿಸಿಲ್ಲ

ನೀವು ಉದ್ಯೋಗಕ್ಕೆ ಅರ್ಜಿ ಸಲ್ಲಿಸುವಾಗ, ಅರ್ಹತಾ ಪರೀಕ್ಷೆಯಲ್ಲಿನ ಮಾಧ್ಯಮವನ್ನು ನಮೂದಿಸುವುದು ಸೂಕ್ತ.

- **5. ನಾನು ದ್ವಿತೀಯ ಬಿಕಾಂ ಓದುತ್ತಿದ್ದೇನೆ. ನನಗೆ ಬ್ಯಾಂಕ್ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ಇದ್ದು ಬ್ಯಾಂಕ್ ಪರೀಕ್ಷೆಯ ತರಬೇತಿಗೆ ಹೋಗಬೇಕು. ಈ ಬಗ್ಗೆ ಮಾಹಿತಿ ನೀಡಿ.**

ಹೆಸರು, ಊರು ತಿಳಿಸಿಲ್ಲ.

ಬ್ಯಾಂಕ್ ಆಫೀಸರ್ ಪರೀಕ್ಷೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.vidyamata.in/ibps-po-2022/

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಟೀಚರ್ಸ್ ಅಸೋಸಿಯೇಟ್‌ಶಿಪ್ ಫಾರ್ ರಿಸರ್ಚ್ ಎಕ್ಸಲೆನ್ಸ್ (ಟೇರ್) 2022

ವಿವರ: ಟೀಚರ್ಸ್ ಅಸೋಸಿಯೇಟ್‌ಶಿಪ್ ಫಾರ್ ರಿಸರ್ಚ್ ಎಕ್ಸಲೆನ್ಸ್ (ಟೇರ್) 2022, ವಿಜ್ಞಾನದಲ್ಲಿ ಪಿಎಚ್.ಡಿ ಪದವಿ ಅಥವಾ ಮೆಡಿಸಿನ್‌ನಲ್ಲಿ ಎಂಎಸ್, ಎಂಡಿ ಪದವಿ ಅಥವಾ ಎಂಜಿನಿಯರಿಂಗ್‌ನಲ್ಲಿ ಎಂಇ, ಎಂಟೆಕ್ ಪದವಿಗಳನ್ನು ಪಡೆಯುವ ಅಧ್ಯಾಪಕ ಸದಸ್ಯರಿಗೆ ಸೈನ್ಸ್ ಅಂಡ್ ಎಂಜಿನಿಯರಿಂಗ್ ರಿಸರ್ಚ್ ಬೋರ್ಡ್ (ಎಸ್‌ಇಆರ್‌ಬಿ) ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ವಿಜ್ಞಾನದಲ್ಲಿ ಪಿಎಚ್.ಡಿ ಪದವಿ ಅಥವಾ ಮೆಡಿಸಿನ್‌ನಲ್ಲಿ ಎಂ, ಎಸ್ ಅಥವಾ ಎಂಡಿ ಪದವಿ ಅಥವಾ ಎಂಜಿನಿಯರಿಂಗ್‌ನಲ್ಲಿ ಎಂಇ, ಎಂಟೆಕ್ ಪದವಿ ಪಡೆದಿರುವ 45 ವರ್ಷಕ್ಕಿಂತ ಕಡಿಮೆ ವಯಸ್ಸಿನ ಭಾರತೀಯ ಪ್ರಜೆಗಳು ಈ ಸ್ಕಾಲರ್‌ಶಿಪ್‌ಗೆ ಅರ್ಜಿ ಸಲ್ಲಿಸಬಹುದು. ಎಸ್‌ಸಿ, ಎಸ್‌ಟಿ, ಇತರೆ ಹಿಂದುಳಿದ ವರ್ಗ, ಅಂಗವಿಕಲರು ಹಾಗೂ ಮಹಿಳಾ ಅಭ್ಯರ್ಥಿಗಳಿಗೆ 5 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.

ಆರ್ಥಿಕ ನೆರವು: ವಾರ್ಷಿಕ ₹ 60,000 ಹಾಗೂ ಇತರ ಪ್ರಯೋಜನಗಳು

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಮಾರ್ಚ್ 15, 2022

ಹೆಚ್ಚಿನ ಮಾಹಿತಿಗೆ: www.b4s.in/praja/ARE1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Vocabulary

ಎಸ್ಸೆಸ್ಸೆಲ್ಸಿ

Use the following word as Noun/Adjective/Verb/Adverb

1	There are so many tourist **attractions** in Karnataka state.	21	Anselmo and Americans were loved for their **generosity.**
2	He **attracted** all the listeners through his communication.	22	Now a days many channels are **glorifying** the stupid things.
3	Her way of expression is reachable and very **attractive.**	23	It is an **honour** for India that C.V.Raman got Nobel Prize.
4	There will be a **break** after each session in any training.	24	I would like to thank **honourable** president of the program.
5	Have you brought any **un/ breakable** things in your bag?	25	We don't have any **information** about the rain holidays.
6	It is easier to build strong children than to repair **broken** men.	26	The world changed rapidly after the **invention** of the mobile.
7	The **contents** in this scorer book are meticulously arranged.	27	Edison **invented** an electric bulb to light the whole world.
8	People are not **contented** for their greed over the need.	28	English grammar is taught by him was highly **informative**.
9	We should follow the code of **conduct** during the elections.	29	He said this matter with an **interested** look on his face.
10	The students should **concentrate** on their studies properly.	30	He is always **interested** in learning English to speak fluently.
11	The company is making a **concentrated** effort to develop.	31	He is one of the most responsible members of the **judiciary**.
12	You **compare** the car prices of two companies, later decide.	32	They should have been under **judicial** custody for 3 days.
13	Change the following sentence into **comparative** degree.	33	I do not have enough reasons **to justify** myself to anyone.
14	Their experiences are not truly **comparable** to make out.	34	They accept that the criticism is completely **justified**.
15	I am speaking **comparatively**, this language is easy to learn.	35	It took months of **negotiation** to come to an understanding.
16	We should always be thankful for their **dedication**.	36	Illegal protest against the Govt. comes under **negotiable** act.
17	Children need lot of **encouragement** from their parents.	37	The blank cheque which is given by him is not **negotiable**.
18	My mother smiled **encouragingly** at me as I went up on stage.	38	There will be a **promotion** after every ten years of service.
19	Americans were **financially** sound to buy the land of Anselmo.	39	Association of **promoted** teachers' has been fighting for justice.
20	Dancers should be **flexible** to bend their bodies in the programs.	40	**Walking** is good for health therefore people walk everyday.

Exercise - Use the following word as Noun/Adjective/Verb/Adverb

1	She always dresses ____**[attract]** to draw their attention.	11	A great poet has been _**[honour]**by the Govt of Karnataka.
2	People came to know through the __**[break]**news on T.V.	12	The teacher is informing us to attend classes ___ **[regular]**.
3	Narendra had a powerful ___**[concentrate]** in meditation.	13	I have an ___**[interest]** in finding the new things in English.
4	I like his____ **[friend]** way of approach to convince them.	14	He is always very ___**[interest]** to create something new.
5	The survey is_**[conduct]** to know the economic conditions.	15	We should know the __**[judicial]** use of natural resources.
6	Both of them were really a very _____**[content]** couple.	16	We must _**[maintain]** social distance to control pandemic.
7	There is no such __**[compare]** between the two countries.	17	His relatives were waiting outside the __**[operate]** theatre.
8	He has been known as a _**[dedicate]** teacher in the school.	18	'Inspire Award' ___ **[promote]** the scientific temperament.
9	I don't want any ___**[explain]** about this matter from you.	19	English__ **[pronounce]** should be correct to speak fluently.
10	His ___**[encourage]**words motivated me get more marks.	20	They have been ___**[walk]** fast in the park daily for health.

Key Answers for excercise

1	attractively	6	contented	11	honoured	16	maintain
2	breaking	7	comparison	12	regularly	17	operation
3	concentration	8	dedicated	13	interest	18	promotes
4	friendly	9	explanation	14	interested	19	pronunciation
5	conducted	10	encouraging	15	judicious	20	walking

Annappa Shetty MA,M.Ed, SRP in English,Hassan

ದ್ಯುತಿ ಎಳೆಗಳು

ಮಾದರಿ ಪ್ರಶ್ನೋತ್ತರ

ಪಿಯುಸಿ

ಭೌತಶಾಸ್ತ್ರ

31)ದ್ಯುತಿ ಎಳೆಗಳು (Optical Fibre) ಬಗ್ಗೆ ಬರೆಯಿರಿ

ಉತ್ತರ:- ಶಬ್ದ ಮತ್ತು ದೃಶ್ಯದ ಸಂಜ್ಞೆಗಳನ್ನು ದೂರದೂರಕ್ಕೆ ರವಾನಿಸಲು ದ್ಯುತಿ ಎಳೆಗಳನ್ನು ಹೆಚ್ಚಾಗಿ ಈಗ ಬಳಸುತ್ತಾರೆ. ಇವುಗಳು ಕೂಡಾ ಪೂರ್ಣಾಂತರಿಕ ಪ್ರತಿಫಲನದ ಮೇಲೆಯೇ ಕಾರ್ಯನಿರ್ವಹಿಸುತ್ತವೆ. ದ್ಯುತಿ ಎಳೆಗಳನ್ನು ಉತ್ತಮ ಗುಣಮಟ್ಟದ ಸಂಯುಕ್ತ ಗಾಜಿನ / ಕ್ವಾರ್ಟ್ಜ್ ಎಳೆಗಳಿಂದ ತಯಾರಿಸುತ್ತಾರೆ. ಪ್ರತಿ ಎಳೆಯಲ್ಲಿ ಕೇಂದ್ರ ಮತ್ತು ಹೊರಮೇಲ್ಮೈ ಎಂಬ ಎರಡು ಭಾಗಗಳಿರುತ್ತವೆ. ಕೇಂದ್ರ ಭಾಗದ ವಕ್ರೀಭವನಾಂಕವು ಹೊರಮೇಲ್ಮೈಯ ವಕ್ರೀಭವನಾಂಕಕ್ಕಿಂತ ಅಧಿಕವಾಗಿರುತ್ತದೆ. ಬೆಳಕಿನ ರೂಪದಲ್ಲಿರುವ ಸಂಜ್ಞೆಗಳನ್ನು ದ್ಯುತಿ ಎಳೆಯ ಒಂದು ತುದಿಯಲ್ಲಿ ನಿರ್ದಿಷ್ಟ ಕೋನದಿಂದ ಆಪಾತಗೊಳಿಸಿದಾಗ, ಬೆಳಕು ದ್ಯುತಿ ಎಳೆಯ ಉದ್ದಕ್ಕೂ ಪದೇ ಪದೇ ಪೂರ್ಣಾಂತರಿಕ ಪ್ರತಿಫಲನಗೊಂಡು ಇನ್ನೊಂದು



ತುದಿಯಿಂದ [ಚಿತ್ರದಲ್ಲಿರುವಂತೆ] ಹೊರಬರುತ್ತದೆ.

ಪ್ರತಿ ಹಂತದಲ್ಲೂ ಬೆಳಕು ಪೂರ್ಣಾಂತರಿಕ ಪ್ರತಿಫಲನಕ್ಕೆ ಒಳಗಾಗುವುದರಿಂದ ಬೆಳಕಿನ ತೀವ್ರತೆಯಲ್ಲಿ ಯಾವುದೇ ಗುರುತರ ಬದಲಾವಣೆಯಾಗುವುದಿಲ್ಲ. ಒಳ ಮೇಲ್ಮೈಯಿಂದ ಪ್ರತಿಫಲನಗೊಂಡ ಬೆಳಕು ವಿರುದ್ಧ ದಿಕ್ಕಿನಲ್ಲಿರುವ ಇನ್ನೊಂದು ಮೇಲ್ಮೈ ಮೇಲೆ ಕ್ರಾಂತಿ ಕೋನಕ್ಕಿಂತ ಅಧಿಕವಾದ ಕೋನದಲ್ಲಿ ಬೀಳುವಂತೆ ದ್ಯುತಿ ಎಳೆಗಳನ್ನು ರಚಿಸಲಾಗುತ್ತದೆ

32) ಪೋಲರಾಯಿಡ್‌ನ ಪಾಸ್-ಅಕ್ಷ ಎಂದು ಯಾವುದನ್ನು ಕರೆಯುತ್ತಾರೆ?

ಉತ್ತರ:-ಬೆಳಕಿನ ತರಂಗಗಳು ಸ್ವಭಾವತಃ ಅಡ್ಡ ತರಂಗಗಳಾಗಿವೆ ಅಂದರೆ ಸಂಚರಣೆಯಲ್ಲಿರುವ ಬೆಳಕಿನ ತರಂಗದ ವಿದ್ಯುತ್‌ಕ್ಷೇತ್ರವು ಎಂದಿಗೂ ತರಂಗದ ಸಂಚರಣೆಯ ದಿಕ್ಕಿಗೆ ಲಂಬವಾಗಿರುತ್ತದೆ. ಇದನ್ನು ಒಂದು ಸರಳ ಪೋಲರಾಯಿಡನ್ನು ಬಳಸಿ ಸುಲಭವಾಗಿ ವಿವರಿಸಬಹುದು. ಒಂದು ಪೋಲರಾಯಿಡ್ ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಜೋಡಿಸಲ್ಪಟ್ಟ ಅಣುಗಳ ಉದ್ದನೆಯ ಸರಪಣಿಯನ್ನು ಹೊಂದಿದೆ. ಈ ಅಣುಗಳ ದಿಕ್ಕಿನಲ್ಲಿರುವ ವಿದ್ಯುತ್ ಸದಿಶಗಳು (ಸಂಚರಣೆಯ ದಿಕ್ಕಿನಲ್ಲಿರುವ ಬೆಳಕಿನ ತರಂಗದ) ಹೀರಿಕೊಳ್ಳಲ್ಪಡುತ್ತವೆ. ಹೀಗೆ, ಅಂತಹ ಪೋಲರಾಯಿಡ್‌ಗೆ ಅಧ್ರುವೀಕೃತ ಬೆಳಕಿನ ತರಂಗವು ಆಪಾತವಾದರೆ, ಆ ತರಂಗವು ರೇಖೀಯವಾಗಿ ಧ್ರುವೀಕೃತ ಹೊಂದಿ ಅಣುಗಳ ಲಂಬ ದಿಕ್ಕಿನಲ್ಲಿ ವಿದ್ಯುತ್ ಸದಿಶಗಳು ಕಂಪನ ಹೊಂದಿರುತ್ತದೆ; ಈ ದಿಕ್ಕನ್ನು ಪೋಲರಾಯಿಡ್‌ನ ಪಾಸ್-ಅಕ್ಷ ಎನ್ನುವರು.

33) ಯಾವ ಚೈತನ್ಯವನ್ನು ಕಾರ್ಯಫಲನ ಎಂದು ಕರೆಯುತ್ತಾರೆ?

ಉತ್ತರ:- ಲೋಹಗಳ ವಾಹಕತೆಗೆ ಸ್ವತಂತ್ರ ಎಲೆಕ್ಟ್ರಾನ್‌ಗಳು [ಋಣಾತ್ಮಕ ಆವೇಶ ಕಣಗಳು] ಕಾರಣವಾಗಿವೆ, ಈ ಮುಕ್ತ ಎಲೆಕ್ಟ್ರಾನ್‌ಗಳು ಸಾಮಾನ್ಯವಾಗಿ ಲೋಹದ ಮೇಲ್ಮೈಯಿಂದ ತಪ್ಪಿಸಿಕೊಳ್ಳಲಾರವು. ಒಂದು ವೇಳೆ ಈ ಮುಕ್ತ ಎಲೆಕ್ಟ್ರಾನ್ ಹೊರಹೋಗಲು ಯತ್ನಿಸಿದರೆ ಅಲ್ಲಿ ಧನ ಆವೇಶ ಸೃಷ್ಟಿಯಾಗಿ ಅದು ಎಲೆಕ್ಟ್ರಾನ್ ಅನ್ನು ಮತ್ತೆ ಸೆಳೆದುಕೊಳ್ಳುತ್ತದೆ. ಅಯಾನುಗಳ ಈ ಆಕರ್ಷಕ ಬಲಗಳಿಂದ ಲೋಹದ ಮೇಲ್ಮೈಯನ್ನು ಬಿಟ್ಟು ಹೋಗಲಾರವು. ಒಂದು ವೇಳೆ ಎಲೆಕ್ಟ್ರಾನ್‌ಗಳು ಬಂಧಿತ ಶಕ್ತಿಗಿಂತ ಅಧಿಕವಾದ ಶಕ್ತಿ ಗಳಿಸಿಕೊಂಡಾಗ ಮಾತ್ರ ಹೊರಬರಲು ಸಾಧ್ಯ. ಅಂದರೆ ಯಾವ ಕನಿಷ್ಠ ಶಕ್ತಿಗೆ ಎಲೆಕ್ಟ್ರಾನ್‌ಗಳು ಲೋಹದ ಮೇಲ್ಮೈಯಿಂದ ಹೊರಬರುತ್ತವೆಯೋ ಆ ಚೈತನ್ಯವನ್ನು ಕಾರ್ಯಫಲನ ಎಂದು ಕರೆಯುತ್ತಾರೆ. ಅದನ್ನು ϕ_0 ಸಂಕೇತದಿಂದ ಸೂಚಿಸಲಾಗುತ್ತದೆ ಮತ್ತು ಅದನ್ನು eV ನಲ್ಲಿ (ಎಲೆಕ್ಟ್ರಾನ್ ವೋಲ್ಟ್) ಅಳತೆ ಮಾಡಲಾಗುತ್ತದೆ.

33) ಯಾವುದಕ್ಕೆ ದ್ಯುತಿ ವಿದ್ಯುತ್ ಉತ್ಸರ್ಜನ ಎನ್ನುತಾರೆ?

ಉತ್ತರ:- ಒಂದು ಲೋಹದ ಮೇಲೆ ನಿರ್ದಿಷ್ಟ ಆವೃತ್ತಿಯ ವಿಕಿರಣವನ್ನು ಹಾಯಿಸಿದಾಗ ಲೋಹದ ಮೇಲ್ಮೈಯಿಂದ ಎಲೆಕ್ಟ್ರಾನ್‌ಗಳ ಉತ್ಸರ್ಜನೆ ಸಂಭವಿಸುತ್ತದೆ. ಇದನ್ನು ದ್ಯುತಿ ವಿದ್ಯುತ್ ಉತ್ಸರ್ಜನ ಎನ್ನುತಾರೆ. ಉತ್ಸರ್ಜಿತ ಎಲೆಕ್ಟ್ರಾನ್‌ಗಳನ್ನು ದ್ಯುತಿ ಎಲೆಕ್ಟ್ರಾನ್‌ಗಳು ಎಂದು ಕರೆಯುತ್ತಾರೆ.

34)ಹಾಲ್‌ವಾಕ್ ಮತ್ತು ಲಿನಾರ್ಡ್‌ನ ಅವಲೋಕನಗಳ ಬಗ್ಗೆ ಬರೆಯಿರಿ

ಉತ್ತರ:-ಹಾಲ್‌ವಾಕ್ ವಿಲ್‌ಹೆಲ್ಮ್ ಮತ್ತು ಫಿಲಿಪ್ ಲಿನಾರ್ಡ್ ಇವರು 1886-1902ರ ಅವಧಿಯಲ್ಲಿ ದ್ಯುತಿ ವಿದ್ಯುತ್ ಪರಿಣಾಮವನ್ನು ವಿಸ್ತೃತವಾಗಿ ಸಂಶೋಧಿಸಿದರು.

ಎರಡು ಎಲೆಕ್ಟ್ರೋಡ್‌ಗಳಿರುವ ನಿರ್ವಾತ ಗಾಜಿನ ಕೊಳವೆಯಲ್ಲಿರುವ ಉತ್ಸರ್ಜಕ ತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಮಂಡಲದಲ್ಲಿ ವಿದ್ಯುತ್ ಸಂಚಾರ ಉಂಟಾಗುತ್ತದೆ ಎಂದು ಲಿನಾರ್ಡ್ (1862-1947)ನು ಅವಲೋಕಿಸಿದನು. ನೇರಳಾತೀತ ಕಿರಣಗಳ ಪತನಗೊಳ್ಳುವಿಕೆ ನಿಂತ ತಕ್ಷಣ ವಿದ್ಯುತ್ ಸಂಚಾರ ಕೂಡ ನಿಲ್ಲುತ್ತದೆ. ಯಾವಾಗ ನೇರಳಾತೀತ ವಿಕಿರಣಗಳು ಉತ್ಸರ್ಜಕ ತಟ್ಟೆಯ ಮೇಲೆ ಪತನಗೊಂಡಾಗ ಎಲೆಕ್ಟ್ರಾನ್‌ಗಳು ಹೊರಸೂಸಲ್ಪಟ್ಟು ವಿದ್ಯುತ್ ಕ್ಷೇತ್ರವಿರುವುದರಿಂದ ಧನ ಆವೇಶದ ಸಂಗ್ರಹ ತಟ್ಟೆಯಿಂದ ಆಕರ್ಷಿಸಲ್ಪಡುತ್ತವೆ ಎಂದು ಈ ಅವಲೋಕನದ ಮೂಲಕ ಸೂಚಿಸಿದನು. ನಿರ್ವಾತ ಗಾಜಿನ ಕೊಳವೆಯಲ್ಲಿ ಹರಿಯುವ ಎಲೆಕ್ಟ್ರಾನ್‌ಗಳು ವಿದ್ಯುತ್ ಪ್ರವಾಹಕ್ಕೆ ಕಾರಣವಾಗಿವೆ. ಹೀಗೆ ಉತ್ಸರ್ಜಕದ ಮೇಲೆ ಪತನವಾಗುವ ಬೆಳಕು ಬಾಹ್ಯ ತಟ್ಟೆಯ ವಿಭವ ಮತ್ತು ಆವೃತ್ತಿ ತೀವ್ರತೆಗಳು ಹೇಗೆ ಬದಲಾಗುತ್ತವೆ ಎಂದು ಅಧ್ಯಯನ ತಿಳಿಸಿತು.

1888ರಲ್ಲಿ ಹಾಲ್‌ವಾಕ್‌ನು ನಿರಂತರ ಅಧ್ಯಯನದೊಂದಿಗೆ ಋಣವಿದ್ಯುದಾವೇಶದ ಸತುವಿನ ತಟ್ಟೆಯೊಂದಿಗೆ ವಿದ್ಯುತ್ ಧಾರಕವನ್ನು ಜೋಡಿಸಿದನು. ಸತುವಿನ ತಟ್ಟೆಯ ಮೇಲೆ ನೇರಾಳಾತೀತ ಕಿರಣಗಳು ಪತನಗೊಂಡಾಗ ತಟ್ಟೆಯು ಆವೇಶವನ್ನು ಕಳೆದುಕೊಳ್ಳುವುದನ್ನು ಅವಲೋಕಿಸಿದನು. ಅಂತೆಯೇ ತಟಸ್ಥ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳು ಪತನಗೊಂಡಾಗ ಅವುಗಳ ಧನಾತ್ಮಕ ವಿದ್ಯುದಾವೇಶ ಹೊಂದುವುದನ್ನು ಗಮನಿಸಿದನು. ಅದರಂತೆ ಧನ ವಿದ್ಯುದಾವೇಶದ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳೂ ಪತನಗೊಂಡಾಗ ಧನ ವಿದ್ಯುದಾವೇಶದ ವರ್ಧನೆಯನ್ನು ಗಮನಿಸಿದನು. ಸತುವಿನ ತಟ್ಟೆಯಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಋಣ ಆವೇಶಗಳು ಹೊರಸೂಸುವುದನ್ನು ಅವಲೋಕಿಸಿದನು.

1897ರಲ್ಲಿ ಎಲೆಕ್ಟ್ರಾನ್‌ನ ಆವಿಷ್ಕಾರದ ನಂತರ, ಉತ್ಸರ್ಜಕ ತಟ್ಟೆಯ ಮೇಲೆ ಬೆಳಕು ಬಿದ್ದಾಗ ಎಲೆಕ್ಟ್ರಾನ್‌ಗಳು ಹೊರಬರುತ್ತವೆ ಎಂಬ ವಿಚಾರವು ಸ್ಫುಟವಾಯಿತು. ಎಲೆಕ್ಟ್ರಾನ್‌ಗಳು ಋಣ ವಿದ್ಯುದಾವೇಶ ಹೊಂದಿರುವುದರಿಂದ ಅವುಗಳು ವಿದ್ಯುತ್ ಕ್ಷೇತ್ರದಲ್ಲಿ ಸಂಗ್ರಾಹಕ ತಟ್ಟೆಯ ಕಡೆಗೆ ತಳ್ಳಲ್ಪಡುತ್ತವೆ. ನೇರಳಾತೀತ ಕಿರಣಗಳು ಉತ್ಸರ್ಜಕ ಫಲಕದ ಮೇಲೆ ಬಿದ್ದಾಗ ಕಿರಣಗಳ ಆವೃತ್ತಿಯು ನಿರ್ದಿಷ್ಟವಾದ ಕನಿಷ್ಠ ಮೌಲ್ಯಕ್ಕಿಂತ ಕಡಿಮೆಯಿದ್ದರೆ ಎಲೆಕ್ಟ್ರಾನ್‌ಗಳು ಹೊರಬರಲಾರವು ಎಂದು ಹಾಲ್‌ವಾಕ್ ಮತ್ತು ಲಿನಾರ್ಡ್ ಅವರು ಅವಲೋಕಿಸಿದರು. ಈ ಕನಿಷ್ಠ ಆವೃತ್ತಿಯನ್ನು ನಿರ್ಣಾಯಕ ಆವೃತ್ತಿ ಎನ್ನುತ್ತಾರೆ. ಈ ಕನಿಷ್ಠ ಉತ್ಸರ್ಜಕ ಫಲಕದ ಸ್ವಭಾವದ ಮೇಲೆ ಅವಲಂಬಿತವಾಗಿದೆ. ಕೆಲವು ಲೋಹಗಳಾದ ಸತು, ಕ್ಯಾಡ್ಮಿಯಂ, ಮೆಗ್ನೀಷಿಯಂ ಇವುಗಳು ತಮ್ಮ ಮೇಲ್ಮೈಯಿಂದ ಎಲೆಕ್ಟ್ರಾನ್ ಉತ್ಸರ್ಜನ ಮಾಡಲು ಕಿರು ತರಂಗಾಂತರವುಳ್ಳ ನೇರಳಾತೀತ ಕಿರಣಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತವೆ ಎಂದು ತಿಳಿದು ಬಂದಿತು. ಆದಾಗ್ಯೂ ಕೆಲವು ಆಲ್ಕಲೀ ಲೋಹಗಳಾದ ಲೀಥಿಯಂ, ಸೋಡಿಯಂ, ಪೊಟಾಷಿಯಂ, ಸೀಸಿಯಂ ಮತ್ತು ರುಬಿಡಿಯಮ್‌ಗಳು ಗೋಚರ ಬೆಳಕಿಗೆ ಸ್ಪಂದಿಸುತ್ತವೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರದ ಆಂಗ್ಲಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಬಿರುಗಾಳಿಯನ್ನು ಶಾಂತಗೊಳಿಸಲು ಯತ್ನಿಸಬೇಡಿ. ನಿಮ್ಮನ್ನು ನೀವು ಶಾಂತಗೊಳಿಸಿಕೊಳ್ಳಿ, ಬಿರುಗಾಳಿ ಮುಂದೆ ಸಾಗುತ್ತದೆ.

-ಗೌತಮ ಬುದ್ಧ

ಕೈಗಾರಿಕಾ ವಲಯದ ಬೆಳವಣಿಗೆ ವೇಗ ತುಂಬಲು ಬೇಕಿದೆ ನೆರವು

ರಾಜ್ಯ ಬಜೆಟ್ ಜೊತೆಯಲ್ಲಿಯೇ ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡನೆ ಆಗಿರುವ ರಾಜ್ಯದ ಆರ್ಥಿಕ ಸಮೀಕ್ಷೆಯ ವರದಿಯು ಕೈಗಾರಿಕಾ ವಲಯದ ಬೆಳವಣಿಗೆಗೆ ಸಂಬಂಧಿಸಿದಂತೆ ಗಮನಾರ್ಹ ವಿಚಾರಗಳನ್ನು ಹೇಳಿದೆ. ಕಳೆದ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ಕೈಗಾರಿಕಾ ವಲಯವು ಹೇಳಿಕೊಳ್ಳುವ ಬೆಳವಣಿಗೆಯನ್ನೇ ಕಂಡಿಲ್ಲ. ರಾಜ್ಯದ ಕೃಷಿ ವಲಯವು ಐದು ವರ್ಷಗಳ ಅವಧಿಯಲ್ಲಿ ವಾರ್ಷಿಕ ಸರಾಸರಿ ಶೇಕಡ 16.6ರಷ್ಟು ಬೆಳವಣಿಗೆ ಸಾಧಿಸಿದೆ. ಇದೇ ಅವಧಿಯಲ್ಲಿ ಸೇವಾ ವಲಯವು ವಾರ್ಷಿಕ ಸರಾಸರಿ 11.6ರಷ್ಟು ಬೆಳವಣಿಗೆ ಸಾಧಿಸಿದೆ. ಆದರೆ ಕೈಗಾರಿಕಾ ವಲಯದ ಸರಾಸರಿ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ 6.1ರಷ್ಟು ಮಾತ್ರ. ಇದು ರಾಜ್ಯದ ಉದ್ಯೋಗ ಬೆಳವಣಿಗೆ ದರದ ಮೇಲೆಯೂ ಕೆಟ್ಟ ಪರಿಣಾಮ ಉಂಟು ಮಾಡಿದೆ ಎಂದು ಆರ್ಥಿಕ ಸಮೀಕ್ಷೆಯ ವರದಿ ಉಲ್ಲೇಖಿಸಿದೆ. ಕೋವಿಡ್-ಲಾಕ್‌ಡೌನ್ ನಂತರದ ಅವಧಿಯಲ್ಲಿ ರಾಜ್ಯದಲ್ಲಿ ಮಾತ್ರವೇ ಅಲ್ಲದೆ, ದೇಶದ ಬಹುತೇಕ ಕಡೆಗಳಲ್ಲಿ ಕೃಷಿ ವಲಯದ ಚಟುವಟಿಕೆಗಳು ಬೆಳವಣಿಗೆ ದಾಖಲಿಸಿವೆ. ನಗರಗಳಲ್ಲಿ ಉದ್ಯೋಗ ಕಳೆದುಕೊಂಡ ಹಲವರು ತಮ್ಮ ಊರುಗಳಿಗೆ ಮರಳಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದು ಇದಕ್ಕೆ ಒಂದು ಕಾರಣ ಎಂದು ಹಲವು ವರದಿಗಳು ಹೇಳಿವೆ. ಐ.ಟಿ. ಉದ್ಯಮವು ಇತರ ರಾಜ್ಯಗಳಿಗೆ ಮಾದರಿ ಅನ್ನಿಸುವ ಮಟ್ಟದಲ್ಲಿ ಕರ್ನಾಟಕದಲ್ಲಿ ಬೆಳೆದು ನಿಂತಿದೆ. ಇದು ಇಲ್ಲಿನ ಸೇವಾ ವಲಯದ ಚಟುವಟಿಕೆಗಳ ಬೆಳವಣಿಗೆಗೆ ದೊಡ್ಡ ಕೊಡುಗೆ ನೀಡುತ್ತಿದೆ. ಲಾಕ್‌ಡೌನ್ ಅವಧಿಯ ನಂತರದಲ್ಲಿ ಸೇವಾ ವಲಯದಲ್ಲಿ ಕೆಲಸ ನಿರ್ವಹಿಸುವ ಬಗೆಯಲ್ಲಿ ಬದಲಾವಣೆ ಆಯಿತು. ಮನೆಯಿಂದಲೇ ಕೆಲಸ ಮಾಡುವ ಹೊಸ ಸಂಸ್ಕೃತಿಯೊಂದು ಶುರುವಾಯಿತು. ಹಲವು ಮಿತಿಗಳ ನಡುವೆಯೂ ಸೇವಾ ವಲಯವು ದೊಡ್ಡ ಮಟ್ಟದ ಬೆಳವಣಿಗೆ ಕಂಡಿದೆ.

ಕೈಗಾರಿಕಾ ವಲಯದ ಬೆಳವಣಿಗೆ ಹೆಚ್ಚಿಸಬೇಕಾದ ಅನಿವಾರ್ಯ ಹಾಗೂ ಕೃಷಿ ವಲಯದಲ್ಲಿನ ಉದ್ಯೋಗಗಳ ಗುಣಮಟ್ಟ ಸುಧಾರಿಸುವ ಅಗತ್ಯ ಮನವರಿಕೆಯಾಗಲಿ

ಆದರೆ, ಕೈಗಾರಿಕಾ ವಲಯದ ಚಟುವಟಿಕೆಗಳು ಮಾತ್ರ ಕಳವಳ ಮೂಡಿಸುವ ಮಟ್ಟದಲ್ಲಿ ಇವೆ. ಲಾಕ್‌ಡೌನ್ ಅವಧಿಯು ಕೈಗಾರಿಕೆಗಳಿಗೆ ಭಾರಿ ಏಟು ಕೊಟ್ಟಿದೆ ಎಂಬುದರಲ್ಲಿ ಅನುಮಾನ ಇಲ್ಲ. ಕೋವಿಡ್ ನಂತರದಲ್ಲಿ ರಾಜ್ಯದ ಅರ್ಥ ವ್ಯವಸ್ಥೆಗೆ ಕೈಗಾರಿಕಾ ವಲಯದ ಕೊಡುಗೆಯ ಪ್ರಮಾಣದಲ್ಲಿ ಶೇ 1.9ರಷ್ಟು ಇಳಿಕೆ ಆಗಿದೆ. ಇದರ ಜೊತೆಯಲ್ಲಿಯೇ, ಈ ವಲಯವು ಎದುರಿಸುತ್ತಿರುವ ಹಲವು ಸಮಸ್ಯೆಗಳನ್ನು ಆರ್ಥಿಕ ಸಮೀಕ್ಷೆಯು ವಿವರಿಸಿದೆ. 'ಕೈಗಾರಿಕಾ ವಲಯಕ್ಕೆ ನೀಡಿರುವ ಬೆಂಬಲವು ಅಸಮರ್ಪಕವಾಗಿದೆ' ಎಂದು ವರದಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಕೇಂದ್ರ ಸರ್ಕಾರವು ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಆರಂಭಿಸಿದ ತುರ್ತು ಸಾಲ ಖಾತರಿ ಯೋಜನೆಯ ಅಡಿಯಲ್ಲಿ ರಾಜ್ಯದ ಕೈಗಾರಿಕೆಗಳು ಪಡೆದಿರುವ ಸಾಲದ ಪ್ರಮಾಣ ಕಡಿಮೆ ಇದೆ. ಹೀಗಾಗಿ, ರಾಜ್ಯದ ಕೈಗಾರಿಕೆಗಳಿಗೆ ಸುಲಭದಲ್ಲಿ ಸಾಲ ಸಿಗುವಂತೆ ಆಗಲು ಸರ್ಕಾರದ ಕಡೆಯಿಂದ ಒಂದಿಷ್ಟು ಕ್ರಮಗಳು ಆಗಬೇಕಿವೆ. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಸಾಲ ಸುಲಭವಾಗಿ ಸಿಗುವಂತೆ ಆಗಲು ರಾಜ್ಯ ಸರ್ಕಾರವು ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯನ್ನು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕು ಎಂದು ಕೂಡ ಆರ್ಥಿಕ ಸಮೀಕ್ಷೆಯಲ್ಲಿ ಸಲಹೆ ಮಾಡಲಾಗಿದೆ. ಇದು ಆದ್ಯತೆಯ ಮೇರೆಗೆ ಆಗಬೇಕು. ಎಂಎಸ್‌ಎಂಇ ವಲಯದ ಕೈಗಾರಿಕೆಗಳು ಬಂಡವಾಳ ಸಂಗ್ರಹಕ್ಕೆ ಷೇರು ಮಾರುಕಟ್ಟೆಯ ಕಡೆ ಮುಖ ಮಾಡುವ ವಿಚಾರವಾಗಿಯೂ ಸರ್ಕಾರದ ಪ್ರೋತ್ಸಾಹ ಸಿಕ್ಕರೆ ಒಳ್ಳೆಯದು. ಸಣ್ಣ ಉದ್ದಿಮೆಗಳು ಸಾಲ ಪಡೆಯುವುದಕ್ಕೇ ಕಷ್ಟಪಡಬೇಕಾದ ಸಂದರ್ಭ ಇದೆ. ಹೀಗಿರುವಾಗ ಅವು ಷೇರು ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸುವುದು ಸುಲಭದ ಮಾತಲ್ಲ. ಆದರೆ, ಈ ದಿಸೆಯಲ್ಲಿ ಪ್ರಯತ್ನವೊಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಕಡೆಯಿಂದ ಈಚೆಗೆ ಆಗಿದೆ. ಇದರಲ್ಲಿ ಸರ್ಕಾರವೂ ಕೈಜೋಡಿಸಬಹುದು. ಇದೊಂದು ಮಾರ್ಗ ಸಾಧ್ಯವಾದರೆ ಎಂಎಸ್‌ಎಂಇ ವಲಯದ ಉದ್ದಿಮೆಗಳು ಇನ್ನಷ್ಟು ಸ್ಪರ್ಧಾತ್ಮಕ ಆಗುತ್ತವೆ.

ಕೃಷಿ ವಲಯದಲ್ಲಿ ದೊಡ್ಡ ಮಟ್ಟದ ಬೆಳವಣಿಗೆ ಕಂಡುಬಂದಿದೆಯಾದರೂ ಅದು ಸರ್ಕಾರವನ್ನು ಸಮಾಧಾನದ ಸ್ಥಿತಿಗೆ ಒಯ್ಯಬಾರದು. ಮೂರೂ ವಲಯಗಳನ್ನು ಹೋಲಿಕೆ ಮಾಡಿ ನೋಡಿದರೆ, ಭದ್ರತೆ ಸೇರಿದಂತೆ ವಿವಿಧ ಮಾನದಂಡಗಳ ನೆಲೆಯಲ್ಲಿ ಕೃಷಿ ವಲಯದ ಉದ್ಯೋಗವು ತೀರಾ ಗುಣಮಟ್ಟದ್ದೇನೂ ಆಗಿರುವುದಿಲ್ಲ. ಈ ಉದ್ಯೋಗಗಳು ಅಸಂಘಟಿತವಾಗಿರುತ್ತವೆ, ಅಲ್ಲಿ ಕೆಲಸ ಮಾಡುವವರಿಗೆ ಆರ್ಥಿಕ ಭದ್ರತೆ ಕಡಿಮೆ. ಕೃಷಿ ವಲಯದಲ್ಲಿ ಹೆಚ್ಚಿನ ಬೆಳವಣಿಗೆ ಕಂಡುಬಂದಿರುವುದನ್ನೂ, ಕೈಗಾರಿಕಾ ವಲಯದಲ್ಲಿ ಕಡಿಮೆ ಬೆಳವಣಿಗೆ ಕಂಡುಬಂದಿರುವುದನ್ನೂ ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು. ಆಗ, ಕೈಗಾರಿಕಾ ವಲಯದ ಬೆಳವಣಿಗೆಯನ್ನು ಹೆಚ್ಚಿಸಬೇಕಾದ ಅನಿವಾರ್ಯ ಹಾಗೂ ಕೃಷಿ ವಲಯದಲ್ಲಿನ ಉದ್ಯೋಗಗಳ ಗುಣಮಟ್ಟವನ್ನು ಸುಧಾರಿಸುವ ಅಗತ್ಯಗಳು ಏಕಕಾಲದಲ್ಲಿ ಮನವರಿಕೆ ಆಗುತ್ತವೆ.

ದಿನದ ಟ್ವೀಟ್

ಜಡೇಜ ಟೆಸ್ಟ್...

ಮೊಹಾಲಿಯಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯವು ಶ್ರೀಲಂಕಾಗೆ ಮುನ್ನೂರನೆಯದ್ದು, ಭಾರತದ ವಿರಾಟ್ ಕೊಹ್ಲಿಗೆ ನೂರನೆಯದ್ದು, ಆರ್.ಅಶ್ವಿನ್ ಅವರು ಕಪಿಲ್ ದೇವ್ ದಾಖಲೆ ಮೀರಿ ನಿಂತರು. ಆದರೆ, ಈ ಪಂದ್ಯವು ಎಂದೆಂದಿಗೂ 'ಜಡೇಜ ಟೆಸ್ಟ್' ಎಂದೇ ನೆನಪಿನಲ್ಲಿ ಉಳಿಯಲಿದೆ. ಅಭಿನಂದನೆಗಳು.

ವಾಸೀಂ ಜಾಫರ್, ಭಾರತ ತಂಡದ ಮಾಜಿ ಕ್ರಿಕೆಟಿಗ

ಕಿಡಿನುಡಿ

ಭಾರತದ ಕುಟುಂಬಗಳು ವಿದೇಶಗಳಲ್ಲಿ ಶಿಕ್ಷಣಕ್ಕಾಗಿ ವರ್ಷಕ್ಕೆ 600 ಕೋಟಿ ಡಾಲರ್‌ಗಿಂತಲೂ ಹೆಚ್ಚು ಹಣವನ್ನು ವ್ಯಯಿಸುತ್ತವೆ. ಇದು, ವಿದೇಶಿ ವಿನಿಮಯದ ಅನವಶ್ಯಕವಾದ ಹರಿವು ಮಾತ್ರವಲ್ಲ, ಆ ವಿದ್ಯಾರ್ಥಿಗಳಲ್ಲಿ ಹೆಚ್ಚಿನವರು ದೇಶವನ್ನು ತೊರೆಯುತ್ತಾರೆ. ನಮ್ಮ ಸಮಾಜ ಮತ್ತು ಆರ್ಥಿಕತೆಗೆ ಅಗತ್ಯವಾಗಿ ಬೇಕಾದ ಯುವ ಪ್ರತಿಭೆಗಳು ಹೀಗೆ ಹೊರಹೋಗುವುದರಿಂದ ಆಗುವ ನಷ್ಟವನ್ನು ತಪ್ಪಿಸಲು ಸಾಧ್ಯವಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 7-3-1997

• ಉತ್ತರ ಪ್ರದೇಶದ ರಾಜ್ಯಪಾಲರ ನಡವಳಿಕೆ ಚರ್ಚೆಗೆ ಸ್ಪೀಕರ್ ಅಸ್ತು

ನವದೆಹಲಿ, ಮಾ. 6 (ಪಿಟಿಐ)– ಉತ್ತರ ಪ್ರದೇಶ ರಾಜ್ಯಪಾಲ ರೊಮೇಶ್ ಭಂಡಾರಿ ಅವರ ನಡವಳಿಕೆ ಪ್ರಶ್ನಿಸಿ ಬಿಜೆಪಿ ಮಂಡಿಸ ಬಯಸಿದ 'ವಾಗ್ದಂಡನೆ' ಮಸೂದೆಯ ಚರ್ಚೆಗೆ ಲೋಕಸಭಾಧ್ಯಕ್ಷ ಪಿ.ಎ. ಸಂಗ್ಮಾ ಅನುಮತಿ ನೀಡಿದರು. ಮಸೂದೆಯು ಮುಂದಿನ ವಾರ ಚರ್ಚೆಗೆ ಬರಲಿದೆ.

ರಾಜ್ಯದ ಕಾನೂನು ವ್ಯವಸ್ಥೆಯ ಕುರಿತು ಗೃಹ ಸಚಿವ ಇಂದ್ರಜಿತ್ ಗುಪ್ತಾ ಇತ್ತೀಚೆಗೆ ಮಾಡಿದ್ದ ಹೇಳಿಕೆಗೆ ವ್ಯತಿರಿಕ್ತವಾದ ಹೇಳಿಕೆಯನ್ನು ರಾಜ್ಯಪಾಲರು ನೀಡಿರುವ ಹಿನ್ನೆಲೆಯಲ್ಲಿ ಈ ವಿವಾದ ಉದ್ಭವಿಸಿದೆ.

• ಕೆಇಬಿ ಎಂಜಿನಿಯರುಗಳ ವಿರುದ್ಧ ಲೋಕಾಯುಕ್ತ ಮೊಕದ್ದಮೆ

ಬಾಗಲಕೋಟೆ, ಮಾ. 6– ಕೃಷ್ಣಾ ಮೇಲ್ದಂಡೆ ಯೋಜನೆಯ ಪುನರ್‌ವಸತಿ ಕಾರ್ಯಕ್ರಮದಲ್ಲಿ ಹಣದ ಅವ್ಯವಹಾರ ನಡೆಸಿದ ಆರೋಪದ ಮೇರೆಗೆ ಕೆಇಬಿಯ ನಾಲ್ವರು ಹಿರಿಯ ಎಂಜಿನಿಯರ್‌ಗಳು ಹಾಗೂ ಇಬ್ಬರು ಸೆಕ್ಷನ್ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದೆ.

ಪುನರ್‌ವಸತಿ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕೆಲಸವನ್ನು ಪೂರ್ತಿಯಾಗಿ ಮಾಡದೆ ಖೊಟ್ಟಿ ದಾಖಲೆ ಸೃಷ್ಟಿಸಿ ರೂ 25 ಲಕ್ಷ ದುರುಪಯೋಗ ಮಾಡಿಕೊಂಡ ಆರೋಪ ಇವರ ಮೇಲಿದೆ.

50 ವರ್ಷಗಳ ಹಿಂದೆ

ಮಂಗಳವಾರ, 7-3-1972

• ರಾಜ್ಯದ ಬಹುತೇಕ ಕಡೆಯಲ್ಲಿ ಸಾಮಾನ್ಯ ಮಟ್ಟ, ಕೆಲವೆಡೆ ಶೇ 60ರಿಂದ 80ರಷ್ಟು ಮತದಾನ

ಬೆಂಗಳೂರು, ಮಾ. 6– ಮತದಾನ ನಡೆದ ರಾಜ್ಯದ 107 ವಿಧಾನಸಭಾ ಕ್ಷೇತ್ರಗಳ ಬಹುತೇಕ ಕಡೆಗಳಲ್ಲಿ ಸಾಮಾನ್ಯ ಮಟ್ಟದಲ್ಲಿ ಮತದಾನ ನಡೆದರೂ, ಅಲ್ಲಲ್ಲಿ ಹಲವು ಕ್ಷೇತ್ರಗಳಲ್ಲಿ ಶೇಕಡ 60ರಿಂದ 80ರಷ್ಟು ಮತದಾರರು ಹಕ್ಕು ಚಲಾಯಿಸಿದ ವರದಿಗಳು ಬಂದಿವೆ.

ಧಾರವಾಡ ಜಿಲ್ಲೆಯ ಗದಗ ಕ್ಷೇತ್ರದಲ್ಲಿ ನಡೆದ ಶೇಕಡ 79ರಷ್ಟು ಮತದಾನ, ಅತ್ಯಂತ ಹೆಚ್ಚು, ಇದಾದ ನಂತರ ಶೇಕಡ 78ರಷ್ಟು ಮತದಾನ ನಡೆದ ನವಲಗುಂದ ಮತ್ತು ಶಿಡ್ಲಘಟ್ಟ ಬರುತ್ತವೆ.

• ಫಲಿತಾಂಶ ತಿಳಿಸಲು ಅಂಚೆ ಇಲಾಖೆ ವ್ಯವಸ್ಥೆ

ನವದೆಹಲಿ, ಮಾ. 6– ವಿಧಾನಸಭೆಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಚುನಾವಣೆಯ ಫಲಿತಾಂಶಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕಾಗಿ ಅಂಚೆ ಮತ್ತು ತಂತಿ ಇಲಾಖೆಯು ರಾಷ್ಟ್ರದಲ್ಲಿನ 21 ಕೇಂದ್ರಗಳಲ್ಲಿ ಚುನಾವಣಾ ಸುದ್ದಿಯನ್ನು ತಿಳಿಸುವ ವ್ಯವಸ್ಥೆ ಮಾಡಿದೆ.

ಹವಾಮಾನ ವೈಪರೀತ್ಯವೆಂಬ ವಿಷ ಮತ್ತು ಜೀವಿವೈವಿಧ್ಯವೆಂಬ ಅಮೃತ

ಜೀವಿವೈವಿಧ್ಯ: ಮನುಕುಲ ಉಳಿಸುವ ದಿವ್ಯೌಷಧ!

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಹವಾಗುಣ ಬದಲಾವಣೆ ಕುರಿತಾಗಿ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಚರ್ಚೆಯಾಗುತ್ತಿದೆ. ಭೂಮಿಯೆಂಬ ಬೃಹತ್ ಕಾಯಕ್ಕೆ ಬಂದಿರುವ ಜ್ವರದ ಸೂಚ್ಯಂಕವನ್ನು ಏರದ ಹಾಗೆ ನೋಡಿಕೊಳ್ಳುವುದು ಹೇಗೆ ಎಂದು ವಿಜ್ಞಾನಿಗಳು ತಲೆಕೆಡಿಸಿಕೊಂಡಿದ್ದಾರೆ. ಹವಾಗುಣ ಬದಲಾವಣೆ ಮತ್ತು ಜೀವಿವೈವಿಧ್ಯ ಸಂರಕ್ಷಣೆ ವಿಷಯಗಳನ್ನು ಇಷ್ಟು ವರ್ಷ ಬೇರೆ ಬೇರೆಯಾಗಿ ನೋಡಲಾಗುತ್ತಿತ್ತು. ಆದರೆ, ಅದು ಸರಿಯಾದ ಕ್ರಮವಲ್ಲ. ಎರಡೂ ಗಂಭೀರ ವಿಷಯಗಳು ಒಂದಕ್ಕೊಂದು ನಂಟು ಹಾಕಿಕೊಂಡಿವೆ. ಅವುಗಳನ್ನು ಬಿಡಿ ಬಿಡಿಯಾಗಿ ಪರಿಗಣಿಸಿದ್ದರಿಂದಲೇ ಎರಡು ಸಮಸ್ಯೆಗಳಿಗೂ ಪರಿಹಾರ ಮರೀಚಿಕೆಯಾಗಿದೆ. ಇದಕ್ಕೆ ಪರಿಹಾರವೆಂದರೆ, ಎರಡನ್ನೂ ಕ್ರೋಡೀಕರಿಸಿ ಏಕತ್ರ ಸಮಸ್ಯೆಯೆಂದೇ ಪರಿಗಣಿಸಿದಲ್ಲಿ ಪರಿಹಾರ ಸಾಧ್ಯ ಎಂಬ ವಾದ ಮುನ್ನೆಲೆಗೆ ಬಂದಿದೆ. ಅದು ಹೇಗೆ ಎಂಬುದನ್ನು ಕೊಂಚ ವಿವರವಾಗಿ ನೋಡೋಣ.

2020ರ ಡಿಸೆಂಬರ್ ತಿಂಗಳಲ್ಲಿ ಐಪಿಸಿಸಿ (ಹವಾಮಾನ ಬದಲಾವಣೆ ಕುರಿತ ಇಂಟರ್‌ಗವರ್ನಮೆಂಟಲ್ ಪ್ಯಾನಲ್) ಸಭೆಯಲ್ಲೇ ಈ ವಿಷಯ ಚರ್ಚೆಯಾಗಿತ್ತು. ಜಗತ್ತಿನ ಎಲ್ಲ ದೇಶಗಳೂ ಈ ಎರಡೂ ಸಮಸ್ಯೆಗಳನ್ನು ಸಂಯೋಜಿತ ನೆಲೆಯಲ್ಲೇ ಪರಿಗಣಿಸಬೇಕು ಮತ್ತು ಪ್ರಕೃತಿ ಆಧಾರಿತ ಪರಿಹಾರಗಳನ್ನು ಕಂಡುಕೊಳ್ಳಬೇಕು. ಹವಾಮಾನದಲ್ಲಿ ಕ್ಷಿಪ್ರವಾಗಿ ಬಿಸಿ ಹೆಚ್ಚಾಗುತ್ತಿದೆ. ಭೂಬಿಸಿ ಏರಿಕೆಯಿಂದಾಗಿ ಪ್ರಕೃತಿ ವಿಕೋಪಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ನೈಸರ್ಗಿಕ ವಿಪತ್ತನ್ನು ಎದುರಿಸುವುದು ಮತ್ತು ಅದರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬದುಕುವುದು ಹೇಗೆ ಎಂದು ಪ್ರತೀ ದೇಶ ಆಂತರಿಕವಾಗಿ ರಾಷ್ಟ್ರೀಯ ಹೊಂದಾಣಿಕೆ ಯೋಜನೆಯನ್ನು ರೂಪಿಸುತ್ತಿದೆ. ಈ ಯೋಜನೆಗಳು ನಿಸರ್ಗ ಆಧಾರಿತವಾಗಿರಬೇಕು ಎಂದು ಐಪಿಸಿಸಿ ಸಲಹೆ ನೀಡಿದೆ.

ಹವಾಮಾನ ವೈಪರೀತ್ಯ ಎಂಬುದು ಜಾಗತಿಕ ಸಮಸ್ಯೆಗಳನ್ನು ಬಹುಸ್ತರಗಳಲ್ಲಿ ಕಾಡಲಿದೆ. ಜೀವಿವೈವಿಧ್ಯ ತಾಣಗಳು ಈಗಾಗಲೇ ಒತ್ತಡದಿಂದ ಬಳಲುತ್ತಿವೆ. ಸಮುದ್ರ ಮಟ್ಟ ಏರುತ್ತಿರುವುದರಿಂದಾಗಿ ಹವಳ ದಿಬ್ಬಗಳು ಸಾಯುತ್ತಿವೆ. ಇದೊಂದು ಉದಾಹರಣೆಯಷ್ಟೆ. ಜಾಗತಿಕ ಜೀವಿವೈವಿಧ್ಯ ಖಜಾನೆ ಬಹಳ ವೇಗವಾಗಿ ಬರಿದಾಗುತ್ತಿದೆ. ತಮ್ಮ ಆವಾಸಸ್ಥಾನ ವಾಸಕ್ಕೆ ಯೋಗ್ಯವಾಗಿಲ್ಲವೆಂದರೆ ಅನೇಕ ಜೀವಿಗಳು ವಿನಾಶ ಹೊಂದಲಿವೆ.

ಈಗಿನ ತುರ್ತುಪರಿಸ್ಥಿತಿಯಲ್ಲಿ ಜಾಗತಿಕವಾಗಿ ಎಲ್ಲಾ ಜೀವಿವೈವಿಧ್ಯವನ್ನು ಉಳಿಸಲು ಸಾಧ್ಯವಿಲ್ಲದೇ ಇದ್ದರೂ ಜಗತ್ತಿನ ಎಲ್ಲ ನಾಗರಿಕರೂ ಏಕತ್ರವಾಗಿ ಒಂದೊಂದು ಗುಳಿಗೆಯಂತೆ ವರ್ತಿಸಿದರೆ ಜೀವಿವೈವಿಧ್ಯವನ್ನು ಉಳಿಸಬಹುದು ತನ್ಮೂಲಕ ಹವಾಮಾನ ವೈಪರೀತ್ಯದ ಪರಿಣಾಮಗಳನ್ನು ಇಳಿಸಬಹುದು. ಇದೊಂದೇ ಈಗ ಉಳಿದಿರುವ ಏಕೈಕ ಆಶಾಕಿರಣ.

ಕೈಗಾರಿಕಾಪೂರ್ವ ಯುಗಕ್ಕೆ ಹೋಲಿಸಿದರೆ ಭೂಮಿಯ ಸರಾಸರಿ ಉಷ್ಣಾಂಶ ಈಗಾಗಲೇ 1 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗಿದೆ. ಇದು ಇಡೀ ಜೀವಿವೈವಿಧ್ಯದ ಮೇಲೆ ಅಗಾಧ ದುಷ್ಪರಿಣಾಮ ಬೀರಿದೆ. ಉತ್ತರ- ದಕ್ಷಿಣ ಧ್ರುವಗಳ ಹಿಮ ಕರಗುವಿಕೆಯಿಂದಾಗಿ ಹಿಮಕರಡಿಗಳು ಆವಾಸಸ್ಥಾನ ಕಳೆದುಕೊಂಡಿವೆ. ಧ್ರುವ ಪ್ರದೇಶದಲ್ಲಿ ವಾಸಿಸುವ ಪ್ರಾಣಿಗಳು, ಪಕ್ಷಿಗಳು, ಜಲಚರಗಳು ನೂರಾರು ಕಿಲೊಮೀಟರ್ ದೂರದಲ್ಲಿ ಸುರಕ್ಷಿತ ಸ್ಥಳಗಳನ್ನು ಅರಸಿ ವಲಸೆ ಪ್ರಕ್ರಿಯೆ ಪ್ರಾರಂಭಿಸಿವೆ. ತಮ್ಮದಲ್ಲದ ಆವಾಸಸ್ಥಾನದಲ್ಲಿ ಹೊಂದಿಕೊಳ್ಳುವುದು ಅವುಗಳಿಗೆ ಕಷ್ಟವಾಗುತ್ತಿದೆ. ಆಳದ ಸಮುದ್ರದಲ್ಲಿ ಆಮ್ಲಜನಕ ಕೊರತೆ ಪ್ರದೇಶ ವಿಸ್ತರಣೆಯಾಗುತ್ತಿದೆ. ಬೆಚ್ಚಗಿನ ನೀರಿನಲ್ಲಿ ಆಮ್ಲಜನಕ ಬೇಗ ಕರಗುವುದಿಲ್ಲ. ಈ ವಿದ್ಯಮಾನವು ನೀಲಿ ತಿಮಿಂಗಿಲದಂತಹ ಜಲಚರಗಳನ್ನು ಅನಿವಾರ್ಯವಾಗಿ ನೀರಿನ ಮೇಲ್ಮಟ್ಟಕ್ಕೆ ಬರುವ ಹಾಗೆ ಮಾಡಿದೆ. ಇದರಿಂದ ಅವು ಮೀನುಗಾರರ ಯಾಂತ್ರಿಕ ದೋಣಿಗಳಿಗೆ ಸಿಕ್ಕಿ ಅಸುನೀಗುತ್ತಿವೆ.

ಸಮುದ್ರ ಮಟ್ಟದಿಂದ ಬರೀ ಎರಡು ಮೀಟರ್ ಎತ್ತರದಲ್ಲಿರುವ ಕಿರಿಬಾಟಿ ಎಂಬ ದ್ವೀಪ ಸಮೂಹ ಮುಳುಗುತ್ತಿದೆ. ಒಂದು ಲಕ್ಷಕ್ಕಿಂತ ತುಸು ಹೆಚ್ಚು ಜನಸಂಖ್ಯೆ ಹೊಂದಿರುವ ಚಿಕ್ಕ ದೇಶವಾದ ಕಿರಿಬಾಟಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇನ್ನಿಲ್ಲದಂತೆ ಹೆಣಗುತ್ತಿದೆ. ಜೋರಾಗಿ ಅಪ್ಪಳಿಸುವ ಸಮುದ್ರದ ಅಲೆಗಳು ದ್ವೀಪದ ಒಳಭಾಗಕ್ಕೆ ಬಂದು ಅಲ್ಲಿನ ಸಿಹಿನೀರನ್ನು ಕಲುಷಿತಗೊಳಿಸುತ್ತವೆ. ಅಲ್ಲಿನ ಮುಖ್ಯ ಕಸುಬು ಕೃಷಿ, ಮೀನುಗಾರಿಕೆ ಮತ್ತು ಪ್ರವಾಸೋದ್ಯಮ. ಸಮುದ್ರಮಟ್ಟದ ಏರಿಕೆಯಿಂದಾಗಿ ಮುಳುಗುತ್ತಿರುವ ದೇಶವನ್ನು ಉಳಿಸಿಕೊಳ್ಳಲು ಅಲ್ಲಿನ ಅಧ್ಯಕ್ಷ ಮಾಮಾವೋ ಅವರು ದ್ವೀಪದ ಎತ್ತರವನ್ನೇ ಇನ್ನಷ್ಟು ಎತ್ತರಿಸಲು ಯೋಜನೆ ರೂಪಿಸಿದ್ದಾರೆ. ಹೊರಗಿನಿಂದ ಮರಳು- ಮಣ್ಣು ತಂದು ದ್ವೀಪ ಎತ್ತರಿಸುವ ದುಬಾರಿ ಯೋಜನೆ ಎಷ್ಟರಮಟ್ಟಿಗೆ ಫಲ ನೀಡುವುದೋ ಕಾಲವೇ ಉತ್ತರಿಸಬೇಕು.

ಈಶಾನ್ಯ ಭಾರತ ಹಾಗೂ ಬಾಂಗ್ಲಾದೇಶದಗುಂಟ ಇರುವ ಕಾಂಡ್ಲಾ ಕಾಡುಗಳು ನಾಶವಾಗುತ್ತಿರುವ ಹಿನ್ನೆಲೆಯಲ್ಲಿ, ನೆಲವಾಸಿಯಾದ ಸುಂದರಬನದ ಬೆಂಗಾಲ್ ಟೈಗರ್‌ಗಳ ಆವಾಸಸ್ಥಾನ ಇಲ್ಲವಾಗುತ್ತಿದೆ. ಇದರಿಂದಾಗಿ, 2070ರ ಹೊತ್ತಿಗೆ ಈ ಸುಂದರ ಪ್ರಾಣಿಗಳು ವಿನಾಶದ ಅಂಚಿಗೆ ತಲುಪಲಿವೆ. ಭೂಬಿಸಿ ಏರಿಕೆ ಎಲ್ಲ ಪ್ರಾಣಿಗಳಿಗೂ ಕೆಡುಕನ್ನುಂಟು ಮಾಡುವುದಿಲ್ಲ. ಪೀಡೆ ಎಂದು ಕರೆಯಲಾಗುವ ಸೊಳ್ಳೆ, ತೊಗಟೆ- ಕಾಂಡಕೊರಕ ಕೀಟ, ಜೆಲ್ಲಿ ಫಿಶ್ ಮುಂತಾದವುಗಳ ಸಂಖ್ಯೆ ಏರಲಿದೆ.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲೂ ಕೆಲವು ಪ್ರಭೇದಗಳು ಹೊಂದಾಣಿಕೆಯ ಪ್ರಯತ್ನ ಮುಂದುವರಿಸಿವೆ. ಉದಾಹರಣೆಗೆ, ಫಿನ್ಲೆಂಡ್‌ನ ಬಿಳಿಬಣ್ಣದ ಗೂಬೆಗಳು ಅಲ್ಲಿನ ಬಿಳಿಯ ಹಿಮಕವಚಗಳು ಕ್ಷೀಣಿಸುತ್ತಿರುವುದರಿಂದಾಗಿ ತಮ್ಮ ಬಣ್ಣವನ್ನು ಬೂದು ಬಣ್ಣಕ್ಕೆ ಬದಲಾಯಿಸಿಕೊಂಡಿವೆ. ಈ ಭಾಗ್ಯ ಎಲ್ಲ ಜೀವಿಗಳಿಗೂ ಇರುವುದಿಲ್ಲ. ಗರ್ಭಾವಧಿ ಹೆಚ್ಚಿರುವ ಪ್ರಾಣಿಗಳು ಬದಲಾಗುವ ಹವಾಮಾನಕ್ಕೆ ಬೇಗ ಹೊಂದಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲ. ಏರುತ್ತಿರುವ ಬಿಸಿಯನ್ನು 2070ರ ಹೊತ್ತಿಗೆ 1.5 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತಗೊಳಿಸದಿದ್ದಲ್ಲಿ, ಭೂಮಂಡಲದ ಮೂರನೇ ಒಂದು ಭಾಗದಷ್ಟು ಜೀವಿವೈವಿಧ್ಯ ಶಾಶ್ವತವಾಗಿ ನಶಿಸಿಹೋಗಲಿದೆ.



ಸಮುದ್ರಮಟ್ಟ ಏರುವುದರಿಂದ ತೀರ ಪ್ರದೇಶದಲ್ಲಿ ವಾಸಿಸುವವರ ಆವಾಸಸ್ಥಾನಗಳು ಮುಳುಗಿಹೋಗಲಿದ್ದು, ಆ ಜನಸಂಖ್ಯೆ ಘಟ್ಟ ಪ್ರದೇಶಗಳತ್ತ ವಲಸೆ ಬರಬೇಕಾಗುತ್ತದೆ. ಭಾರತದಂತಹ ಹೆಚ್ಚು ಜನಸಂಖ್ಯೆಯ ದೇಶದಲ್ಲಿ, ಲಕ್ಷಾಂತರ ಜನರ ಘಟ್ಟ ವಲಸೆ ಮತ್ತಷ್ಟು ಜೀವಿವೈವಿಧ್ಯ ನಾಶಕ್ಕೆ ಕಾರಣವಾಗುತ್ತದೆ. ಹವಾಮಾನ ವೈಪರೀತ್ಯ ಮತ್ತು ಜೀವಿವೈವಿಧ್ಯ ನಾಶ ಎರಡೂ ಪರಸ್ಪರ ಅವಲಂಬಿತ ಸಮಸ್ಯೆಗಳು ಹಾಗೂ ಪರಿಹಾರವೂ ಪರಸ್ಪರ ಅವಲಂಬಿತವೇ ಆಗಿದೆ. ಜೀವಿವೈವಿಧ್ಯವನ್ನು ಉಳಿಸದೇ ಉಷ್ಣಾಂಶಕ್ಕೆ ಅಂಕುಶ ಹಾಕಲು ಸಾಧ್ಯವಿಲ್ಲ ಹಾಗೂ ಜೀವಿವೈವಿಧ್ಯದ ನೆರವಿಲ್ಲದೇ ಉಷ್ಣಾಂಶ ಏರಿಕೆಯು ನಿಯಂತ್ರಣಕ್ಕೆ ಒಳಪಡದು.

ಭೂಬಿಸಿ ಏರಿಕೆ ತಡೆಯಲು ಅನೇಕ ನೀತಿ ನಿಯಮಗಳನ್ನು ಜಗತ್ತಿನ ಎಲ್ಲ ದೇಶಗಳೂ ರೂಪಿಸಿವೆ ಹಾಗೂ ಜೀವಿವೈವಿಧ್ಯ ಸಂರಕ್ಷಣೆಗಿಂತ ಹೆಚ್ಚು ಒತ್ತು ನೀಡಿವೆ. ಪರಿಸರಸ್ನೇಹಿ ಎಂದು ಜೈವಿಕ ಇಂಧನಗಳಿಗೆ ಒತ್ತು ನೀಡಲಾಗುತ್ತಿದೆ. ಆದರೆ, ಆಗ್ನೇಯ ಏಷ್ಯಾದ ಜೀವಿವೈವಿಧ್ಯದ ತವರಾದ ದಟ್ಟಾರಣ್ಯಗಳನ್ನು ಸವರಿ ಅಲ್ಲಿ ಪಾಮ್ ಎಣ್ಣೆ ಬೆಳೆದು, ಅದನ್ನು ಆಸ್ಟ್ರೇಲಿಯಾದ ಕಾರುಗಳಿಗೆ ಬಳಸಿದರೆ ಅದು ಹೇಗೆ ಪರಿಸರಸ್ನೇಹಿ ಇಂಧನವಾದೀತು ಎಂದು ಪ್ರಶ್ನಿಸುತ್ತಾರೆ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ವಿಜ್ಞಾನಿ ಡಾ. ಸರ್ಚಿಂಜರ್. ಜೈವಿಕ ತ್ಯಾಜ್ಯದಿಂದ ಜೈವಿಕ ಇಂಧನ ಮಾತ್ರ ಪರಿಸರಸ್ನೇಹಿ ಆಗಬಲ್ಲದು.

ಕೈಗಾರಿಕೋತ್ತರ ನವನಾಗರಿಕತೆಯ ವಿಜ್ಞಾನ, ತಂತ್ರಜ್ಞಾನಗಳ ದಾಂಗುಡಿ, ಅಭಿವೃದ್ಧಿಯ ನಾಗಾಲೋಟ, ದುರಾಸೆಯ ಒತ್ತುವರಿ, ಅಣೆಕಟ್ಟುಗಳು, ರೈಲು- ಹೆದ್ದಾರಿ ಮಾರ್ಗಗಳು ಹೀಗೆ ಹತ್ತು ಹಲವು ಮಾನವ ನಿರ್ಮಿತ ಮತ್ತು ಕೇಂದ್ರಿತ ಯೋಜನೆಗಳೇ ಇಂದು ಈ ಪರಿಸ್ಥಿತಿಗೆ ಕಾರಣವಾಗಿವೆ. ಭೂಜ್ವರದ ತಾಪ ಮನೆಮನೆಗೂ ತಟ್ಟುತ್ತಿದೆ. ಸಾಗರ ತಾಲ್ಲೂಕಿನ ಚಿಪ್ಪಳಿಯ ಹುಣಸೆಕಟ್ಟೆ ಕೆರೆಗೆ ಉತ್ತರ ಭಾರತದಿಂದ ಹತ್ತಾರು ಸಾವಿರ ಸಂಖ್ಯೆಯಲ್ಲಿ ವಲಸೆ ಬರುತ್ತಿದ್ದ ಕಬ್ಬಕ್ಕಿಗಳು ಈ ವರ್ಷ ಬರಲೇ ಇಲ್ಲ. ನಾಗಸಂಪಿಗೆ ಮರ ಹೂ ಬಿಡಲಿಲ್ಲ. ಗುಡ್ಡೇಗೇರು ಹಣ್ಣಾಗಲೇ ಇಲ್ಲ. ಇಂತಹ ನೂರಾರು ವೈಪರೀತ್ಯಗಳು ನಮ್ಮ ನಡುವೆ ನಡೆಯುತ್ತಿವೆ. ಗಮನಿಸಬೇಕಾದ ಕಣ್ಣುಗಳು ಹಿಜಾಬು– ಕೇಸರಿ ಗಲಾಟೆಯಲ್ಲಿ ಮಗ್ನವಾಗಿವೆ. ಪರಿಹಾರ ಹುಡುಕಬೇಕಾದ ಅಧಿಕಾರಿ ವರ್ಗಕ್ಕೆ ಇಂತಹ ಸೂಕ್ಷ್ಮಗಳು ಕಾಣುವುದೇ ಇಲ್ಲ.

ಒಂದು ಅಧ್ಯಯನದ ಪ್ರಕಾರ, ಈ ಭೂಮಿಯ ಜ್ವರವನ್ನು ಕಡಿಮೆ ಮಾಡಬೇಕೆಂದರೆ, ಪ್ರಪಂಚದ ಒಟ್ಟೂ ಭೌಗೋಳಿಕ ಪ್ರದೇಶದ ಅರ್ಧ ಭಾಗದಲ್ಲಿ ಜೀವಿವೈವಿಧ್ಯ ಸಂರಕ್ಷಣೆಯಾಗಬೇಕು. ಜೀವಿವೈವಿಧ್ಯವೆಂಬ ಗಂಟೇ ಮನುಕುಲದ ಉಳಿವಿಗೆ ಏಕೈಕ ಮಾರ್ಗ.

ಚುರುಮುರಿ

ಬೆಕ್ಕಣ್ಣನ ವಾದವಿರಾಮ

• ಸುಮಂಗಲಾ

'ಆಪರೇಶನ್ ಗಂಗಾ ಅಂತ ಮೊನ್ನಿಯಿಂದ ಟೀವಿವಳಗ ಬಡಕೊಳ್ಳಾಕ ಹತ್ಯಾರ. ಗಂಗಾನದಿಗೆ ಎದಕ್ಕ ಈಗ ಆಪರೇಶನ್ ಮಾಡಾಕ ಹತ್ಯಾರ? ಆವಾಗೇ ಅದೇನೋ ನಮಾಮಿ ಗಂಗಾ ಅಂತ ಮಾಡಿ, ಭಯಂಕರ ಸ್ವಚ್ಛ ಮಾಡೀವಿ ಅಂತಿದ್ದರಲ್ಲ' ಬೆಕ್ಕಣ್ಣ ತಲೆ ಕೆರೆಯುತ್ತ ಕೇಳಿತು.

'ಎಷ್ಟರ ಪೆದ್ದುಗುಂಡಿ ಅದೀಯಲೇ... ಸುದ್ದಿ ಪೂರಾ ಕೇಳಿ ಮಾತಾಡು. ಆಪರೇಶನ್ ಗಂಗಾ ಅಂದ್ರ ಉಕ್ರೇನಿನಾಗೆ ಮೆಡಿಕಲ್ ಓದಾಕೆ ಹೋದ ನಮ್ಮ ಹುಡಗ್ರನ್ನ ವಿಮಾನದಾಗೆ ಕರ್ಕಂಡು ಬರತಾರ' ಎಂದು ವಿವರಿಸಿದೆ.

'ಅವ್ರೆಲ್ಲ ಮೆಡಿಕಲ್ ಹುಡುಗ್ರು ಅಂದರ ಈ ಯೋಜನೆಗೆ ಆಪರೇಶನ್ ಚರಕ ಅಥವಾ ಆಪರೇಶನ್ ಸುಶ್ರುತ ಅಂತ ಹೆಸರು ಇಡಬೇಕಿತ್ತು, ಹೌದಿಲ್ಲೋ' ಎಂದು ಅಗದಿ ಶಾಣ್ಯಾತನದ ಪ್ರಶ್ನೆ ಕೇಳಿತು ಬೆಕ್ಕಣ್ಣ.

'ಎಷ್ಟರ ಬೆರಕಿ ಅದೀಯಲೇ... ಈಗ ಚುನಾವಣೆ ನಡಿತಾ ಇರದು ಉತ್ತರಪ್ರದೇಶದಾಗೆ. ಚರಕ, ಸುಶ್ರುತ ಅಂತೆಲ್ಲ ಎದಕ್ಕ ಹೆಸರಿಡತಾರ' ಎಂದೆ ನಾನು.

'ಹಂಗೇನು' ಎನ್ನುತ್ತ ಒಂದಿಷ್ಟು ಸುದ್ದಿ ತಿರುವಿ ಹಾಕಿದ ಬೆಕ್ಕಣ್ಣ, 'ಏನೇ ಹೇಳು... ನಮ್ ಮೋದಿಮಾಮಾ ಇಷ್ಟ್ ಕಾಳಜಿ ಮಾಡ್ತಾನಂತ ಹುಡುಗ್ರು ಸುರಕ್ಷಿತವಾಗಿ ಬರಾಕಹತ್ಯರ. ಅವ್ರಿಗೆ ಸಹಾಯ ಮಾಡಕ್ಕಂತ ಉಕ್ರೇನ್ ಗಡಿ ದೇಶಗಳಿಗೆ ನಾಕೈದು ಸಚಿವರನ್ನ ಕಳಿಸ್ಯಾನ, ಏರ್‌ಫೋರ್ಸ್ ವಿಮಾನ ಕಳಿಸಿ ಎಷ್ಟೊಂದು ವಿದ್ಯಾರ್ಥಿಗಳನ್ನ ಕರ್ಕಂಡು ಬಂದಾರ' ಎಂದು ಗುಣಗಾನ ಶುರು ಮಾಡಿತು.

'ಸರಿಯಾಗಿ ಓದಲೇ. ಎಲ್ಲಾ ನಾವೇ ಮಾಡೀವಿ ಅಂತ ನಿಮ್ಮ ಜ್ಯೋತಿರಾದಿತ್ಯ ಅಂಕಲ್ ಅಲ್ಲಿ ಬುರುಡೆ ಬಿಡ್ತಿದ್ದನಂತೆ. ನಿಮ್ಮ ಹುಡುಗ್ರಿಗೆ ಹೊಟ್ಟೆಗೆ ಹಾಕಿ, ಜಾಗ ಕೊಟ್ಟಿದ್ದು ನಾನು, ನೀವಲ್ಲ ಅಂತ ರೊಮೇನಿಯಾದ ಮೇಯರ್ ಮಸ್ತ್ ಝಾಡಿಸ್ಯಾನ' ಎಂದು ಛೇಡಿಸಿದೆ.

'ಹೋಗ್ಲಿ ಬಿಡತ್ತಾಗೆ. ಕರುನಾಡಿನ ಬಜೆಟ್ ನೋಡೀಯೇನ್... ಕಾಶೀಯಾತ್ರೆ ಮಾಡೋರಿಗೆ ಬೊಮ್ಮಾಯಿ ಅಂಕಲ್ ಸಹಾಯಧನ ಕೊಡ್ತಾನಂತ. ನಾವು ಕಾಶಿಯಾತ್ರೆಗರ ಹೋಗೂಣು... ಲಗೂನೆ ಹೆಸರು ಹಚ್ಚು' ಎಂದು ವಾದವಿರಾಮ ಘೋಷಿಸಿತು!

ಸಂಗತ

ಯುಜಿಸಿ ಪರೀಕ್ಷೆ: ಏಕೆ ಈ ತಾರತಮ್ಯ?

ಈ ಫಲಿತಾಂಶದಲ್ಲಿ ಕನ್ನಡ ಅಭ್ಯರ್ಥಿಗಳ ಸ್ಥಿತಿ ಶೋಚನೀಯವಾಗಿದೆ

• ಗೋವಿಂದರಾಜು ಎಂ. ಕಲ್ಲೂರು
ಅಮರ್ ಬಿ.

ಈ ಬಾರಿಯ ಎನ್‌ಇಟಿ/ ಜೆಆರ್‌ಎಫ್ ಪರೀಕ್ಷೆಯಲ್ಲಿ ಕನ್ನಡ ಸ್ನಾತಕೋತ್ತರ ಪದವೀಧರರು ಎದುರಿಸಿದ ಸಮಸ್ಯೆಗಳು ತೀವ್ರ ಸ್ವರೂಪದವು. ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಹಿಂದಿ ಪ್ರಶ್ನೆಗಳು ಬಂದವು, ಕೆಲವು ಅಭ್ಯರ್ಥಿಗಳಿಗೆ ಕಂಪ್ಯೂಟರ್ ಪರದೆಯಲ್ಲಿ ಪ್ರಶ್ನೆಪತ್ರಿಕೆಯೇ ತೆರೆದುಕೊಳ್ಳಲಿಲ್ಲ, ಯುಜಿಸಿಯು ಹಲವು ಕನ್ನಡದ ವಿದ್ಯಾರ್ಥಿಗಳಿಗೆ ಮರುಪರೀಕ್ಷೆಯ ಅವಕಾಶವನ್ನು ನಿರಾಕರಿಸಿತು, ಕೊನೆಗೆ ಪ್ರಕಟವಾದ ಕೀ ಉತ್ತರಗಳಲ್ಲೂ ಸಮಸ್ಯೆ ಉಂಟಾಯಿತು.

ಈ ಸಮಸ್ಯೆಯ ಕುರಿತು ಬರಗೂರು ರಾಮಚಂದ್ರಪ್ಪ ಅವರು ಯುಜಿಸಿಗೆ ಪತ್ರ ಬರೆದು ಗೊಂದಲವನ್ನು ಬಗೆಹರಿಸಲು ಕೋರಿದರು. ಎಲ್.ಹನುಮಂತಯ್ಯ ಅವರು ಪ್ರಕರಣವನ್ನು ರಾಜ್ಯಸಭೆಯಲ್ಲಿ ಪ್ರಸ್ತಾಪಿಸಿದರು. ಆದರೆ ಈ ಎಲ್ಲ ವಿನಂತಿಗಳನ್ನು ನಿರ್ಲಕ್ಷಿಸಿದ ಯುಜಿಸಿಯು ಫೆ. 19ರಂದು ಫಲಿತಾಂಶವನ್ನು ಪ್ರಕಟಿಸಿತು. ಈ ಫಲಿತಾಂಶದಲ್ಲಿ ಕನ್ನಡ ಅಭ್ಯರ್ಥಿಗಳ ಸ್ಥಿತಿ ಶೋಚನೀಯ. ಕನ್ನಡದಲ್ಲಿ 100 ಅಭ್ಯರ್ಥಿಗಳು ಬೋಧನೆಯ ಅರ್ಹತೆ ಗಳಿಸಿದರೆ, ಕೇವಲ 15 ಅಭ್ಯರ್ಥಿಗಳು ಫೆಲೊಶಿಪ್‌ಗೆ ಆಯ್ಕೆಯಾಗಿದ್ದಾರೆ.

ಕೋವಿಡ್ ಕಾರಣದಿಂದ ಮುಂದೂಡಲ್ಪಟ್ಟ ಸತತ ಎರಡು ಪರೀಕ್ಷೆಗಳ ನಂತರ ಈ ಬಾರಿ ಪರೀಕ್ಷೆ ನಡೆದುದರಿಂದ ಸಹಜವಾಗಿಯೇ ಪರೀಕ್ಷೆ ಬರೆದವರ ಸಂಖ್ಯೆಯೂ ಹೆಚ್ಚಾಗಿತ್ತು. ತಾರ್ಕಿಕವಾಗಿ ಯುಜಿಸಿ ಕೊಡುವ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗುವವರ ಸಂಖ್ಯೆಯೂ ದುಪ್ಪಟ್ಟಾಗಿರಬೇಕಿತ್ತು. ಆದರೆ ಫಲಿತಾಂಶ ವ್ಯತಿರಿಕ್ತವಾಗಿದೆ. ಕಳೆದ ಸಲ ಹಿಂದಿ ವಿಷಯದಲ್ಲಿ 816 ಅಭ್ಯರ್ಥಿಗಳು ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗಿದ್ದರೆ, ಈ ಬಾರಿ 819 ಅಭ್ಯರ್ಥಿಗಳು ಆಯ್ಕೆ ಆಗಿದ್ದಾರೆ. ಸಂಸ್ಕೃತ ಅಭ್ಯರ್ಥಿಗಳ ಸಂಖ್ಯೆ 126ರಿಂದ 212ಕ್ಕೆ ಏರಿದೆ. ಅಲ್ಲದೆ, ಜೆಆರ್‌ಎಫ್‌ಗೆ ಆಯ್ಕೆಯಾದ ಮಿಕ್ಕ ಭಾಷೆಗಳ ಅಭ್ಯರ್ಥಿಗಳ ಸಂಖ್ಯೆಯೂ ಏರಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ತಮಿಳು 20ರಿಂದ 84ಕ್ಕೆ, ತೆಲುಗು 34ರಿಂದ 44ಕ್ಕೆ, ಬೆಂಗಾಲಿ 41ರಿಂದ 86ಕ್ಕೆ ಏರಿಕೆ ಕಂಡಿವೆ. ವಸ್ತುಸ್ಥಿತಿ ಹೀಗಿದ್ದಾಗ ಯಾವ ಕಾರಣಕ್ಕಾಗಿ ಕನ್ನಡ ಅಭ್ಯರ್ಥಿಗಳ ಆಯ್ಕೆ ಸಂಖ್ಯೆಯನ್ನು ಇಳಿಸಲಾಯಿತು ಎನ್ನುವುದನ್ನು ಯುಜಿಸಿ ಸ್ಪಷ್ಟಪಡಿಸಬೇಕಿದೆ.

ಈ ತಾರತಮ್ಯ ಧೋರಣೆಯು ಈ ಬಾರಿಯ ಪರೀಕ್ಷೆಗಷ್ಟೇ ಸಂಬಂಧಿಸಿದ್ದಲ್ಲ. 2018ರ ಡಿಸೆಂಬರ್‌ನಿಂದ ಇಲ್ಲಿಯವರೆಗೂ ಒಟ್ಟು 5 ಬಾರಿ ಎನ್‌ಇಟಿ/ಜೆಆರ್‌ಎಫ್ ಪರೀಕ್ಷೆ ನಡೆದಿದೆ. ಪ್ರತೀ ಪರೀಕ್ಷೆಯಲ್ಲಿ ಜೆಆರ್‌ಎಫ್‌ಗೆ ಆಯ್ಕೆಯಾದ ಹಿಂದಿ ಅಭ್ಯರ್ಥಿಗಳ ಸಂಖ್ಯೆ ಕ್ರಮವಾಗಿ 278, 283, 389, 816 ಹಾಗೂ 819, ಸಂಸ್ಕೃತ ಅಭ್ಯರ್ಥಿಗಳ ಸಂಖ್ಯೆ 54, 137, 142, 126 ಹಾಗೂ 212 ಆಗಿದೆ. ಆದರೆ ಆಯ್ಕೆಯಾದ ಕನ್ನಡ ಅಭ್ಯರ್ಥಿಗಳ ಸಂಖ್ಯೆ 48, 34, 50, 30 ಮತ್ತು 15 ಆಗಿದೆ.

ವರ್ಷದಿಂದ ವರ್ಷಕ್ಕೆ ಹಿಂದಿ ಮತ್ತು ಸಂಸ್ಕೃತ ಅಭ್ಯರ್ಥಿಗಳ ಆಯ್ಕೆಯಲ್ಲಿ ಗಣನೀಯ ಏರಿಕೆ ಕಂಡುಬಂದರೆ, ಕನ್ನಡ ಅಭ್ಯರ್ಥಿಗಳ ಆಯ್ಕೆಯಲ್ಲಿ ಆಶ್ಚರ್ಯಕರ ಇಳಿಕೆ ಇದೆ. ಇದು ಕನ್ನಡದ ದುರ್ದೈವ ಮಾತ್ರವಲ್ಲ. ಆಯ್ಕೆಯಾದ ತಮಿಳು ಅಭ್ಯರ್ಥಿಗಳ ಸಂಖ್ಯೆ ಕಳೆದ ಬಾರಿಗಿಂತ ಈ ಬಾರಿ ಬಹಳಷ್ಟು ಉತ್ತಮವಾಗಿದ್ದರೂ 2018ರ ಡಿಸೆಂಬರ್‌ನಿಂದ 2020ರ ಜೂನ್‌ವರೆಗೆ ತಮಿಳಿನಲ್ಲಿ ಆಯ್ಕೆಯಾದವರು ಕ್ರಮವಾಗಿ 41, 36, 38 ಮತ್ತು 20ರಷ್ಟು. ಬಂಗಾಲಿಯಲ್ಲಿ ಆಯ್ಕೆಯಾದವರು 16, 29, 29 ಮತ್ತು 41 ಮಂದಿ.

ಮುಖ್ಯ ಸಂಗತಿಯೆಂದರೆ, ಪ್ರಸಕ್ತ ಸಾಲಿನಲ್ಲಿ ಹಿಂದಿ ಭಾಷೆಗೆ ಅಂದಾಜು ₹ 182 ಕೋಟಿ ಹಾಗೂ ಸಂಸ್ಕೃತ ಭಾಷೆಗೆ ಅಂದಾಜು ₹ 47 ಕೋಟಿ ಫೆಲೊಶಿಪ್ ಅನ್ನು ಯುಜಿಸಿ ಮೀಸಲಿಟ್ಟದ್ದರೆ, ಕನ್ನಡ ಭಾಷೆಗೆ ಕೇವಲ ₹ 3.3 ಕೋಟಿಯನ್ನು ಮೀಸಲಿಟ್ಟಿದೆ. ಅಲ್ಲದೆ, ಎನ್‌ಇಟಿ ಕಟ್‌ಆಫ್ ಅನ್ನು ದಾಟಿದ ಸಾಮಾನ್ಯ ವರ್ಗದ ಹಿಂದಿ ಅಭ್ಯರ್ಥಿಗಳಲ್ಲಿ ಶೇ 14.96 ಜನರನ್ನೂ ಸಂಸ್ಕೃತ ಅಭ್ಯರ್ಥಿಗಳಲ್ಲಿ ಶೇ 13.24ರಷ್ಟು ಜನರನ್ನೂ ಫೆಲೊಶಿಪ್‌ಗೆ ಆಯ್ಕೆ ಮಾಡಿದ್ದರೆ ಕನ್ನಡದಲ್ಲಿ ಶೇ 7.14ರಷ್ಟು ಮಂದಿಯನ್ನಷ್ಟೇ ಆಯ್ಕೆ ಮಾಡಲಾಗಿದೆ.



ಏಕೆ ಈ ತಾರತಮ್ಯ? ವ್ಯವಸ್ಥಿತವಾದ ಸಾಂಸ್ಕೃತಿಕ ರಾಜಕಾರಣವೇ ಇದು? ಕನ್ನಡವೂ ಸೇರಿದಂತೆ ಇತರ ದೇಶಭಾಷೆಗಳ ಅಧ್ಯಯನಗಳ ಅವಕಾಶಗಳನ್ನು ಹೀಗೆ ಮುಚ್ಚುತ್ತಾ ಬರುತ್ತಿರುವುದು ಒಕ್ಕೂಟ ವ್ಯವಸ್ಥೆಗೆ ಮಾಡುತ್ತಿರುವ ಹಾನಿಯೇ ಆಗಿದೆ.

ವಿಶ್ವವಿದ್ಯಾಲಯವೊಂದರಲ್ಲಿ ನಡೆಯುವ ಸಂಶೋಧನೆಯ ಕೆಲಸಗಳು ಆ ವಿಶ್ವವಿದ್ಯಾಲಯದ ಮೌಲ್ಯಾಂಕನವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಯುಜಿಸಿಯಿಂದ ಕನ್ನಡ ಸಂಶೋಧನೆಗೆ ಪ್ರೋತ್ಸಾಹವೇ ಇಲ್ಲವಾದಲ್ಲಿ ಸಹಜವಾಗಿಯೇ ಕರ್ನಾಟಕದ ವಿಶ್ವವಿದ್ಯಾಲಯಗಳ ಮೌಲ್ಯಾಂಕನವೂ ಕುಸಿದು, ಯುಜಿಸಿಯಿಂದ ಬರುವ ಧನಸಹಾಯವೂ ಕಡಿಮೆಯಾಗಿ ವಿಶ್ವವಿದ್ಯಾಲಯಗಳು ದುರ್ಬಲಗೊಳ್ಳುತ್ತವೆ. ಕನ್ನಡದ ಪಾಲಿನ ಶೈಕ್ಷಣಿಕ ಪ್ರಾತಿನಿಧ್ಯವನ್ನು ಯುಜಿಸಿ ಕಡಿಮೆ ಮಾಡುತ್ತಿರುವುದು ಕರ್ನಾಟಕದ ಜ್ಞಾನಸೃಷ್ಟಿಯ ಕೇಂದ್ರಗಳನ್ನು ನಿಧಾನವಾಗಿ ನಿಸ್ತೇಜಗೊಳಿಸುತ್ತಿರುವುದರ ದ್ಯೋತಕವಲ್ಲವೇ? ನ್ಯಾಯಸಮ್ಮತ ಪಾಲಿಗಾಗಿ ಕರ್ನಾಟಕವು ಈಗ ಹಕ್ಕೊತ್ತಾಯ ಮಾಡಲೇಬೇಕಿದೆ. ಯುಜಿಸಿಯಂತಹ ಸಂಸ್ಥೆಗಳು ಸಾಂಸ್ಕೃತಿಕ ರಾಜಕಾರಣದ ಮಧ್ಯವರ್ತಿಗಳಂತೆ ಕೆಲಸ ಮಾಡದೆ ಒಕ್ಕೂಟದ ಎಲ್ಲ ಭಾಗೀದಾರರ ಹಿತಾಸಕ್ತಿಗಳನ್ನು ಕಾಯುವ ಧರ್ಮ ಪಾಲಿಸಬೇಕಾಗಿದೆ.

ಕೊನೆಯಲ್ಲಿ ಕೇಳಬೇಕಾದ ಮುಖ್ಯಪ್ರಶ್ನೆ ಇದು. ನಮ್ಮ ರಾಜ್ಯದಿಂದ ಆರಿಸಿ ಹೋದ ಸಂಸದರು ಇಂತಹ ವಿಷಯಗಳ ಬಗ್ಗೆ ಎಲ್ಲಿ ಮಾತನಾಡಬೇಕೋ ಅಲ್ಲಿ ಮಾತನಾಡಬೇಕು. ಆದರೆ ಅದು ಆಗುತ್ತಿಲ್ಲ.

ವಾಚಕರ ವಾಣಿ

ರಾಷ್ಟ್ರಪತಿ ಆಳ್ವಿಕೆ ಕಾಲದ ಬಜೆಟ್!

ಮುಂದಿನ ವರ್ಷ ಚುನಾವಣೆ ಎದುರಿಸುವ ಸಂದರ್ಭದಲ್ಲಿ ಮಂಡನೆಯಾಗಿರುವ 2022–23ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಮತದಾರರಿಗೆ ಭರವಸೆ ನೀಡುವಂತಹ ಯಾವುದೇ ಕಾರ್ಯಕ್ರಮಗಳಿಲ್ಲ. ಈಗಾಗಲೇ ಜಾರಿಯಲ್ಲಿರುವ ಯೋಜನೆಗಳಿಗೆ ಹಣ ಮೀಸಲಿಟ್ಟಿದ್ದಾರೆ ಅಷ್ಟೆ. ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಇರುವ ಕಾಲದಲ್ಲಿ ಮಾತ್ರ ಇಂತಹ ಬಜೆಟ್ ಮಂಡನೆಯಾಗುತ್ತದೆ. ನೀರಾವರಿಗೆ ಒದಗಿಸಿರುವ ಹಣ ಕಡಿಮೆ. ಕೃಷ್ಣಾ ಮತ್ತು ಭದ್ರಾ ನೀರಾವರಿ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳನ್ನಾಗಿ ಮಾಡುವ ಪ್ರಯತ್ನ ಫಲಕಾರಿಯಾಗಿಲ್ಲ. ರಾಜ್ಯದ ಹಣದಲ್ಲಿ ಅವುಗಳನ್ನು ಪೂರ್ಣಗೊಳಿಸುವುದು ಸಾಧ್ಯವಿಲ್ಲ. 15ನೇ ಹಣಕಾಸು ಆಯೋಗವು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನೀಡುವ ತೆರಿಗೆಯ ಪಾಲನ್ನು ಗಣನೀಯವಾಗಿ ಕಡಿಮೆ ಮಾಡಿದೆ. ಕಡಿಮೆ ಮಾಡಿರುವ ಹಣವನ್ನು ಸಹ ಪೂರ್ತಿಯಾಗಿ ಕೇಂದ್ರ ನೀಡುತ್ತಿಲ್ಲ. ಹೀಗಾಗಿ ಕರ್ನಾಟಕದ ಬಜೆಟ್ ಗಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಹೆಚ್ಚಾಗಿಲ್ಲ.

ಸಣ್ಣ ರಾಜ್ಯವಾದ ತೆಲಂಗಾಣ ಕೂಡ ಕರ್ನಾಟಕದಷ್ಟೇ ಗಾತ್ರದ ಬಜೆಟ್ ಮಂಡಿಸುತ್ತಿದೆ. ಕೇಂದ್ರದಿಂದ ನಿರೀಕ್ಷಿತ ನೆರವು ದೊರಕದೇ ಅಸಹಾಯಕತೆಯಿಂದ ಬಜೆಟ್ ಮಂಡಿಸುತ್ತಿರುವಂತೆ ಮುಖ್ಯಮಂತ್ರಿ ಅವರ ಮುಖಚರ್ಯೆ ತೋರುತ್ತಿತ್ತು. ಮೂರು ವರ್ಷಗಳ ಹಿಂದೆ ದಕ್ಷಿಣ ಭಾರತದಲ್ಲಿಯೇ ಅತಿಹೆಚ್ಚು ತಲಾ ಆದಾಯ ಹೊಂದಿದ್ದ ಕರ್ನಾಟಕವು ಇಂದು ತಲಾ ಆದಾಯದಲ್ಲಿ ತೆಲಂಗಾಣ ಹಾಗೂ ತಮಿಳುನಾಡಿಗಿಂತ ಹಿಂದಕ್ಕೆ ಸರಿದಿರುವುದು ಆರ್ಥಿಕ ಸಮೀಕ್ಷೆಯಿಂದ ತಿಳಿದುಬರುತ್ತಿದೆ. ಇದು ರಾಜ್ಯದ ಜನ ಗಂಭೀರವಾಗಿ ಆಲೋಚಿಸಬೇಕಾದ ವಿಷಯ.

ಡಾ. ದೇವಿದಾಸ ಎಸ್. ಪ್ರಭು, ಭಟ್ಕಳ

ಖಾಲಿ ಹುದ್ದೆ ಭರ್ತಿ ಎಂದು?

ಕೋವಿಡ್ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಪ್ರಸಕ್ತ ಬಜೆಟ್‌ನಲ್ಲಿ ಮುಖ್ಯಮಂತ್ರಿ ಇದಕ್ಕೆಲ್ಲ ಪರಿಹಾರದ ಕ್ರಮಗಳನ್ನು ಕೈಗೊಳ್ಳಬಹುದಿತ್ತು. ರಾಜ್ಯದ ಆರ್ಥಿಕ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಣೆಯ ಹಾದಿಯಲ್ಲಿ ಇರುವುದರಿಂದ, ಖಾಲಿ ಹುದ್ದೆಗಳ ಭರ್ತಿಗೆ ಮುಂದಾಗಬಹುದಿತ್ತು. ಇನ್ನಾದರೂ ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಿ.

ಪ್ರಶಾಂತ್ ಬುಳ್ಳಣ್ಣವರ, ಉಗರಗೋಳ, ಬೆಳಗಾವಿ

ಪಡಿತರದಲ್ಲಿ ಸೇರಲಿ ಅಡುಗೆ ಎಣ್ಣೆ

ಉಕ್ರೇನ್ ಮತ್ತು ರಷ್ಯಾ ನಡುವಿನ ಕದನವು ನಮ್ಮ ದೇಶ ಹಾಗೂ ರಾಜ್ಯದಾದ್ಯಂತ ಅಡುಗೆ ಎಣ್ಣೆ ಮೇಲೆ ನೇರ ಪರಿಣಾಮ ಬೀರಿದ್ದು, ಅದರ ಬೆಲೆ ಏರಿಕೆಗೆ ಕಾರಣವಾಗಿದೆ. ಇಂತಹ ಸ್ಥಿತಿ ಇನ್ನೂ ಎಷ್ಟು ದಿನ ಮುಂದುವರಿಯುತ್ತದೆಯೋ! ರಾಜ್ಯ ಸರ್ಕಾರ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ನೀಡುತ್ತಿರುವ ಪಡಿತರದ ಜೊತೆಗೆ ಅಡುಗೆ ಎಣ್ಣೆಯನ್ನೂ ನೀಡಿ ಬಡವರ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ವಿಶ್ವ ನಾಯಕರ ಕಣ್ಣು ತೆರೆಯುವುದೆಂದು?

ಹಿಂದೆ ಯುದ್ಧದ ಚಿತ್ರಣ, ರೂಪುರೇಖೆಗಳನ್ನು ಪತ್ರಿಕಾ ವರದಿಗಳನ್ನು ನೋಡಿ ತಿಳಿಯುತ್ತಿದ್ದೆವು. ಈಗ ರಷ್ಯಾ–ಉಕ್ರೇನ್ ಯುದ್ಧದ ವೈಖರಿಯನ್ನು ಟಿ.ವಿ. ಪರದೆಯಲ್ಲಿ ಕಂಡು ಮೈ ಜುಂ ಎನ್ನುತ್ತದೆ, ನಮ್ಮ ಎದೆಗೇ ಗುಂಡು ಬಿದ್ದಂತೆ ಆಗುತ್ತದೆ. ದೊಡ್ಡ ದೊಡ್ಡ ಕಟ್ಟಡಗಳ ಮೇಲೆ ಬೀಳುವ ಬಾಂಬ್, ಆ ಹೊಗೆ, ಬೆಂಕಿಯ ಕಿಡಿ, ಕಟ್ಟಡ ಕುಸಿದು ಬೀಳುವ ದೃಶ್ಯ ಕಂಡರೆ ನಮ್ಮ ಪಕ್ಕದ ಗೋಪುರ ಕಟ್ಟಡಗಳೂ ಬಿದ್ದಂತೆ ಭಾಸವಾಗುತ್ತದೆ. ಅಲ್ಲಿನ ನಾಗರಿಕರ ಕೂಗು, ಭಯಭೀತಿಯು ಮನುಷ್ಯನ ಕ್ರೌರ್ಯ ಹಾಗೂ ಅನಾಗರಿಕತನವನ್ನು ಅನಾವರಣಗೊಳಿಸುತ್ತಿವೆ. ನವೀನನಂತಹ ಅಮಾಯಕ ಹುಡುಗನ ಸಾವು ಯುದ್ಧದ ಕಾರಣದಿಂದ ಆಗಿದೆ. ಯುದ್ಧ ಎಂಬುದು ನಾಶವೇ ವಿನಾ ಜೀವನ ಅಲ್ಲ ಎಂಬುದನ್ನು ನಮ್ಮ ವಿಶ್ವ ನಾಯಕರು ಅರಿಯುವುದು ಯಾವಾಗ?

ನಂಜನಹಳ್ಳಿ ನಾರಾಯಣ, ಬೆಂಗಳೂರು

ಕ್ರೂರ ಕಿವಿಗಳಿಗೆ ತಲುಪಲಿ ಕೂಗು

ಜಗತ್ತು ಈ ಹಿಂದೆ ಎದುರಿಸಿದ ಒಂದನೇ ಮತ್ತು ಎರಡನೇ ಮಹಾಯುದ್ಧಗಳಿಗಿಂತ ಭೀಕರ ಪರಿಣಾಮ ಮೂರನೇ ಮಹಾಯುದ್ಧದಿಂದ ಆಗಲಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಕುರುಕ್ಷೇತ್ರ, ಕಳಿಂಗ ಇತ್ಯಾದಿ ಮಹಾಸಮರ ನಡೆದ ನಂತರ ಗೆದ್ದವರೇನೂ ಸುಖವಾಗಿ ಇರಲಿಲ್ಲ, ಗೆದ್ದವರೂ ಸೋತವರೂ ಸಮಾನ ದುಃಖಿಗಳಾದರು ಎಂಬ ವಿಷಯವನ್ನು ಇತಿಹಾಸದಿಂದ ಅರಿತಿದ್ದೇವೆ. ಗೆದ್ದವರ ಕಡೆಯಲ್ಲಿ ರಾಜನೊಬ್ಬ ಉಳಿದ ಎಂಬುದೇ ಗೆಲುವಿಗೆ ಮಾನದಂಡವಾಗಿದ್ದಿರಬಹುದು. ಉಳಿದಂತೆ ವಿಧವೆಯರು, ವೃದ್ಧರು ಮತ್ತು ಮಕ್ಕಳಷ್ಟೇ ಉಳಿದಿರುತ್ತಾರೆ.

ಕೊರೊನಾ ಹೊಡೆತದಿಂದ ಜಗತ್ತು ಈಗಷ್ಟೇ ಚೇತರಿಸಿಕೊಳ್ಳುತ್ತಿರುವ ಸಮಯದಲ್ಲಿ ಮನುಕುಲಕ್ಕೆ ಇನ್ನಷ್ಟು ಕಷ್ಟಗಳನ್ನು ಕೈಯಾರೆ ತಂದುಕೊಂಡಂತೆ ಆಗಿದೆ ಎಂಬುದೇ ನೋವಿನ ವಿಷಯ. ಕರುಣೆ, ಮಾನವೀಯತೆಯ ಕೂಗು ಕ್ರೂರ ಕಿವಿಗಳಿಗೆ ತಲುಪುವುದೇ ಇಲ್ಲ. ಇಂತಲ್ಲಿ, ಎರಡನೇ ಮಹಾಯುದ್ಧದ ಸಮಯದಲ್ಲಿ ಗುಜರಾತಿನ ಜಾಮ್ ನಗರದ ಮಹಾರಾಜ ಪೋಲೆಂಡಿನ ನಿರಾಶ್ರಿತ ಮಹಿಳೆಯರು ಮತ್ತು ಮಕ್ಕಳಿಗೆ ಆಶ್ರಯವಿತ್ತಿದ್ದ ವಿಷಯದ ಬಗೆಗಿನ ವಿಡಿಯೊ ಭಾರತೀಯರ ಕರುಣೆ ಹಾಗೂ ಮಾನವೀಯತೆಗೆ ಸಾಕ್ಷಿಯಾಗಿದೆ.

ಈ ವಿಷಯದಲ್ಲಿ ಪೋಲೆಂಡ್ ಪ್ರಜೆಗಳು ಇಂದಿಗೂ ಭಾರತಕ್ಕೆ ಕೃತಜ್ಞರಾಗಿದ್ದಾರೆ. ಭಾರತದಲ್ಲಿ ನಿರಾಶ್ರಿತನಾಗಿ ಬೆಳೆದ ಬಾಲಕನೊಬ್ಬ ಮರಳಿ ಪೋಲೆಂಡಿಗೆ ತೆರಳಿ ಪ್ರಧಾನಿಯಾದ ಸಂತಸದ ವಿಷಯವನ್ನು ವಿಡಿಯೊ ತಿಳಿಸಿತು. ಹೀಗೆ ಯುದ್ಧದ ಭೀಕರತೆಯಲ್ಲಿ ಇತಿಹಾಸದ ಗರ್ಭದಲ್ಲಿ ಹುದುಗಿದ ಎಷ್ಟೋ ಸಂಗತಿಗಳು ಹೃದಯ ಕಲಕುತ್ತವೆ. ಇಂದು ಮಾಡಿದ ಒಳ್ಳೆಯ ಕೆಲಸ ಮುಂದೆಂದೋ ಫಲ ನೀಡುತ್ತದೆ ಎಂಬ ಭಾರತೀಯರ ನಂಬಿಕೆ ನಿಜವಾಯಿತೇನೋ ಅನಿಸುತ್ತದೆ.

ಶಾಂತಲಾ ರಾಜಗೋಪಾಲ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾಟೊ ದೇಶಗಳಿಂದ ಸೇನಾ ನೆರವು; ಅಪಾಯಕಾರಿ ರೂಪ ತಳೆದ ರಷ್ಯಾ–ಉಕ್ರೇನ್ ಸಂಘರ್ಷ

ಉಕ್ರೇನ್ ಗಡಿಗಳಲ್ಲಿ ನ್ಯಾಟೊ ಶಸ್ತ್ರಕೋಠಿ

ಉಕ್ರೇನ್ ಜೊತೆ ಗಡಿ ಹಂಚಿಕೊಂಡಿರುವ ದೇಶಗಳಿಗೆ ನ್ಯಾಟೊ ಸದಸ್ಯ ದೇಶಗಳು ಸೇನೆ ಹಾಗೂ ಶಸ್ತ್ರಾಸ್ತ್ರ ಕಳುಹಿಸಿವೆ. ಬೆಲ್ಜಿಯಂ, ಕೆನಡಾ, ಜೆಕ್ ಗಣರಾಜ್ಯ, ಎಸ್ಟೋನಿಯಾ, ಫ್ರಾನ್ಸ್, ಜರ್ಮನಿ, ಗ್ರೀಸ್, ಲಾಟ್ವಿಯಾ, ಲಿಥುವೇನಿಯಾ, ದಿ ನೆದರ್ಲೆಂಡ್ಸ್, ಪೋಲೆಂಡ್, ಪೋರ್ಚುಗಲ್, ರೊಮೇನಿಯಾ, ಸ್ಲೋವಾಕಿಯಾ, ಸ್ಲೊವೇನಿಯಾ, ಬ್ರಿಟನ್ ಹಾಗೂ ಅಮೆರಿಕ ದೇಶಗಳು ಉಕ್ರೇನ್‌ಗೆ ಈಗಾಗಲೇ ಸೇನಾ ಉಪಕರಣ ಹಾಗೂ ಕೋಟ್ಯಂತರ ಡಾಲರ್ ಹಣಕಾಸು ನೆರವು ನೀಡಿವೆ ಅಥವಾ ನೀಡಲು ಅನುಮತಿ ಕೊಟ್ಟಿವೆ

• ಸ್ಟೀವನ್ ಎರ್ಲಾಂಗರ್

ಡಜನು ರಾಕೆಟ್ ಲಾಂಚರ್‌ಗಳನ್ನು, ಎಸ್ಟೋನಿಯಾದವರು ಟ್ಯಾಂಕ್ ನಿಗ್ರಹ ಕ್ಷಿಪಣಿಗಳನ್ನು, ಪೋಲೆಂಡ್ ಹಾಗೂ ಲಾಟ್ವಿಯಾದವರು ನೆಲದ ಮೇಲ್ಮೈನಿಂದ ಆಗಸಕ್ಕೆ ಚಿಮ್ಮುವ ಕ್ಷಿಪಣಿಗಳನ್ನು ಒದಗಿಸುತ್ತಿದ್ದಾರೆ. ಜೆಕ್ ಗಣರಾಜ್ಯದವರು ಮಷಿನ್ ಗನ್, ಸ್ನೈಪರ್ ರೈಫಲ್, ಪಿಸ್ತೂಲ್ ಹಾಗೂ ಮದ್ದುಗುಂಡುಗಳನ್ನು ಪೂರೈಸುತ್ತಿದ್ದಾರೆ. ತಟಸ್ಥ ನಿಲುವಿನ ದೇಶಗಳು ಎನಿಸಿಕೊಂಡಿರುವ ಸ್ವೀಡನ್, ಫಿನ್ಲೆಂಡ್ ಸಹ ಶಸ್ತ್ರಾಸ್ತ್ರಗಳನ್ನು ನೀಡುತ್ತಿವೆ. ಭುಜದ ಮೇಲೆ ಹೊತ್ತು ಉಡಾಯಿಸಬಲ್ಲ ರಾಕೆಟ್ ಲಾಂಚರ್‌ಗಳನ್ನು ಜರ್ಮನಿ ಕಳುಹಿಸಿಕೊಡುತ್ತಿದೆ.

ನ್ಯಾಟೊ ಸದಸ್ಯತ್ವ ಹಾಗೂ ಐರೋಪ್ಯ ಒಕ್ಕೂಟದ ಸದಸ್ಯತ್ವ ಪಡೆದಿರುವ ಸುಮಾರು 20 ದೇಶಗಳು ರಷ್ಯಾದ ಆಕ್ರಮಣಕಾರರ ವಿರುದ್ಧ ಹೋರಾಡಲು ಉಕ್ರೇನ್‌ಗೆ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿವೆ. ಇದೇ ವೇಳೆ ನ್ಯಾಟೊ ಸಹ, ಅಪಾರ ಪ್ರಮಾಣದ ಸೇನಾ ಸಲಕರಣೆಗಳನ್ನು ಮತ್ತು 22,000ಕ್ಕೂ ಹೆಚ್ಚು ಸೈನಿಕರನ್ನು ರಷ್ಯಾ ಮತ್ತು ಬೆಲಾರಸ್ ಗಡಿಯಲ್ಲಿರುವ ಸದಸ್ಯ ರಾಷ್ಟ್ರಗಳಿಗೆ ಸ್ಥಳಾಂತರಿಸುತ್ತಿದೆ.

ಉಕ್ರೇನ್ ಮೇಲೆ ರಷ್ಯಾ ನಡೆಸಿರುವ ದಾಳಿಯು ಐರೋಪ್ಯ ಒಕ್ಕೂಟದ ದೇಶಗಳನ್ನು ಒಗ್ಗೂಡಿಸಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಂದ ದೀರ್ಘಕಾಲದಲ್ಲಿ ಎದುರಾಗಬಹುದಾದ ಅಪಾಯವನ್ನು ಎದುರಿಸುವತ್ತ ಈ ದೇಶಗಳು ಗಮನ ಕೇಂದ್ರೀಕರಿಸಿವೆ. ಸದಸ್ಯ ದೇಶಗಳು ಉಕ್ರೇನ್‌ಗೆ ಶಸ್ತ್ರಾಸ್ತ್ರ ಹಾಗೂ ಹಣದ ನೆರವು ನೀಡುವ ಮೂಲಕ, ತಮ್ಮದು ಅಖಂಡ ಸೇನಾ ಶಕ್ತಿ ಎಂಬುದನ್ನು ಬಿಂಬಿಸಲು ಐರೋಪ್ಯ ಒಕ್ಕೂಟ ಯತ್ನಿಸುತ್ತಿದೆ.

ಐರೋಪ್ಯ ಶಸ್ತ್ರಾಸ್ತ್ರ ಪಡೆಯು ಉಕ್ರೇನ್‌ನ ಸಮರಾಂಗಣಕ್ಕೆ ಧುಮುಕಲಿದೆಯೇ ಅಥವಾ ಯುದ್ಧವು ಜಾಗತಿಕ ಸ್ವರೂಪ ಪಡೆದುಕೊಳ್ಳಲಿದೆಯೇ ಎಂಬುದು ಪುಟಿನ್ ನಿಲುವುಗಳನ್ನು ಅವಲಂಬಿಸಿದೆ. ಆದರೆ, ಪೋಲೆಂಡ್ ಗಡಿಗೆ ಮಾರಕ ಶಸ್ತ್ರಾಸ್ತ್ರಗಳನ್ನು ಕಳುಹಿಸುತ್ತಿರುವುದರ ಹಿಂದಿನ ಉದ್ದೇಶ ರಷ್ಯಾ ಸೈನಿಕರನ್ನು ಕೊಲ್ಲುವುದೇ ಆಗಿದೆ. 'ಉಕ್ರೇನ್‌ಗೆ ನೆರವು ನೀಡುವ ಮೂಲಕ ರಷ್ಯಾವನ್ನು ನಾಶ ಮಾಡಲು ನ್ಯಾಟೊ ಯತ್ನಿಸುತ್ತಿದೆ' ಎಂದು ಪುಟಿನ್ ಇತ್ತೀಚೆಗೆ ತಮ್ಮ ಭಾಷಣಗಳಲ್ಲಿ ಆರೋಪಿಸಿದ್ದರು. ಯುರೋಪ್ ಮತ್ತು ಅಮೆರಿಕದ ಮಧ್ಯಪ್ರವೇಶವನ್ನು ನಿಗ್ರಹಿಸಲು ಪರಮಾಣು ದಾಳಿಯ ಎಚ್ಚರಿಕೆ ನೀಡುವ ಯತ್ನವನ್ನೂ ಪುಟಿನ್ ಮಾಡಿದ್ದರು.

ಸಣ್ಣ ಸಂಘರ್ಷಗಳಿಂದ ಹುಟ್ಟಿಕೊಂಡ ಜಾಗತಿಕ ಯುದ್ಧಗಳು ಬಹುತೇಕ ನ್ಯಾಟೊ ಸದಸ್ಯ ದೇಶಗಳ ವ್ಯಾಪ್ತಿಯಲ್ಲಿ ಆಗಿವೆ. ಈ ಸಂಘರ್ಷಗಳು ಇತರೆ ದೇಶಗಳನ್ನು ಅನಿರೀಕ್ಷಿತವಾಗಿ ಯುದ್ಧದೊಳಕ್ಕೆ ಎಳೆದು ತರುವ ಅಪಾಯವನ್ನು ಹೊಂದಿದೆ.

ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ಅವರು ಇತ್ತೀಚೆಗೆ ಪೋಲೆಂಡ್ ವಾಯುನೆಲೆಯಲ್ಲಿ ಭೇಟಿ ನೀಡಿದ್ದರು. 'ಪುಟಿನ್ ಆರಂಭಿಸಿರುವ ಯುದ್ಧವು ನಮ್ಮೆಲ್ಲರ ಮೇಲೂ ಪರಿಣಾಮ ಬೀರಲಿದ್ದು, ನ್ಯಾಟೊ ಮಿತ್ರದೇಶಗಳು ಒಂದಾಗಿ ಪರಸ್ಪರರನ್ನು ರಕ್ಷಿಸಿಕೊಳ್ಳಲಿವೆ' ಎಂದು ಅವರು ಹೇಳಿದ್ದರು. 'ನ್ಯಾಟೊ ಸದಸ್ಯ ದೇಶಗಳಿಗೆ ಸೇರಿದ ಜಾಗದ ಒಂದು ಇಂಚನ್ನೂ ಬಿಡದಂತೆ ರಕ್ಷಿಸಿಕೊಳ್ಳುತ್ತೇವೆ. ತಪ್ಪು ಲೆಕ್ಕಾಚಾರ ಅಥವಾ ತಪ್ಪು ಗ್ರಹಿಕೆಗೆ ಜಾಗ ಇರಬಾರದು' ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಸದ್ಯಕ್ಕೆ ಯುದ್ಧವು ಉಕ್ರೇನ್‌ಗೆ ಸೀಮಿತವಾಗಿದೆ. ತಮ್ಮ ಸೈನಿಕರು ರಷ್ಯಾ ವಿರುದ್ಧ ಹೋರಾಡುವುದಿಲ್ಲ, ಆದರೆ ಉಕ್ರೇನಿಯನ್ನರು ತಮ್ಮನ್ನು ತಾವು ರಕ್ಷಿಸಿಕೊಳ್ಳುವಲ್ಲಿ ಸೈನಿಕರು ಸಕ್ರಿಯವಾಗಿ ನೆರವಾಗುತ್ತಿದ್ದಾರೆ ಎಂದು ನ್ಯಾಟೊ ಮತ್ತು ಐರೋಪ್ಯ ಒಕ್ಕೂಟ ಸ್ಪಷ್ಟವಾಗಿ ತಿಳಿಸಿವೆ. ಆದರೆ, ಐರೋಪ್ಯ ಒಕ್ಕೂಟದ 27 ದೇಶಗಳ ಪೈಕಿ 21 ದೇಶಗಳು ಪೋಲೆಂಡ್ ಮೂಲಕ ಶಸ್ತ್ರಾಸ್ತ್ರಗಳನ್ನು ಪ್ರತ್ಯೇಕವಾಗಿ ಸಾಗಿಸುತ್ತಿವೆ. ಹೀಗಾಗಿ ಈ ಯತ್ನವನ್ನು ನ್ಯಾಟೊ ಅಥವಾ ಐರೋಪ್ಯ ಒಕ್ಕೂಟದ ಅಧಿಕೃತ ನಿಯೋಜನೆ ಎಂದು ಹೇಳಲಾಗದು. ಈ ಎಲ್ಲ ಶಸ್ತ್ರಾಸ್ತ್ರ ಹಾಗೂ ಸೇನಾ ನಿಯೋಜನೆ ಪ್ರಕ್ರಿಯೆಯನ್ನು ಐರೋಪ್ಯ ಒಕ್ಕೂಟದ ಅಧಿಕಾರಿಗಳು ನಿರ್ವಹಣೆ ಮಾಡುತ್ತಿದ್ದಾರೆ ಎಂದು ಫ್ರಾನ್ಸ್ ಹೇಳಿದೆ. ಬ್ರಿಟನ್ ಮತ್ತು ಅಮೆರಿಕ ಸಹ ನಿರ್ವಹಣೆಯಲ್ಲಿ ತೊಡಗಿವೆ. ಈ ಎಲ್ಲ ಪ್ರಕ್ರಿಯೆಗಳನ್ನು ಉದ್ದೇಶಪೂರ್ವಕವಾಗಿ ಸದ್ದಿಲ್ಲದೇ ಮಾಡಲಾಗುತ್ತಿದೆ. ಇದಕ್ಕೆ ಅಂತರರಾಷ್ಟ್ರೀಯ ದಾನಿಗಳ ಸಮನ್ವಯ ಕೇಂದ್ರ ಎಂದು ಕರೆಯಲಾಗಿದೆ. ಆದರೆ ಇಂತಹ ಹೆಸರುಗಳಿಂದ ಪುಟಿನ್ ಅವರನ್ನು ಮೋಸಗೊಳಿಸುವುದು ಕಷ್ಟ.

'ರಷ್ಯಾ ವಿರುದ್ಧ ಪ್ರಬಲ ಪ್ರತಿರೋಧ ತೋರಲು ಉಕ್ರೇನ್‌ಗೆ ನೆರವಾಗುವುದು ಒಳ್ಳೆಯದೇ. ಆದರೆ ಪುಟಿನ್ ಇದಕ್ಕೆ ಹೇಗೆ ಪ್ರತಿಕ್ರಿಯಿಸಬಹುದು ಎಂಬ ಕುತೂಹಲವಿದೆ. ಅವರು ಗಡಿಯ ಮತ್ತೊಂದು ಕಡೆಯಿಂದ ದಾಳಿ ನಡೆಸಬಹುದು' ಎಂದು ರಕ್ಷಣಾ ಸಂಶೋಧನಾ ಸಂಸ್ಥೆ ರಾಯಲ್ ಯುನೈಟೆಡ್ ಸರ್ವೀಸ್ ಇನ್‌ಸ್ಟಿಟ್ಯೂಟ್‌ನ ಉಪ ನಿರ್ದೇಶಕ ಮಾಲ್ಕಮ್ ಚಾಲ್ಮರ್ಸ್ ಹೇಳುತ್ತಾರೆ.

ಲಿಥುವೇನಿಯಾದ ಸಿಯೌಲಿಯಾಯ್ ವಾಯುನೆಲೆಯಲ್ಲಿ ಉಕ್ರೇನ್‌ಗೆ ಕಳುಹಿಸಿಕೊಡುವ ಯುದ್ಧವಿಮಾನ ನಿರೋಧಕ ವ್ಯವಸ್ಥೆ ಹಾಗೂ ಇತರೆ ಸೇನಾ ಸಲಕರಣೆಗಳನ್ನು ಸೇನಾ ಸರಕು ಸಾಗಣೆ ವಿಮಾನಕ್ಕೆ ತುಂಬಿಸಲಾಯಿತು–ಎಪಿ ಚಿತ್ರ

ರಷ್ಯಾದ ಯುದ್ಧವಿಮಾನಗಳು ಉಕ್ರೇನ್ ವಿಮಾನಗಳನ್ನು ಬೆನ್ನಟ್ಟಿ ನ್ಯಾಟೊ ವಾಯುಪ್ರದೇಶವನ್ನು ಪ್ರವೇಶಿಸುವ ಸಾಧ್ಯತೆಯಿದೆ. ಒಂದು ವೇಳೆ ರಷ್ಯಾ ದೇಶವು ಇಂಟರ್ನೆಟ್ ಅನ್ನು ಸ್ಥಗಿತಗೊಳಿಸಿದರೆ ಸೇನೆ ಹಾಗೂ ಜನರ ನಡುವೆ ಸಂವಹನ ನಡೆಸಲು ಉಕ್ರೇನ್‌ಗೆ ಕಷ್ಟವಾಗಬಹುದು. ಹೀಗಾಗಿ ಸುರಕ್ಷಿತ ಸಂವಹನ ಉಪಕರಣಗಳೂ ಸೇರಿದಂತೆ ಉಕ್ರೇನ್‌ಗೆ ಕ್ಷಿಪಣಿ, ಟ್ಯಾಂಕ್ ನಿರೋಧಕ ಶಸ್ತ್ರಾಸ್ತ್ರಗಳ ಪೂರೈಕೆ ನಿರ್ಣಾಯಕವಾಗಿದೆ ಎಂದು ನ್ಯಾಟೊಗೆ ಅಮೆರಿಕದ ರಾಯಭಾರಿಯಾಗಿದ್ದ ಮಾಜಿ ಲೆಫ್ಟಿನೆಂಟ್ ಜನರಲ್ ಡಗ್ಲಾಸ್ ಲೂಟ್ ಹೇಳುತ್ತಾರೆ.

ಅಫ್ಗಾನಿಸ್ತಾನದ ಮೇಲೆ ನ್ಯಾಟೊ ಪಡೆಗಳು ದಾಳಿ ಮಾಡುವಾಗ ಪಾಕಿಸ್ತಾನವನ್ನು ನೆಲೆಯಾಗಿಸಿಕೊಂಡಿದ್ದವು. ಅದೇ ರೀತಿ ಪೋಲೆಂಡ್‌ನಲ್ಲಿ ಶಸ್ತ್ರಕೋಠಿ ಸ್ಥಾಪಿಸಿ, ಅವುಗಳನ್ನು ಉಕ್ರೇನ್‌ಗೆ ಸರಬರಾಜು ಮಾಡುವ ಉದ್ದೇಶವಿದೆ ಎಂದು ಅವರು ಹೇಳಿದ್ದಾರೆ.

ನ್ಯೂಯಾರ್ಕ್ ಟೈಮ್ಸ್ ವರದಿ

ಸದ್ದಿಲ್ಲದ ಸಿದ್ಧತೆ

ರಷ್ಯಾದಿಂದ ಯುದ್ಧ ಘೋಷಣೆ ಬಳಿಕ ಉಕ್ರೇನ್ ಗಡಿಯಲ್ಲಿರುವ ರೊಮೇನಿಯಾ, ಪೋಲೆಂಡ್, ಸ್ಲೋವೇನಿಯಾ ದೇಶಗಳಲ್ಲಿ ನ್ಯಾಟೊ ದೇಶಗಳು ಬೀಡುಬಿಟ್ಟಿವೆ. ಆದರೆ ಯಾರೂ ಉಕ್ರೇನ್ ಗಡಿ ಪ್ರವೇಶಿಸಿಲ್ಲವಾದರೂ, ಶಸ್ತ್ರಾಸ್ತ್ರ ಹಾಗೂ ಹಣಕಾಸು ನೆರವು ಒದಗಿಸುತ್ತಿವೆ. ಯುದ್ಧ ಘೋಷಣೆಯಾದ ಮರುದಿನ ಅಂದರೆ, ಫೆ. 25ರಂದು ₹2,525 ಕೋಟಿ ಮೊತ್ತದ ಶಸ್ತ್ರಾಸ್ತ್ರ ಪೂರೈಕೆಯನ್ನು ಅಮೆರಿಕ ಅಂತಿಮಗೊಳಿಸಿತು. ಪೋಲೆಂಡ್ ಹಾಗೂ ರೊಮೇನಿಯಾಕ್ಕೆ ದಾಸ್ತಾನು ಪೂರೈಕೆ ಆರಂಭಿಸಲಾಯಿತು. ಇವು ಅಲ್ಲಿಂದ ಉಕ್ರೇನ್ ಪಶ್ಚಿಮ ಗಡಿಯನ್ನು ತಲುಪಲಿವೆ.

ಅಮೆರಿಕವೊಂದೇ 15,000 ಹೆಚ್ಚುವರಿ ಸೈನಿಕರನ್ನು ಯುರೋಪ್‌ಗೆ ಕಳುಹಿಸಿದೆ. ಅಗತ್ಯಬಿದ್ದರೆ ನ್ಯಾಟೊ ಪಡೆಗೆ ಹೆಚ್ಚುವರಿಯಾಗಿ 12 ಸಾವಿರ ಸೈನಿಕರನ್ನು ಕಳುಹಿಸಲು ನಿರ್ಧರಿಸಿದೆ. ರೊಮೇನಿಯಾ, ಪೋಲೆಂಡ್ ಹಾಗೂ ಬಾಲ್ಟಿಕ್ ದೇಶಗಳಲ್ಲಿ ಯುದ್ಧವಿಮಾನ ಹಾಗೂ ದಾಳಿ ಹೆಲಿಕಾಪ್ಟರ್‌ಗಳನ್ನು ನಿಯೋಜಿಸಿದೆ. ಪೋಲೆಂಡ್ ಪ್ರಧಾನಿ ಮೊರಾವಿಕಿ ಅವರು ಉಕ್ರೇನ್‌ಗೆ ಸಾವಿರಾರು ಶೆಲ್, ಮದ್ದುಗುಂಡು, ಯುದ್ಧವಿಮಾನ ನಿರೋಧಕ ಕ್ಷಿಪಣಿ, ಡ್ರೋನ್‌ಗಳನ್ನು ಪೂರೈಸುವ ವಾಗ್ದಾನ ನೀಡಿದ್ದಾರೆ.

ನ್ಯಾಟೊ ಸದಸ್ಯತ್ವ ಪಡೆದಿಲ್ಲವಾದರೂ, ಉಕ್ರೇನ್‌ಗೆ 5 ಸಾವಿರ ಟ್ಯಾಂಕ್ ವಿರೋಧಿ ಶಸ್ತ್ರಾಸ್ತ್ರ, 5 ಸಾವಿರ ಹೆಲ್ಮೆಟ್, ಇತರೆ ಯುದ್ಧೋಪಕರಣಗಳು ಹಾಗೂ ಉಕ್ರೇನ್ ಸೇನೆಗೆ ₹400 ಕೋಟಿ ನೆರವು ನೀಡುವುದಾಗಿ ಸ್ವೀಡನ್ ಘೋಷಿಸಿದೆ. ಫಿನ್ಲೆಂಡ್ ಸಹ 2,500 ರೈಫಲ್, 1.5 ಲಕ್ಷ ಮದ್ದುಗುಂಡು, 1,500 ಟ್ಯಾಂಕ್ ನಿರೋಧಕ ಉಪಕರಣಗಳನ್ನು ನೀಡುವ ಮಾತು ಕೊಟ್ಟಿದೆ. ಫ್ರಾನ್ಸ್ ದೇಶವು ಪೋಲೆಂಡ್‌ಗೆ ರಫೇಲ್ ಯುದ್ಧವಿಮಾನಗಳನ್ನು ಕಳುಹಿಸಿದೆ.

ಲಿಥುವೇನಿಯಾದಲ್ಲಿ ನ್ಯಾಟೊದ ಮುಂಚೂಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜರ್ಮನಿ, ಅಲ್ಲಿ ಹಲವು ಹೊವಿಟ್ಜರ್‌ಗಳನ್ನು ನಿಯೋಜಿಸಿದೆ. 6 ಯುದ್ಧವಿಮಾನಗಳನ್ನು ರೊಮೇನಿಯಾದಲ್ಲಿ ನಿಲ್ಲಿಸಿದೆ. ಎಸ್ಟೋನಿಯಾದಲ್ಲಿ ನ್ಯಾಟೊ ಪಡೆಯ ನೇತೃತ್ವ ವಹಿಸಿರುವ ಬ್ರಿಟನ್, 850 ಸೈನಿಕರನ್ನು ಹಾಗೂ ಟ್ಯಾಂಕ್‌ಗಳು ನಿಯೋಜಿಸಿದೆ. ಪೋಲೆಂಡ್‌ಗೆ 350 ಸೈನಿಕರ ತಂಡ ಕಳುಹಿಸಿದೆ. ಕೆನಡಾ, ಇಟಲಿ, ಡೆನ್ಮಾರ್ಕ್ ದೇಶಗಳು ಸೈನಿಕರನ್ನು, ಯುದ್ಧೋಪಕರಣಗಳನ್ನು ಒದಗಿಸಿವೆ. ಪೋಲೆಂಡ್, ಹಂಗೆರಿ ಹಾಗೂ ಮಾಲ್ಡೋವಿಯಾಗಳು ಯುದ್ಧ ನಿರಾಶ್ರಿತರನ್ನು ಸ್ವಾಗತಿಸುತ್ತಿವೆ.

ಏಷ್ಯಾದಲ್ಲಿ ಮಿಶ್ರ ಪ್ರತಿಕ್ರಿಯೆ

• ಸ್ಯೂ ಲೀ ವೀ, ಎಮಿಲಿ ಷ್ಮಾಲ್, ಸಮೀರ್ ಯಾಸಿರ್

ರಷ್ಯಾ, ಉಕ್ರೇನ್ ಅನ್ನು ಅತಿಕ್ರಮಿಸಿದ ನಂತರ ವಿಶ್ವದ ಹಲವು ದೇಶಗಳು ರಷ್ಯಾ ವಿರುದ್ಧ ಒಟ್ಟಾಗಿವೆ. ರಷ್ಯಾದ ರಾಜತಾಂತ್ರಿಕ ನಾಯಕತ್ವದ ಸಮರ್ಥನೆಗಳನ್ನು ಕೇಳಬೇಕಿದ್ದ ಸಭೆಯಿಂದ ವಿಶ್ವದ ಬಹುತೇಕ ದೇಶಗಳ ನಿಯೋಗಗಳು ಹೊರನಡೆದಿದ್ದವು. ಪಾಶ್ಚಿಮಾತ್ಯ ದೇಶಗಳು ರಷ್ಯಾ ಮೇಲೆ ಜಾಗತಿಕ ನಿರ್ಬಂಧ ಹೇರುವ ಅಂತಿಮ ಹಂತದಲ್ಲಿವೆ. ಈ ದೇಶಗಳ ಬಾರ್‌ಗಳಲ್ಲಿ ರಷ್ಯಾದ ವೋಡ್ಕಾವನ್ನೂ ನಿಷೇಧಿಸಲಾಗಿದೆ. ಆದರೆ, ಏಷ್ಯಾದ ದೇಶಗಳಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಅಮೆರಿಕದ ಜತೆಗೆ ಮೈತ್ರಿ ಹೊಂದಿರುವ ಏಷ್ಯಾದ ದೇಶಗಳು, ರಷ್ಯಾದ ಅತಿಕ್ರಮಣವನ್ನು ಖಂಡಿಸುವ ಮತ್ತು ನಿರ್ಬಂಧಗಳನ್ನು ಪಾಲಿಸುವ ಮಾತುಗಳನ್ನಾಡಿವೆ. ಆದರೆ ಏಷ್ಯಾದಲ್ಲಿನ ಸರ್ವಾಧಿಕಾರಿ ಧೋರಣೆಯ ಸರ್ಕಾರಗಳು ಮತ್ತು ಪಾಶ್ಚಿಮಾತ್ಯ ಜಗತ್ತಿನೊಂದಿಗೆ ದುರ್ಬಲ ಸಂಬಂಧ ಹೊಂದಿರುವ ದೇಶಗಳು, ಉಕ್ರೇನ್‌ನಲ್ಲಿನ ಅತಿಕ್ರಮಣದ ವಿರುದ್ಧದ ನಿಲುವು ತಳೆಯಲು ಬಯಸಿಲ್ಲ.

'ರಷ್ಯಾದ ಕ್ರಿಯೆಗಳು ಸರಿಯಾಗಿವೆ' ಎಂದು ಮ್ಯಾನ್ಮಾರ್‌ನ ಸೇನಾ ಮುಖ್ಯಸ್ಥರು ರಷ್ಯಾ ಅತಿಕ್ರಮಣವನ್ನು ಅನುಮೋದಿಸಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ, ರಷ್ಯಾದ ಅತಿಕ್ರಮಣವನ್ನು ಖಂಡಿಸುವ ನಿರ್ಣಯದಿಂದ ಭಾರತ ಹಿಂದೆ ಸರಿದಿದೆ. ಉಕ್ರೇನ್ ಮೇಲಿನ ಅತಿಕ್ರಮಣವನ್ನು, ಅತಿಕ್ರಮಣ ಎಂದು ಕರೆಯಲು ಚೀನಾ ನಿರಾಕರಿಸಿದೆ. ವಿಯೆಟ್ನಾಂನಲ್ಲಿ ಈಗಲೂ ವ್ಲಾಡಿಮಿರ್ ಪುಟಿನ್ ಅವರನ್ನು ಬಹಳ ಆದರದಿಂದ, 'ಅಂಕಲ್ ಪುಟಿನ್' ಎಂದೇ ಕರೆಯಲಾಗುತ್ತಿದೆ.

ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಜಪಾನ್, ಸಿಂಗಪುರ, ದಕ್ಷಿಣ ಕೊರಿಯಾ ಮತ್ತು ಆಸ್ಟ್ರೇಲಿಯ ಮಾತ್ರವೇ ರಷ್ಯಾ ವಿರುದ್ಧದ ನಿರ್ಬಂಧಗಳನ್ನು ಪಾಲಿಸುವುದಾಗಿ ಹೇಳಿವೆ. ಚೀನಾದ ದಾಳಿಯ ಭೀತಿಯಲ್ಲಿರುವ ತೈವಾನ್ ಸಹ ರಷ್ಯಾ ವಿರುದ್ಧದ ನಿರ್ಬಂಧಗಳನ್ನು ಪಾಲಿಸಲು ಒಪ್ಪಿಕೊಂಡಿದೆ, ಉಕ್ರೇನ್‌ನ ಬೆಂಬಲಕ್ಕೆ ನಿಂತಿದೆ.

ಏಷ್ಯಾದ ದೇಶಗಳ ಈ ಮಿಶ್ರ ನಿಲುವುಗಳು, ರಷ್ಯಾ ವಿರುದ್ಧದ ಪಾಶ್ಚಿಮಾತ್ಯ ದೇಶಗಳ ಸಿಟ್ಟನ್ನು ಸರಿಗಟ್ಟುವಷ್ಟು ಸಮರ್ಥವಾಗಿಲ್ಲ. ಆದರೆ, 'ಪುಟಿನ್ ಅವರನ್ನು ಜಾಗತಿಕಮಟ್ಟದಲ್ಲಿ ಏಕಾಂಗಿಯನ್ನಾಗಿಸುತ್ತೇವೆ'ಎಂದು ಜೋ ಬೈಡನ್ ಅವರು ಮಾಡಿದ್ದ ಪ್ರತಿಜ್ಞೆಯ ಮಿತಿಗಳನ್ನಂತೂ ಇವು ಪರೀಕ್ಷೆಗೆ ಒಡ್ಡುತ್ತವೆ.

'ರಷ್ಯಾವನ್ನು ದೂರವಿಡುವುದು ಸಾಧ್ಯ ಎಂದು ನಾನು ಭಾವಿಸುವುದಿಲ್ಲ. ರಷ್ಯಾ ಈಗಲೂ ವಿಶ್ವದ ದೊಡ್ಡ ದೇಶಗಳಲ್ಲಿ ಒಂದು. ಮತ್ತು ರಷ್ಯಾ ಅಣ್ವಸ್ತ್ರ ಹೊಂದಿರುವ ದೇಶವೂ ಹೌದು. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ರಷ್ಯಾ ಶಾಶ್ವತ ಸದಸ್ಯತ್ವ ಹೊಂದಿದೆ. ಈ ಪರಿಸ್ಥಿತಿ ಸದ್ಯಕ್ಕಂತೂ ಬದಲಾಗುವುದಿಲ್ಲ' ಎನ್ನುತ್ತಾರೆ ರಷ್ಯಾದಲ್ಲಿ ಸಿಂಗಪುರದ ರಾಯಭಾರಿಯಾಗಿದ್ದ ಬಿಲಾಹರಿ ಕೌಶಿಕನ್.

ಏಷ್ಯಾದ ದೇಶಗಳ ಮೇಲೆ ಅಮೆರಿಕವು ಹೊಂದಿರುವ ಪ್ರಭಾವಕ್ಕೆ ಹೋಲಿಸಿದರೆ, ರಷ್ಯಾ ಹೊಂದಿರುವ ಪ್ರಭಾವ ಕಡಿಮೆಯೇ. ಆದರೆ ಈಚಿನ ವರ್ಷಗಳಲ್ಲಿ ರಷ್ಯಾದ ಪ್ರಭಾವ ಹೆಚ್ಚುತ್ತಿದೆ ಎಂಬುದಂತೂ ನಿಜ. ಉಕ್ರೇನ್ ಮೇಲಿನ ದಾಳಿಗೆ ಪ್ರತಿಯಾಗಿ ಪಾಶ್ಚಿಮಾತ್ಯ ದೇಶಗಳು ಹೇರಿರುವ ನಿರ್ಬಂಧವನ್ನು ತಪ್ಪಿಸಲು, ಏಷ್ಯಾದ ದೇಶಗಳ ಜತೆಗೆ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ವೃದ್ಧಿಸಲು ಯತ್ನಿಸುತ್ತೇವೆ ಎಂದು ರಷ್ಯಾದ ಹಣಕಾಸು ಸಚಿವಾಲಯ ಸ್ಪಷ್ಟವಾಗಿ ಹೇಳಿದೆ. ರಷ್ಯಾದೊಂದಿಗೆ ವಾಣಿಜ್ಯ ಸಂಬಂಧ ಹೊಂದಿರುವ ದೇಶಗಳೂ ಇದೇ ರೀತಿಯ ಮಾತುಗಳನ್ನಾಡಿವೆ.

ಇಂಡೊನೇಷ್ಯಾ, ಮಲೇಷ್ಯಾ ಮತ್ತು ಮ್ಯಾನ್ಮಾರ್ ಸೇನೆಗಳಿಗೆ ರಷ್ಯಾವು ತನ್ನ ಯುದ್ಧವಿಮಾನಗಳನ್ನು ಮಾರಾಟ ಮಾಡಿದೆ. ಆದರೆ ದಕ್ಷಿಣ ಏಷ್ಯಾದಲ್ಲಿ ರಷ್ಯಾದ ಅತ್ಯಂತ ದೊಡ್ಡ ಮಾರುಕಟ್ಟೆ ಎಂದರೆ, ಅದು ವಿಯೆಟ್ನಾಂ. 2000ದಿಂದ 2019ರವರೆಗೆ ವಿಯೆಟ್ನಾಂ ಮಾಡಿಕೊಂಡಿರುವ ಸೇನಾ ಸಲಕರಣೆಗಳ ಆಮದಿನಲ್ಲಿ ರಷ್ಯಾದ ಪಾಲು ಶೇ 84ರಷ್ಟು. ಚೀನಾವನ್ನು ಎದುರಿಸುವ ಸಲುವಾಗಿ ವಿಯೆಟ್ನಾಂ ಎಲ್ಲಾ ಸ್ವರೂಪದ ಸೇನಾ ಸಲಕರಣೆಗಳನ್ನು ರಷ್ಯಾದಿಂದ, ದೊಡ್ಡ ಪ್ರಮಾಣದಲ್ಲಿ ಖರೀದಿಸಿದೆ. ಭಾರತಕ್ಕೆ ರಷ್ಯಾವು ಹಲವು ದಶಕಗಳಿಂದ ಸೇನಾ ಸಲಕರಣೆಗಳ ಆಮದಿನ ಮೂಲವಾಗಿದೆ. ರಷ್ಯಾದಿಂದ ಇಡೀ ವಿಶ್ವಕ್ಕೆ ರಫ್ತಾಗುವ ಸೇನಾ ಸಲಕರಣೆಗಳ ಅತಿದೊಡ್ಡ ಗ್ರಾಹಕರಲ್ಲಿ ಭಾರತಕ್ಕೆ ಎರಡನೇ ಸ್ಥಾನವಿದೆ. ಕಳೆದ ವರ್ಷ ಪುಟಿನ್ ಅವರು ಭಾರತಕ್ಕೆ ಭೇಟಿ ನೀಡಿದ್ದರು. ಹತ್ತಾರು ಸಾವಿರ ಕೋಟಿ ಮೊತ್ತದ ಎಸ್‌400–ಟ್ರಯಂಫ್ ಕ್ಷಿಪಣಿ ನಿರೋಧಕ ವ್ಯವಸ್ಥೆ ಖರೀದಿಗೆ ರಷ್ಯಾದೊಂದಿಗೆ ಭಾರತ ಒಪ್ಪಂದ ಮಾಡಿಕೊಂಡಿದೆ.

ಭಾರತದ ಈಶಾನ್ಯದ ಗಡಿಗಳಲ್ಲಿ ಚೀನಾ ಒತ್ತುವರಿಯ ಬೆದರಿಕೆಯಾಗಿ ಬಂದು ಕುಳಿತಿದೆ. ಇಂತಹ ಸಂದರ್ಭದಲ್ಲಿ ರಷ್ಯಾದ ಈ ಅತಿಕ್ರಮಣವನ್ನು ಖಂಡಿಸುವ ಮೂಲಕ, ಅದರೊಂದಿಗೆ ಸ್ನೇಹವನ್ನು ಹಾಳುಮಾಡಿಕೊಳ್ಳದೇ ಇರುವಂತಹ ಎಚ್ಚರಿಕೆಯ ನಡೆಯನ್ನು ಭಾರತ ತೋರಿದೆ. ಕಾಶ್ಮೀರ ವಿವಾದದ ವಿಚಾರದಲ್ಲಿ, ಭದ್ರತಾ ಮಂಡಳಿಯಲ್ಲಿ ಭಾರತವನ್ನು ಖಂಡಿಸುವ ಪಾಕಿಸ್ತಾನದ ಎಲ್ಲಾ ನಿರ್ಣಯಗಳನ್ನು ರಷ್ಯಾ ತನ್ನ ವಿಟೋ ಅಧಿಕಾರ ಬಳಸಿ ವಿಫಲಗೊಳಿಸುತ್ತಲೇ ಬಂದಿದೆ. 2014ರಲ್ಲಿ ಕ್ರಿಮಿಯಾವನ್ನು ರಷ್ಯಾ ಅತಿಕ್ರಮಿಸಿದಾಗ, ಅದನ್ನು ಖಂಡಿಸುವ ನಿರ್ಣಯದಿಂದ ಭಾರತವು ಹಿಂದೆ ಉಳಿದಿತ್ತು.

'ರಷ್ಯಾವನ್ನು ಪೂರ್ಣಪ್ರಮಾಣದಲ್ಲಿ ಖಂಡಿಸಲು ಹಿಂದೇಟು ಹಾಕುವುದು, ಜಾಗತಿಕ ಭದ್ರತೆಯಲ್ಲಿ ಮಾಡಿಕೊಂಡ ರಾಜಿಯಲ್ಲದೇ ಮತ್ತೇನಲ್ಲ. ಇಲ್ಲಿ ಮೌನವಾಗಿರುವುದು ಮತ್ತು ತಟಸ್ಥ ನೀತಿ ಅನುಸರಿಸುವುದು, ರಷ್ಯಾದ ಅತಿಕ್ರಮಣದ ಅನುಮೋದನೆಯೇ ಸರಿ' ಎಂದು ಸಿಂಗಪುರದಲ್ಲಿನ, ಉಕ್ರೇನ್ ರಾಯಭಾರ ಕಚೇರಿ ಹೇಳಿದೆ.

ರಷ್ಯಾದ ಮೇಲೆ ಹೇರಲಾಗಿರುವ ನಿರ್ಬಂಧಗಳನ್ನು ತಪ್ಪಿಸಿ, ವ್ಯಾಪಾರ ವಹಿವಾಟು ನಡೆಸಲು ರಷ್ಯಾದೊಂದಿಗೆ ರೂಪಾಯಿಯನ್ನೇ ಬಳಸಿಕೊಳ್ಳಬಹುದು ಎಂದು ಭಾರತದ ಅಧಿಕಾರಿಗಳು ಹೇಳಿದ್ದಾರೆ. ಇಲ್ಲಿ ಭಾರತ ಯಾರೊಂದಿಗೆ ಇದೆ ಎಂದು ಪ್ರಶ್ನಿಸಿದರೆ, 'ನಾವು, ನಮ್ಮೊಂದಿಗೆ ಇದ್ದೇವೆ' ಎನ್ನುತ್ತಾರೆ ರಷ್ಯಾಕ್ಕೆ ಭಾರತದ ರಾಯಭಾರಿಯಾಗಿದ್ದ ಪಂಕಜ್ ಸರಣ್.

ಭಾರತದಂತೆಯೇ ಇಂಡೊನೇಷ್ಯಾ ಸಹ ರಕ್ಷಣಾ ಸಾಮಗ್ರಿಗಳಿಗಾಗಿ ರಷ್ಯಾವನ್ನು ಅವಲಂಬಿಸಿದೆ. ಈಚಿನ ವರ್ಷಗಳಲ್ಲಿ ಈ ಅವಲಂಬನೆ ಹೆಚ್ಚಾಗುತ್ತಿದೆ. 2021ರಲ್ಲಿ ರಷ್ಯಾದಿಂದ ಇಂಡೊನೇಷ್ಯಾ ಮಾಡಿಕೊಂಡ ಆಮದು ಶೇ 42.3ರಷ್ಟು ಏರಿಕೆಯಾಗಿದೆ. ಅದೇ ವರ್ಷ ಇಂಡೊನೇಷ್ಯಾದಿಂದ ರಫ್ತಾದ ತಾಳೆ ಎಣ್ಣೆಯಲ್ಲಿ ಶೇ 38ರಷ್ಟನ್ನು ರಷ್ಯಾವೇ ಖರೀದಿಸಿದೆ. 'ರಷ್ಯಾದ ಮೇಲೆ ನಿರ್ಬಂಧ ಹೇರುವ ಯೋಚನೆ ಇಲ್ಲ. ಬೇರೆ ದೇಶಗಳು ತೆಗೆದುಕೊಂಡ ನಿರ್ಧಾರವನ್ನು ಹಿಂಬಾಲಿಸುವ ಅಗತ್ಯವಿಲ್ಲ' ಎಂದು ಇಂಡೊನೇಷ್ಯಾದ ವಿದೇಶಾಂಗ ಸಚಿವಾಲಯ ಹೇಳಿದೆ.

ಒಂದೆಡೆ ರಷ್ಯಾದ ಅತಿಕ್ರಮಣವನ್ನು ಅಮೆರಿಕವು ಖಂಡಿಸಿದೆ. ಆಗ್ನೇಯ ಏಷ್ಯಾದ ಹಲವು ದೇಶಗಳಲ್ಲಿ ಪ್ರಬಲ ನಾಯಕತ್ವವನ್ನು ಮೆಚ್ಚಲಾಗುತ್ತದೆ. ಅಂತಹ ದೇಶಗಳು ಪುಟಿನ್ ಅವರ ಸರ್ವಾಧಿಕಾರಿ ಧೋರಣೆಯನ್ನು ಹೊಗಳುತ್ತಿವೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಫಿಲಿಪ್ಪೀನ್ಸ್ ಮತ್ತು ವಿಯೆಟ್ನಾಂಗೆ ರಷ್ಯಾವು ಕೋವಿಡ್ ಲಸಿಕೆಗಳನ್ನು ಉಚಿತವಾಗಿ ನೀಡಿತ್ತು. 'ನಾನು ಅಂಕಲ್ ಪುಟಿನ್ ಅವರ ದೊಡ್ಡ ಅಭಿಮಾನಿ. ಅವರು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ' ಎಂದು ವಿಯೆಟ್ನಾಂನ ಕಲಾವಿದ ಟ್ರಾನ್ ಟ್ರುಂಗ್ ಹಿಯೂ ಹೇಳಿದ್ದಾರೆ.

ಅಮೆರಿಕದ ಮಿತ್ರರಾಷ್ಟ್ರಗಳೂ ಸಹ ನಿರ್ಬಂಧಗಳ ಬಗ್ಗೆ ಆಕ್ಷೇಪದ ಮಾತುಗಳನ್ನಾಡಿವೆ. ಐರೋಪ್ಯ ಒಕ್ಕೂಟ ಮತ್ತು ಅಮೆರಿಕವು ಹೇರಿದ್ದ ನಿರ್ಬಂಧಗಳಿಗೆ ಅನುಮೋದನೆ ನೀಡುವಲ್ಲಿ ದಕ್ಷಿಣ ಕೊರಿಯಾ ವಿಳಂಬ ನೀತಿ ಅನುಸರಿಸಿತು. ಜತೆಗೆ, 'ನಾವು ಹೆಚ್ಚುವರಿ ದಂಡಗಳನ್ನು ವಿಧಿಸುವುದಿಲ್ಲ' ಎಂದು ಘೋಷಿಸಿತು.

ನ್ಯೂಯಾರ್ಕ್ ಟೈಮ್ಸ್ ವರದಿ

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಶಕ್ತಿಯ ಮಿತಿ

ಬೆಟ್ಟಕ್ಕೆ ಸನ್ನೆ ಹಾಕಿರುವ ಮಹದಾಶಿಗನೆ |
ಗಟ್ಟಿಯೇ? ಸೊಟ್ಟಾಗದೇ ಸನ್ನೆಗೋಲು? ||
ರಟ್ಟೆಯೇ ಮುರಿದೀತು ಮೈಮರೆತ ಸಾಹಸದಿ |
ಎಷ್ಟು ಚಿತವೋ ನೋಡು – ಮಂಕುತಿಮ್ಮ || 578 ||

ಪದ-ಅರ್ಥ: ಸನ್ನೆ = ಮೀಟುಗೋಲು, ಮಹದಾಶಿಗನೆ = ಮಹತ್ + ಆಶಿಗನೆ (ಆಸೆಯುಳ್ಳವನೆ), ಸನ್ನೆಗೋಲು = ಮೀಟಲು ಬಳಸುವ ಕೋಲು, ರಟ್ಟೆ = ತೋಳು, ಎಷ್ಟುಚಿತವೋ = ಎಷ್ಟು + ಉಚಿತವೋ (ಸರಿಯಾದದ್ದೋ)

ವಾಚ್ಯಾರ್ಥ: ಮಹತ್ತಾದ ಆಸೆಯನ್ನು ಹೊತ್ತು ಬೆಟ್ಟವನ್ನು ಎತ್ತಲು ಮೀಟುಗೋಲು ಹಾಕಿದವನೆ, ಗಟ್ಟಿಯಾಗಿದ್ದೀಯಾ? ಹಾಕಿರುವ ಸನ್ನೆಗೋಲು ಸೊಟ್ಟಾಗುವುದಿಲ್ಲವೆ? ತೋಳೇ ಮುರಿದೀತು, ಸಾಹಸದಲ್ಲಿ ಮೈಮರೆತಾಗ, ಎಷ್ಟು ಸಾಧ್ಯವೋ, ಸರಿಯೋ ನೋಡು.

ವಿವರಣೆ: ಪ್ರತಿಯೊಬ್ಬರಿಗೂ ಅವರದೇ ಆದ ಕನಸುಗಳಿರುತ್ತವೆ, ಅಪೇಕ್ಷೆಗಳಿರುತ್ತವೆ. ಕೆಲವರಿಗೆ ಕನಸುಗಳು ಕಾಲಾಂತರದಲ್ಲಿ ಬದಲಾಗುತ್ತವೆ. ಕೆಲವರು ಅವುಗಳನ್ನು ತಲುಪಲಾರದೆ ನಿರಾಸೆ ಹೊಂದಿಯೋ, ಮರೆತೋ ಹೋಗುತ್ತಾರೆ. ಮತ್ತೆ ಕೆಲವು ಹೊಸ ಕನಸುಗಳು ಚಿಗುರುತ್ತವೆ. ಎಲ್ಲ ಮಹತ್ತಾದ ಸಾಧನೆಗಳಿಗೆ ಮೂಲ ಈ ಕನಸುಗಳು, ಆಶಯಗಳು. ಅವು ಕಾರ್ಯದ ಹಿಂದಿನ ಪ್ರೇರಕ ಶಕ್ತಿ. ಅವು ಪಿರಾಮಿಡ್‌ನ ಮೊದಲ ಕಲ್ಲುಗಳು.

ಇದೆಲ್ಲ ಸರಿ. ಆದರೆ ಕಾಣುವ ಕನಸುಗಳು ಹಗಲುಗನಸುಗಳಾಗಬಾರದು. ಅವು ವಾಸ್ತವದ ನೆಲದ ಮೇಲೆ ನಿಂತಿದ್ದರೆ ಸರಿ. ಊದಿ ಆಕಾಶದಲ್ಲಿಯ ಮೋಡಗಳನ್ನು ಹಾರಿಸುವ ಪ್ರಯತ್ನ ಪುಪ್ಪುಸದಲ್ಲಿಯ ಗಾಳಿಯನ್ನು ಕಳೆದುಬಿಟ್ಟೀತು. ಆಸೆ ಇರುವುದು ಸರಿ. ಆದರೆ ಆ ಆಸೆ ದುರಾಸೆಯಾದರೆ ಅವನ ನಾಶಕ್ಕೇ ಕಾರಣವಾಗುತ್ತದೆ. ಗ್ರೀಸ್ ದೇಶದ ಚಕ್ರವರ್ತಿಯಾಗಬೇಕು ಎಂದುಕೊಂಡ ತರುಣ ಅಲೆಗ್ಝಾಂಡರ್ ಅದನ್ನು ಸಾಧಿಸಿದ. ಆಸೆ ಅಲ್ಲಿಗೇ ನಿಲ್ಲಲಿಲ್ಲ. ಈಗ ಪ್ರಪಂಚಕ್ಕೇ ಅಧಿಪತಿಯಾಗಬೇಕೆಂದುಕೊಂಡ. ಲಕ್ಷಾಂತರ ಜನರ ಸೈನ್ಯ ಕಟ್ಟಿದ, ಲಕ್ಷಾಂತರ ಜನರನ್ನು ಕೊಂದ, ಕೊನೆಗೆ ಅಲ್ಪಪ್ರಾಯದಲ್ಲೇ ತಾನು ಬಸವಳಿದ. ಪ್ರಪಂಚದಲ್ಲಿ ಒಬ್ಬ ಯಹೂದಿ ಕೂಡ ಉಳಿಯಬಾರದೆಂದು ಪಣತೊಟ್ಟ ಹಿಟ್ಲರ್ ಜಗತ್ತೆಂದೂ ಕಾಣದ ಮಾರಣ ಹೋಮಕ್ಕೆ ಯಜ್ಞದೀಕ್ಷಿತನಾದ. ಕೊನೆಗೆ ತಾನೂ ತಲೆಗೆ ಗುಂಡು ಹೊಡೆದುಕೊಂಡು ಬರ್ಲಿನ್‌ನ ತನ್ನ ನೆಲಮಾಳಿಗೆಯಲ್ಲಿ ಅಂತ್ಯ ಕಂಡ. ಅವನ ಆಸೆ ಕೊನೆಗೂ ಪೂರೈಸಲೇ ಇಲ್ಲ. ಭಸ್ಮಾಸುರ ಸಣ್ಣವನೇನಲ್ಲ. ಪರಮೇಶ್ವರನನ್ನೇ ತನ್ನ ತಪಸ್ಸಿನಿಂದ ಒಲಿಸಿಕೊಂಡವ. ಆದರೆ ಅವನ ಆಸೆ ಬಲು ದೊಡ್ಡದು. ಅದು ಶಿವನ ತಲೆಯ ಮೇಲೆಯೇ ಕೈ ಇಡುವ ಉದ್ಧಟತನಕ್ಕೆ ಏರಿತು. ಕೊನೆಗೆ ಅದೇ ಅವನ ಮೃತ್ಯುವಿಗೆ ಕಾರಣವಾಯಿತು.

ಈ ಚಿಂತನೆಯನ್ನು ಕಗ್ಗ ಒಂದು ಎಚ್ಚರಿಕೆಯೊಂದಿಗೆ ನೀಡುತ್ತದೆ. ಒಬ್ಬ ಮನುಷ್ಯ ಒಂದು ಬೆಟ್ಟವನ್ನೇ ಮೇಲಕ್ಕೆ ಎತ್ತಲು ನೋಡಿದನಂತೆ. ಅದಕ್ಕಾಗಿ ಒಂದು ಉದ್ದವಾದ ಮೀಟುಗೋಲನ್ನು ತಂದು ಬೆಟ್ಟದ ಬುಡಕ್ಕೆ ಸೇರಿಸಿದನಂತೆ. ಅವನ ಉದ್ದೇಶ ಕೋಲನ್ನು ಶಕ್ತಿಯಿಂದ ಕೆಳಗೆ ತಳ್ಳಿ, ಬೆಟ್ಟವನ್ನು ಎತ್ತಿಬಿಡುವುದು. ಆದರೆ ಆ ಕಾರ್ಯಕ್ಕೆ ಸಿದ್ಧನಾಗಿದ್ದವನು ಅವನೊಬ್ಬನೇ. ಆ ಕಾರ್ಯ ಸಾಧ್ಯವಾದೀತೇ? ಅವನು ಅಷ್ಟು ಗಟ್ಟಿಯೇ? ಬೆಟ್ಟವನ್ನು ಎತ್ತುವಷ್ಟು ಸನ್ನೆಗೋಲು ಭದ್ರವಾಗಿದೆಯೇ? ಅದು ಸೊಟ್ಟಾಗದೆ ಹೋದೀತೇ? ಇನ್ನೂ ಶಕ್ತಿ ಹಾಕಿ ಒತ್ತಿದರೆ ಅವನ ತೋಳೇ ಮುರಿದೀತು. ಇದೊಂದು ಮೈಮರೆತ ಸಾಹಸ. ಆದ್ದರಿಂದ ಸಾಹಸಕ್ಕೆ ಕೈ ಹಾಕುವ ಮೊದಲು ತನ್ನ ಶಕ್ತಿಯ ಮಿತಿಗಳನ್ನು, ಲಭ್ಯವಿರುವ ಅವಕಾಶಗಳನ್ನು ಗಮನಿಸಿ, ತನ್ನಿಂದ ಎಷ್ಟರ ಮಟ್ಟಿನ ಕಾರ್ಯವಾಗುವುದು ಸಾಧ್ಯ ಎಂಬುದನ್ನು ತಿಳಿಯುವುದು, ನಂತರ ಕಾರ್ಯೋನ್ಮುಖನಾಗುವುದು ಮುಖ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಮಾರ್ಚ್ 7, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 23 ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ಪಂಚಮಿ ಗಂ. 22-33 ನಕ್ಷತ್ರ: ಭರಣಿ ಗಂ. 29-54
ಯೋಗ: ಐಂದ್ರ ಗಂ. 24-00, ಕರಣ: ಬವ ಗಂ. 09-48.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-46
ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 03 ಶಬನ್ ಅದೃಷ್ಟ ಸಂಖ್ಯೆ: 5, 11

ಮೇಷ: ಹೊಸ ಆಕಾಂಕ್ಷೆ, ಜೀವನದ ಗುರಿಗಳನ್ನು ಚೆನ್ನಾಗಿ ಅರಿತುಕೊಂಡು ಮುಂದುವರಿಯುವಿರಿ. ಪಾಲುದಾರಿಕೆಯನ್ನು ಮುಂದುವರೆಸುವ ಯೋಚನೆಯು ಸರಿಯಾಗಿರುವುದು. ಯೋಗಾಭ್ಯಾಸದಿಂದ ಮನಸ್ಸಿಗೆ ಹಿತ.

ವೃಷಭ: ಮಂದಗತಿಯಲ್ಲಿ ಸಾಗುತ್ತಿರುವ ಕೆಲವು ಕೆಲಸಗಳನ್ನು ಶೀಘ್ರವಾಗಿ ಮುಗಿಸಲು ಸಿಬ್ಬಂದಿಗೆ ಒತ್ತಡ ಹೇರಬೇಕಾಗುವುದು. ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಸೇರುವ ನಿಮ್ಮ ಆಸಕ್ತಿಗೆ ಇಂದು ಹಾದಿ ದೊರಕುವುದು.

ಮಿಥುನ: ಜೀವನ ನಡೆಸಲು ಹಿರಿಯರ ಮಾರ್ಗದರ್ಶನ ಬೇಕೆನಿಸಲಿದೆ. ಸಮಸ್ಯೆಗಳಿಗೆ ಸಿಲುಕದಂತೆ ಜಾಗ್ರತೆ ವಹಿಸಿ. ಷೇರು ಕೊಳ್ಳುವಲ್ಲಿ ನಿಮ್ಮ ಸ್ನೇಹಿತರು ಉಪಕಾರ ಮಾಡಬಹುದು. ಒತ್ತಡಗಳಿಂದ ಹೊರಬರಲು ವಿಶಾಂತ್ರಿ ಅಗತ್ಯ.

ಕರ್ಕಾಟಕ: ಔದ್ಯೋಗಿಕ ವಿದ್ಯಾರ್ಥಿಗಳು ಹೆಚ್ಚಿನ ಶ್ರಮದಿಂದ ಉತ್ತಮ ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾಗುವರು. ನಿಮ್ಮ ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮುಗಿಸಿ.

ಸಿಂಹ: ನಿಮಗೆದುರಾಗುವ ಎಲ್ಲಾ ಸವಾಲುಗಳನ್ನು ಬುದ್ಧಿವಂತಿಕೆಯಿಂದ ಎದುರಿಸಿ ಮನೋಬಲವನ್ನು ಹೆಚ್ಚಿಸಿಕೊಳ್ಳಿರಿ. ನಿಮ್ಮ ಕಷ್ಟದ ದಿನಗಳಲ್ಲಿ ಸಹಕರಿಸಿದವರೊಂದಿಗೆ ನಮ್ರತೆಯಿಂದ, ವಿನಯದಿಂದ ಇರುವುದನ್ನು ಮರೆಯಬೇಡಿ.

ಕನ್ಯಾ: ಕೆಲಸದ ಒತ್ತಡದ ಹಿನ್ನೆಲೆಯಲ್ಲಿ ಈ ದಿನ ನೆಮ್ಮದಿ ಸಂಪಾದಿಸಬೇಕಾಗುವುದು. ಮನೆ ನವೀಕರಣ ಕಾರ್ಯಕ್ಕೆ ಕೈ ಹಾಕುವವರು ವಾಸ್ತುವಿನ ಬಗ್ಗೆ ಗಮನಕೊಡಿ. ಮಕ್ಕಳ ಒತ್ತಾಯಕ್ಕೆ ಮಣಿದು ಪ್ರವಾಸದ ಬಗ್ಗೆ ಯೋಚಿಸುವಿರಿ.

ತುಲಾ: ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಮೂಡಲಿದೆ. ಇದರಿಂದಾಗಿ ಸುಲಭವಾಗಿ ಕೆಲಸ ಪೂರೈಸುವಿರಿ. ಸಂಘ ಸಂಸ್ಥೆಯಲ್ಲಿ ನಡೆದ ಸಣ್ಣ ಪುಟ್ಟ ತಪ್ಪುಗಳನ್ನು ಸರಿಪಡಿಸಿ, ಕಿರಿಯರಿಗೆ ಮಾರ್ಗದರ್ಶನ ನೀಡಿ.

ವೃಶ್ಚಿಕ: ಕೌಟುಂಬಿಕ ಸಮಸ್ಯೆಗಳು ಹೊಸದೊಂದು ಆಯಾಮ ಪಡೆಯಲಿವೆ. ವೃತ್ತಿಗೆ ಸಂಬಂಧಿಸಿದಂತೆ ಶತ್ರುಬಾಧೆ ಇರಲಿದೆ, ನಿಮ್ಮ ಪ್ರಯತ್ನದಿಂದ ಸುಧಾರಿಸಿಕೊಳ್ಳಿ. ದೈವಾನುಗ್ರಹವನ್ನು ಸದಾಕಾಲ ಪ್ರಾರ್ಥಿಸಬೇಕಾಗುತ್ತದೆ.

ಧನು: ಸಂಬಂಧ ಮತ್ತು ಒಪ್ಪಂದಗಳತ್ತ ಈ ದಿನ ನಿಶ್ಚಿತ ಗಮನ ನೀಡಿ. ನಿಮ್ಮಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ವೇದಿಕೆ ಸಿಗುವುದು. ಹೊಸದನ್ನು ಕಲಿಯಲು ಆಸಕ್ತಿ ಉಂಟಾಗಲಿದೆ.

ಮಕರ: ವ್ಯವಹಾರದಲ್ಲಿ ಲಾಭನಷ್ಟಗಳನ್ನು ಸುಧಾರಿಸಿಕೊಂಡು ಹೋಗುವ ಮನಸ್ಸು ಸಿದ್ಧಗೊಳಿಸಿಕೊಳ್ಳಬೇಕಿದೆ. ಆರೋಗ್ಯದಲ್ಲಿ ಸುಧಾರಣೆ. ಭಿನ್ನಾಭಿಪ್ರಾಯಗಳು ದೂರಾಗುವವು. ನಿವೃತ್ತಿ ನಂತರದ ಬಗ್ಗೆ ಯೋಚನೆಗಳು ಬರಲಿದೆ.

ಕುಂಭ: ವಿಭಿನ್ನ ರೀತಿಯ ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿರಲಿ.

ಮೀನ: ಕೆಲವೊಂದು ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಈ ದಿನ ನಿಮ್ಮ ಮುಂದಿದೆ. ಇದಕ್ಕಾಗಿ ವಿಚಲಿತರಾಗಬೇಕಿಲ್ಲ. ನಿಮ್ಮ ಅಧಿಕಾರಿಗಳ ಮೇಲೆ ಗೌರವಾನ್ವಿತ ದೃಷ್ಟಿಕೋನವನ್ನು ಇಟ್ಟುಕೊಳ್ಳುವುದರಿಂದ ಹೆಚ್ಚಿನ ಪ್ರಯೋಜನ.

ಪದಬಂಧ 4890 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎಡಗೈಯನ್ನೇ ಉಪಯೋಗಿಸಿ ಕೆಲಸ ಮಾಡುವವನು (3)
3.ಹಸ್ತ ಚಾತುರ್ಯ (4)
5.ಘಟಾನುಘಟಿ ಹಿಡಿದಿರುವ ಮಡಕೆ (2)
6.ಬೆಲೆ ಮೊದಲಿದ್ದರೂ ಈತನಿಗೆ ಯಾರೂ ದಿಕ್ಕಿಲ್ಲ! (4)
7.ನಿಷೇಧಿತ ಪ್ರದೇಶಕ್ಕೆ ಪ್ರವೇಶಿಸುವುದು (7)
10.ಇದು ಹೂವಿನ ಶರ (4)
11.ಶುನಕದ ಹತ್ತಿರವಿರುವ ಗಿಳಿ (2)
13.ಲಕ್ಷ್ಯಕ್ಕೆ ಯೋಗ್ಯವಾದುದು! (4)
14.ದಡಿಯ ಹಿಡಿದಿರುವ ವಿಶೇಷ ವಾದ್ಯ! (3)

ಮೇಲಿಂದ ಕೆಳಕ್ಕೆ
1.ಈತ ಬುದ್ಧಿಯಿಲ್ಲದವನು (2)
2.ಚಟದಲ್ಲಿ ನಿಸ್ಸಾರ ಕಾಣುತ್ತಿದೆ (3)
4.ಉಪಾಧ್ಯಾಯನಿಲ್ಲಿ ತಿರುಗಿದ್ದಾನಲ್ಲಾ? (3)
5.ಪಾಪರಹಿತ ವ್ಯಕ್ತಿ ಉಲ್ಟಾ ನಿಂತಿದ್ದಾನೆ (3)
6.ತಿರುವುಮುರುವಾಗಿರುವ ತಪ್ಪು (3)
8.ಹಂತ ಹಂತವಾಗಿ ಎಂದು ಹೀಗೆನ್ನಿ (3)
9.ನೂರರ ಗುಂಪು (3)
10.ಒಳ್ಳೆಯ ಅದೃಷ್ಟ (3)
11.ಒಳ್ಳೆ ಫಲವನ್ನು ಕೊಡುವುದು (3)
12.ತೆಳ್ಳಗಿರುವ ನೀಳವಾದ ಕೋಲು (2)

1		2	■	■	3			4
	■		■	■	■	■	■	
■	5		■	■	6			
■		■	■	■		■	■	■
■	7		8				9	■
■	■	■		■	■	■		■
10				■	■	11		■
	■	■	■	■	■		■	12
13				■	■	14		

4889ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹತ್ಯಾಕಾಂಡ 3.ಕಾಡತೂಸು
5.ಜಟಕ 7.ಕುರು
9.ರಥ 11.ನಾಕ
12.ವನ 14.ಆನನ
16.ತಳಹದಿ 17.ದಿಗಂಬರ

ಮೇಲಿಂದ ಕೆಳಕ್ಕೆ:
1.ಹಲಾಕು 2.ಡಜ 3.ಕಾಕ
4.ಸುಪಥ 6.ಟಪಾಲು
8.ರುದ್ರನಾಟಕ 9.ರಜತೋತ್ಸವ
10.ಉತ್ಥಾನ 11.ನಾಪಿತ
13.ನಶ್ವರ 14.ಆದಿ
15.ನದಿ

ಸುಡೊಕು 5276

				2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5275 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಉಕ್ರೇನ್‌ನ ಕೀವ್ ನಗರದ ಹೊರವಲಯದಲ್ಲಿ ರಷ್ಯಾ ಪಡೆಗಳ ದಾಳಿಯಿಂದ ಹಾನಿಗೊಳಗಾದ ಇರ್ಪಿನ್ ನದಿಯ ಸೇತುವೆ ಕೆಳಗೆ ನಾಗರಿಕರು ಆಶ್ರಯ ಪಡೆದಿದ್ದರು –ಪಿಟಿಐ ಚಿತ್ರ (ಎಡ ಚಿತ್ರ), ಉಕ್ರೇನ್ ಮೇಲೆ ದಾಳಿ ನಡೆಸುತ್ತಿರುವ ರಷ್ಯಾದ ನಡೆಯನ್ನು ವಿರೋಧಿಸಿ ಹಾಗೂ ಉಕ್ರೇನ್‌ಗೆ ಬೆಂಬಲ ವ್ಯಕ್ತಪಡಿಸಿ ಬಾರ್ಸಿಲೋನಾದಲ್ಲಿ ಭಾನುವಾರ ಬೃಹತ್ ಮತಪ್ರದರ್ಶನ ನಡೆಯಿತು –ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆಗಳು

- ಕದನ ವಿರಾಮ ಮತ್ತು ಸುರಕ್ಷಿತವಾಗಿ ನಾಗರಿಕರನ್ನು ಸ್ಥಳಾಂತರಿಸುವ ಕುರಿತು ಸೋಮವಾರ (ಮಾರ್ಚ್ 7ರಂದು) ಉಕ್ರೇನ್-ರಷ್ಯಾ ನಡುವೆ ಮೂರನೇ ಹಂತದ ಮಾತುಕತೆ ನಡೆಯಲಿದೆ ಎಂದು ಉಕ್ರೇನ್ ಅಧ್ಯಕ್ಷರ ಸಂಸದೀಯ ವಿಭಾಗದ ಮುಖ್ಯಸ್ಥ ಡೇವಿಡ್ ಅರಾಖಾವಿಯಾ ಹೇಳಿದ್ದಾರೆ.
- ಉಕ್ರೇನ್‌ನ ಆರೋಗ್ಯ ವ್ಯವಸ್ಥೆಗಳ ಮೇಲೆ ದಾಳಿಯು ವೈದ್ಯಕೀಯ ತಟಸ್ಥ ಧೋರಣೆ ಹಾಗೂ ಅಂತರರಾಷ್ಟ್ರೀಯ ಮಾನವೀಯ ಕಾನೂನಿನ ಉಲ್ಲಂಘನೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.
- ಯುದ್ಧಪೀಡಿತ ಉಕ್ರೇನ್‌ನಲ್ಲಿ ಜನನಿಬಿಡ ಪ್ರದೇಶವನ್ನು ಗುರಿಯಾಗಿಸಿ ರಷ್ಯಾ ದಾಳಿ ನಡೆಸುತ್ತಿದೆ ಎಂದು ಬ್ರಿಟನ್ ಮಿಲಿಟರಿ ಗುಪ್ತಚರ ಇಲಾಖೆ ತಿಳಿಸಿದೆ.
- ಫೆಬ್ರುವರಿ 25ರಿಂದ ಇಲ್ಲಿಯವರೆಗೂ ರಷ್ಯಾದ 11,000 ಕ್ಕೂ ಹೆಚ್ಚು ಸೈನಿಕರನ್ನು ಕೊಂದಿರುವುದಾಗಿ ಉಕ್ರೇನ್ ಸರ್ಕಾರ ಹೇಳಿಕೊಂಡಿದೆ.
- ರಷ್ಯಾ ಮೇಲೆ ವಿವಿಧ ದೇಶಗಳು ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ಆಹಾರ ಪದಾರ್ಥಗಳ ಮಾರಾಟ ಹಾಗೂ ಬೆಲೆಗಳ ಮೇಲೆ ಸರ್ಕಾರ ನಿಯಂತ್ರಣ ಹೇರಿದೆ. ಬ್ರೆಡ್, ಅಕ್ಕಿ, ಹಿಟ್ಟು, ಮೊಟ್ಟೆ, ಮಾಂಸ ಸೇರಿದಂತೆ ಅಗತ್ಯ ವಸ್ತುಗಳ ಸಂಗ್ರಹ ಹಾಗೂ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ
- ಟರ್ಕಿ ಅಧ್ಯಕ್ಷ ರಿಸೆಪ್ ತಯ್ಯಿಪ್ ಎರ್ಡೋಗನ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಮಾತುಕತೆ ನಡೆಸಿದ್ದು, ಕೂಡಲೇ ಸಂಪೂರ್ಣ ಕದನ ವಿರಾಮ ಘೋಷಿಸುವಂತೆ ಮನವಿ ಮಾಡಿದ್ದಾರೆ.
- ಉಕ್ರೇನ್ ಬಿಕ್ಕಟ್ಟಿಗೆ ರಾಜತಾಂತ್ರಿಕ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಪ್ರಯತ್ನ ಮುಂದುವರಿಸುವುದಾಗಿ ಇಸ್ರೇಲ್ ಪ್ರಧಾನಿ ನಫ್ತಾಲಿ ಬೆನೆಟ್ ಹೇಳಿದ್ದಾರೆ. ದಿಢೀರ್‌ನೆ ರಷ್ಯಾಕ್ಕೆ ಭೇಟಿ ನೀಡಿ ಅಧ್ಯಕ್ಷ ಪುಟಿನ್ ಜೊತೆ ಮಾತುಕತೆ ನಡೆಸಿ, ಇಸ್ರೇಲ್‌ಗೆ ಮರಳಿದ ನಂತರ ಅವರು ಈ ವಿಷಯ ತಿಳಿಸಿದ್ದಾರೆ

ಪರಸ್ಪರ ದೂಷಣೆಗಿಳಿದ ರಷ್ಯಾ, ಉಕ್ರೇನ್ • ವಿನ್ನಿಟ್ಸಿಯಾ ವಿಮಾನ ನಿಲ್ದಾಣ ಧ್ವಂಸ: ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ

‘ತೆರವು ಕಾರ್ಯಾಚರಣೆ ಮತ್ತೊಮ್ಮೆ ವಿಫಲ’

ಕೀವ್/ ಮರಿಯುಪೋಲ್ (ರಾಯಿಟರ್ಸ್): ಉಕ್ರೇನ್‌ನ ಮರಿಯುಪೋಲ್‌ನಲ್ಲಿ ಸಿಲುಕಿರುವವರು ನಗರ ತೊರೆಯಲು ಅನುಕೂಲವಾಗುವಂತೆ ‘ಮಾನವೀಯ ಕಾರಿಡಾರ್’ ತೆರೆಯುವ ವಿಷಯವಾಗಿ ರಷ್ಯಾ ಹಾಗೂ ಉಕ್ರೇನ್ ಭಾನುವಾರ ಪರಸ್ಪರ ದೂರಿಕೊಂಡಿವೆ.

ನಾಗರಿಕರು ನಗರವನ್ನು ತೊರೆಯುವ ಸಲುವಾಗಿ ಎರಡನೇ ಬಾರಿ ಭಾನುವಾರ ‘ಮಾನವೀಯ ಕಾರಿಡಾರ್’ ತೆರೆಯಲು ನಡೆಸಿದ ಯತ್ನಗಳು ವಿಫಲವಾಗಿವೆ ಎಂಬ ಆರೋಪಗಳು ಕೇಳಿಬಂದಿವೆ. ಇದು ಉಕ್ರೇನ್ ಸೇನಾ ಪಡೆ ಹಾಗೂ ರಷ್ಯಾ ಪರ ಒಲವಿರುವ ಪ್ರತ್ಯೇಕತಾವಾದಿಗಳು ಪರಸ್ಪರರ ವಿರುದ್ಧದ ದೂಷಣೆಗೆ ಕಾರಣವಾಗಿದೆ.

ರಷ್ಯಾ ದಾಳಿ ಮುಂದುವರಿದ ಪರಿಣಾಮ 2ನೇ ದಿನವಾದ ಭಾನುವಾರವೂ ಯುದ್ಧಪೀಡಿತ ನಗರಗಳಲ್ಲಿ ಸಿಲುಕಿದ್ದ ಪ್ರಜೆಗಳನ್ನು ತೆರವುಗಳಿಸಲು ಸಾಧ್ಯವಾಗಿಲ್ಲ ಎಂದು ಉಕ್ರೇನ್ ಸರ್ಕಾರ ಹೇಳಿದೆ.

ರಷ್ಯಾ ಕದನ ವಿರಾಮ ಘೋಷಿಸುವ ಸಾಧ್ಯತೆಯಿದ್ದ ಕಾರಣ ಯುದ್ಧಪೀಡಿತ ಮರಿಯೋಪೋಲ್ ಬಂದರು ಪ್ರದೇಶದಲ್ಲಿದ್ದ ಜನರನ್ನು ತೆರವುಗೊಳಿಸಲು ಉಕ್ರೇನ್ ಸರ್ಕಾರ ಯೋಜಿಸಿತ್ತು ಎಂದು ಉಕ್ರೇನ್ ಗೃಹ ಸಚಿವಾಲಯ ಹೇಳಿದೆ.

‘ರಷ್ಯಾ ಹಾಗೂ ರಷ್ಯಾ ಪರ ಪಡೆಗಳು ಮರಿಯುಪೋಲ್ ನಗರವನ್ನು ಸುತ್ತುವರಿದಿದ್ದು, ನಿರಂತರ ಶೆಲ್ ದಾಳಿ ನಡೆಸುತ್ತಿವೆ’ ಎಂಬುದಾಗಿ ಉಕ್ರೇನ್‌ನ ಅಝೋವ್ ರೆಜಿಮೆಂಟ್‌ನ ಯೋಧನೊಬ್ಬ ಹೇಳುತ್ತಿರುವುದನ್ನು ‘ಉಕ್ರೇನ್–24’ ಟೆಲಿವಿಷನ್ ಪ್ರಸಾರ ಮಾಡಿದೆ.

ವಿನ್ನಿಟ್ಸಿಯಾ ವಿಮಾನ ನಿಲ್ದಾಣ ಧ್ವಂಸ: ‘ಉಕ್ರೇನ್ ಕೇಂದ್ರ ಭಾಗದಲ್ಲಿರುವ ವಿನ್ನಿಟ್ಸಿಯಾ ವಿಮಾನ ನಿಲ್ದಾಣವನ್ನು ರಷ್ಯಾದ ಕ್ಷಿಪಣಿಗಳು ಧ್ವಂಸಗೊಳಿಸಿವೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

‘ನಿಯಮಿತ ಅವಧಿಗಾಗಿ ಘೋಷಿಸಲಾಗಿದ್ದ ಕದನ ವಿರಾಮವನ್ನು ಬಳಸಿಕೊಳ್ಳುವಲ್ಲಿ ಉಕ್ರೇನ್ ಪಡೆಗಳು ವಿಫಲವಾಗಿವೆ’ ಎಂಬುದಾಗಿ ಪ್ರತ್ಯೇಕತಾವಾದಿಗಳ ಆಡಳಿತವಿರುವ ಡಾನೆಟ್ಸ್ಕ ನ ಅಧಿಕಾರಿಯೊಬ್ಬರು ಹೇಳಿದ್ದಾಗಿ ‘ಇಂಟರ್‌ಫ್ಯಾಕ್ಸ್’ ಸುದ್ದಿಸಂಸ್ಥೆ ವರದಿ ಮಾಡಿದೆ.

‘300 ಜನರು ಮರಿಯುಪೋಲ್ ನಗರ ತೊರೆದಿದ್ದಾರೆ’ ಎಂದೂ ಪ್ರತ್ಯೇಕತಾವಾದಿ ಆಡಳಿತದ ಅಧಿಕಾರಿ ಹೇಳಿದ್ದಾರೆ. ಮರಿಯುಪೋಲ್ ನಗರದಿಂದ 2 ಲಕ್ಷ ಜನರ ತೆರವಿಗೆ ಯೋಜನೆ ರೂಪಿಸಿದ್ದಾಗಿ ಉಕ್ರೇನ್ ಅಧಿಕಾರಿಗಳು ಹೇಳಿದ್ದರು.

ಈ ನಡುವೆ, ದಕ್ಷಿಣ ಭಾಗದಲ್ಲಿರುವ ಮೈಕೊಲೇವ್ ನಗರವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಸಲುವಾಗಿ ಭೀಕರ ಕಾಳಗ ನಡೆದಿದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ. ‘ಮರಿಯುಪೋಲ್ ರಕ್ಷಣೆ ಮಾಡುವುದೇ ನಮ್ಮ ಗುರಿ. ಅಲ್ಲದೆ, ಪೂರ್ವಭಾಗದ ಡಾನೆಟ್ಸ್ಕ ನಲ್ಲಿ ಸಹ ಕಾರ್ಯಾಚರಣೆ ಮುಂದುವರಿದಿದೆ’ ಎಂದೂ ಅಧಿಕಾರಿಗಳು ಹೇಳಿದ್ದಾರೆ.

ರಷ್ಯಾ: ಮಾಸ್ಟರ್, ವೀಸಾ ಕಾರ್ಡ್ ಸೇವೆ ರದ್ದು

ನ್ಯೂಯಾರ್ಕ್(ಎಪಿ): ಉಕ್ರೇನ್ ಮೇಲೆ ಯುದ್ಧ ಸಾರಿದ್ದಕ್ಕಾಗಿ ಪಾಶ್ಚಿಮಾತ್ಯ ದೇಶಗಳಿಂದ ಆರ್ಥಿಕ ದಿಗ್ಬಂಧನಕ್ಕೆ ಗುರಿಯಾಗಿರುವ ರಷ್ಯಾದಲ್ಲಿ ಇದೀಗ ಮಾಸ್ಟರ್ ಕಾರ್ಡ್ ಮತ್ತು ವೀಸಾ ಕಾರ್ಡ್‌ಗಳ ಸೇವೆಗಳನ್ನು ನಿಲ್ಲಿಸಲಾಗಿದೆ. ತನ್ಮೂಲಕ ರಷ್ಯಾದ ಆರ್ಥಿಕ ವ್ಯವಸ್ಥೆ ಮೇಲೆ ಮತ್ತಷ್ಟು ಪೆಟ್ಟು ನೀಡಲು ಈ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗಿದೆ.

ಈ ಪ್ರಕಾರ ರಷ್ಯಾದ ಬ್ಯಾಂಕ್ ಗಳು ನೀಡಿರುವ ಮಾಸ್ಟರ್ ಕಾರ್ಡುಗಳು ಮತ್ತು ರಷ್ಯಾದಲ್ಲಿರುವ ಇತರೆ ದೇಶದ ಪ್ರಜೆಗಳ ಮಾಸ್ಟರ್ ಮತ್ತು ವೀಸಾ ಕಾರ್ಡುಗಳು ರಷ್ಯಾದ ಮಳಿಗೆಗಳು ಅಥವಾ ಎಟಿಎಂ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಮಾಸ್ಟರ್ ಕಾರ್ಡ್ ಮತ್ತು ವೀಸಾ ಸಂಸ್ಥೆಗಳು ತಿಳಿಸಿದೆ.

ಗ್ರಾಹಕರು, ಪಾಲುದಾರರು ಮತ್ತು ಸರ್ಕಾರಗಳ ಜತೆಗಿನ ಸಮಾಲೋಚನೆ ಬಳಿಕ ಈ ನಿರ್ಧಾರ ಕೈಗೊಂಡಿದ್ದೇವೆ ಎಂದು ಮಾಸ್ಟರ್ ಕಾರ್ಡ್ ಹೇಳಿಕೆ ಬಿಡುಗಡೆ ಮಾಡಿದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ ಸ್ಕಿ ಮತ್ತು ಅಮೆರಿಕದ ಸಂಸದರ ಜತೆ ಈ ಎರಡೂ ಸಂಸ್ಥೆಗಳ ಮುಖ್ಯಸ್ಥರು ಖಾಸಗಿ ವಿಡಿಯೊ ಕಾಲ್‌ನಲ್ಲಿ ಮಾತನಾಡಿದ ಬೆನ್ನಲ್ಲೇ, ರಷ್ಯಾದಲ್ಲಿ ವೀಸಾ ಮತ್ತು ಮಾಸ್ಟರ್ ಕಾರ್ಡುಗಳ ಸೇವೆ ರದ್ದತಿ ವಿಚಾರ ಬಹಿರಂಗವಾಗಿದೆ.

ನಿರ್ಧಾರ ಸ್ವಾಗತಿಸಿದ ಬೈಡನ್ (ವಾಷಿಂಗ್ಟನ್): ರಷ್ಯಾದಲ್ಲಿ ಸೇವೆ ಸ್ಥಗಿತಗೊಳಿಸುವ ವೀಸಾ ಮತ್ತು ಮಾಸ್ಟರ್‌ಕಾರ್ಡ್ ನಿರ್ಧಾರಗಳನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಸ್ವಾಗತಿಸಿದ್ದಾರೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗಿನ ದೂರವಾಣಿ ಸಂಭಾಷಣೆ ವೇಳೆ ಈ ವಿಚಾರ ಮಾತನಾಡಿದ್ದಾರೆ ಎಂದು ಶ್ವೇತಭವನ ತಿಳಿಸಿದೆ.

'ಯುದ್ಧ ಪೀಡಿತ ಉಕ್ರೇನ್‌ಗೆ ಭದ್ರತೆ, ಮಾನವೀಯ ಮತ್ತು ಆರ್ಥಿಕ ನೆರವನ್ನು ಹೆಚ್ಚಿಸಲು ಬೈಡೆನ್ ಅವರ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ' ಎಂದು ಹೇಳಿಕೆ ತಿಳಿಸಿದೆ.

‘2ನೇ ವಿಶ್ವಯುದ್ಧದ ಬಳಿಕ ವೇಗವಾಗಿ ಬೆಳೆಯುತ್ತಿರುವ ನಿರಾಶ್ರಿತರ ಬಿಕ್ಕಟ್ಟು’

ಜಿನಿವಾ: ‘ರಷ್ಯಾದ ಆಕ್ರಮಣದಿಂದಾಗಿ ಉಕ್ರೇನ್‌ನಿಂದ ವಲಸೆ ಹೋಗುತ್ತಿರುವವರ ಸಂಖ್ಯೆ 15 ಲಕ್ಷಕ್ಕೂ ಹೆಚ್ಚಾಗಿದ್ದು, ಇದು ಎರಡನೇ ಮಹಾಯುದ್ಧದ ನಂತರ ಯುರೋಪಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಿರಾಶ್ರಿತರ ಬಿಕ್ಕಟ್ಟಾಗಿದೆ’ ಎಂದು ವಿಶ್ವಸಂಸ್ಥೆಯು ಭಾನುವಾರ ಹೇಳಿದೆ.

‘ಉಕ್ರೇನ್‌ನಿಂದ 15 ಲಕ್ಷಕ್ಕೂ ಹೆಚ್ಚು ನಿರಾಶ್ರಿತರು 10 ದಿನಗಳಲ್ಲಿ ನೆರೆಯ ದೇಶಗಳಿಗೆ ವಲಸೆ ಹೋಗಿದ್ದಾರೆ’ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ವಿಭಾಗದ ಹೈಕಮಿಷನರ್ ಟ್ವೀಟ್ ಮಾಡಿದ್ದಾರೆ.

‘ಉಕ್ರೇನ್ ರಾಜಧಾನಿ ಕೀವ್‌ನತ್ತ ರಷ್ಯಾದ ಸೇನಾ ಪಡೆಗಳು ಅಕ್ರಮಣಕ್ಕೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ನಿರಾಶ್ರಿತರ ಬಿಕ್ಕಟ್ಟಿನ ಪ್ರಮಾಣ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ’ ಎಂದೂ ವಿಶ್ವಸಂಸ್ಥೆಯ ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಫೆ. 24ರಂದು ರಷ್ಯಾ ಆಕ್ರಮಣ ಮಾಡಿದ ನಂತರ, ಒಟ್ಟು 9.22 ಲಕ್ಷ ಜನರು ಪೋಲೆಂಡ್‌ಗೆ ವಲಸೆ ಹೋಗಿದ್ದಾರೆ ಎಂದು ಪೋಲೆಂಡ್‌ನ ಗಡಿ ಕಾವಲುಗಾರರು ಭಾನುವಾರ ಹೇಳಿದ್ದಾರೆ. ಹಂಗೇರಿ, ಮೊಲ್ಡೊವಾ, ರೊಮೇನಿಯಾ ಮತ್ತು ಸ್ಲೋವಾಕಿಯಾದಲ್ಲೂ ಉಕ್ರೇನ್‌ನ ನಿರಾಶ್ರಿತರು ಕಂಡುಬಂದಿದ್ದಾರೆ. ಈ ಮಧ್ಯೆ, ಉಕ್ರೇನ್‌ನ ಆರೋಗ್ಯ ಕೇಂದ್ರಗಳ ಮೇಲಿನ ದಾಳಿಗಳು ಹೆಚ್ಚುತ್ತಿದ್ದು, ಇದು ವೈದ್ಯಕೀಯ ತಟಸ್ಥ ನೀತಿ ಮತ್ತು ಅಂತರರಾಷ್ಟ್ರೀಯ ಮಾನವೀಯ ಕಾನೂನಿನ ಉಲ್ಲಂಘನೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ತಿಳಿಸಿದೆ.

‘ಆಪರೇಷನ್ ಗಂಗಾ ಕಾರ್ಯಾಚರಣೆ: ಭಾರತದ ವರ್ಚಸ್ಸು ಉತ್ತುಂಗಕ್ಕೆ’

ಪ್ರಧಾನಿ ಮೋದಿ

ಪುಣೆ(ಪಿಟಿಐ): ಉಕ್ರೇನ್ ನಲ್ಲಿ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಕೈಗೊಳ್ಳಲಾದ ‘ಆಪರೇಷನ್ ಗಂಗಾ’ ಯಶಸ್ವಿ ಕಾರ್ಯಾಚರಣೆಯು ಜಾಗತಿಕ ಮಟ್ಟದಲ್ಲಿ ಭಾರತದ ವರ್ಚಸ್ಸು ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಾದಿಸಿದ್ದಾರೆ.

ಭಾನುವಾರ ಸಿಂಬಯಾಸಿಸ್ ವಿವಿಯ ಸ್ವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ ಅವರು, "ಇತರ ಬೃಹತ್ ದೇಶಗಳು ಉಕ್ರೇನ್ ನಲ್ಲಿರುವ ತಮ್ಮ ಪ್ರಜೆಗಳನ್ನು ತಾಯ್ನಾಡಿಗೆ ಕರೆಸಿಕೊಳ್ಳಲು ದೊಡ್ಡ ಮಟ್ಟದ ಸವಾಲು ಎದುರಿಸಿದವು. ಆದರೆ ಭಾರತವು ಆಪರೇಷನ್ ಗಂಗಾ ಯೋಜನೆ ಮೂಲಕ ಸಾವಿರಾರು ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರುವಲ್ಲಿ ಯಶಸ್ವಿಯಾಯಿತು. ಇದರ ಪರಿಣಾಮ ಭಾರತದ ವರ್ಚಸ್ಸು ಹೆಚ್ಚಾಗಿದೆ' ಎಂದು ಹೇಳಿದ್ದಾರೆ.

ಆರಂಭದಲ್ಲೇ ಎಡವಿದ ಕೇಂದ್ರ ಸರ್ಕಾರ: ಎಚ್‌ಡಿಕೆ

ಕಲಬುರಗಿ: ‘ಉಕ್ರೇನ್‌ನಲ್ಲಿ ಯುದ್ಧದ ಸನ್ನಿವೇಶದ ಕುರಿತು ಮೂರು ತಿಂಗಳ ಮುಂಚೆಯೇ ಮಾಹಿತಿ ಇದ್ದರೂ ರಾಜತಾಂತ್ರಿಕ ಸಂಬಂಧ ಬಳಸಿ, ಭಾರತೀಯ ವಿದ್ಯಾರ್ಥಿಗಳನ್ನು ಕರೆತರುವಲ್ಲಿ ಕೇಂದ್ರವು ಎಡವಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜೊತೆ ಸ್ನೇಹ ಬೆಳಸಿ ಮುಂಚೆಯೇ ವಿದ್ಯಾರ್ಥಿಗಳು, ನಾಗರಿಕರನ್ನು ಕರೆಸಿಕೊಂಡಿದ್ದರೆ ಸಮಸ್ಯೆ ಆಗುತ್ತಿರಲಿಲ್ಲ’ ಎಂದರು.

‘ಅಧಿಕಾರಿಗಳು ನೆರವಾಗಿದ್ದಕ್ಕೆ ತಾಯ್ನಾಡು ತಲುಪಿದೆವು’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಗಂಭೀರ ಪರಿಸ್ಥಿತಿಯ ನಡುವೆಯೂ ಉಕ್ರೇನ್ ಮತ್ತು ಪೋಲೆಂಡ್‌ನಲ್ಲಿದ್ದ ಭಾರತದ ರಾಯಭಾರಿ ಕಚೇರಿ ಅಧಿಕಾರಿಗಳು ಮಾರ್ಗದರ್ಶನ ಮಾಡಿ ನೆರವಾಗಿದ್ದಕ್ಕೆ ಸುರಕ್ಷಿತವಾಗಿ ತಾಯ್ನಾಡಿಗೆ ಬರಲು ಸಾಧ್ಯವಾಯಿತು’ ಎಂದು ಹಾರ್ಕಿವ್‌ನಿಂದ ಭಾನುವಾರ ನಗರಕ್ಕೆ ಮರಳಿದ ಎಂಬಿಬಿಎಸ್ ವಿದ್ಯಾರ್ಥಿನಿ ಚೈತ್ರಾ ಸಂಶಿ ಹೇಳಿದರು.

ಧಾರವಾಡ ಜಿಲ್ಲೆ ಕುಂದಗೋಳ ತಾಲ್ಲೂಕಿನ ಚೈತ್ರಾ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಬೆಂಗಳೂರಿನಿಂದ ಇಲ್ಲಿಗೆ ಒಂದೇ ವಿಮಾನದಲ್ಲಿ ಬಂದರು. ಚೈತ್ರಾ ಅವರಿಗೆ ಮುಖ್ಯಮಂತ್ರಿ ಶುಭಕೋರಿದರು.

ಈ ವೇಳೆ ಮಾಧ್ಯಮಗಳ ಜೊತೆ ಮಾತನಾಡಿದ ಚೈತ್ರಾ ‘ಹಾರ್ಕಿವ್‌ನ ರಾಷ್ಟ್ರೀಯ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಮೊದಲ ಮೂರು ದಿನ ಮಾತ್ರ ಊಟ ಸಿಕ್ಕಿತು. ನಂತರ ನೀರೂ ಕೂಡ ಸಿಗಲಿಲ್ಲ. ಮೃತಪಟ್ಟ ನವೀನ್ ಹಾಗೂ ಒಂದಷ್ಟು ಜನ ಸ್ನೇಹಿತರು ಹಾರ್ಕಿವ್ ತೊರೆಯಲು ಯೋಜನೆ ರೂಪಿಸಿದ್ದೆವು. ನವೀನ್ ಮೇಲೆ ದಾಳಿಯಾದ್ದರಿಂದ ಯೋಜನೆಯನ್ನೇ ಕೈಬಿಟ್ಟೆವು’ ಎಂದು ಹೇಳಿದರು.

ಉಕ್ರೇನ್‌ನಿಂದ ಮರಳಿದ ವಿದ್ಯಾರ್ಥಿನಿ ಚೈತ್ರಾ ಸಂಶಿ ಅವರಿಗೆ ಭಾನುವಾರ ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಭ ಕೋರಿದರು

> **ಉಕ್ರೇನ್‌ನಲ್ಲಿ ರಾಜ್ಯದ 200 ವಿದ್ಯಾರ್ಥಿಗಳಿದ್ದು, ಅವರನ್ನು ಸುರಕ್ಷಿತವಾಗಿ ಕರೆತರುವ ಪ್ರಯತ್ನ ನಡೆಯುತ್ತಿದೆ**
> **ಬಸವರಾಜ ಬೊಮ್ಮಾಯಿ**, ಮುಖ್ಯಮಂತ್ರಿ

ಉಕ್ರೇನ್‌ನಿಂದ 9 ವಿದ್ಯಾರ್ಥಿಗಳು ತವರಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಉಕ್ರೇನ್‌ಗೆ ವೈದ್ಯಕೀಯ ಶಿಕ್ಷಣಕ್ಕಾಗಿ ತೆರಳಿದ್ದ ಜಿಲ್ಲೆಯ 14 ವಿದ್ಯಾರ್ಥಿಗಳಲ್ಲಿ ಈವರೆಗೆ 9 ವಿದ್ಯಾರ್ಥಿಗಳು ಮರಳಿದ್ದಾರೆ. ಮತ್ತಿಬ್ಬರು ಈಗಾಗಲೇ ದೆಹಲಿಗೆ ತಲುಪಿದ್ದಾರೆ ಎಂದು ಜಿಲ್ಲಾಧಿಕಾರಿ ಆರ್‌.ಲತಾ ಭಾನುವಾರ ತಿಳಿಸಿದರು.

ಭಾನುವಾರ ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ವಿದ್ಯಾರ್ಥಿಗಳನ್ನು ಕರೆತರಲು ಜಿಲ್ಲಾಡಳಿತವು, ಸರ್ಕಾರ ಮತ್ತು ಉಕ್ರೇನ್‌ನಲ್ಲಿನ ವಿದ್ಯಾರ್ಥಿಗಳ ಜೊತೆಗೆ ಸಂಪರ್ಕದಲ್ಲಿದೆ. ಪೋಷಕರಿಗೂ ಕ್ಷಣಕ್ಷಣದ ಮಾಹಿತಿ ನೀಡುತ್ತಿದೆ’ ಎಂದರು.

ಮೂವರು ವಿದ್ಯಾರ್ಥಿಗಳಲ್ಲಿ ಒಬ್ಬ ರೊಮೇನಿಯಾ ತಲುಪಿದ್ದು, ಸುರಕ್ಷಿತವಾಗಿದ್ದಾನೆ. ಇನ್ನಿಬ್ಬರು ರಾಯಭಾರ ಕಚೇರಿ ಬಸ್ ಮೂಲಕ ಉಕ್ರೇನ್ ಗಡಿಭಾಗದತ್ತ ಪ್ರಯಾಣಿಸುತ್ತಿದ್ದಾರೆ ಎಂದು ವಿವರಿಸಿದರು.

‘ಭಾರತ – ರಷ್ಯಾ ಸೇರಿ ವಿಶ್ವದ ಮೇಲೆ ಉಕ್ರೇನ್ ಬಿಕ್ಕಟ್ಟಿನ ಪ್ರಭಾವ’

ನವದೆಹಲಿ(ಪಿಟಿಐ): ರಷ್ಯಾ ಸಾರಿದ ಯುದ್ಧದಿಂದ ಉಕ್ರೇನ್ ನಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟು ರಷ್ಯಾ-ಭಾರತ ಸೇರಿದಂತೆ ಇಡೀ ವಿಶ್ವದ ಮೇಲೆ ಪರಿಣಾಮ ಬೀರಲಿದೆ. ಈ ಪ್ರಭಾವ ಯಾವ ಪ್ರಮಾಣದಲ್ಲಿರಲಿದೆ ಎಂಬುದನ್ನು ಈಗಲೇ ಕಲ್ಪಿಸಿಕೊಳ್ಳಲಾಗದು ಎಂದು ರಷ್ಯಾದ ರಾಜತಾಂತ್ರಿಕ ಅಧಿಕಾರಿ ಡೆನಿಸ್ ಅಲಿಪೋವ್ ಅವರು ಹೇಳಿದ್ದಾರೆ.

ಈ ಸಂಬಂಧ ವಿಡಿಯೊ ಬಿಡುಗಡೆ ಮಾಡಿರುವ ಅಲಿಪೋವ್ ಅವರು, "ಉಕ್ರೇನ್ ಬಿಕ್ಕಟ್ಟು ಯಾವ ಪ್ರಮಾಣದಲ್ಲಿ ವಿಶ್ವದ ಮೇಲೆ ಪರಿಣಾಮ ಬೀರಲಿದೆ ಎಂಬುದನ್ನು ಈಗಲೇ ಹೇಳಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ರಷ್ಯಾ ಜತೆ ಪಾಶ್ಚಿಮಾತ್ಯ ರಾಷ್ಟ್ರಗಳು ಪಾಲುದಾರಿಕೆಗೆ ಸಹಕಾರ ನೀಡಲು ಹಿಂದೇಟು ಹಾಕುತ್ತಿದೆ. ಇದರ ಪ್ರಯೋಜನವನ್ನು ಪಡೆಯುವ ಮೂಲಕ ಭಾರತವು ರಷ್ಯಾ ಜತೆ ಆರ್ಥಿಕ ಸಂಬಂಧ ವೃದ್ಧಿಸಿಕೊಳ್ಳಲು ಇದು ಸುಸಂದರ್ಭ. ಪ್ರಸ್ತುತ ಸಂದರ್ಭ ಭಾರತದ ಉದ್ಯಮಗಳ ಅಭಿವೃದ್ಧಿಗೆ ಅವಕಾಶಗಳ ಬಾಗಿಲು ತೆರೆದಿದೆ. ಹೀಗಾಗಿ ಭಾರತವು ರಷ್ಯಾದ ಜತೆ ಆರ್ಥಿಕ ಸಹಕಾರಕ್ಕೆ ಮುಂದಾಗಬೇಕು. ಭಾರತದ ಸ್ವಾವಲಂಬಿ ವಿದೇಶಾಂಗ ನೀತಿಯನ್ನು ನಾವು ಬೆಂಬಲಿಸುತ್ತೇವೆ ಎಂದು ಪ್ರತಿಪಾದಿಸಿದ್ದಾರೆ.

ಇನ್ನು ಉಕ್ರೇನ್ ನ ಯುದ್ಧಪೀಡಿತ ಹಾರ್ಕಿವ್ ಮತ್ತು ಪಿಸೋಚಿನ್ ನಲ್ಲಿರುವ ಬಹುತೇಕ ಭಾರತೀಯರನ್ನು ಸ್ವದೇಶಕ್ಕೆ ವಾಪಸ್ ಕರೆಸಿಕೊಂಡಿದ್ದೇವೆ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಹೇಳಿಕೊಂಡಿದೆ. ಆದರೆ ಹಾರ್ಕಿವ್ ನಲ್ಲಿ ಇನ್ನೂ 3000, ಪಿಸೋಚಿನ್ ನಗರದಲ್ಲಿ 900 ಮತ್ತು ಸುಮಿಯಲ್ಲಿ 670 ಭಾರತೀಯರು ಸಿಲುಕಿಕೊಂಡಿದ್ದಾರೆ ಎಂದು ರಷ್ಯಾದ ರಾಜತಾಂತ್ರಿಕ ಅಧಿಕಾರಿ ಅಲಿಪೋವ್ ಹೇಳಿದ್ದಾರೆ.

ಚೆಚನ್ಯಾ ಮೇಲಿನ ದಾಳಿ ತಂತ್ರಗಳನ್ನೇ ರಷ್ಯಾ ಈಗ ಬಳಸುತ್ತಿದೆ: ಬ್ರಿಟನ್

ಲಂಡನ್ (ಎಪಿ): ಈ ಹಿಂದೆ ಚೆಚನ್ಯಾ ಹಾಗೂ ಸಿರಿಯಾ ಮೇಲಿನ ದಾಳಿ ವೇಳೆ ಅನುಸರಿಸಿದ್ದ ತಂತ್ರಗಳನ್ನೇ ರಷ್ಯಾ ಈಗ ಉಕ್ರೇನ್ ಮೇಲೆ ದಾಳಿ ಮಾಡುವಾಗ ಬಳಸುತ್ತಿದೆ ಎಂದು ಬ್ರಿಟನ್‌ನ ಮಿಲಿಟರಿ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

ರಷ್ಯಾ ಪಡೆಗಳು 1999ರಲ್ಲಿ ಚೆಚನ್ಯಾ ಮೇಲೆ ಹಾಗೂ 2016ರಲ್ಲಿ ಸಿರಿಯಾ ಮೇಲೆ ದಾಳಿ ನಡೆಸಿದ್ದವು. ಆಗ, ಈ ಎರಡೂ ದೇಶಗಳ ಸೇನೆಗಳಿಂದ ಭಾರಿ ಪ್ರತಿರೋಧ ವ್ಯಕ್ತವಾಗುತ್ತಿದ್ದಂತೆಯೇ, ಅವುಗಳ ನಗರಗಳ ಮೇಲೆ ಭೀಕರ ದಾಳಿ ನಡೆಸಿದ್ದ ರಷ್ಯಾ ಪಡೆಗಳು ವ್ಯಾಪಕ ಹಾನಿ ಉಂಟು ಮಾಡಿದ್ದವು ಎಂದು ಬ್ರಿಟನ್‌ನ ರಕ್ಷಣಾ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ತನ್ನ ದಾಳಿಗೆ ಉಕ್ರೇನ್ ಪಡೆಗಳು ಒಡ್ಡುತ್ತಿರುವ ಪ್ರತಿರೋಧ ರಷ್ಯಾ ಪಡೆಗಳಿಗೆ ಅಚ್ಚರಿ ಮೂಡಿಸಿದೆ. ಇದೇ ಕಾರಣಕ್ಕೆ ಅವು ಹಾರ್ಕಿವ್, ಚೆರ್ನಿಹಿವ್, ಮರಿಯುಪೋಲ್ ನಗರಗಳಲ್ಲದೇ, ಇತರ ಜನನಿಬಿಡ ಪ್ರದೇಶಗಳನ್ನು ಗುರಿಯಾಗಿಸಿ ರಷ್ಯಾ ಪಡೆಗಳು ದಾಳಿ ನಡೆಸುತ್ತಿವೆ’ ಎಂದು ಸಚಿವಾಲಯ ವಿಶ್ಲೇಷಿಸಿದೆ.

‘10 ನಿಮಿಷಕ್ಕೊಂದು ಸ್ಫೋಟ’

ಬೆಳಗಾವಿ: ‘ಉಕ್ರೇನ್‌ನಲ್ಲಿ ಪರಿಸ್ಥಿತಿ ಕೆಟ್ಟದಾಗಿದೆ. 10 ನಿಮಿಷಕ್ಕೊಂದು ಬಾಂಬ್ ಸ್ಫೋಟ, ಶೆಲ್ ದಾಳಿ ಆಗುತ್ತಿದೆ’. ಉಕ್ರೇನ್‌ನಿಂದ ಸುರಕ್ಷಿತವಾಗಿ ಮರಳಿದ ಚಿಕ್ಕೋಡಿಯ ಬ್ರಾಹ್ಮಿ ಪಾಟೀಲ ಅನುಭವವಿದು.

‘ಕೀವ್‌ನಲ್ಲಿ ಭಾರತೀಯ ರಾಯಭಾರಿ ಕಚೇರಿಯಲ್ಲಿ ಆಶ್ರಯ ಪಡೆದಿದ್ದೆವು. ಫೆ.24ರಂದು ನಾವು ವಾಪಸಾಗಲು ಟಿಕೆಟ್ ಬುಕ್ ಆಗಿತ್ತು. ಬಾಂಬ್ ದಾಳಿ ಆರಂಭವಾಗಿದ್ದರಿಂದ ವಿಮಾನ ಹಾರಾಟ ರದ್ದುಪಡಿಸಲಾಗಿತ್ತು. ಬಂಕರ್‌ಗಳಲ್ಲಿ ತಂಗಿದ್ದೆವು. ಕೀವ್‌ನಿಂದ ರೈಲಿನ ಮೂಲಕ ಗಡಿ ತಲುಪಿದೆವು’ ಎಂದು ಭಾನುವಾರ ತಿಳಿಸಿದರು.

ರಕ್ಷಣಾ ಕಾರ್ಯಾಚರಣೆ ಪೈಲಟ್‌ಗಳಲ್ಲಿ ಬೆಳಗಾವಿ ಸೊಸೆ

ದಿಶಾ

ಬೆಳಗಾವಿ: ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ತಾಯ್ನಾಡಿಗೆ ಕರೆತರುವಲ್ಲಿ ವಿಮಾನಗಳ ಕಾರ್ಯಾಚರಣೆ ನಡೆಸಿದ್ದ ಪೈಲಟ್‌ಗಳ ಪೈಕಿ ದಿಶಾ ಆದಿತ್ಯ ಮಣ್ಣೂರ ಎನ್ನುವವರು ಬೆಳಗಾವಿಯ ಸೊಸೆ ಎನ್ನುವ ಅಂಶ ಹೊರಬಿದ್ದಿದೆ.

ಪೈಲಟ್ ಆಗಿರುವ ಬೆಳಗಾವಿ ಮೂಲದ ಆದಿತ್ಯ ಅವರ ಪತ್ನಿ. ಸದ್ಯ ದೆಹಲಿಯಲ್ಲಿ ನೆಲೆಸಿದ್ದಾರೆ. ಏರ್ ಇಂಡಿಯಾ ಕಂಪನಿ ವಿಮಾನಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದಿತ್ಯ ಇಲ್ಲಿನ ಪದ್ಮಜಾ–ಪ್ರಹ್ಲಾದ ದಂಪತಿಯ ಪುತ್ರ. ಈ ಕುಟುಂಬವೀಗ ಮಂಬೈನಲ್ಲಿ ನೆಲೆಸಿದೆ.

ಸಂಕಷ್ಟದಲ್ಲಿದ್ದ 242 ಭಾರತೀಯರನ್ನು ಕರೆತರಲು ತೆರಳಿದ್ದ ‘ಎಐ–1947’ ವಿಮಾನದ ನಾಲ್ವರು ಪೈಲಟ್‌ಗಳ ಪೈಕಿ ದಿಶಾ ಒಬ್ಬರು. ಹೋದ ತಿಂಗಳು ಆ ಕಾರ್ಯಾಚರಣೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

‘ಆತಂಕದ ನಡುವೆಯೂ ಕೀವ್‌ಗೆ ತೆರಳಿ ಭಾರತೀಯರನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದ ತಂಡದಲ್ಲಿ ಸೊಸೆ ಕೆಲಸ ಮಾಡಿದ್ದಾರೆ ಎನ್ನವುದು ಹೆಮ್ಮೆ ಮೂಡಿಸಿದೆ’ ಎಂದು ಅತ್ತೆ ಪದ್ಮಜಾ ಹೇಳಿದ್ದಾರೆ. ಸಂಪರ್ಕಕ್ಕೆ ದಿಶಾ ಅವರು ಲಭ್ಯವಾಗಲಿಲ್ಲ.

‘ರಾಷ್ಟ್ರ ಧ್ವಜ ಹಿಡಿದು ಸುರಕ್ಷಿತವಾಗಿ ಗಡಿ ದಾಟಿ ಬಂದೆವು’

ಕೋಲಾರ: ‘ನಾವಿದ್ದ ಹಾಸ್ಟೆಲ್‌ಗೆ ಭಾರತದ ಧ್ವಜ ಕಟ್ಟಲಾಗಿತ್ತು. ತ್ರಿವರ್ಣ ಧ್ವಜ ಹಿಡಿದುಕೊಂಡೇ ಸುರಕ್ಷಿತವಾಗಿ ಉಕ್ರೇನ್ ಗಡಿ ದಾಟಿ ಬಂದೆವು’ ಎಂದು ವೈದ್ಯಕೀಯ ವಿದ್ಯಾರ್ಥಿನಿ ಮೋನಿಷಾ ಪ್ರಿಯ ಹೇಳಿದರು.

ಉಕ್ರೇನ್‌ನ ಜಿಪೊರಿಜಿಯ್ಯಾ ವಿಶ್ವ ವಿದ್ಯಾಲಯದಲ್ಲಿ ಎರಡನೇ ವರ್ಷದ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ಕೋಲಾರದ ಮೋನಿಷಾ ತಮ್ಮ ಅನುಭವ ಹಂಚಿಕೊಂಡರು.

(ಗುಡಿಬಂಡೆ ವರದಿ): ‘ವಾರದಿಂದ ಒಂದು ಹೊತ್ತು ಹೊಟ್ಟೆ ತುಂಬಿಸಿಕೊಳ್ಳುವುದು ಕಷ್ಟಕರವಾಗಿತ್ತು. ಅತಿಯಾದ ಚಳಿಯಿಂದಾಗಿ ಬಂಕರ್‌ಗಳಲ್ಲಿ ಜೀವನ ಕಷ್ಟವಾಗಿತ್ತು. ಆಕಾಶದಿಂದ ನಕ್ಷತ್ರ ಧರೆಗೆ ಉರಿದು ಬೀಳುವಂತೆ ಮಿಸೈಲ್ ಬೀಳುತ್ತಿದ್ದವು’

ಉಕ್ರೇನ್‌ನ ಮೆಕೋಲಿಯಾದಿಂದ ಭಾನುವಾರ ಮರಳಿದ ಗುಡಿಬಂಡೆ ತಾಲ್ಲೂಕಿನ ಲಕ್ಷ್ಮಿಸಾಗರದ ವೈದ್ಯ ವಿದ್ಯಾರ್ಥಿ ನವನೀತ್ ಅನುಭವ ಹಂಚಿಕೊಂಡರು. ‘ಭಾರತದ ಧ್ವಜ ಹಿಡಿದು ಹೋಗಿ ಎಂಬ ಸಲಹೆ ಬಿಟ್ಟರೆ ಉಕ್ರೇನ್ ಅಧಿಕಾರಿಗಳು ಬೇರೆ ಯಾವುದೇ ನೆರವು ಕೊಡುವ ಸ್ಥಿತಿಯಲ್ಲಿ ಇಲ್ಲ’ ಎಂದರು.

(ರಾಮನಗರ ವರದಿ): ‘ನಾವು ಪ್ರಯಾಣಿಸುತ್ತಿದ್ದ ಕಾರಿನ ಮುಂದೆಯೇ ಬಾಂಬ್ ಸ್ಫೋಟವಾಯಿತು. ಗುಂಡಿನ ಶಬ್ದದ ನಡುವೆ ಜೀವಂತವಾಗಿ ಭಾರತಕ್ಕೆ ಬಂದಿದ್ದೇ ರೋಚಕ ಅನುಭವ’

ಉಕ್ರೇನ್‌ನ ಲಿವಿವ್ ನಗರದ ಇವಾನ್ ಫ್ರಾಂಕೋ ನ್ಯಾಷನಲ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ವ್ಯಾಸಂಗಕ್ಕೆ ತೆರಳಿದ್ದ ರಾಮನಗರದ ಆಯೇಷಾ ಖಾನಂ ಅನುಭವ ಬಿಚ್ಚಿಟ್ಟರು.

ಉಕ್ರೇನ್‌ನಿಂದ ರಾಜ್ಯಕ್ಕೆ ಮರಳಿದವರ ಸಂಖ್ಯೆ 458ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿದ್ದ ಕರ್ನಾಟಕದ 86 ಮಂದಿ ಭಾನುವಾರ ಹಿಂದಿರುಗಿದ್ದಾರೆ. ಇದರೊಂದಿಗೆ ಅಲ್ಲಿಂದ ಮರಳಿದ ರಾಜ್ಯದ ಜನರ ಸಂಖ್ಯೆ 458ಕ್ಕೆ ತಲುಪಿದೆ.

ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ‘ಆಪರೇಷನ್ ಗಂಗಾ’ ಹೆಸರಿನ ಕಾರ್ಯಾಚರಣೆ ಅಡಿಯಲ್ಲಿ ದೇಶಕ್ಕೆ ಕರೆತರಲಾಗುತ್ತಿದೆ. ಐದು ವಿಮಾನಗಳು ಭಾನುವಾರ ದೆಹಲಿಗೆ ಬಂದಿಳಿದಿವೆ. ಅವುಗಳಲ್ಲಿ ಕರ್ನಾಟಕದ 72 ಮಂದಿ ಬಂದಿದ್ದಾರೆ. ಒಂದು ವಿಮಾನ ಮುಂಬೈಗೆ ಬಂದಿದ್ದು, ಅದರಲ್ಲಿ ರಾಜ್ಯದ ನಾಲ್ವರು ವಾಪಸಾಗಿದ್ದಾರೆ ಎಂದು ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ಜನರ ರಕ್ಷಣಾ ಕಾರ್ಯಾಚರಣೆಯ ನೋಡಲ್ ಅಧಿಕಾರಿ ಮನೋಜ್ ರಾಜನ್ ತಿಳಿಸಿದ್ದಾರೆ.

ಫೆಬ್ರುವರಿ 27ರಿಂದ ಭಾರತೀಯರ ರಕ್ಷಣಾ ಕಾರ್ಯಾಚರಣೆ ಆರಂಭವಾಗಿತ್ತು. ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಹೊತ್ತ 41 ವಿಮಾನಗಳು ದೆಹಲಿಗೆ ಮತ್ತು ಏಳು ವಿಮಾನಗಳು ಮುಂಬೈಗೆ ಬಂದಿಳಿದಿವೆ. ಅವುಗಳಲ್ಲಿ ಕರ್ನಾಟಕದ 458 ಮಂದಿ ಬಂದಿದ್ದು, ಎಲ್ಲರನ್ನೂ ಅವರ ಮನೆಗಳಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಕೊನೆಯ ಹಂತದ ತೆರವು ಕಾರ್ಯಾಚರಣೆಗೆ ಚಾಲನೆ

ಒಂದನೇ ಪುಟದಿಂದ

‘ಈ ವಿಮಾನಗಳಲ್ಲಿ 1,500ಕ್ಕೂ ಹೆಚ್ಚು ಜನರನ್ನು ತೆರವು ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಹಂಗೆರಿಯ ಬುಡಾಪೆಸ್ಟ್‌ನಿಂದ ಐದು, ರೊಮೇನಿಯಾದ ಸುಸೀವಾದಿಂದ ಎರಡು ಮತ್ತು ಬುಕಾರೆಸ್ಟ್‌ನಿಂದ ಒಂದು ವಿಮಾನ ಕಾರ್ಯಾಚರಣೆ ನಡೆಸಲಿವೆ’ ಎಂದೂ ಹೇಳಿದೆ.

2,135 ಜನರ ತೆರವು: ‘ಉಕ್ರೇನ್‌ನಿಂದ ಭಾನುವಾರ ಒಂದೇ ದಿನ 2,135 ಜನರನ್ನು ತೆರವು ಮಾಡಲಾಗಿದೆ. ಇದಕ್ಕಾಗಿ 11 ವಿಶೇಷ ವಿಮಾನಗಳ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು’ ಎಂದು ವಿಮಾನಯಾನ ಸಚಿವಾಲಯವು ಹೇಳಿದೆ.

ಭಾನುವಾರ ರಾತ್ರಿಯವರೆಗೆ ಒಟ್ಟು 76 ವಿಶೇಷ ವಿಮಾನಗಳ ಮೂಲಕ 15,920 ಭಾರತೀಯರನ್ನು ತೆರವು ಮಾಡಲಾಗಿತ್ತು. ಇದರಲ್ಲಿ ವಾಯುಪಡೆಯ ವಿಮಾನಗಳ ಮೂಲಕ 2,056 ಜನರನ್ನು ತೆರವು ಮಾಡಲಾಗಿದೆ.

ಭಾರತಕ್ಕೆ ವಾಪಸ್ಸಾದ ಸಾಗರದ ವಿದ್ಯಾರ್ಥಿನಿಯ ಮನದಾಳ

‘ಒಂದು ಯುದ್ಧ ಗೆದ್ದೆವು, ಇನ್ನೊಂದು ಗೆಲ್ಲಬೇಕಿದೆ’

• ಸುಕೃತ ಎಸ್.

ಬೆಂಗಳೂರು: ‘ಒಂದು ಯುದ್ಧ ಗೆದ್ದು ಬಂದೆವು. ಆದರೆ, ಇಲ್ಲಿಗೆ ಬಂದು ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳನ್ನು ನೋಡಿದರೆ ನಾವು ಇನ್ನೊಂದು ಯುದ್ಧ ಗೆಲ್ಲಬೇಕಿದೆ ಎನ್ನುವುದು ತಿಳಿಯಿತು.’

– ಇದು ಯುದ್ಧಪೀಡಿತ ಉಕ್ರೇನ್‌ನ ಕ್ರೊಪೊವಿನಿಟ್‌ಸ್ಕಿ ನಗರದಲ್ಲಿ ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿದ್ದ ಶಿವಮೊಗ್ಗ ಜಿಲ್ಲೆಯ ಸಾಗರದ ಶಿಲ್ಪಾ ರಾಡ್ರಿಗಸ್ ಅವರ ಮಾತುಗಳು.

ಸರ್ಕಾರ ಮತ್ತು ರಾಯಭಾರ ಕಚೇರಿ ಸಹಾಯ ಮಾಡುತ್ತಿಲ್ಲ ಎಂದು ವಿದ್ಯಾರ್ಥಿಗಳು ವಿಡಿಯೊಗಳನ್ನು ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡು, ಸಹಾಯಕ್ಕಾಗಿ ಮೊರೆ ಇಟ್ಟಿದ್ದಾರೆ. ಸರ್ಕಾರದ ವಿರುದ್ಧ ಮಾತನಾಡಿದ ವಿದ್ಯಾರ್ಥಿಗಳನ್ನು ‘ಗುಳ್ಳೆನರಿ’, ‘ಕೃತಘ್ನರು’ ಎಂದೆಲ್ಲಾ ಹೇಳಿ ಹಲವು ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಈ ಕುರಿತು ಶಿಲ್ಪಾ ಅವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

‘ಅಲ್ಲಿ ಸಿಲುಕಿದ್ದ, ಸಿಲುಕಿರುವ ಯಾವ ವಿದ್ಯಾರ್ಥಿಯೂ ಭಾರತ ಬೇಡ ಎಂದು ಹೇಳಿಲ್ಲ. ನಮ್ಮ ಕಷ್ಟದ ಸಮಯದಲ್ಲಿ, ಸಹಾಯ ಮಾಡಬೇಕಾದ ಜವಾಬ್ದಾರಿ ಇದ್ದರೂ, ಸರ್ಕಾರ ನಮ್ಮ ಸಹಾಯಕ್ಕೆ ಬರಲಿಲ್ಲ ಎಂದು ಹೇಳಿದೆವಷ್ಟೆ. ಇದನ್ನು ದೊಡ್ಡವರು ಅರ್ಥ ಮಾಡಿಕೊಳ್ಳಬೇಕು. ವಿವೇಕವೇ ಇಲ್ಲದೆ ನಮ್ಮ ಬಗ್ಗೆ ಟ್ರೋಲ್ ಮಾಡುವ, ನಮ್ಮನ್ನು ಬೈದು ವಿಡಿಯೊಗಳನ್ನು ಮಾಡುವವರಿಗೆ ಏನು ಹೇಳಬೇಕೋ ತಿಳಿಯುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ನಾನು ಅಲ್ಲಿಗೆ ಹೋಗಿದ್ದು ಓದುವುದಕ್ಕೆ. ಹಣ ಮಾಡುವುದಕ್ಕೆ ಅಲ್ಲ. ನನಗೆ ಭಾರತದ ಮೇಲೆ ಅಭಿಮಾನವಿದೆ. ಓದು ಮುಗಿಸಿ ಇಲ್ಲಿಯೇ ಬಂದು ಕೆಲಸ ಮಾಡಬೇಕು ಎನ್ನುವ ಆಸೆಯೂ ಇದೆ. ಇಲ್ಲಿನ ವೈದ್ಯಕೀಯ ಕಾಲೇಜುಗಳು ಕೇಳಿದಷ್ಟು ದುಬಾರಿ ಹಣ ಕಟ್ಟಲು ಸಾಧ್ಯವಾಗದ ಕಾರಣ ಅಲ್ಲಿಗೆ ಓದುವ ಉದ್ದೇಶದಿಂದ ಹೋದೆ. ಒಳ್ಳೆಯ ಅಂಕ ಪಡೆಯುವ ಯೋಗ್ಯತೆ ಇಲ್ಲ ಎನ್ನುವ ಮಾತುಗಳನ್ನು ನಮ್ಮ ಕುರಿತು ಆಡಲಾಯಿತು. ಹಾಗಾದರೆ, ಕಡಿಮೆ ಅಂಕ ಪಡೆದು ₹4 ಕೋಟಿಯಿಂದ ₹5 ಕೋಟಿ ಕೊಟ್ಟು ಭಾರತದಲ್ಲಿಯೇ ಸಾವಿರಾರು ಮಂದಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ. ಅವರಿಗೆ ಯೋಗ್ಯತೆ ಇದೆ ಎಂದ ಮೇಲೆ, ನಾವು ಓದುವುದು ತಪ್ಪೇ. ಶ್ರೀಮಂತರು ಮಾತ್ರ ಓದಬೇಕೆ’ ಎಂದು ಪ್ರಶ್ನಿಸಿದ್ದಾರೆ.

> **ನನ್ನ ಬಗ್ಗೆ ಯಾರು ಏನೇ ಹೇಳಿದರೂ, ನಾನು ಭಾರತೀಯಳು. ಇದು ಸತ್ಯ. ನಮ್ಮ ವಿರುದ್ಧದ ಟ್ರೋಲ್‌ಗಳಿಗೆ ಅಂಜುವ ಪ್ರಶ್ನೆ ಇಲ್ಲ. ಧೈರ್ಯದಿಂದಲೇ ಎದುರಿಸುತ್ತೇನೆ**
> **ಶಿಲ್ಪಾ ರಾಡ್ರಿಗಸ್**, ವಿದ್ಯಾರ್ಥಿನಿ

ಉತ್ತರಪ್ರದೇಶ: ಇಂದು ಅಂತಿಮ ಹಂತದ ಮತದಾನ ● 613 ಅಭ್ಯರ್ಥಿಗಳು ಕಣದಲ್ಲಿ ● 10ರಂದು ಮತ ಎಣಿಕೆ

ಪ್ರಧಾನಿ ಮೋದಿ ವರ್ಚಸ್ಸನ್ನೇ ನೆಚ್ಚಿಕೊಂಡ ಬಿಜೆಪಿ

ಲಖನೌ (ಪಿಟಿಐ): ದೇಶದ ಗಮನ ಸೆಳೆದಿರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ 7ನೇ ಹಾಗೂ ಅಂತಿಮ ಹಂತದ ಮತದಾನ ಸೋಮವಾರ (ಮಾರ್ಚ್ 7) ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿನಿಧಿಸುವ ವಾರಾಣಸಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ ವಿಧಾನಸಭಾ ಕ್ಷೇತ್ರಗಳು ಸೇರಿದಂತೆ 54 ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಮತದಾರರು 613 ಅಭ್ಯರ್ಥಿಗಳ ಭವಿಷ್ಯ ಬರೆಯಲಿದ್ದಾರೆ. ಈ ಚುನಾವಣೆಯಲ್ಲಿ ತಾರಾಪ್ರಚಾರಕ ಮೋದಿ ಅವರ ವರ್ಚಸ್ಸನ್ನೇ ಬಿಜೆಪಿ ಸಂಪೂರ್ಣವಾಗಿ ನೆಚ್ಚಿಕೊಂಡಿದೆ. ಸಮಾಜವಾದಿ ಪಕ್ಷವು ಜಾತಿ ಸಮುದಾಯಗಳನ್ನು ಪ್ರತಿನಿಧಿಸುವ ತನ್ನ ಮಿತ್ರ ಪಕ್ಷಗಳನ್ನು ಗೆಲುವಿಗಾಗಿ ಅವಲಂಬಿಸಿದೆ.

ಕೋವಿಡ್ ನಿರ್ವಹಣೆ, ರಾಜ್ಯದಲ್ಲಿನ ಕಾನೂನು–ಸುವ್ಯವಸ್ಥೆ ಸ್ಥಿತಿ, ಆರ್ಥಿಕತೆ, ರೈತರ ಸಮಸ್ಯೆಗಳೇ ಪ್ರಚಾರದ ವಿಷಯಗಳಾಗಿದ್ದವು. ಈ ವಿಷಯಗಳನ್ನೇ ಮುಂದಿಟ್ಟುಕೊಂಡು ಬಿಜೆಪಿ ಹಾಗೂ ವಿರೋಧಿ ಪಾಳೆಯದ ನಾಯಕರು ಆರೋಪ–ಪ್ರತ್ಯಾರೋಪ ನಡೆಸಿದ್ದಕ್ಕೂ ಈ ಹಂತ ಸಾಕ್ಷಿಯಾಯಿತು.

ಅಜಂಗಡ, ಮೌ, ಜಾನ್‌ಪುರ, ಗಾಜಿಪುರ, ಚಂದೌಲಿ ವಾರಾಣಸಿ, ಮಿರ್ಜಾಪುರ, ಭದೋಹಿ ಹಾಗೂ ಸೋನ್‌ಭದ್ರಾ ಜಿಲ್ಲೆಗಳಲ್ಲಿ ಬೆಳಿಗ್ಗೆ 7 ಗಂಟೆಗೆ ಮತದಾನ ಆರಂಭವಾಗಲಿದ್ದು, ಸಂಜೆ 6ರ ವರೆಗೆ ನಡೆಯಲಿದೆ. ಮಾರ್ಚ್ 10ರಂದು ಮತ ಎಣಿಕೆ ನಡೆಯಲಿದೆ.

ಅಪ್ನಾ ದಳ (ಸೋನೆಲಾಲ್), ನಿಶಾದ್ ಪಾರ್ಟಿಗಳೊಂದಿಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಅಪ್ನಾ ದಳ (ಕೆ), ಓಂ ಪ್ರಕಾಶ್ ರಾಜಭರ್ ನೇತೃತ್ವದ ಸುಹೇಲ್‌ದೇವ್ ಭಾರತೀಯ ಸಮಾಜ ಪಾರ್ಟಿ (ಎಸ್‌ಬಿಎಸ್‌ಪಿ) ಅಖಿಲೇಶ್ ಯಾದವ್ ಜೊತೆ ಮೈತ್ರಿ ಮಾಡಿಕೊಂಡಿವೆ.

ಅಂತಿಮ ಹಂತ ಬಿಜೆಪಿ ಹಾಗೂ ಸಮಾಜವಾದಿ ಪಕ್ಷ (ಎಸ್‌ಪಿ) ನೇತೃತ್ವದ ಮೈತ್ರಿಕೂಟದ ಪಾಲಿಗೆ ಮಹತ್ವದ್ದು. ಹಾಗಾಗಿ, ಮತದಾರರನ್ನು ಓಲೈಸುವ ವಿಷಯದಲ್ಲಿ ಎಲ್ಲ ಪಕ್ಷಗಳಲ್ಲಿ ಪೈಪೋಟಿ ಕಂಡುಬಂದಿತ್ತು. ಒಂದು ಕಾಲದಲ್ಲಿ ಎಸ್‌ಪಿಯ ಭದ್ರಕೋಟೆಯಾಗಿದ್ದ ಈ ಭಾಗದಲ್ಲಿ 2017ರಲ್ಲಿ 29 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಮೈತ್ರಿಕೂಟ ತನ್ನ ಪ್ರಾಬಲ್ಯ ತೋರಿಸಿತು. ಆ ಚುನಾವಣೆಯಲ್ಲಿ ಬಿಜೆಪಿ ಮಿತ್ರಪಕ್ಷಗಳಾದ ಅಪ್ನಾ ದಳ 4 ಹಾಗೂ ಎಸ್‌ಬಿಎಸ್‌ಪಿ ಮೂರು ಸ್ಥಾನ ಗೆದ್ದುಕೊಂಡಿದ್ದವು. ಬಿಎಸ್‌ಪಿ 6 ಹಾಗೂ ಎಸ್‌ಪಿ 11 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದವು.

ಕಣದಲ್ಲಿರುವ ಪ್ರಮುಖರು: ಉತ್ತರ ಪ್ರದೇಶ ಪ್ರವಾಸೋದ್ಯಮ ಸಚಿವ ನೀಲಕಂಠ ತಿವಾರಿ ವಾರಾಣಸಿ ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಸಚಿವರಾದ ಅನಿಲ್ ರಾಜಭರ್ (ಶಿವಪುರ–ವಾರಾಣಸಿ), ರವೀಂದ್ರ ಜೈಸ್ವಾಲ್ (ವಾರಾಣಸಿ ಉತ್ತರ), ಗಿರೀಶ್ ಯಾದವ್ (ಜಾನ್‌ಪುರ) ಹಾಗೂ ರಮಾಶಂಕರ್ ಸಿಂಗ್ ಪಟೇಲ್ (ಮಡಿಹಾನ್–ಮಿರ್ಜಾಪುರ) ಕಣದಲ್ಲಿರುವ ಪ್ರಮುಖರು.

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಸಮಾಜವಾದಿ ಪಕ್ಷ ಸೇರಿದ ದಾರಾಸಿಂಗ್ ಚೌಹಾಣ್ ಅವರು ಘೋಸಿ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ.

ಸಮಾಜವಾದಿ ಪಕ್ಷದ ಮುಖಂಡ ಹಾಗೂ ಮುಲಾಯಂಸಿಂಗ್ ಯಾದವ್ ಅವರ ಆಪ್ತಬಳಗದಲ್ಲಿ ಗುರುತಿಸಿಕೊಂಡಿದ್ದ ದಿವಂಗತ ಪಾರಸ್‌ನಾಥ್ ಯಾದವ್ ಪುತ್ರ ಲಕಿ ಯಾದವ್ ಜಾನ್‌ಪುರ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ. ಕರ್ಹಾಲ್‌ನಿಂದ ಸ್ಪರ್ಧಿಸಿರುವ ಪುತ್ರ ಹಾಗೂ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಪ್ರಚಾರ ನಡೆಸಿದ್ದಾರೆ. ಆದರೆ, ಮುಲಾಯಂ ಸಿಂಗ್ ಅವರು ಲಕಿ ಪರ ಈ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದು ಕಡಿಮೆ ಎನ್ನಲಾಗಿದೆ. ಇನ್ನು, ಎಸ್‌ಬಿಎಸ್‌ಪಿ ಅಧ್ಯಕ್ಷ ಓಂಪ್ರಕಾಶ್ ರಾಜಭರ್ ಝಹೂ ರಾಬಾದ್‌ನಿಂದ ಕಣಕ್ಕಿಳಿದಿದ್ದರೆ, ಜೆಡಿಯುನ ಧನಂಜಯ್ ಸಿಂಗ್ ಮಲ್ಹಾನಿಯಲ್ಲಿ ಸ್ಪರ್ಧಿಸಿದ್ದಾರೆ. ಗೂಂಡಾ ಮತ್ತು ರಾಜಕಾರಣಿ ಮುಖ್ತಾರ್ ಅನ್ಸಾರಿ ಅವರ ಮಗ ಅಬ್ಬಾಸ್ ಅನ್ಸಾರಿ ಮೌ ಕ್ಷೇತ್ರದಲ್ಲಿ ಅದೃಷ್ಟ ಪರೀಕ್ಷೆಗೆ ಒಡ್ಡಿದ್ದಾರೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ 7ನೇ ಹಾಗೂ ಅಂತಿಮ ಹಂತದ ಮತದಾನ ಹಿನ್ನೆಲೆಯಲ್ಲಿ ವಾರಾಣಸಿಯಲ್ಲಿ ಭಾನುವಾರ ಚುನಾವಣಾ ಕರ್ತವ್ಯದ ಸಿಬ್ಬಂದಿ ಇವಿಎಂಗಳು ಹಾಗೂ ವಿವಿಪ್ಯಾಟ್‌ಗಳೊಂದಿಗೆ ಮತಗಟ್ಟೆಗಳತ್ತ ಹೆಜ್ಜೆ ಹಾಕಿದರು —ಪಿಟಿಐ ಚಿತ್ರ

ನಾಯಕರ ಅಬ್ಬರದ ಪ್ರಚಾರ

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ವಿವಿಧ ಪಕ್ಷಗಳ ಘಟಾನುಘಟಿ ನಾಯಕರು ತಮ್ಮ ಅಭ್ಯರ್ಥಿಗಳ ಪರ ಅಬ್ಬರ ಪ್ರಚಾರ ನಡೆಸಿದರು. ವಾರಾಣಸಿಯಲ್ಲದೇ, ಅಕ್ಕ ಪಕ್ಕದ ಜಿಲ್ಲೆಗಳ ಕ್ಷೇತ್ರಗಳ ಮತದಾರರನ್ನು ಓಲೈಸುವ ಸಲುವಾಗಿ ಮೋದಿ ಅವರು ಬಹಿರಂಗ ಸಭೆಗಳಲ್ಲದೇ, ವಾರಾಣಸಿ ದಂಡು ಪ್ರದೇಶ, ಉತ್ತರ ಹಾಗೂ ದಕ್ಷಿಣ ಕ್ಷೇತ್ರಗಳಲ್ಲಿ ರೋಡ್ ಶೋ ನಡೆಸಿದರು.

ಎಸ್‌ಪಿ ಅಭ್ಯರ್ಥಿಗಳ ಪರ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಪ್ರಚಾರ ನಡೆಸಿದರು. ಅವರು ವಾರಾಣಸಿಯಲ್ಲಿ ನಡೆದ ಎಸ್‌ಪಿ ರ್‍ಯಾಲಿಯಲ್ಲಿ ಅಖಿಲೇಶ್ ಯಾದವ್ ಹಾಗೂ ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರೊಂದಿಗೆ ಭಾಗವಹಿಸಿದ್ದರು. ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ನಾಲ್ಕು ದಿನಗಳ ಕಾಲ ವಾರಾಣಸಿಯಲ್ಲಿಯೇ ಠಿಕಾಣಿ ಹೂಡಿದ್ದರು. ಅಣ್ಣ ರಾಹುಲ್ ಗಾಂಧಿ ಜೊತೆ ಪ್ರಚಾರಸಭೆಗಳಲ್ಲಿ ಪಾಲ್ಗೊಂಡರು. ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಸಹ ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚಿಸಿದರು.

ಜನತಂತ್ರದ ಹಬ್ಬ 2022

ಅಂಕಿ-ಅಂಶಗಳು

11 ಪರಿಶಿಷ್ಟ ಜಾತಿಗೆ ಮೀಸಲಾದ ಕ್ಷೇತ್ರಗಳು

2 ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಕ್ಷೇತ್ರಗಳು

2.06 ಕೋಟಿ ಮತದಾರರ ಸಂಖ್ಯೆ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 62

ನೈವೇದ್ಯ–ಬಿಲ್ವಪತ್ರೆಗಳ ಮಹಾತ್ಮೆ

ಶಿವನ ನೈವೇದ್ಯವನ್ನು ಸೇವಿಸಬಾರದೆಂದು ಕೆಲವರು ಹೇಳುತ್ತಾರೆ. ಆದ್ದರಿಂದ ನೈವೇದ್ಯಸೇವನೆ ಮತ್ತು ಬಿಲ್ವಪತ್ರೆ ಮಹಾತ್ಮೆಯನ್ನು ತಿಳಿಸುವಂತೆ ಸೂತಮುನಿಯನ್ನು ಮುನಿಗಳು ಕೇಳುತ್ತಾರೆ. ಆಗ ಸೂತಮುನಿ 'ಶಿವನಲ್ಲಿ ದೃಢವಾದ ಭಕ್ತಿಯುಳ್ಳವರೂ ಶುಚಿಯೂ ಶುದ್ಧರೂ ಸದಾಚಾರಿಯೂ ಆಗಿರುವ ಶಿವಭಕ್ತರು ಮಾತ್ರ ಶಿವನೈವೇದ್ಯವನ್ನು ಸೇವಿಸಬೇಕು. ಶಿವನ ನೈವೇದ್ಯ ಸೇವಿಸಬಾರದು ಎಂಬ ತಪ್ಪು ಭಾವನೆಯನ್ನು ಬಿಡಬೇಕು. ಏಕೆಂದರೆ, ಶಿವನೈವೇದ್ಯವನ್ನು ನೋಡಿದ ಮಾತ್ರದಿಂದಲೇ ಪಾಪಗಳು ದೂರವಾಗುತ್ತವೆ. ಅಂಥದರಲ್ಲಿ ಶಿವನೈವೇದ್ಯವನ್ನು ಸೇವಿಸಿದರೆ ಕೋಟಿ ಪುಣ್ಯಗಳು ಲಭಿಸುತ್ತವೆ' ಎಂದು ಶಿವನ ನೈವೇದ್ಯದ ಮಹತ್ವವನ್ನ ವಿವರಿಸುತ್ತಾನೆ.

ಸಾವಿರ ಯಾಗಗಳಿಂದ ಮಾತ್ರವಲ್ಲದೆ, ಅರ್ಬುದಾಯಾಗಗಳಿಂದಲೂ ಸಿಗದ ಪ್ರಯೋಜನಗಳು ಶಿವನೈವೇದ್ಯವನ್ನು ಭಕ್ಷಿಸಿದರೆ ಸಿಗುತ್ತವೆ. ಶಿವನ ನೈವೇದ್ಯ ಸೇವಿಸಿದವರು ಶಿವಸಾಯುಜ್ಯವನ್ನೇ ಹೊಂದಬಹುದು. ಯಾವ ಮನೆಯಲ್ಲಿ ಶಿವನೈವೇದ್ಯ ಇರುವುದೋ ಆ ಮನೆಯು ತುಂಬಾ ಪವಿತ್ರವಾಗಿರುತ್ತದೆ. ಶಿವನೈವೇದ್ಯವನ್ನು ಪ್ರೀತಿಯಿಂದ ಶಿರಸ್ಸಿನಲ್ಲಿಟ್ಟು, ಭಕ್ತಿಯಿಂದ ಶಿವನನ್ನು ಸ್ಮರಿಸುತ್ತಾ ಸೇವಿಸಬೇಕು. ಶಿವನೈವೇದ್ಯವನ್ನು ಆಮೇಲೆ ಸೇವಿಸುವೆನೆಂದು ವಿಳಂಬಮಾಡಿದರೆ ಪಾಪ ಬರುತ್ತದೆ. ಆದ ಕಾರಣ ಶಿವನೈವೇದ್ಯ ಸಿಕ್ಕ ತಕ್ಷಣವೇ ತಡಮಾಡದೆ ಕಣ್ಣಿಗೊತ್ತಿಕೊಂಡು ಸೇವಿಸುತ್ತಿರಬೇಕು. ಶಿವನೈವೇದ್ಯವನ್ನು ಸ್ವೀಕರಿಸಬೇಕೆಂಬ ಇಚ್ಛೆ ಪಡದಿದ್ದರೆ ಮಹಾಪಾಪವಾಗುತ್ತೆ. ನಿಶ್ಚಯವಾಗಿ ಅಂಥವರು ನರಕವನ್ನು ಸೇರುತ್ತಾರೆ.

ಶಿವದೀಕ್ಷೆಯಲ್ಲಿ ನಿರತರಾದ ಭಕ್ತರು ಶಿವನೈವೇದ್ಯವನ್ನು ಎಲ್ಲಾ ಶಿವಲಿಂಗಗಳ ಮಹಾಪ್ರಸಾದವೆಂದು ತಿಳಿದು ತಿನ್ನಬೇಕು. ಬೇರೆ ದೇವತೆಗಳ ವ್ರತದೀಕ್ಷೆಯಲ್ಲಿರುವಂತಹ ಶಿವಭಕ್ತರು ಸಾಲಿಗ್ರಾಮದಲ್ಲಿ ಉದ್ಭವಿಸಿದ ಲಿಂಗ, ಪಾದರಸಲಿಂಗ, ಶಿಲಾಲಿಂಗ, ಬೆಳ್ಳಿಯ ಲಿಂಗ, ಸುವರ್ಣಲಿಂಗ, ದೇವತೆಗಳು ಮತ್ತು ಸಿದ್ಧರು ಪ್ರತಿಷ್ಠಾಪಿಸಿದ ಲಿಂಗ, ಕಾಶ್ಮೀರಲಿಂಗ, ಸ್ಫಟಿಕಲಿಂಗ, ರತ್ನಲಿಂಗ, ಜ್ಯೋತಿರ್ಲಿಂಗಗಳಲ್ಲಿನ ಪೂಜಾ ಶಿವನೈವೇದ್ಯವನ್ನು ಭಕ್ಷಿಸಿದರೆ ಚಾಂದ್ರಾಯಣವ್ರತವನ್ನು ಮಾಡಿದ ಪುಣ್ಯ ಲಭಿಸುತ್ತದೆ.

ಚಂಡನ (ಶಿವನ ಗಣ) ಅಧಿಕಾರವಿರುವಂತಹ ನೈವೇದ್ಯವನ್ನು ಮಾನವರು ಭಕ್ಷಿಸಬಾರದು. ಬಾಣಲಿಂಗ, ಲೋಹಲಿಂಗ, ತಾನಾಗಿಯೇ ಉದ್ಭವಿಸಿದಲಿಂಗ ಮತ್ತು ಎಲ್ಲಾ ಶಿವವಿಗ್ರಹಗಳಲ್ಲಿ ಚಂಡೀಶ್ವರನಿಗೆ ಅಧಿಕಾರವಿಲ್ಲ. ಲಿಂಗವನ್ನು ವಿಧಿವತ್ತಾಗಿ ಸ್ನಾನಮಾಡಿಸಿ, ಆ ಸ್ನಾನಜಲವನ್ನು ಪಾನಪಾಡಿದರೆ ಕೂಡಲೆ ಕಾಯಿಕ, ವಾಚಿಕ, ಮಾನಸಿಕವಾದ ಮೂರು ಪಾಪಗಳೂ ನಷ್ಟವಾಗುವುದು.

ಪತ್ರ, ಪುಷ್ಪ, ಫಲ, ಜಲ ಮುಂತಾದ ಶಿವನೈವೇದ್ಯವು ಅಗ್ರಾಹ್ಯವಾದುದಾದರೂ, ಶಿವಸಾಲಿಗ್ರಾಮ ಶಿಲೆಯ ಸಂಬಂಧದಿಂದ ಪವಿತ್ರವಾಗಿರುತ್ತದೆ. ಲಿಂಗದ ಮೇಲಿರುವ ದ್ರವ್ಯವು ಗ್ರಾಹ್ಯವಾದುದಲ್ಲ. ಲಿಂಗಸ್ಪರ್ಶವನ್ನು ಹೊಂದಿದ ನಂತರ ದ್ರವ್ಯವು ಪವಿತ್ರವಾಗುತ್ತೆ. ಅದೇ ಗ್ರಾಹ್ಯ ಅಂತ ಶಿವನೈವೇದ್ಯದ ವಿವರ ಹೇಳಿದ ಸೂತಮುನಿ, ನಂತರ ಬಿಲ್ವಪತ್ರದ ಮಹಿಮೆಯನ್ನ ತಿಳಿಸುತ್ತಾನೆ.

ಬಿಲ್ವವೃಕ್ಷವು ಮಹಾದೇವಸ್ವರೂಪ. ದೇವತೆಗಳೂ ಅದನ್ನು ಸ್ತುತಿಸುತ್ತಾರೆ. ಲೋಕದಲ್ಲಿ ಪ್ರಸಿದ್ಧವಾದ ಎಷ್ಟೆಷ್ಟು ಪುಣ್ಯತೀರ್ಥಗಳಿವೆಯೋ ಅವೆಲ್ಲವೂ ಈ ಬಿಲ್ವವೃಕ್ಷದ ಮೂಲದಲ್ಲೇ ಇರುವುದು. ಆದ್ದರಿಂದ ಬಿಲ್ವವೃಕ್ಷದ ಮೂಲದಲ್ಲಿರುವ ಜಲವನ್ನು ತನ್ನ ಶಿರಸ್ಸಿಗೆ ಹಾಕಿಕೊಂಡು ಸ್ನಾನ ಮಾಡಿದರೆ ಎಲ್ಲ ತೀರ್ಥಗಳಲ್ಲಿಯೂ ಸ್ನಾನಮಾಡಿದ ಪುಣ್ಯ ಪಡೆಯಬಹುದು. ಬಿಲ್ವವೃಕ್ಷದ ಮೂಲದಲ್ಲಿ ಲಿಂಗರೂಪಿಯಾದ ಶಿವನನ್ನು ಯಾರು ಪೂಜಿಸುವರೋ, ಆ ಪುಣ್ಯಾತ್ಮರು ಶಿವನನ್ನು ಸೇರುವರು. ಬಿಲ್ವವೃಕ್ಷದ ಕಟ್ಟೆ, ಅಂದರೆ ಪಾತಿಗಳು ನೀರಿನಿಂದ ತುಂಬಿರುವುದನ್ನು ನೋಡಿದರೆ, ಮಹಾದೇವನು ಸಂತೋಷನಾಗುತ್ತಾನೆ.

ಸಾಧನ ಮತ್ತು ಉಪಸಾಧನಗಳೊಡನೆ ಹೇಳಿರುವ ಶಿವಲಿಂಗ ಪೂಜೆಯು ವಿರಕ್ತರಿಗೆ ಮತ್ತು ವಿರಕ್ತರಲ್ಲದವರಿಗೆ ಬೇರೆಬೇರೆಯಾಗಿರುತ್ತದೆ. ವಿರಕ್ತರಲ್ಲದ ಗೃಹಸ್ಥರಿಗೆ ಪೀಠಪೂಜೆಯು ಸಕಲಾಭಿಷ್ಟವನ್ನುಂಟುಮಾಡುತ್ತದೆ. ಅವರು ಪಾತ್ರೆಯಿಂದಲೇ ಪೂಜೆ ಎಲ್ಲವನ್ನೂ ಮಾಡಬೇಕು. ಅಭಿಷೇಕವಾದ ನಂತರ ಶಾಲ್ಯನ್ನದಿಂದ ನೈವೇದ್ಯವನ್ನು ಮಾಡಬೇಕು. ಪೂಜೆಯಾದ ಮೇಲೆ ಲಿಂಗವನ್ನು ಮನೆಯಲ್ಲಿ ಶುದ್ಧವಾದ ಬೇರೆ ಸಂಪುಟದಲ್ಲಿರಿಸಬೇಕು. ವಿರಕ್ತರಾದ ಸನ್ಯಾಸಿಗಳಿಗೆ ಕರಪೂಜೆ ಅತ್ಯುತ್ತಮ. ಕೈಯಲ್ಲಿ ಲಿಂಗವನ್ನಿಟ್ಟುಕೊಂಡು ಪೂಜಿಸಿ, ತಾವು ಭಕ್ಷಿಸುವ ಆಹಾರವನ್ನೇ ನಿವೇದಿಸಬೇಕು. ಇಂಥವರಿಗೆ ಸೂಕ್ಷ್ಮಲಿಂಗವೇ ಪ್ರಶಸ್ತವಾದುದಾಗಿರುತ್ತದೆ.

ವಿಭೂತಿಯಿಂದ ಲಿಂಗವನ್ನರ್ಚಿಸಬೇಕು. ವಿಭೂತಿಯನ್ನು ನಿವೇದಿಸಬೇಕು. ಪೂಜೆಯನ್ನು ಮಾಡಿ ಅನಂತರ ಲಿಂಗವನ್ನು ಶಿರಸ್ಸಿನಲ್ಲಿ ಧರಿಸಬೇಕು ಎಂದು ಸೂತಮುನಿ ಹೇಳುವುದರೊಂದಿಗೆ ವಿದ್ಯೇಶ್ವರಸಂಹಿತೆಯ ಇಪ್ಪತ್ತೆರಡನೆ ಅಧ್ಯಾಯ ಮುಗಿಯುತ್ತದೆ. ●

ಶ್ರೀನಗರ: ಗ್ರೆನೇಡ್ ದಾಳಿ, ವೃದ್ಧ ಸಾವು

ಶ್ರೀನಗರ (ಪಿಟಿಐ): ಇಲ್ಲಿಯ ಹರಿಸಿಂಗ್ ಹೈ ಸ್ಟ್ರೀಟ್‌ನ ಮಾರುಕಟ್ಟೆ ಪ್ರದೇಶದಲ್ಲಿ ಭಾನುವಾರ ಭಯೋತ್ಪಾದಕರು ನಡೆಸಿದ ಗ್ರೆನೇಡ್ ದಾಳಿಯಲ್ಲಿ ವೃದ್ಧರೊಬ್ಬರು ಮೃತಪಟ್ಟಿದ್ದು ಒಬ್ಬರು ಪೊಲೀಸ್ ಸೇರಿ ಕನಿಷ್ಠ 20 ಭದ್ರತಾ ಪಡೆಯ ಸಿಬ್ಬಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

'ಹರಿಸಿಂಗ್ ಹೈ ಸ್ಟ್ರೀಟ್ ಪ್ರದೇಶದಲ್ಲಿ ಪಹರೆಯಲ್ಲಿದ್ದ ಪೊಲೀಸ್ ಮತ್ತು ಭದ್ರತಾ ಪಡೆಗಳ ಮೇಲೆ ಸಂಜೆ ಸುಮಾರು 4.20ಕ್ಕೆ ಭಯೋತ್ಪಾದಕರು ಗ್ರೆನೇಡ್‌ವೊಂದನ್ನು ಎಸೆದಿದ್ದಾರೆ. ಈ ವೇಳೆ ಮಾರುಕಟ್ಟೆ ಪ್ರದೇಶ ವಾರಾಂತ್ಯದ ಜನಸಂದಣಿಯಿಂದ ಕೂಡಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಗ್ರೆನೇಡ್ ಸ್ಫೋಟದಲ್ಲಿ ಶ್ರೀನಗರದ ಮೊಹಮ್ಮದ್ ಅಸ್ಲಾಮ್ ಮಖ್ದೂಮಿ ಎಂಬ ವ್ಯಕ್ತಿ ಮೃತಪಟ್ಟಿದ್ದಾರೆ.

ಪುಣೆ ಮೆಟ್ರೊ ರೈಲು ಸೇವೆಯನ್ನು ಉದ್ಘಾಟಿಸಿದ ಪ್ರಧಾನಿ

ಸಮೂಹ ಸಾರಿಗೆ ಸುಧಾರಣೆಯತ್ತ ಗಮನ: ಮೋದಿ

ಪುಣೆ (ಪಿಟಿಐ): 'ಮೆಟ್ರೊ ರೈಲು ಸಂಪರ್ಕ ಸೇರಿದಂತೆ ಸಮೂಹ ಸಾರಿಗೆಯನ್ನು ಸುಧಾರಿಸುವತ್ತ ಕೇಂದ್ರ ಸರ್ಕಾರವು ಗಮನಹರಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ

ಮಹಾರಾಷ್ಟ್ರದ ಪುಣೆ ನಗರದಲ್ಲಿ ಭಾನುವಾರ ಮೆಟ್ರೊ ರೈಲು ಯೋಜನೆ ಉದ್ಘಾಟನೆ ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದ ಬಳಿಕ ಇಲ್ಲಿನ ಎಂಐಟಿ ಕಾಲೇಜು ಮೈದಾನದಲ್ಲಿ ಮಾತನಾಡಿದ ಅವರು, 'ಪುಣೆ ಮೆಟ್ರೊದ ಶಂಕುಸ್ಥಾಪನೆಗೂ ನನಗೆ ಅವಕಾಶ ಸಿಕ್ಕಿತ್ತು. ಇಂದು ಅದೇ ಯೋಜನೆಯ ಉದ್ಘಾಟನೆಗೂ ನನ್ನನ್ನು ಆಹ್ವಾನಿಸಿದ್ದೀರಿ' ಎಂದು ಸಂತಸ ವ್ಯಕ್ತಪಡಿಸಿದರು.

'ಹಿಂದಿನ ಸರ್ಕಾರಗಳಿದ್ದಾಗ ಯೋಜನೆಗಳ ಶಂಕುಸ್ಥಾಪನೆ ನಡೆಯುತ್ತಿತ್ತು. ಆದರೆ, ಆ ಯೋಜನೆಗಳ ಉದ್ಘಾಟನೆ ಯಾವಾಗ ಎಂಬುದು ತಿಳಿಯುತ್ತಿರಲಿಲ್ಲ' ಎಂದು ವ್ಯಂಗ್ಯವಾಗಿ ನುಡಿದರು.

'ಪುಣೆ ಮೆಟ್ರೊ ರೈಲು ಯೋಜನೆಯ ಉದ್ಘಾಟನೆಯು ಯೋಜನೆಗಳನ್ನು ಸಮಯಕ್ಕೆ ಸರಿಯಾಗಿ ಪೂರ್ಣಗೊಳಿಸಬಹುದು ಎಂಬ ಸಂದೇಶವನ್ನು ನೀಡಿದೆ' ಎಂದರು.

'ನಗರೀಕರಣವು ತ್ವರಿತಗತಿಯಲ್ಲಿ ನಡೆಯುತ್ತಿದೆ. 2030ರ ವೇಳೆಗೆ ದೇಶದ ನಗರ ಜನಸಂಖ್ಯೆಯು 60 ಕೋಟಿ ಗಡಿ ದಾಟಲಿದೆ. ಹೆಚ್ಚುತ್ತಿರುವ ಜನಸಂಖ್ಯೆಯು ಬಹಳಷ್ಟು ಅವಕಾಶಗಳನ್ನು ತರುತ್ತದೆ. ಆದರೆ ಅದೇ ಸಮಯದಲ್ಲಿ ಸವಾಲುಗಳೂ ಎದುರಾಗುತ್ತವೆ. ನಗರಗಳಲ್ಲಿ ಫ್ಲೈಓವರ್‌ಗಳನ್ನು ನಿರ್ದಿಷ್ಟ ಮಿತಿಯವರೆಗೆ ಮಾಡಬಹುದು. ಇಂಥ ಸಂದರ್ಭಗಳಲ್ಲಿ ಸಮೂಹ ಸಾರಿಗೆ ವ್ಯವಸ್ಥೆಯೊಂದೇ ನಮ್ಮ ಆಯ್ಕೆ. ಮೆಟ್ರೊ ರೈಲು ಸೇರಿದಂತೆ ಇತರ ಸಮೂಹ ಸಾರಿಗೆ ಸುಧಾರಣೆಯತ್ತ ನಮ್ಮ ಸರ್ಕಾರವು ಗಮನ ಹರಿಸುತ್ತಿದೆ' ಎಂದರು.

ಮೆಟ್ರೊ ರೈಲು ಉದ್ಘಾಟನೆ ವೇಳೆ ಕಿಯೋಸ್ಕ್‌ನಿಂದ ಟಿಕೆಟ್ ಖರೀದಿಸಿದ ನಂತರ ರೈಲಿನಲ್ಲಿ 10 ನಿಮಿಷಗಳ ಪ್ರಯಾಣಿಸಿದ ಮೋದಿ ಅವರು ಅಂಗವಿಕಲ ಮಕ್ಕಳೊಂದಿಗೆ ಮಾತುಕತೆ ನಡೆಸಿದರು.

ಪುಣೆ ಮೆಟ್ರೊ ರೈಲು ಯೋಜನೆಯ ಒಟ್ಟು ವೆಚ್ಚ ₹ 11,400 ಕೋಟಿ. ಈ ಯೋಜನೆಗೆ ಪ್ರಧಾನಿ ಮೋದಿ 2016ರ ಡಿ. 24ರಂದು ಅಡಿಗಲ್ಲು ಹಾಕಿದ್ದರು. ಒಟ್ಟು 32.2 ಕಿ.ಮೀ ಉದ್ದದ ಮೆಟ್ರೊ ರೈಲು ಯೋಜನೆಯಲ್ಲಿ 12 ಕಿ.ಮೀ. ಮಾರ್ಗವನ್ನು ಪ್ರಧಾನಿ ಉದ್ಘಾಟಿಸಿದರು.

ಎಲೆಕ್ಟ್ರಿಕ್ ಬಸ್ ಲೋಕಾರ್ಪಣೆ: ಇದೇ ಸಂದರ್ಭದಲ್ಲಿ ಪುಣೆಯ ಸಾರ್ವಜನಿಕ ಸಾರಿಗೆಗಾಗಿ ಪ್ರಧಾನಿ ಅವರು 150 ಎಲೆಕ್ಟ್ರಿಕ್ ಬಸ್‌ಗಳನ್ನು ಲೋಕಾರ್ಪಣೆಗೊಳಿಸಿದರು.

ಪುಣೆಯ ಮೆಟ್ರೊ ರೈಲು ಸೇವೆಯನ್ನು ಉದ್ಘಾಟಿಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೊದಲ್ಲಿ ಮಕ್ಕಳೊಂದಿಗೆ ಪ್ರಯಾಣದ ವೇಳೆ ಮಾತುಕತೆ ನಡೆಸಿದರು —ಪಿಟಿಐ ಚಿತ್ರ

ಪ್ರಧಾನಿ ಭೇಟಿ ವಿರೋಧಿಸಿ ಪ್ರತಿಭಟನೆ

ಪುಣೆಗೆ ಪ್ರಧಾನಿ ಮೋದಿ ಭೇಟಿ ನೀಡುತ್ತಿರುವುದನ್ನು ವಿರೋಧಿಸಿ ಕಾಂಗ್ರೆಸ್ ಮತ್ತು ಎನ್‌ಸಿಪಿ ಭಾನುವಾರ ಪ್ರತಿಭಟನೆ ನಡೆಸಿದವು.

'ಪ್ರಧಾನಿ ಅಪೂರ್ಣ ಯೋಜನೆಗಳನ್ನು ಉದ್ಘಾಟಿಸಿ, ಪುಣೆಯ ಜನರಿಗೆ ಮೋಸ ಮಾಡುತ್ತಿದ್ದಾರೆ. ಇದಕ್ಕಾಗಿ ಮೋದಿ ಕ್ಷಮೆಯಾಚಿಸಬೇಕು. ಉಕ್ರೇನ್‌ನಲ್ಲಿ ಸಿಲುಕಿರುವ ವಿದ್ಯಾರ್ಥಿಗಳ ರಕ್ಷಣೆಗೆ ಆದ್ಯತೆ ನೀಡುವ ಬದಲು ಯೋಜನೆ ಉದ್ಘಾಟನೆಗೆ ಮಹತ್ವ ನೀಡುತ್ತಿದ್ದಾರೆ' ಎಂದು ಕಾಂಗ್ರೆಸ್ ಮತ್ತು ಎನ್‌ಸಿಪಿಯ ಮುಖಂಡರು ದೂರಿದ್ದಾರೆ.

ಶಿವಾಜಿ ಮಹಾರಾಜರ ಪ್ರತಿಮೆ

ಮಹಾರಾಷ್ಟ್ರದ ಪುಣೆಯಲ್ಲಿ ಭಾನುವಾರ ಪ್ರಧಾನಿ ನರೇಂದ್ರ ಮೋದಿ ಅವರು ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು ಅನಾವರಣಗೊಳಿಸಿದರು. ಸುಮಾರು 9.5 ಅಡಿ ಎತ್ತರವಿರುವ ಈ ಪ್ರತಿಮೆಯನ್ನು 1,850 ಕೆ.ಜಿ ಗನ್‌ಮೆಟಲ್‌ನಿಂದ ಮಾಡಲಾಗಿದೆ —ಪಿಟಿಐ ಚಿತ್ರ

ಭದ್ರತೆಗೆ ಖಾಸಗಿ ಸಂಸ್ಥೆಗಳ ಜೊತೆ ಸಹಯೋಗ: ಅಮಿತ್ ಶಾ ಸಲಹೆ

ಗಾಜಿಯಾಬಾದ್ (ಪಿಟಿಐ): ಉದ್ಯಮಗಳು, ಉತ್ಪಾದನಾ ಘಟಕಗಳ ಭದ್ರತೆಯ ಹೊಣೆಯನ್ನು ಭವಿಷ್ಯದಲ್ಲಿ ಸಿಐಎಸ್‌ಎಫ್ ಒಂದೇ ಏಕಾಂಗಿಯಾಗಿ ನಿಭಾಯಿಸಲಾಗದು. ಹಂತಹಂತವಾಗಿ ಖಾಸಗಿ ಭದ್ರತಾ ಸಂಸ್ಥೆಗಳಿಗೆ ಈ ಹೊಣೆಯನ್ನು ವರ್ಗಾಯಿಸಬಹುದು ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಹೇಳಿದ್ದಾರೆ.

ಸಿಐಎಸ್‌ಎಫ್‌ನ 53ನೇ ಸ್ಥಾಪನಾ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಹೈಬ್ರಿಡ್ ಭದ್ರತಾ ಮಾದರಿ ಅಗತ್ಯ' ಎಂದು ಪ್ರತಿಪಾದಿಸಿದರು. 'ಸಿಐಎಸ್‌ಎಫ್ ಮತ್ತು ಖಾಸಗಿ ಭದ್ರತಾ ಸಂಸ್ಥೆಗಳು ಪರಸ್ಪರ ಕೈಜೋಡಿಸುವ ಸಾಧ್ಯತೆಗಳಿವೆ' ಎಂದರು.

'ಫಲಿತಾಂಶ ಆಧರಿತ ಭದ್ರತಾ ಸಂಸ್ಥೆಯಾಗಿ ಸಿಐಎಸ್‌ಎಫ್ ಅನ್ನು ರೂಪಿಸುವ ಕ್ರಮವಾಗಿ ಮುಂದಿನ 25 ವರ್ಷವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಕಾರ್ಯಸೂಚಿಯನ್ನು ಸಿದ್ಧಪಡಿಸಬೇಕು' ಎಂದೂ ಸಿಐಎಸ್‌ಎಫ್ ಮುಖ್ಯಸ್ಥರಿಗೆ ಸಲಹೆ ಮಾಡಿದರು.

'ಬಂದರು, ಕಡಲುತೀರದ ಉದ್ಯಮಗಳಿಗೆ ಈಗ ಡ್ರೋನ್ ಬೆದರಿಕೆ ಹೆಚ್ಚುತ್ತಿದೆ. ಹೀಗಾಗಿ, ಭದ್ರತೆಗೆ ಸಂಬಂಧಿಸಿ ಡಿಆರ್‌ಡಿಒ, ಗಡಿಭದ್ರತಾ ಪಡೆಗಳ ಜೊತೆಗೆ ಕೈಜೋಡಿಸಿ, ಇಂತಹ ಬೆದರಿಕೆಗಳನ್ನು ಎದುರಿಸಲು ಕಾರ್ಯತಂತ್ರ ರೂಪಿಸಬೇಕು' ಎಂದರು.

ಸಿಐಎಸ್‌ಎಫ್‌ನ ಪ್ರಧಾನ ನಿರ್ದೇಶಕ ಶೀಲ್‌ವರ್ಧನ್ ಸಿಂಗ್ ಅವರು, ಸದ್ಯ ಸಿಐಎಸ್‌ಎಫ್ ಬಲ 1.64 ಲಕ್ಷ ಇದೆ. 65 ವಿಮಾನನಿಲ್ದಾಣಗಳು ಹಾಗೂ ಸರ್ಕಾರಿ ಮತ್ತು ಖಾಸಗಿಯ ಪ್ರಮುಖ ಮೂಲ ಸೌಕರ್ಯಗಳಿಗೆ ಭದ್ರತೆ ಒದಗಿಸುತ್ತಿದೆ ಎಂದರು.

ಗಾಜಿಯಾಬಾದ್‌ನಲ್ಲಿ ಭಾನುವಾರ ನಡೆದ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್)ನ 53ನೇ ಸ್ಥಾಪನಾ ದಿನ ಸಮಾರಂಭದಲ್ಲಿ ಸಿಐಎಸ್‌ಎಫ್ ಯೋಧರು ಸಾಂಸ್ಕೃತಿಕ ಕಾರ್ಯಕ್ರಮ ನೀಡಿ ಗಮನಸೆಳೆದರು —ಪಿಟಿಐ ಚಿತ್ರ

ಕಲಾಗ್ಯಾಲರಿ ಆರ್‌.ಕೆ. ಲಕ್ಷ್ಮಣ್‌ಗೆ ಸಮರ್ಪಣೆ

ಪುಣೆ (ಪಿಟಿಐ): ಪುಣೆಯಲ್ಲಿ ಖ್ಯಾತ ವ್ಯಂಗ್ಯಚಿತ್ರಕಾರರಿಗೆ ಮೀಸಲಾಗಿರುವ ಆಧುನಿಕ ಕಲಾ ಗ್ಯಾಲರಿ ಮತ್ತು ಮ್ಯೂಸಿಯಂ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಆರ್‌.ಕೆ. ಲಕ್ಷ್ಮಣ್ ಅವರಿಗೆ ಸಮರ್ಪಿಸಿದರು.

ವರ್ಚುವಲ್ ಆಗಿ ಗ್ಯಾಲರಿ ಉದ್ಘಾಟಿಸಿದ ಮೋದಿ ಅವರು, ಗ್ಯಾಲರಿ ಸಾಕಾರವಾಗಲು ಶ್ರಮಿಸಿದ ಆರ್‌.ಕೆ. ಲಕ್ಷ್ಮಣ್ ಅವರ ಸೊಸೆ ಉಷಾ ಲಕ್ಷ್ಮಣ್ ಮತ್ತು ಅವರ ಕುಟುಂಬವನ್ನು ಅಭಿನಂದಿಸಿದರು.

ಬಾಳೆವಾಡಿಯಲ್ಲಿರುವ ಈ ಆರ್ಟ್ ಗ್ಯಾಲರಿಯ ಪ್ರಮುಖ ಆಕರ್ಷಣೆ ಮಾಲ್ಗುಡಿ ಗ್ರಾಮವನ್ನು ಆಧರಿಸಿದ ಚಿಕ್ಕ ಮಾದರಿ. ಇದರಲ್ಲಿ ಆಡಿಯೊ ಮತ್ತು ವಿಶುವಲ್ ಎಫೆಕ್ಟ್‌ಗಳನ್ನು ಅಳವಡಿಸಲಾಗಿದೆ.

ಗ್ಯಾಲರಿಯಲ್ಲಿ ಆರ್‌.ಕೆ.ಲಕ್ಷ್ಮಣ್ ಅವರು ರಚಿಸಿರುವ ಸುಮಾರು 30 ಸಾವಿರ ಸ್ಕೆಚ್‌ಗಳಿವೆ. ಅವರ ರಚನೆಯ ರೇಖಾಚಿತ್ರಗಳು ಡಿಜಿಟಲ್ ಮತ್ತು ಭೌತಿಕ ಸ್ವರೂಪಗಳಲ್ಲಿ ಇಲ್ಲಿ ಸಂರಕ್ಷಿಸಿಡಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸಂವಾದ

ವೈದ್ಯಕೀಯ ಪ್ರವೇಶಕ್ಕೆ 'ನೀಟ್' ಅನಿವಾರ್ಯವೇ, ಬದಲಾವಣೆ ಬೇಕೆ?

ಮಧ್ಯಾಹ್ನ 3 ಗಂಟೆಗೆ

ಭಾಗವಹಿಸುವವರು:

ಡಾ.ಕೆ.ಎಸ್.ರವೀಂದ್ರನಾಥ್, ವಿಶ್ರಾಂತ ಕುಲಪತಿ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ

ಡಾ.ಜಿ.ಎಸ್.ವೆಂಕಟೇಶ್, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮಾಜಿ ನಿರ್ದೇಶಕ ಹಾಗೂ ಎಂ.ಎಸ್.ರಾಮಯ್ಯ ಸಮೂಹ ಸಂಸ್ಥೆಗಳ ಸಲಹೆಗಾರ

ಡಾ.ಶ್ರೀನಿವಾಸ ಕಕ್ಕಿಲಾಯ, ವೈದ್ಯರು ಮತ್ತು ಸಾಮಾಜಿಕ ಕಾರ್ಯಕರ್ತ

ಪಿಯು ವಿದ್ಯಾರ್ಥಿಗಳಿಗಾಗಿ

ಆನ್‌ಲೈನ್ ಬೋಧನಾ ಸರಣಿ

ಇಂಗ್ಲಿಷ್ ಟಿಪ್ಸ್

ಟಿ.ವಿ. ಸುಬ್ಬರಾಜು, ಇಂಗ್ಲಿಷ್ ಉಪನ್ಯಾಸಕರು, ದಾವಣಗೆರೆ

ಸಂಜೆ 4 ರಿಂದ 6 ರವರೆಗೆ

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, **ಸಂಪಾದಕೀಯ:** ಬೆಳಿಗ್ಗೆ 9.30, **ಪ್ರಜಾವಾಣಿ ವಾರ್ತೆ:** ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8, **ಪ್ರಜಾಮತ:** ಚುನಾವಣೆ ವಾರ್ತೆ ರಾತ್ರಿ 9

ನಿಧನ ವಾರ್ತೆ

ಪಾಣಕ್ಕಾಡ್ ಹೈದರಲಿ ಶಿಹಾಬ್ ತಂಙಳ್

ಕೊಚ್ಚಿ: ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಕೇರಳ ರಾಜ್ಯ ಘಟಕ ಅಧ್ಯಕ್ಷ ಪಾಣಕ್ಕಾಡ್ ಹೈದರಲಿ ಶಿಹಾಬ್ ತಂಙಳ್ (74) ಅವರು ಭಾನುವಾರ ನಿಧನರಾದರು.

ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರು ಅಂಗಮಾಲಿಯ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೈದರಲಿ ಅವರ ಪಾರ್ಥಿವ ಶರೀರವನ್ನು ಮಲಪ್ಪುರಕ್ಕೆ ಕೊಂಡೊಯ್ದು ಅಲ್ಲಿನ ಪುರಭವನ ದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. ಸೋಮವಾರ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಐಯುಎಂಎಲ್ ವಕ್ತಾರರು ತಿಳಿಸಿದ್ದಾರೆ.

ಹೈದರಲಿ ಅವರು ಕಳೆದ 12 ವರ್ಷಗಳಿಂದ ಐಯುಎಂಎಲ್ ರಾಜ್ಯ ಘಟಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

2030: ವೃದ್ಧರೇ ಹೆಚ್ಚು ಯುವಶಕ್ತಿಗೆ ಕುತ್ತು

18–23 ವರ್ಷದೊಳಗಿನವರ ಸಂಖ್ಯೆ

ವರ್ಷ	ದೇಶದಲ್ಲಿ (ಕೋಟಿಗಳಲ್ಲಿ)	ರಾಜ್ಯದಲ್ಲಿ (ಲಕ್ಷಗಳಲ್ಲಿ)
2012-13	14.06	73.32
2014-15	14.10	71.92
2016-17	14.15	70.52
2017-18	14.18	69.83
2018-19	14.21	69.13
2019-20	14.23	68.43
(7 ವರ್ಷಗಳ ಸಿಎಜಿಆರ್)	0.2%	-1.0%

(* ಸಿಎಜಿಆರ್: ವಾರ್ಷಿಕ ಬೆಳವಣಿಗೆಯ ಸಂಯುಕ್ತ ದರ)

ಒಟ್ಟು ಫಲವಂತಿಕೆ ದರ (ಟಿಎಫ್‌ಆರ್)

ಎನ್‌ಎಫ್‌ಎಚ್‌ಎಸ್ (ವರ್ಷ)	ದೇಶದ್ದು (%)	ರಾಜ್ಯದ್ದು (%)
ಎನ್‌ಎಫ್‌ಎಚ್‌ಎಸ್-1 (1992-93)	3.39	2.85
ಎನ್‌ಎಫ್‌ಎಚ್‌ಎಸ್-2 (1998-99)	2.85	2.13
ಎನ್‌ಎಫ್‌ಎಚ್‌ಎಸ್-3 (2005-06)	2.7	2.1
ಎನ್‌ಎಫ್‌ಎಚ್‌ಎಸ್-4 (2015-16)	2.2	1.8
ಎನ್‌ಎಫ್‌ಎಚ್‌ಎಸ್-5 (2019-21)	2.0	1.7

ಒಂದನೇ ಪುಟದಿಂದ...

ರಾಜ್ಯದಲ್ಲಿ 18ರಿಂದ 23 ವರ್ಷದೊಳಗಿನವರ ಸಂಖ್ಯೆ ಪ್ರತಿ ವರ್ಷವೂ ಶೇ –1ರಷ್ಟು ಕ್ಷೀಣಿಸುತ್ತಿದೆ. 2013ರಲ್ಲಿ ಈ ವಯೋಮಾನದವರ ಸಂಖ್ಯೆ 73.3 ಲಕ್ಷ ಇದ್ದುದು 2020ರಲ್ಲಿ 68.4 ಲಕ್ಷಕ್ಕೆ ಕುಸಿದಿದೆ. ಆದರೆ, ಈ ಅವಧಿಯಲ್ಲಿ ದೇಶದಲ್ಲಿ ಈ ವಯೋಮಾನದವರ ಸಂಖ್ಯೆ ಶೇ 0.2ರಷ್ಟು ಹೆಚ್ಚಳ ಕಂಡಿದೆ ಎಂಬುದು ಗಮನಾರ್ಹ.

ರಾಜ್ಯದ ಟಿಎಫ್‌ಆರ್ ದೇಶದ ದರಕ್ಕಿಂತಲೂ ವೇಗವಾಗಿ ಕುಸಿತ ಕಾಣುತ್ತಿದೆ. 1992–93ರಲ್ಲಿ ದೇಶದ ಟಿಎಫ್‌ಆರ್ ಶೇ 3.4 ಇದ್ದಾಗ, ರಾಜ್ಯದ ದರವು ಶೇ 2.85ರಷ್ಟಿತ್ತು. 2019–20ರಲ್ಲಿ ರಾಜ್ಯದ ಟಿಎಫ್‌ಆರ್ ಶೇ 1.7ಕ್ಕೆ ಇಳಿದಿದೆ. ಅಂದರೆ ಈ ಕುಸಿತ ಈಗಲೂ ನಿಂತಿಲ್ಲ. ನಾಗರಿಕ ನೋಂದಣಿ ದಾಖಲಾತಿಯ ಅಂಕಿ ಅಂಶಗಳೂ ಇದನ್ನು ಪುಷ್ಟೀಕರಿಸುತ್ತಿವೆ. ಇದು 2030ರ ವೇಳೆಗೆ ಶೇ 1.5ಕ್ಕೆ ಇಳಿಯಬಹುದು ಎಂದು ಅಂದಾಜಿಸಲಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ ಮರಣ ಪ್ರಮಾಣ ಏರಿಕೆ ಕಾಣುತ್ತಿದೆ. ಜನನ ಪ್ರಮಾಣದ ಕುಸಿತ ಹಾಗೂ ಮರಣ ದರ ಹೆಚ್ಚಳ ಇದೇ ರೀತಿ ಮುಂದುವರಿದರೆ 2030ರ ವೇಳೆಗೆ ರಾಜ್ಯದಲ್ಲಿ ವರ್ಷವೊಂದಕ್ಕೆ 10.2 ಲಕ್ಷ ಶಿಶುಗಳು ಜನಿಸಿದರೆ, ವಾರ್ಷಿಕ ಸಾವಿನ ಪ್ರಮಾಣ 12 ಲಕ್ಷದಷ್ಟು ಇರಲಿದೆ ಎಂದು ವಿಶ್ಲೇಷಿಸಲಾಗಿದೆ.

ಟಿಎಫ್‌ಆರ್ ಕುಸಿತದಿಂದ ದುಡಿಯುವ ಕೈಗಳ ಸಂಖ್ಯೆಯೂ ಕಡಿಮೆ ಆಗಲಿದೆ. ಇಂತಹ ಪರಿಸ್ಥಿತಿ ನಿಭಾಯಿಸುವುದಕ್ಕೆ ಸಾಮಾಜಿಕ ಭದ್ರತೆ ಹೆಚ್ಚಿಸುವ ಕಾರ್ಯಕ್ರಮಗಳ ಅಗತ್ಯವಿದೆ. ಕೌಶಲಯುತ ದುಡಿಯುವ ವರ್ಗವನ್ನು ರೂಪಿಸುವುದಕ್ಕೂ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಆರ್ಥಿಕ ಸಮೀಕ್ಷೆ ಸಲಹೆ ನೀಡಿದೆ.

ಶಿಯಾ ಮಸೀದಿ ಆತ್ಮಾಹುತಿ ಬಾಂಬರ್ ಜಾಲ ಪತ್ತೆ: ಪಾಕ್

ಪೆಶಾವರ(ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಶಿಯಾ ಮಸೀದಿಯಲ್ಲಿ 63 ಜನರ ಸಾವು ಮತ್ತು 200ಕ್ಕೂ ಹೆಚ್ಚು ಮಂದಿ ಗಾಯಗೊಂಡ ಘಟನೆಗೆ ಕಾರಣವಾದ ಆತ್ಮಾಹುತಿ ದಾಳಿ ನಡೆಸಿದ ಜಾಲವನ್ನು ಭೇದಿಸಿರುವುದಾಗಿ ಪಾಕಿಸ್ತಾನದ ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರವಷ್ಟೇ ಐ.ಎಸ್ ಖೊರಾಸನ್ ಉಗ್ರ ಸಂಘಟನೆಗೆ ಸೇರಿದ ಆತ್ಮಾಹುತಿ ಬಾಂಬರ್ ಪೆಶಾವರದಲ್ಲಿರುವ ಮಸೀದಿಯಲ್ಲಿ ತನ್ನನ್ನು ತಾನೇ ಸ್ಫೋಟಿಸಿಕೊಂಡಿದ್ದ. ಈ ಘಟನೆಯಲ್ಲಿ 63 ಜನ ಸಾವನ್ನಪ್ಪಿ, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು. ಈ ದಾಳಿಗೆ ಸಹಕರಿಸಿದ್ದಾರೆ ಎನ್ನಲಾದ ಆಟೋ ಚಾಲಕ ಮತ್ತು ಬಾಂಬ್ ದಾಳಿಗೆ ವ್ಯವಸ್ಥೆ ಮಾಡಿಕೊಟ್ಟವರನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಶೀಘ್ರವೇ ಆರೋಪಿಗಳನ್ನು ಬಂಧಿಸಲಿದ್ದಾರೆ ಎಂದು ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಮುಖ್ಯಮಂತ್ರಿಯ ಸಲಹೆಗಾರ ತಿಳಿಸಿದ್ದಾರೆ.

ಈ ಪ್ರಕರಣ ಸಂಬಂಧ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದ ಪೊಲೀಸರು, ಬಳಿಕ ಈ ಪ್ರಕರಣವನ್ನು ಭಯೋತ್ಪಾದನಾ ನಿಗ್ರಹ ಇಲಾಖೆಗೆ ವರ್ಗಾವಣೆ ಮಾಡಿದ್ದರು. ಘಟನಾ ಸ್ಥಳದಲ್ಲಿ 9 ಬುಲೆಟ್‌ಗಳು ಪತ್ತೆಯಾಗಿದ್ದು, ಆತ್ಮಾಹುತಿ ದಾಳಿಕೋರ ತನ್ನನ್ನು ಸ್ಫೋಟಿಸಿಕೊಳ್ಳುವ ಮುನ್ನ 9 ಎಂಎಂ ಪಿಸ್ತೂಲ್ ಬಳಸಿದ್ದ ಎಂದು ಹೇಳಲಾಗಿದೆ.

ಕರ್ನಾಟಕ: ಕೋವಿಡ್‌ನಿಂದ 39,952 ಮಂದಿ ಸಾವು

ಪರಿಹಾರ ತಿರಸ್ಕರಿಸಿದ 899 ಕುಟುಂಬ: 'ಸುಪ್ರೀಂ'ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜ್ಯದಲ್ಲಿ ಕೋವಿಡ್‌ನಿಂದಾಗಿ ಮೃತಪಟ್ಟವರ ಕುಟುಂಬಗಳಿಗೆ ₹ 50 ಸಾವಿರ ಪರಿಹಾರ ವಿತರಿಸಲಾಗುತ್ತಿದೆ. 899 ಕುಟುಂಬಗಳು ಈ ಪರಿಹಾರವನ್ನು ತಿರಸ್ಕರಿಸಿವೆ' ಎಂದು ಕರ್ನಾಟಕ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಈ ಕುಟುಂಬಗಳು ಪರಿಹಾರವನ್ನು ತಿರಸ್ಕರಿಸಲು ಕಾರಣಗಳೇನು ಎಂಬ ಬಗ್ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿಲ್ಲ.

'ಈ ವರ್ಷ ಮಾರ್ಚ್ 1ರ ವರೆಗೆ ರಾಜ್ಯದಲ್ಲಿ ಕೋವಿಡ್‌ನಿಂದಾಗಿ 39,952 ಮಂದಿ ಸಾವನ್ನಪ್ಪಿದ್ದಾರೆ. 188 ಮಕ್ಕಳು ಅನಾಥರಾಗಿದ್ದಾರೆ' ಎಂದು ಸರ್ಕಾರ ತಿಳಿಸಿದೆ.

'ಪರಿಹಾರಧನ ನೀಡುವ ಸಂಬಂಧ 31,789 ಸಂತ್ರಸ್ತ ಕುಟುಂಬಗಳನ್ನು ಸಂಪರ್ಕಿಸಲಾಗಿದೆ. ಈ ಪೈಕಿ 28,270 ಕುಟುಂಬಗಳು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿವೆ'.

'ಉಳಿದ 3,519 ಪ್ರಕರಣಗಳಲ್ಲಿ, 1,955 ಸಂತ್ರಸ್ತ ಕುಟುಂಬಗಳು ಪತ್ತೆಯಾಗಿಲ್ಲ. 146 ಸಾವುಗಳಿಗೆ ಸಂಬಂಧಿಸಿ ವಾರಸುದಾರರು ಪತ್ತೆಯಾಗಿಲ್ಲ ಹಾಗೂ ಮೃತಪಟ್ಟಿರುವ 159 ಮಂದಿ ಬೇರೆ ರಾಜ್ಯಗಳಿಗೆ ಸೇರಿದವರಾಗಿದ್ದರು' ಎಂದೂ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ವಿತರಿಸಲಾಗುವ ಪರಿಹಾರಧನಕ್ಕೆ ಸಂಬಂಧಿಸಿ ವಕೀಲ ಗೌರವಕುಮಾರ್ ಬನ್ಸಲ್ ಎಂಬುವವರು ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು. ಪಿಐಎಲ್‌ಗೆ ಸಂಬಂಧಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಅಫಿಡವಿಟ್‌ನಲ್ಲಿ ಈ ಮಾಹಿತಿಯನ್ನು ಒದಗಿಸಲಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಥಮ ಪುಣ್ಯಸ್ಮರಣೆ

ಶ್ರೀಮತಿ ಸುಶೀಲಮ್ಮನವರು
(ಲೇಟ್ ಶ್ರೀ ಎನ್.ಸಿ.ಬಸವರಾಜುರವರ ಧರ್ಮಪತ್ನಿ, ನಾಗದಾಸನಹಳ್ಳಿ, ಯಲಹಂಕ ತಾಲ್ಲೂಕು, ಬೆಂಗಳೂರು)
ನೀವು ಸ್ವರ್ಗಸ್ಥರಾಗಿ ಇಂದಿಗೆ ಒಂದು ವರ್ಷವಾಯಿತು. ನಿಮ್ಮ ಸವಿನೆನಪು, ಸರಳ-ಸಜ್ಜನಿಕೆಯ ಜೀವನ, ಮಾರ್ಗದರ್ಶನ ನಮಗೆಲ್ಲಾ ಅವಿಸ್ಮರಣೀಯ. ಭಗವಂತನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ..
ಇಂತಿ: ದಿವಂಗತ ಶ್ರೀ.ಎನ್.ಸಿ. ಬಸವರಾಜು ಕುಟುಂಬವರ್ಗ.

ಎಫ್‌ಪಿಐ: 3 ದಿನಗಳ ವಹಿವಾಟಿನಲ್ಲಿ ₹ 17,537 ಕೋಟಿ ಹೊರಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮಾರ್ಚ್ 2 ರಿಂದ 4ರವರೆಗಿನ ಮೂರು ದಿನಗಳ ವಹಿವಾಟು ಅವಧಿಗಳಲ್ಲಿ ದೇಶದ ಮಾರುಕಟ್ಟೆಗಳಿಂದ ₹ 17,537 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಹೂಡಿಕೆದಾರರು ₹ 14,721 ಕೋಟಿ ಮೌಲ್ಯದ ಷೇರುಗಳನ್ನು, ₹ 2,808 ಕೋಟಿ ಮೌಲ್ಯದ ಸಾಲಪತ್ರಗಳನ್ನು ಹಾಗೂ ₹ 9 ಕೋಟಿ ಮೌಲ್ಯದ ಹೈಬ್ರಿಡ್ ಫಂಡ್‌ಗಳನ್ನು ಮಾರಾಟ ಮಾಡಿದ್ದಾರೆ.

ಫೆಬ್ರುವರಿಯಲ್ಲಿ ಬಂಡವಾಳ ಮಾರುಕಟ್ಟೆಯಿಂದ ₹ 35 ಸಾವಿರ ಕೋಟಿಗೂ ಅಧಿಕ ಮೊತ್ತವನ್ನು ಹೂಡಿಕೆದಾರರು ಹಿಂದಕ್ಕೆ ಪಡೆದಿದ್ದರು.

ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷ ಹಾಗೂ ಕಚ್ಚಾತೈಲ ದರ ಏರಿಕೆಯಿಂದ ಎದುರಾಗಿರುವ ಅನಿಶ್ಚಿತ ಸ್ಥಿತಿಯು ಹೂಡಿಕೆದಾರರ ಭಾವನೆಗಳನ್ನು ಕುಗ್ಗಿಸಿದೆ. ಹೀಗಾಗಿ ಬಂಡವಾಳ ಹಿಂತೆಗೆತ ಕಂಡುಬರುತ್ತಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ರಷ್ಯಾ – ಉಕ್ರೇನ್ ಸಂಘರ್ಷದಿಂದಾಗಿ ಮುಂಬರುವ ತಿಂಗಳುಗಳಲ್ಲಿಯೂ ವಿದೇಶಿ ಬಂಡವಾಳ ಒಳಹರಿವು ಅಸ್ಥಿರವಾಗಿರಲಿದೆ. ಹಣದುಬ್ಬರ ಏರಿಕೆ ಮತ್ತು ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿದರ ಏರಿಕೆ ಮಾಡುವ ಸಾಧ್ಯತೆಯು ಸಹ ಬಂಡವಾಳ ಒಳಹರಿವಿನ ಮೇಲೆ ಪರಿಣಾಮ ಉಂಟುಮಾಡಲಿವೆ ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ತಿಳಿಸಿದ್ದಾರೆ.

ಪೇಟೆ ಕುಸಿದಾಗ 'ಎಸ್‌ಐಪಿ' ನಿಲ್ಲಿಸಬೇಕೆ?

ಹಣಕಾಸು ಸಾಕ್ಷರತೆ

ಪ್ರಮೋದ್ ಬಿ.ಪಿ.

2021ರ ಅಕ್ಟೋಬರ್‌ನಲ್ಲಿ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟ ಅಂದ್ರೆ 62,245 ಅಂಶಗಳನ್ನು ತಲುಪಿತ್ತು. ಈಗ ಸೆನ್ಸೆಕ್ಸ್ 54,000 ಅಂಶಗಳ ಅಸುಪಾಸಿನಲ್ಲಿದ್ದು ಮತ್ತಷ್ಟು ಕುಸಿತ ಉಂಟಾಗಬಹುದೇ ಎಂಬ ಪ್ರಶ್ನೆ ಹೂಡಿಕೆದಾರರಲ್ಲಿ ಮೂಡಿದೆ. 2021ರ ಅಕ್ಟೋಬರ್‌ನಿಂದ 2022ರ ಫೆಬ್ರುವರಿವರೆಗೆ ಸುಮಾರು ಐದು ತಿಂಗಳ ಅವಧಿಯಲ್ಲಿ ಸೆನ್ಸೆಕ್ಸ್ ಸುಮಾರು 8,000 ಅಂಶಗಳ ಕುಸಿತ ಕಂಡಿದೆ. ರಷ್ಯಾ – ಉಕ್ರೇನ್ ಬಿಕ್ಕಟ್ಟು ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬರುತ್ತಿರುವ ಹಿಂಜರಿಕೆಯಿಂದಾಗಿ ಹೂಡಿಕೆದಾರರಲ್ಲಿ ಮುಂದೇನಾಗುವುದೋ ಎನ್ನುವ ಆತಂಕ ಮನೆ ಮಾಡಿದೆ. ಪರಿಸ್ಥಿತಿ ಹೀಗಿರುವಾಗ ಮ್ಯೂಚುಯಲ್ ಫಂಡ್ ಹೂಡಿಕೆದಾರರು ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಸ್ಥಗಿತಗೊಳಿಸಬೇಕೆ? ಮುಂದುವರಿಸಬೇಕೆ? ಎಂಬ ಗೊಂದಲದಲ್ಲಿದ್ದಾರೆ. ಈ ನಿಟ್ಟಿನಲ್ಲಿ ಪೂರಕ ಮಾಹಿತಿ ಇಲ್ಲಿದೆ.

ಎಸ್‌ಐಪಿ ಅಂದ್ರೆ?: ಕ್ರಮಬದ್ಧವಾಗಿ ಹೂಡಿಕೆ ಮಾಡುಬೇಕು ಎನ್ನುವವರಿಗೆ 'ಎಸ್‌ಐಪಿ' ವಿಧಾನ ಒಳ್ಳೆಯ ಆಯ್ಕೆ. ಕನ್ನಡದಲ್ಲಿ 'ಎಸ್‌ಐಪಿ'ಯನ್ನು ವ್ಯವಸ್ಥಿತ ಹೂಡಿಕೆ ಯೋಜನೆ ಎಂದು ಕರೆಯಬಹುದು. ಇದು ಹೂಡಿಕೆಯ ಉತ್ಪನ್ನವಲ್ಲ ಹೂಡಿಕೆಯ ವಿಧಾನ. ಪೂರ್ವನಿಗದಿತ ದಿನದಂದು, ಪೂರ್ವ ನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ಹೂಡಿಕೆ ಉತ್ಪನ್ನವೊಂದಕ್ಕೆ ವ್ಯವಸ್ಥಿತವಾಗಿ ವರ್ಗಾಯಿಸುವ ವಿಧಾನವೇ 'ಎಸ್‌ಐಪಿ' ಅರ್ಥಾತ್ ವ್ಯವಸ್ಥಿತ ಹೂಡಿಕೆ ಯೋಜನೆ. ಮ್ಯೂಚುಯಲ್ ಫಂಡ್ ಹೂಡಿಕೆಗಳಲ್ಲಿ ಈ ವಿಧಾನ ಹೆಚ್ಚು ಚಾಲ್ತಿಯಲ್ಲಿದೆ. ಉದಾಹರಣೆಗೆ ಮ್ಯೂಚುಯಲ್ ಫಂಡ್‌ವೊಂದರಲ್ಲಿ ಪ್ರತಿ ತಿಂಗಳ 10 ರಂದು ನೀವು ₹ 2 ಸಾವಿರ ಹೂಡಿಕೆ ಮಾಡಲು ನಿರ್ಧರಿಸಿದ್ದರೆ ಪ್ರತಿ ತಿಂಗಳು ಅದನ್ನು ನಿಯಮಿತವಾಗಿ ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆಯನ್ನು ಎಸ್‌ಐಪಿ ಎನ್ನಬಹುದು.

ಎಸ್‌ಐಪಿ ನಿಲ್ಲಿಸಬೇಕೇ?: ಮ್ಯೂಚುಯಲ್ ಫಂಡ್‌ಗಳ ಮೇಲೆ ಷೇರು ಮಾರುಕಟ್ಟೆಯ ಏರಿಳಿತ ಮತ್ತು ಅರ್ಥ ವ್ಯವಸ್ಥೆಯ ಸ್ಥಿತಿಗಳು ಪ್ರಭಾವ ಬೀರುತ್ತವೆ. ಒಮ್ಮೆಲೆ ಮಾರುಕಟ್ಟೆ ಕುಸಿದಾಗ ಮ್ಯೂಚುಯಲ್ ಫಂಡ್ ಹೂಡಿಕೆದಾರರು ತಾತ್ಕಾಲಿಕ ನಷ್ಟ ಅನುಭವಿಸುವಂತಾಗುತ್ತದೆ. ಮ್ಯೂಚುಯಲ್ ಫಂಡ್‌ನ 'ಎನ್‌ಎವಿ' (ನಿವ್ವಳ ಆಸ್ತಿ ಮೌಲ್ಯ) ತಗ್ಗುತ್ತಾ ಹೋದಂತೆ ಹೂಡಿಕೆದಾರರು ಚಿಂತೆಗೀಡಾಗುತ್ತಾರೆ. ಆದರೆ ಮಾರುಕಟ್ಟೆ ಕುಸಿದ ತಕ್ಷಣ ಮ್ಯೂಚುವಲ್ ಫಂಡ್ ಹೂಡಿಕೆಯಿಂದ ಹೊರಬರಲು ಪ್ರಯತ್ನಿಸಿದರೆ ನಿಮ್ಮ ನಷ್ಟದ ಪ್ರಮಾಣ ಮತ್ತಷ್ಟು ಜಾಸ್ತಿಯಾಗುತ್ತದೆ.

ಉದಾಹರಣೆ: ನೀವು ತಿಂಗಳಿಗೆ ₹ 3 ಸಾವಿರದಂತೆ ಕಳೆದ 12 ತಿಂಗಳ ಅವಧಿಯಲ್ಲಿ ಎಸ್‌ಐಪಿ ಮೂಲಕ ಮ್ಯೂಚುಯಲ್ ಫಂಡ್‌ನಲ್ಲಿ ಒಟ್ಟು ₹ 36 ಸಾವಿರ ಹೂಡಿಕೆ ಮಾಡಿದ್ದೀರಿ ಎಂದಿಟ್ಟುಕೊಳ್ಳೋಣ. ಮೇಲಿಂದ ಮೇಲೆ ಷೇರು ಮಾರುಕಟ್ಟೆ ಕುಸಿದ ತಕ್ಷಣ ನಿಮ್ಮ ಹೂಡಿಕೆ ₹ 28 ಸಾವಿರಕ್ಕೆ ಬರುತ್ತದೆ ಎಂದು ಭಾವಿಸೋಣ. ಹೀಗಾದಾಗ ನೀವು ಹೂಡಿಕೆ ಹಿಂಪಡೆದರೆ ನಿಮಗೆ ಒಂದೇ ಬಾರಿ ₹ 8 ಸಾವಿರ ನಷ್ಟವಾಗುತ್ತದೆ. ಹೂಡಿಕೆ ಹೊರತೆಗೆಯುವ ಬದಲು ಎಸ್‌ಐಪಿ ಹೂಡಿಕೆ ಮುಂದುವರಿಸಿ ಮಾರುಕಟ್ಟೆ ಉತ್ತಮ ಸ್ಥಿತಿಯಲ್ಲಿದ್ದಾಗ ಹೂಡಿಕೆಯಿಂದ ಹೊರಬಂದರೆ ಹೆಚ್ಚು ಲಾಭ ಸಿಗುತ್ತದೆ. ಬಹುತೇಕರು ಈ ಮುಂದಾಲೋಚನೆ ಮಾಡದೆ ಈಕ್ವಿಟಿ ಮ್ಯೂಚುಯಲ್ ಫಂಡ್ ಹೂಡಿಕೆಯಿಂದ ದಿಢೀರ್ ಹೊರಬಂದು ನಷ್ಟ ಅನುಭವಿಸುತ್ತಾರೆ.

ಮಾರುಕಟ್ಟೆ ಕುಸಿದಾಗ ಕಡಿಮೆ ಬೆಲೆಗೆ ಹೆಚ್ಚು ಯುನಿಟ್: ಮಾರುಕಟ್ಟೆ ಕುಸಿದಾಗ ಮ್ಯೂಚುಯಲ್ ಫಂಡ್‌ಗಳ 'ಎನ್‌ಎವಿ' ತಗ್ಗುತ್ತದೆ. ಈ ಸ್ಥಿತಿಯಲ್ಲಿ ನೀವು ಎಸ್‌ಐಪಿ ಮೂಲಕ ಹೆಚ್ಚು ಮ್ಯೂಚುಯಲ್ ಫಂಡ್ ಯುನಿಟ್‌ಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ಬಳಿ ಹೆಚ್ಚು ಯುನಿಟ್‌ಗಳಿದ್ದರೆ ಮಾರುಕಟ್ಟೆ ಪುಟಿದೆದ್ದಾಗ ನಿಮಗೆ ಹೆಚ್ಚು ಲಾಭಾಂಶ ಸಿಗುತ್ತದೆ. ಹಾಗಾಗಿ ಸಾಧ್ಯವಾದರೆ ಇನ್ನಷ್ಟು ಹೂಡಿಕೆ ಮಾಡಲು ಪ್ರಯತ್ನಿಸಬೇಕೇ ಹೊರತು ಎಸ್‌ಐಪಿಗಳನ್ನು ಸ್ಥಗಿತಗೊಳಿಸಬಾರದು.

ಎಸ್‌ಐಪಿಯಲ್ಲಿ ಪ್ರತಿ ತಿಂಗಳು ತೊಡಗಿಸಿದ ಹಣ ಆಯಾಯ ತಿಂಗಳಲ್ಲಿ ಕಟ್ಟಿದ ತಾರೀಕಿಗೆ ಅನುಗುಣವಾಗಿ ವಾರ್ಷಿಕ ಸರಾಸರಿ ಲೆಕ್ಕಕ್ಕೆ ಒಳಪಡುವುದರಿಂದ ನಷ್ಟ ಸಂಭವಿಸುವ ಸಾಧ್ಯತೆ ಬಹಳ ಕಡಿಮೆ ಇರುತ್ತದೆ. ಎಸ್‌ಐಪಿ ನಿಲ್ಲಿಸಬಾರದು ಎನ್ನುವುದಕ್ಕೆ ಇದು ಕೂಡ ಒಂದು ಪ್ರಮುಖ ಕಾರಣ.

ಈ ಅಂಶಗಳು ನೆನಪಿರಲಿ:

- ಮಾರುಕಟ್ಟೆ ಕುಸಿಯುವಾಗ ಎಸ್‌ಐಪಿಯಿಂದ ಹೊರಬಂದರೆ ಒಳ್ಳೆಯ ಅವಕಾಶ ಕಳೆದುಕೊಂಡಂತೆ
- ಮಾರುಕಟ್ಟೆ ಏರಿಳಿತ ಮ್ಯೂಚುಯಲ್ ಫಂಡ್ ಹೂಡಿಕೆಯ ಭಾಗ ಎನ್ನುವುದು ಗೊತ್ತಿರಲಿ
- ಮಾರುಕಟ್ಟೆ ಕುಸಿದ ತಕ್ಷಣ ನಿಮ್ಮ ಮ್ಯೂಚುಯಲ್ ಫಂಡ್ ಹೂಡಿಕೆ ಸಂಪೂರ್ಣ ನಷ್ಟವಾಗುವುದಿಲ್ಲ
- ದೀರ್ಘಾವಧಿಯಲ್ಲಿ ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳು ಶೇ 12 ರಿಂದ ಶೇ 16 ರ ವರೆಗೆ ಲಾಭಾಂಶ ಕೊಟ್ಟಿವೆ.
- ಮಾರುಕಟ್ಟೆ ಕುಸಿದಾಗ ಮ್ಯೂಚುಯಲ್ ಫಂಡ್‌ನಿಂದ ಹೊರಬರುವುದು ಅತಿ ದೊಡ್ಡ ಹೂಡಿಕೆ ತಪ್ಪು

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ. ಲಿ.ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಸತತ 4ನೇ ವಾರ ಷೇರುಪೇಟೆ ಕುಸಿತ

ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರ ಕುಸಿತ ಕಂಡಿವೆ. ಮಾರ್ಚ್ 4 ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ 54,333 ಅಂಶಗಳಲ್ಲಿ ವಹಿವಾಟು ಮುಗಿಸಿದ್ದು ಶೇ 2.72 ರಷ್ಟು ತಗ್ಗಿದೆ. 16,245 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.47 ರಷ್ಟು ಇಳಿಕೆಯಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವೆ ಎದುರಾಗಿರುವ ಬಿಕ್ಕಟ್ಟಿನ ಕಾರಣ ಷೇರುಪೇಟೆಯಲ್ಲಿ ಅನಿಶ್ಚಿತತೆ ಹೆಚ್ಚಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 22,563.08 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹ 16,742.75 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ವಲಯವಾರು ಪ್ರಗತಿಯಲ್ಲಿ ಬಿಎಸ್ ಸಿ ವಾಹನ ಸೂಚ್ಯಂಕ ಶೇ 9 ರಷ್ಟು ಕುಸಿದಿದೆ. ಬ್ಯಾಂಕಿಂಗ್ ಸೂಚ್ಯಂಕ ಶೇ 5.5 ರಷ್ಟು ತಗ್ಗಿದೆ. ಟೆಲಿಕಾಂ ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕ ತಲಾ ಶೇ 4 ರಷ್ಟು ಇಳಿಕೆಯಾಗಿವೆ. ಮತ್ತೊಂದೆಡೆ ಲೋಹ ಸೂಚ್ಯಂಕ ಶೇ 8 ಮತ್ತು ತೈಲ ಮತ್ತು ಅನಿಲ ಸೂಚ್ಯಂಕ ಶೇ 5 ರಷ್ಟು ಜಿಗಿದಿವೆ.

ಗಳಿಕೆ – ಇಳಿಕೆ: ನಿಫ್ಟಿಯಲ್ಲಿ ಮಾರುತಿ ಶೇ 13, ಏಶಿಯನ್ ಪೇಂಟ್ಸ್ ಶೇ 12, ಐಷರ್ ಶೇ 11, ಹಿರೋ ಮೋಟೋ ಕಾರ್ಪ್ ಶೇ 10, ಮತ್ತು ಡಾ. ರೆಡ್ಡಿಸ್ ಲ್ಯಾಬ್ಸ್ ಶೇ 9 ರಷ್ಟು ಕುಸಿದಿವೆ. ಟಾಟಾ ಸ್ಟೀಲ್ ಶೇ 12, ಕೋಲ್ ಇಂಡಿಯಾ ಶೇ 11, ಯುಪಿಎಲ್ ಶೇ 9 ಮತ್ತು ಹಿಂಡಾಲ್ಕೋ ಶೇ 9 ರಷ್ಟು ಜಿಗಿದಿವೆ.

ಮುನ್ನೋಟ: ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟು ಯಾವ ತಿರುವು ಪಡೆಯಲಿದೆ ಎನ್ನುವುದು ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿದೆ. ಮಾರ್ಚ್ 10 ರಂದು ಉತ್ತರಪ್ರದೇಶ ಚುನಾವಣೆ ಫಲಿತಾಂಶ ಹೊರಬೀಳಲಿದೆ. ಚುನಾವಣೆ ಬಳಿಕ ಪೆಟ್ರೋಲ್ ದರದಲ್ಲಿ ಹೆಚ್ಚಳವಾಗುವ ಸಾಧ್ಯತೆಯಿದೆ ಎನ್ನಲಾಗಿದೆ. ಇದಲ್ಲದೆ ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರದಲ್ಲಿ 25 ಮೂಲಾಂಶದಷ್ಟು ಏರಿಕೆ ಮಾಡುವ ನಿರೀಕ್ಷೆಯಿದೆ. ಇವೆಲ್ಲಾ ಅಂಶಗಳು ಮಾರುಕಟ್ಟೆಯ ದಿಕ್ಕು ನಿರ್ಧರಿಸಲಿವೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಜಿಎಸ್‌ಟಿ ಮಂಡಳಿಗೆ ರಾಜ್ಯ ಹಣಕಾಸು ಸಚಿವರುಗಳ ಸಮಿತಿ ಪ್ರಸ್ತಾವ

ಜಿಎಸ್‌ಟಿ ತೆರಿಗೆ ಹಂತ ಬದಲಾವಣೆ ಸಾಧ್ಯತೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯು ತನ್ನ ಮುಂದಿನ ಸಭೆಯಲ್ಲಿ ಕಡಿಮೆ ಹಂತದ ತೆರಿಗೆ ದರವನ್ನು ಈಗಿರುವ ಶೇ 5ರ ಬದಲಿಗೆ ಶೇ 8ಕ್ಕೆ ನಿಗದಿಪಡಿಸುವ ಬಗ್ಗೆ ಪರಿಶೀಲನೆ ನಡೆಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ವರಮಾನ ಸಂಗ್ರಹ ಹೆಚ್ಚಿಸಲು ಇರುವ ಮಾರ್ಗಗಳ ಕುರಿತಾಗಿ ರಾಜ್ಯ ಹಣಕಾಸು ಸಚಿವರ ಸಮಿತಿಯು ವರದಿ ಸಿದ್ಧಪಡಿಸಿದ್ದು, ಈ ತಿಂಗಳ ಅಂತ್ಯದ ಒಳಗಾಗಿ ಜಿಎಸ್‌ಟಿ ಮಂಡಳಿಗೆ ಅದನ್ನು ಸಲ್ಲಿಸುವ ನಿರೀಕ್ಷೆ ಇದೆ. ಜಿಎಸ್‌ಟಿ ಮಂಡಳಿಯು ಇದೇ ತಿಂಗಳು ಅಥವಾ ಮುಂದಿನ ತಿಂಗಳ ಆರಂಭದಲ್ಲಿ ಸಭೆ ಸೇರಬಹುದು ಎಂದು ಮೂಲಗಳು ತಿಳಿಸಿವೆ.

ಸದ್ಯ ಶೇ 5, ಶೇ 12, ಶೇ 18, ಶೇ 28 ಹೀಗೆ ನಾಲ್ಕು ಹಂತದ ತೆರಿಗೆ ದರಗಳಿವೆ. ಇವುಗಳಲ್ಲಿ ಅತ್ಯಂತ ಕಡಿಮೆ ಹಂತದ ಶೇ 5ರ ತೆರಿಗೆ ದರವನ್ನು ಶೇ 8ಕ್ಕೆ ನಿಗದಿಪಡಿಸುವ ಕುರಿತು ಸಮಿತಿಯು ಪ್ರಸ್ತಾಪಿಸುವ ಸಾಧ್ಯತೆ ಇದೆ. ಹೀಗೆ ಮಾಡುವುದರಿಂದ ಸರ್ಕಾರಕ್ಕೆ ವಾರ್ಷಿಕ ₹ 1.50 ಲಕ್ಷ ಕೋಟಿಗಳಷ್ಟು ಹೆಚ್ಚುವರಿ ವರಮಾನ ಬರಲಿದೆ. ತೆರಿಗೆ ಹಂತವನ್ನು ಇನ್ನಷ್ಟು ಸರಳಗೊಳಿಸುವ ಉದ್ದೇಶ ಇದೆ. ಈ ಸಲುವಾಗಿ ಶೇ 8, ಶೇ 18 ಮತ್ತು ಶೇ 28ರ ಮೂರು ಹಂತದ ತೆರಿಗೆ ವ್ಯವಸ್ಥೆ ರೂಪಿಸುವ ಬಗ್ಗೆಯೂ ಸಮಿತಿಯು ಸಲಹೆ ನೀಡಲಿದೆ. ಹೀಗಾದಲ್ಲಿ, ಸದ್ಯ ಶೇ 12ರ ತೆರಿಗೆ ದರದಲ್ಲಿ ಬರುವ ಸರಕು ಮತ್ತು ಸೇವೆಗಳು ಶೇ 18ರ ತೆರಿಗೆ ದರದ ವ್ಯಾಪ್ತಿಗೆ ಬರಲಿವೆ ಎಂದು ಮೂಲಗಳು ಹೇಳಿವೆ.

ವರಮಾನ ಹೆಚ್ಚಿಸಿಕೊಳ್ಳಲು ಮತ್ತು ರಾಜ್ಯ ಸರ್ಕಾರಗಳು ಜಿಎಸ್‌ಟಿ ಪರಿಹಾರಕ್ಕಾಗಿ ಕೇಂದ್ರದ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸಲು ಅನುಕೂಲ ಆಗುವಂತೆ ತೆರಿಗೆ ವಿನಾಯಿತಿ ಪಟ್ಟಿಯಲ್ಲಿ ಇರುವ ಸರಕು ಮತ್ತು ಸೇವೆಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆಯೂ ಸಮಿತಿಯು ಸಲಹೆ ನೀಡಲಿದೆ ಎಂದು ಹೇಳಲಾಗಿದೆ.

ಮುಖ್ಯಾಂಶಗಳು

- ತೆರಿಗೆ ವರಮಾನ ಹೆಚ್ಚಳಕ್ಕೆ ವ್ಯವಸ್ಥೆಯಲ್ಲಿ ಬದಲಾವಣೆ
- ವಿನಾಯಿತಿ ಪಟ್ಟಿಯಲ್ಲಿ ಇರುವ ಕೆಲವು ಸರಕುಗಳು ತೆರಿಗೆ ವ್ಯಾಪ್ತಿಗೆ ಸಾಧ್ಯತೆ

ರಷ್ಯಾ–ಉಕ್ರೇನ್ ಸಂಘರ್ಷ: ತಜ್ಞರ ಅಭಿಪ್ರಾಯ

'ಮುಂದಿನ ಹಣಕಾಸು ವರ್ಷಕ್ಕೆ ಎಲ್‌ಐಸಿ ಐಪಿಒ ಮುಂದೂಡಿಕೆ'

ನವದೆಹಲಿ (ಪಿಟಿಐ): ರಷ್ಯಾ–ಉಕ್ರೇನ್ ಸಂಘರ್ಷವು ನಿಧಿ ನಿರ್ವಾಹಕರ ಆಸಕ್ತಿಯನ್ನು ಕುಗ್ಗಿಸಿದೆ. ಹೀಗಾಗಿ ಕೇಂದ್ರ ಸರ್ಕಾರವು ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ಅನ್ನು ಮುಂದಿನ ಹಣಕಾಸು ವರ್ಷಕ್ಕೆ ಮುಂದೂಡುವ ನಿರೀಕ್ಷೆ ಇದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸದ್ಯದ ಪರಿಸ್ಥಿತಿಯು ಜಾಗತಿಕ ಷೇರುಪೇಟೆಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಿದೆ. ಇದರಿಂದಾಗಿ ಭಾರತದ ಷೇರುಪೇಟೆಗಳು ಸಹ ಅಸ್ಥಿರವಾಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟದಿಂದ ಶೇ 11ರಷ್ಟು ಇಳಿಕೆ ಕಂಡಿವೆ.

'ಮಾರುಕಟ್ಟೆಯ ಈಗಿನ ಸ್ಥಿತಿಯು ಎಲ್‌ಐಸಿ ಐಪಿಒಗೆ ಸಹಾಯಕವಾಗಿಲ್ಲ. ಹೀಗಾಗಿ ಸರ್ಕಾರವು ಮುಂದಿನ ಹಣಕಾಸು ವರ್ಷಕ್ಕೆ ಮುಂದೂಡುವ ಎಲ್ಲಾ ಸಾಧ್ಯತೆಗಳೂ ಇವೆ' ಎಂದು ಆಶಿಕಾ ಸಮೂಹದ ರಿಟೇಲ್ ಈಕ್ವಿಟಿ ರಿಸರ್ಚ್‌ನ ಮುಖ್ಯಸ್ಥ ಅರಿಜಿತ್ ಮಾಲಕರ್ ಹೇಳಿದ್ದಾರೆ.

'ಕಳೆದ ಕೆಲವು ತಿಂಗಳುಗಳಿಂದ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮಾರಾಟಕ್ಕೆ ಹೆಚ್ಚು ಗಮನ ಹರಿಸಿದ್ದಾರೆ. ಇನ್ನೊಂದೆಡೆ ದೇಶಿ ಹೂಡಿಕೆದಾರರು ಖರೀದಿ ಮಾಡುವ ಮೂಲಕ ಷೇರುಪೇಟೆಯನ್ನು ಭಾರಿ ಕುಸಿತ ಕಾಣದಂತೆ ತಡೆದಿದ್ದಾರೆ. ಐಪಿಒ ಮೂಲಕ ಸಂಗ್ರಹಿಸಲು ಹೊರಟಿರುವ ಮೊತ್ತವನ್ನು ಗಮನಿಸಿದರೆ 'ಎಫ್‌ಪಿಐ' ಬೆಂಬಲದ ಅಗತ್ಯ ಇದೆ. ಇದರ ಅರಿವು ಸರ್ಕಾರಕ್ಕೂ ಇದೆ. ಹೀಗಾಗಿಯೇ ಎಲ್‌ಐಸಿಯಲ್ಲಿ ಶೇಕಡ 20ರವರೆಗೆ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ತಿದ್ದುಪಡಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ' ಎಂದು ಅಪ್ಲೈಡ್ ಎಐ ಕಂಪನಿಯ ಸಹ ಸ್ಥಾಪಕ ಅತನು ಅಗರ್‌ವಾಲ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಎಲ್‌ಐಸಿಯಲ್ಲಿ ಹೊಂದಿರುವ ಷೇರುಪಾಲಿನಲ್ಲಿ ಶೇ 5ರಷ್ಟನ್ನು ಮಾರಾಟ ಮಾಡುವ ಮೂಲಕ ₹ 60 ಸಾವಿರ ಕೋಟಿಗೂ ಹೆಚ್ಚಿನ ಮೊತ್ತ ಸಂಗ್ರಹಿಸುವ ನಿರೀಕ್ಷೆ ಇಟ್ಟುಕೊಂಡಿದೆ.

ಮುಖ್ಯಾಂಶಗಳು

- ಐಪಿಒ ಮೂಲಕ ₹ 60 ಸಾವಿರ ಕೋಟಿ ಸಂಗ್ರಹ ನಿರೀಕ್ಷೆ
- ದೇಶಿ, ಜಾಗತಿಕ ಷೇರುಪೇಟೆಯಲ್ಲಿ ಅಸ್ಥಿರತೆ

ಷೇರು ವಿಕ್ರಯ: ಪರಿಷ್ಕೃತ ಗುರಿ ಸಾಧನೆಯೂ ಕಷ್ಟ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಪ್ರಸಕ್ತ ಹಣಕಾಸು ವರ್ಷದಲ್ಲಿ ಐಪಿಒಗೆ ಬರುವ ಸಾಧ್ಯತೆ ಕಡಿಮೆ ಇದೆ. ಹೀಗಾದಲ್ಲಿ ಕೇಂದ್ರ ಸರ್ಕಾರವು ಎಂಟು ವರ್ಷಗಳಲ್ಲಿ ಎರಡನೇ ಬಾರಿಗೆ ಭಾರಿ ಷೇರುವಿಕ್ರಯದ ಪರಿಷ್ಕೃತ ಗುರಿ ತಲುಪುವಲ್ಲಿ ವಿಫಲವಾಗಲಿದೆ.

2014ರಲ್ಲಿ ಮೋದಿ ನೇತೃತ್ವದ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ 2019–20ರಲ್ಲಿ ಷೇರುವಿಕ್ರಯದ ಪರಿಷ್ಕೃತ ಗುರಿ ತಲುಪುವಲ್ಲಿ ವಿಫಲ ಆಗಿತ್ತು. ₹ 65 ಸಾವಿರ ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಸಂಗ್ರಹ ಆಗಿದ್ದು ₹ 50,304 ಕೋಟಿ ಮಾತ್ರ.

ಪ್ರಸಕ್ತ ಹಣಕಾಸು ವರ್ಷದಲ್ಲಿ, ಕೇಂದ್ರ ಸರ್ಕಾರವು ಎಲ್‌ಐಸಿ ಐಪಿಒ ಅನ್ನು ಮಾರ್ಚ್‌ನಲ್ಲಿಯೇ ತರಲು ಸಿದ್ಧತೆ ನಡೆಸಿತ್ತು. ಸೆಬಿಗೆ ಕರಡು ದಾಖಲೆಪತ್ರಗಳನ್ನು ಸಲ್ಲಿಕೆ ಆಗಿದ್ದವು. ಆದರೆ, ರಷ್ಯಾ ಮತ್ತು ಉಕ್ರೇನ್ ನಡುವಿನ ಸಂಘರ್ಷವು ಷೇರುಪೇಟೆಗಳ ಮೇಲೆ ಭಾರಿ ಪರಿಣಾಮ ಉಂಟುಮಾಡಿದೆ. ಹೀಗಾಗಿ ಐಪಿಒಗೆ ಬರುವ ಸಮಯದ ಬಗ್ಗೆ ಸರ್ಕಾರ ಮರು ಪರಿಶೀಲನೆ ನಡೆಸುವಂತಾಗಿದೆ. ಎಲ್‌ಐಸಿ ಐಪಿಒ ಮೂಲಕ ₹ 60 ಸಾವಿರ ಕೋಟಿಗಳಷ್ಟು ಬಂಡವಾಳ ಸಂಗ್ರಹಿಸುವ ನಿರೀಕ್ಷೆಯನ್ನು ಸರ್ಕಾರ ಇಟ್ಟುಕೊಂಡಿದೆ.

ಒಂದೊಮ್ಮೆ ಈ ತಿಂಗಳ ಅಂತ್ಯದೊಳಗೆ ಎಲ್‌ಐಸಿ ಐಪಿಒ ಬರದೇ ಇದ್ದರೆ ಕೇಂದ್ರ ಸರ್ಕಾರವು ಷೇರು ವಿಕ್ರಯದ ಮೂಲಕ ಸಂಗ್ರಹ ಮಾಡಲಿರುವ ಬಂಡವಾಳದಲ್ಲಿ ಭಾರಿ ಕೊರತೆ ಎದುರಿಸಲಿದೆ. ಪರಿಷ್ಕೃತ ಅಂದಾಜಿನ ಪ್ರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ (2021-22) ಷೇರು ವಿಕ್ರಯದ ಮೂಲಕ ಒಟ್ಟಾರೆ ₹ 78 ಸಾವಿರ ಕೋಟಿ ಸಂಗ್ರಹ ಆಗಬೇಕು. ಆದರೆ, ಈವರೆಗೆ ಸಂಗ್ರಹ ಆಗಿರುವುದು ₹ 12,400 ಕೋಟಿ ಮಾತ್ರ.

ಥರ್ಡ್ ಪಾರ್ಟಿ ವಿಮಾ ಕಂತು ಹೆಚ್ಚಳ: ಪ್ರಸ್ತಾವ



ನವದೆಹಲಿ (ಪಿಟಿಐ): ಕಾರ್, ದ್ವಿಚಕ್ರ ವಾಹನ ಮತ್ತು ಸಾರಿಗೆ ವಾಹನಗಳ ಥರ್ಡ್‌ಪಾರ್ಟಿ (ಟಿಪಿ) ವಿಮೆಯ ಕಂತು ಹೆಚ್ಚಿಸಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು ಪ್ರಸ್ತಾಪಿಸಿದೆ. ಇದರಿಂದಾಗಿ ಏಪ್ರಿಲ್ 1 ರಿಂದ ಕಾರು ಮತ್ತು ದ್ವಿಚಕ್ರ ವಾಹನಗಳ ವಿಮಾ ಮೊತ್ತವು ಹೆಚ್ಚಾಗುವ ಸಾಧ್ಯತೆ ಇದೆ.

ಇದೇ ಮೊದಲ ಬಾರಿಗೆ ರಸ್ತೆ ಸಾರಿಗೆ ಸಚಿವಾಲಯವು ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದೊಂದಿಗೆ (ಐಆರ್‌ಡಿಎಐ) ಸಮಾಲೋಚನೆ ನಡೆಸಿ ಥರ್ಡ್ ಪಾರ್ಟಿ ವಿಮೆ ಮೊತ್ತವನ್ನು ನಿರ್ಧರಿಸಲಿದೆ. ಸದ್ಯ, ವಿಮೆ ಕಂತು ಹೆಚ್ಚಳದ ನಿರ್ಧಾರವನ್ನು ಐಆರ್‌ಡಿಎಐ ತೆಗೆದುಕೊಳ್ಳುತ್ತಿದೆ.

ಸಚಿವಾಲಯ ಹೊರಡಿಸಿರುವ ಕರಡು ಅಧಿಸೂಚನೆಯ ಪ್ರಕಾರ, 1000 ಸಿಸಿಯ ಕಾರಿನ ಥರ್ಡ್‌ಪಾರ್ಟಿ ವಿಮೆಯ ಬೆಲೆಯು 2019–20ರಲ್ಲಿ ₹ 2,072 ರಷ್ಟು ಇದ್ದಿದ್ದು, ₹ 2,094 ಕ್ಕೆ ಹೆಚ್ಚಳ ಆಗಲಿದೆ. 1000 ಸಿಸಿಯಿಂದ 1,500ಸಿಸಿ ಒಳಗಿನ ಕಾರುಗಳಿಗೆ ₹ 3,221 ರಿಂದ ₹ 3,416ಕ್ಕೆ ಏರಿಕೆ ಆಗಲಿದೆ.

ಅಂತೆಯೇ 150 ಸಿಸಿಗೂ ಹೆಚ್ಚಿನ ಸಾಮರ್ಥ್ಯದ ದ್ವಿಚಕ್ರ ವಾಹನಗಳ ವಿಮಾ ಮೊತ್ತವು ₹1,366ರಷ್ಟು ಹಾಗೂ 350ಸಿಸಿಗೂ ಹೆಚ್ಚಿನ ಸಾಮರ್ಥ್ಯದ ದ್ವಿಚಕ್ರ ವಾಹನಗಳ ವಿಮಾ ಮೊತ್ತವು ₹ 2,804ರಷ್ಟು ಆಗಲಿದೆ.

ವಿದ್ಯುತ್ ಚಾಲಿತ ಕಾರು, ದ್ವಿಚಕ್ರ ವಾಹನ, ಸರಕು ಮತ್ತು ಪ್ರಯಾಣಿಕರನ್ನು ಸಾಗಿಸುವ ವಾಹನಗಳಿಗೆ ಶೇ 15ರಷ್ಟು ರಿಯಾಯಿತಿ ನೀಡಲು ಪ್ರಸ್ತಾಪಿಸಲಾಗಿದೆ.

30ಕಿಲೋ ವಾಟ್ ಒಳಗಿನ ವಿದ್ಯುತ್ ಚಾಲಿತ ಕಾರಿನ ವಿಮಾ ಮೊತ್ತವು ₹ 1,780ರಷ್ಟು ಹಾಗೂ 30 ಕಿಲೋ ವಾಟ್‌ಗಿಂತ ಹೆಚ್ಚು ಮತ್ತು 60 ಕಿಲೋವಾಟ್‌ಗಿಂತ ಕಡಿಮೆಯದ್ದಕ್ಕೆ ವಿಮಾ ಕಂತು ಮೊತ್ತ ₹ 2,904 ನಿಗದಿಪಡಿಸಲಾಗಿದೆ.

ಇದೇ ಮಾರ್ಚ್ ಅಂತ್ಯದ ಒಳಗಾಗಿ ಕರಡು ಅಧಿಸೂಚನೆಯ ಕುರಿತು ಸಲಹೆಗಳನ್ನು ನೀಡುವಂತೆ ರಸ್ತೆ ಸಾರಿಗೆ ಸಚಿವಾಲಯ ಆಹ್ವಾನಿಸಿದೆ.

ಸರಕು ಸಾಗಣೆಗೆ ಉತ್ತೇಜನ: ಗಣಿಗಾರಿಕೆ ಜಿಲ್ಲೆ ಗುರುತಿಸಲಿದೆ ರೈಲ್ವೆ

ನವದೆಹಲಿ (ಪಿಟಿಐ): ಸರಕು ಸಾಗಣೆ ವ್ಯವಸ್ಥೆಯನ್ನು ದೊಡ್ಡ ಪ್ರಮಾಣದಲ್ಲಿ ರೈಲ್ವೆ ಸಂಪರ್ಕ ಜಾಲದ ಮೂಲಕ ಉತ್ತೇಜಿಸಲು ಭಾರತೀಯ ರೈಲ್ವೆ ದೇಶದಾದ್ಯಂತ ಗಣಿಗಾರಿಕೆ ಜಿಲ್ಲೆಗಳನ್ನು ಗುರುತಿಸಲು ಮುಂದಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಿಷನ್ ಹಂಗ್ರಿ ಫಾರ್ ಕಾರ್ಗೋ' (ಸರಕು ಸಾಗಣೆ ಉತ್ತೇಜಿಸಲು ರೂಪಿಸಿರುವ ಯೋಜನೆ) ಅಡಿಯಲ್ಲಿ ರೈಲ್ವೆಯು ಪ್ರಸ್ತುತ ಶೇ 27 ರಷ್ಟು ಸರಕು ಸಾಗಣೆ ಸೌಕರ್ಯ ಹೊಂದಿದ್ದು, ಇದನ್ನು ಶೇ 45ಕ್ಕೆ ಹೆಚ್ಚಿಸಲು ಗುರಿ ಹೊಂದಿದೆ.

ಗಣಿಗಾರಿಕೆ ನಡೆಯುವ ಜಿಲ್ಲೆಗಳನ್ನು ಗುರುತಿಸಲು ಮತ್ತು ಆ ಪ್ರದೇಶಗಳಲ್ಲಿನ ಗಣಿ ಉತ್ಪನ್ನ ಹಾಗೂ ಹಾಗೂ ಅವುಗಳ ಸುತ್ತಲಿನ ರೈಲು ಮಾರ್ಗದ ಬಗ್ಗೆ ಸಮೀಕ್ಷೆ ನಡೆಸಲು ತನ್ನ ವಲಯಗಳಿಗೆ ರೈಲ್ವೆ ಇಲಾಖೆ ಸೂಚನೆ ನೀಡಿದೆ.

ದೇಶದಾದ್ಯಂತ ಸುಮಾರು 100 ಮೆಟ್ರಿಕ್ ಟನ್ ಉತ್ಪಾದನಾ ಸಾಮರ್ಥ್ಯದ ಗಣಿಗಳ ಸಮೀಕ್ಷೆಯನ್ನು ನಡೆಸಲು ಸಚಿವಾಲಯ ಅನುಮೋದನೆ ನೀಡಿದೆ. ಈವರೆಗೆ 52 ಜಿಲ್ಲೆಗಳನ್ನು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹395

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ: ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಡಿಗ್ರಿ, ಡಿಪ್ಲೋಮಾದವರು 18,000- 56,000/- ವಸತಿಯೂಟದೊಂದಿಗೆ 8197650569, 7204396011

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002.

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

ಭವಿಷ್ಯ
Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ASTRO YATRA

ಓಂ ದುರ್ಗಾ ಅಂಜನ ಜ್ಯೋತಿಷ್ಯ ಮತ್ತು ವಾಸ್ತು ಕೇಂದ್ರ
OM DURGA ANJANAM ASTRO & VASTU CENTRE

ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿಧ್ವಾನ್
ಯೋಗಿ. ಶ್ರೀದೇವಾನಂದನ್ ರವರಿಂದ
ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ, ಸುಖ ಶಾಂತಿ ನೆಮ್ಮದಿಗಾಗಿ, ಸಿರಿಸಂಪತ್ತು ಸ್ತ್ರೀ–ಪುರುಷ,ದಾಂಪತ್ಯ, ಮದುವೆ, ಸಂತಾನ, ಆರೋಗ್ಯಕ್ಕೆ ಬೇಕಾಗುವ ಸರ್ವಮನ ಇಚ್ಛ ಅತೀಘೋರ ನೀಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ, ಆಕರ್ಷಣ ಸಂಮ್ಮೋಹನ, ದುಷ್ಟಶಕ್ತಿಗಳು ಉದ್ಘಾಟನೆ, ಶತ್ರು ಸಂಬಂದಿತ ಮಾಟ ದೃಷ್ಟಿಶಾಪಗಳಿಗೆ ಇಂದೇ ಪರಿಹಾರಕ್ಕೆ ಸಂಪರ್ಕಿಸಿ.
8217437023 / 9845005009
#36, ಎಸ್.ವಿ ಕಾಂಪ್ಲೇಕ್ಸ್, ಅಗ್ರಹಾರ ದಾಸರಹಳ್ಳಿ, ಮಾಗಡಿ ರಸ್ತೆ, ಬೆಂ–40

||ಯಲ್ಲಮ್ಮ ದೇವಿ ಜ್ಯೋತಿಷ್ಯ ಪೀಠಂ||ವಶೀಕರಣ ಸ್ಪೆಷಲಿಸ್ಟ್ ಕೊಳ್ಳೆಗಾಲದ ಪ್ರಖ್ಯಾತ ದೈವಾಂಶ ಮೋಡಿಮಾಂತ್ರಿಕರು ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಸಕಲಸಮಸ್ಯೆಗಳಿಗೆ ಪರಿಹಾರ.*ಅಸಾಧ್ಯವಾದದ್ದು ಇಲ್ಲಿ ಸಾಧ್ಯ*.9535883556

ಪ್ರವಾಸ
Travel

8 ದಿನಗಳ ಶಿರಡಿ ಪ್ರವಾಸ 16-03-2022, 7ದಿನಗಳ ಕೇರಳ ಪ್ರವಾಸ 18-04-2022, 5ದಿನಗಳ ಶ್ರೀಶೈಲ,ಆಹೋಬಿಲಂ ಪ್ರವಾಸ 11-04-2022, 8/10 ದಿನಗಳ ಕಾಶ್ಮೀರ್, ವೈಷ್ಣೋದೇವಿ ಪ್ರವಾಸ 11-04-2022, 18-04-2022,02-05-2022, 11ದಿನಗಳ ಅಮರನಾಥ್‌ಯಾತ್ರಾ 04-07-2022, 18-07-2022,11 ದಿನಗಳ ಕೋಲ್ಕತಾ, ಡಾರ್ಜಲಿಂಗ್ 05-05-2022, 7/12 ದಿನಗಳ ಕುಲುಮನಾಲಿ, 19-04-2022, 03-05-2022, 6 /7 ದಿನಗಳ ಕಾಶಿಯಾತ್ರೆ 18-04-2022, 02-05-2022, 16-05-2022, ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001, 9342848791

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಸಂಘ, ಗಿರಿನಗರ ಬೆಂಗಳೂರು-86. 9916473906, 8861111568

27.04.2022ರಿಂದ ರೈಲು/ಏಸಿ ಬಸ್ಸಿನಲ್ಲಿ 35/22ದಿನಗಳ 'ಚಾರೋಧಾಮ್'ಸಮೇತ ವೈಷ್ಣೋದೇವಿ, ಕೋಲ್ಕತ್ತಾ, ಪುರಿ,ಅಮೃತಸರ್,ಕಾಶಿ, ಗಯಾ,ಹರಿದ್ವಾರ್. 28.05.2022ರಿಂದ ವಿಮಾನ/ಬಸ್ಸಿನಲ್ಲಿ 13ದಿನಗಳ 'ಚಾರೋಧಾಮ್',ಮಸ್ಸೂರಿ, ಗುಪ್ತಕಾಶಿ,ನವದೆಹಲಿ, ಹರಿದ್ವಾರ್. ಜೂನ್/ಜುಲೈ ತಿಂಗಳಲ್ಲಿ ಅಮರನಾಥ್ ಸಮೇತ,ಕಾಶ್ಮೀರ್,ವೈಷ್ಣೋದೇವಿ, ಅಮೃತಸರ್, ಕುರುಕ್ಷೇತ್ರ,ಹರಿದ್ವಾರ್ 19ದಿನಗಳು. ವಿವರಗಳಿಗೆ: ಏಷ್ಯನ್ ಟ್ರಾವೆಲ್ ಲೈನ್ಸ್,#164, ಆರ್.ವಿ.ರಸ್ತೆ (ಮಿನರ್ವ ಬಸ್ ಸ್ಟಾಪ್ ಎದುರು)ಬೆಂಗಳೂರು4. ಫೋನ್:8105657052, 9480182865. 08026565085.

27.04.2022, 06.05.2022, 22.05.2022 ರಿಂದ 14/20/26 ದಿನಗಳ ಪೂರಿಜಗನ್ನಾಥ್, ಗಯಾ,ಕಾಶಿ,ಪ್ರಯಾಗ, ನೈಮಿಶಾರಣ್ಯ, ಅಯೋಧ್ಯ, ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ದೆಹಲಿ,ಅಮೃತ್‌ಸರ್, ವೈಷ್ಣೋದೇವಿ/ ಹಾಗು ಜುಲೈ, ಅಗಸ್ಟ್ ಸೆಪ್ಟಂಬರ್ ತಿಂಗಳಲ್ಲಿ ಅಮರನಾಥ್‌ಯಾತ್ರೆ/ ಮುಕ್ತಿನಾಥ್, ಗ್ಯಾಂಗ್‌ಟಾಕ್, ಡಾರ್ಜಲಿಂಗ್ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ 'ಶ್ರೀಸುಧಾ ಟ್ರಾವೆಲ್ಸ್' 080-22429289, 9448119290, 9019301300

ವ್ಯಾಪಾರ
Business Offers
Machinery & Tools
START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಆಲ್‌ರೌಂಡರ್‌ಗಳ ಆಟ: ಜಯದ ಓಟ

ಕ್ರಿಕೆಟ್ ಅಂಗಳದಲ್ಲಿ ಭಾನುವಾರ ಆಲ್‌ರೌಂಡರ್‌ಗಳದ್ದೇ ಪಾರುಪತ್ಯ. ಮೊಹಾಲಿ ಟೆಸ್ಟ್‌ನಲ್ಲಿ ರವೀಂದ್ರ ಜಡೇಜ, ಆರ್. ಅಶ್ವಿನ್ ಅಬ್ಬರ. ನ್ಯೂಜಿಲೆಂಡ್‌ನಲ್ಲಿ ನಡೆಯುತ್ತಿರುವ ಮಹಿಳಾ ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಪಾಕಿಸ್ತಾನ ಎದುರು ಭಾರತದ ಪೂಜಾ ವಸ್ತ್ರಕರ್ ಮತ್ತು ರಾಜೇಶ್ವರಿ ಗಾಯಕವಾಡ್ ಅಮೋಘ ಆಟ ಮತ್ತು ಚೆನ್ನೈನಲ್ಲಿ ನಡೆದ ರಣಜಿ ಪಂದ್ಯದಲ್ಲಿ ಪುದುಚೇರಿ ಎದುರು ಕರ್ನಾಟಕದ ಶ್ರೇಯಸ್ ಗೋಪಾಲ್ ಮತ್ತು ಕೃಷ್ಣಪ್ಪ ಗೌತಮ್ ಅವರ ಆಟ ವಿಜೃಂಭಿಸಿತು.

ರವೀಂದ್ರ ಜಡೇಜ ಬೌಲಿಂಗ್ –ಎಎಫ್‌ಪಿ ಚಿತ್ರ

ಮೊಹಾಲಿ ಟೆಸ್ಟ್

ರವೀಂದ್ರ ಜಡೇಜ ಮೋಡಿ

ಪ್ರಜಾವಾಣಿ ವಾರ್ತೆ

ಮೊಹಾಲಿ: ತಾವು ಅಪ್ಪಟ ಆಲ್‌ರೌಂಡರ್ ಎಂಬುದನ್ನು ರವೀಂದ್ರ ಜಡೇಜ ಮತ್ತೊಮ್ಮೆ ಸಾಬೀತುಪಡಿಸಿದರು.

ಪಂಜಾಬ್ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಅಜೇಯ ಶತಕ (175 ರನ್) ಮತ್ತು ಒಟ್ಟು ಒಂಬತ್ತು ವಿಕೆಟ್‌ಗಳನ್ನು ಗಳಿಸಿದ ಎಡಗೈ ಆಟಗಾರನ ಭರಾಟೆಗೆ ಶ್ರೀಲಂಕಾ ತಂಡವು ದೂಳೀಪಟವಾಯಿತು. ಆತಿಥೇಯ ಬಳಗವು ಇನಿಂಗ್ಸ್ ಮತ್ತು 222 ರನ್‌ಗಳ ಭಾರಿ ಅಂತರದ ಜಯ ಸಾಧಿಸಿತು. ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿತು.

ಜಡೇಜ ಜೊತೆಗೆ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಕೂಡ ಒಟ್ಟು ಅರ್ಧ ಡಜನ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಒಟ್ಟಿನಲ್ಲಿ ಬೌಲಿಂಗ್ ಪಡೆಯು ಶ್ರೀಲಂಕಾದ 16 ವಿಕೆಟ್‌ಗಳನ್ನು ಒಂದೇ ದಿನ ಕಬಳಿಸಿತು. ಇದರೊಂದಿಗೆ ಮೊದಲ ಬಾರಿಗೆ ಟೆಸ್ಟ್ ತಂಡದ ನಾಯಕತ್ವ ವಹಿಸಿದ ರೋಹಿತ್ ಶರ್ಮಾ ಮತ್ತು 100ನೇ ಟೆಸ್ಟ್ ಆಡಿದ ವಿರಾಟ್ ಕೊಹ್ಲಿಗೆ ಜಯದ ಕಾಣಿಕೆಯನ್ನು ನೀಡಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು ಎಂಟು ವಿಕೆಟ್‌ಗಳಿಗೆ 574 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು. ಅದಕ್ಕುತ್ತರವಾಗಿ ಶ್ರೀಲಂಕಾ ಮೊದಲ ಇನಿಂಗ್ಸ್‌ನಲ್ಲಿ ಜಡೇಜ (41ಕ್ಕೆ5) ಮೋಡಿಯ ಮುಂದೆ 174 ಮತ್ತು ಎರಡನೇ ಇನಿಂಗ್ಸ್‌ನಲ್ಲಿ ತಲಾ ನಾಲ್ಕು ವಿಕೆಟ್ ಕಬಳಿಸಿದ ಜಡೇಜ ಮತ್ತು ಅಶ್ವಿನ್ ಆಟಕ್ಕೆ ಮಣಿದು ಕೇವಲ 178 ರನ್ ಗಳಿಸಿ ಆಟ ಮುಗಿಸಿತು.

ಶನಿವಾರ ಭಾರತ ಡಿಕ್ಲೇರ್ ಕೊಟ್ಟ ನಂತರ ಲಂಕಾ ತಂಡವು ದಿನದಾಟದಂತ್ಯಕ್ಕೆ 43 ಓವರ್‌ಗಳಲ್ಲಿ 4ಕ್ಕೆ 108 ರನ್ ಗಳಿಸಿತ್ತು. ಮೂರನೇ ದಿನದ ಊಟದ ವಿರಾಮಕ್ಕೂ ಮುನ್ನವೇ ಲಂಕಾ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ಆತಿಥೇಯ ತಂಡವು ದಿಮುತ ಕರುಣಾರತ್ನೆ ಬಳಗದ ಮೇಲೆ ಫಾಲೋ ಆನ್ ಹೇರಿತು. ಎರಡನೇ ಇನಿಂಗ್ಸ್‌ನಲ್ಲಿಯೂ ಪ್ರವಾಸಿ ತಂಡದ ಬ್ಯಾಟರ್‌ಗಳು ಸಮಚಿತ್ತ ಮತ್ತು ಏಕಾಗ್ರತೆಯಿಂದ ಆಡುವಲ್ಲಿ ವಿಫಲರಾದರು. ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಬಾರಿಸಿದ್ದ ಪಥುಮ್ ನಿಸಾಂಕ ಮತ್ತು ಆರಂಭಿಕ ಬ್ಯಾಟರ್ ಲಹಿರು ತಿರುಮನ್ನೆ ಅವರ ವಿಕೆಟ್‌ಗಳನ್ನು ಗಳಿಸಿದ ಅಶ್ವಿನ್ ಭಾರತದ ಗೆಲುವಿನ ಅಭಿಯಾನಕ್ಕೆ ಚಾಲನೆ ನೀಡಿದರು.

ಕೆಳಹಂತದಲ್ಲಿ ಪುಟಿದು ನಿಧಾನವಾಗಿ ತಿರುವು ಪಡೆದು ಸಾಗುತ್ತಿದ್ದ ಜಡೇಜ ಎಸೆತಗಳನ್ನು ಅಂದಾಜಿಸುವಲ್ಲಿ ಮಧ್ಯಮಕ್ರಮಾಂಕದ ಬ್ಯಾಟರ್‌ಗಳು ಎಡವಿದರು. ಆತ್ಮವಿಶ್ವಾಸದ ಉತ್ತುಂಗದಲ್ಲಿದ್ದ ಭಾರತ ತಂಡದ ಫೀಲ್ಡರ್‌ಗಳ ಅಪೀಲ್‌ಗಳು ಲಂಕಾ ಬ್ಯಾಟರ್‌ಗಳ ಒತ್ತಡ ಹೆಚ್ಚಿಸಿತು. ಆದರೆ, ನಿರೋಷನ್ ಡಿಕ್ವೆಲಾ (ಔಟಾಗದೆ 51) ಮಾತ್ರ ದಿಟ್ಟೆದೆಯ ಬ್ಯಾಟಿಂಗ್ ಪ್ರದರ್ಶಿಸಿದರು. ಎಡಗೈ ಬ್ಯಾಟರ್ ನಿರೋಷನ್ ಸ್ವೀಪ್, ಡ್ರೈವ್‌ಗಳನ್ನು ಆಡಿದರು. ಆದರೆ ಉಳಿದ ಬ್ಯಾಟರ್‌ಗಳು ಮಾತ್ರ ಸ್ಪಿನ್ ಜೋಡಿಗೆ ಶರಣಾದರು.

ಸ್ಕೋರ್ ಕಾರ್ಡ್

ಭಾರತ ಮೊದಲ ಇನಿಂಗ್ಸ್ 8ಕ್ಕೆ 574 ಡಿಕ್ಲೇರ್ಡ್ (129.2 ಓವರ್)

ಶ್ರೀಲಂಕಾ ಮೊದಲ ಇನಿಂಗ್ಸ್ 174 (65 ಓವರ್) (ಶನಿವಾರ 43 ಓವರ್‌ಗಳಲ್ಲಿ 4ಕ್ಕೆ 108)

ನಿಸಾಂಕ ಔಟಾಗದೆ 61 (133ಎ, 4X11), ಚರಿತ ಎಲ್‌ಬಿಡಬ್ಲ್ಯು ಬಿ ಬೂಮ್ರಾ 29 (64ಎ, 4X5), ಡಿಕ್ವೆಲ್ಲಾ ಸಿ ಅಯ್ಯರ್ ಬಿ ಜಡೇಜ 2 (10ಎ), ಲಕ್ಮಲ್ ಸಿ ಅಶ್ವಿನ್ ಬಿ ಜಡೇಜ 0 (2ಎ), ಎಂಬುಲ್ದೇನಿಯಾ ಸಿ ಮಯಂಕ್ ಬಿ ಶಮಿ 0 (5ಎ), ವಿಶ್ವ ಸಿ ರೋಹಿತ್ ಬಿ ಜಡೇಜ 0 (5ಎ), ಕುಮಾರ ಬಿ ಜಡೇಜ 0 (1ಎ)

ಇತರೆ (ಬೈ 6, ನೋಬಾಲ್ 8) 14

ವಿಕೆಟ್ ಪತನ: 5-161 (ಚರಿತ ಅಸಲಂಕ, 57.6), 6-164 (ನಿರೋಶನ್ ಡಿಕ್ವೆಲ್ಲಾ, 60.4), 7-164 (ಸುರಂಗ ಲಕ್ಮಲ್, 60.6), 8-173 (ಲಸಿತ್ ಎಂಬುಲ್ದೇನಿಯಾ, 63.3), 9-174 (ವಿಶ್ವ ಫರ್ನಾಂಡೊ, 64.5), 10-174 (ಲಹಿರು ಕುಮಾರ, 64.6)

ಬೌಲಿಂಗ್: ಮೊಹಮ್ಮದ್ ಶಮಿ 12–5–27–1, ಜಸ್‌ಪ್ರೀತ್ ಬೂಮ್ರಾ 14–3–36–2, ರವಿಚಂದ್ರನ್ ಅಶ್ವಿನ್ 20–7–49–2, ಜಯಂತ್ ಯಾದವ್ 6–2–15–0, ರವೀಂದ್ರ ಜಡೇಜ 13–4–41–5

ಶ್ರೀಲಂಕಾ ಎರಡನೇ ಇನಿಂಗ್ಸ್ (ಫಾಲೊ ಆನ್) 178 (60 ಓವರ್)

ಲಹಿರು ತಿರಿಮನ್ನೆ ಸಿ ರೋಹಿತ್ ಬಿ ಅಶ್ವಿನ್ 0 (9ಎ), ದಿಮುತ್ ಸಿ ಪಂತ್ ಬಿ ಶಮಿ 27 (46ಎ, 4X6), ನಿಸಾಂಕ ಸಿ ಪಂತ್ ಬಿ ಅಶ್ವಿನ್ 6 (19ಎ, 4X1), ಮ್ಯಾಥ್ಯೂಸ್ ಎಲ್‌ಬಿಡಬ್ಲ್ಯು ಬಿ ಜಡೇಜ 28 (75ಎ, 4X2, 6X1), ಧನಂಜಯ ಸಿ ಅಯ್ಯರ್ ಬಿ ಜಡೇಜ 30 (58ಎ, 4X5), ಚರಿತ ಸಿ ಕೊಹ್ಲಿ ಬಿ ಅಶ್ವಿನ್ 20 (9ಎ, 4X2, 6X2), ಡಿಕ್ವೆಲ್ಲಾ ಔಟಾಗದೆ 51 (81ಎ, 4X9), ಲಕ್ಮಲ್ ಸಿ ಜಯಂತ್ ಬಿ ಜಡೇಜ 0 (3ಎ), ಎಂಬುಲ್ದೇನಿಯಾ ಸಿ ಪಂತ್ ಬಿ ಜಡೇಜ 2 (42ಎ), ವಿಶ್ವ ಎಲ್‌ಬಿಡಬ್ಲ್ಯು ಶಮಿ 0 (5ಎ), ಕುಮಾರ ಸಿ ಶಮಿ ಬಿ ಅಶ್ವಿನ್ 4 (14ಎ, 4X1)

ಇತರೆ (ಬೈ 4, ಲೆಗ್‌ಬೈ 5, ನೋಬಾಲ್ 1) 10

ವಿಕೆಟ್ ಪತನ: 1-9 (ಲಹಿರು ತಿರಿಮನ್ನೆ, 2.3), 2-19 (ಪಥುಮ್ ಸಿಸಾಂಕ, 6.5), 3-45 (ದಿಮುತ್ ಕರುಣಾರತ್ನೆ, 15.5), 4-94 (ಧನಂಜಯ ಡಿಸಿಲ್ವಾ, 32.5), 5-121 (ಚರಿತ ಅಸಲಂಕ, 35.3), 6-121 (ಏಂಜೆಲೊ ಮ್ಯಾಥ್ಯೂಸ್, 36.2), 7-121 (ಸುರಂಗ ಲಕ್ಮಲ್, 36.5), 8-153 (ಲಸಿತ್ ಎಂಬುಲ್ದೇನಿಯಾ, 50.6), 9-170 (ವಿಶ್ವ ಫರ್ನಾಂಡೊ, 53.6), 10-178 (ಲಹಿರು ಕುಮಾರ, 59.6)

ಬೌಲಿಂಗ್: ರವಿಚಂದ್ರನ್ ಅಶ್ವಿನ್ 21–5–47–4, ಮೊಹಮ್ಮದ್ ಶಮಿ 8–1–48–2, ರವೀಂದ್ರ ಜಡೇಜ 16–5–46–4, ಜಯಂತ್ ಯಾದವ್ 11–3–21–0, ಜಸ್‌ಪ್ರೀತ್ ಬೂಮ್ರಾ 4–1–7–0

ಫಲಿತಾಂಶ: ಭಾರತಕ್ಕೆ ಇನಿಂಗ್ಸ್ ಮತ್ತು 222 ರನ್‌ಗಳ ಗೆಲುವು

60 ವರ್ಷದ ಹಿಂದಿನ ದಾಖಲೆ ಮೀರಿದ ಎಡಗೈ ಸ್ಪಿನ್ನರ್

ಮೊಹಾಲಿ ಅಂಗಳದಲ್ಲಿ ವಿಜೃಂಭಿಸಿದ ರವೀಂದ್ರ ಜಡೇಜ 60 ವರ್ಷಗಳ ಹಿಂದಿನ ದಾಖಲೆಯನ್ನು ಮುರಿದರು. ಒಂದೇ ಇನಿಂಗ್ಸ್‌ನಲ್ಲಿ 150ಕ್ಕೂ ಹೆಚ್ಚು ರನ್ ಗಳಿಸಿ ಐದು ವಿಕೆಟ್ ಗೊಂಚಲು ಗಳಿಸಿದ ದಾಖಲೆಯನ್ನು ಬರೆದರು. 1952ರಲ್ಲಿ ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್‌ನಲ್ಲಿ ವಿನೂ ಮಂಕಡ್ ಮತ್ತು 1962ರಲ್ಲಿ ದೆಹಲಿಯಲ್ಲಿ ವೆಸ್ಟ್ ಇಂಡೀಸ್ ಎದುರು ಪಾಲಿ ಉಮ್ರಿಗರ್ ಈ ಸಾಧನೆ ಮಾಡಿದ್ದರು.

ಶ್ರೀಲಂಕಾಕ್ಕೆ ದೊಡ್ಡ ಅಂತರದ ಸೋಲುಗಳು

ಫಲಿತಾಂಶ	ಎದುರಾಳಿ	ಸ್ಥಳ	ವರ್ಷ
ಇನಿಂಗ್ಸ್, 239 ರನ್	ಭಾರತ	ನಾಗಪುರ	2017
ಇನಿಂಗ್ಸ್, 229 ರನ್	ದ. ಆಫ್ರಿಕಾ	ಕೇಪ್‌ಟೌನ್	2001
ಇನಿಂಗ್ಸ್, 222 ರನ್	ಭಾರತ	ಮೊಹಾಲಿ	2022
ಇನಿಂಗ್ಸ್, 208 ರನ್	ದ.ಆಫ್ರಿಕಾ	ಕೊಲಂಬೊ	1993

ಅಶ್ವಿನ್

ಟೆಸ್ಟ್ ವಿಕೆಟ್ ಸಾಧಕರು (ಭಾರತ)

ಆಟಗಾರ	ಅವಧಿ	ಪಂದ್ಯ	ವಿಕೆಟ್
ಅನಿಲ್ ಕುಂಬ್ಳೆ	1990-2008	132	619
ಆರ್. ಅಶ್ವಿನ್	2011-2022	85	436
ಕಪಿಲ್ ದೇವ್	1978-1994	131	434
ಹರಭಜನ್ ಸಿಂಗ್	1998-2015	103	417
ಇಶಾಂತ್ ಶರ್ಮಾ	2007-2021	105	311

ಶ್ರೇಯಸ್ ಗೋಪಾಲ್

ರಣಜಿ ಕ್ರಿಕೆಟ್

ಎಂಟರ ಘಟ್ಟಕ್ಕೆ ಕರ್ನಾಟಕ

ಚೆನ್ನೈ: ಐದು ವಿಕೆಟ್‌ಗಳ ಗೊಂಚಲು ಗಳಿಸಿದ ಶ್ರೇಯಸ್ ಗೋಪಾಲ್ ಸ್ಪಿನ್ ಮೋಡಿಯ ಮುಂದೆ ಪುದುಚೇರಿ ಬ್ಯಾಟಿಂಗ್ ಪಡೆ ಕಾಲೂರಲು ಸಾಧ್ಯವಾಗಲಿಲ್ಲ. ನಿರೀಕ್ಷೆಯಂತೆ ಕರ್ನಾಟಕ ತಂಡವು ಜಯಭೇರಿ ಬಾರಿಸಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಎಸ್‌ಎನ್‌ಎನ್ ಕಾಲೇಜು ಮೈದಾನದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಕರ್ನಾಟಕ ತಂಡವು 132.2 ಓವರ್‌ಗಳಲ್ಲಿ 8 ವಿಕೆಟ್ ಗಳಿಗೆ 453 ರನ್ ಗಳಿಸಿತ್ತು. ಪುದುಚೇರಿ ತಂಡವು 241 ರನ್‌ಗಳಿಗೆ ಆಲೌಟ್ ಆಗಿತ್ತು. 212 ರನ್‌ಗಳ ಮುನ್ನಡೆ ಗಳಿಸಿದ್ದ ಕರ್ನಾಟಕವು ಪುದುಚೇರಿಗೆ ಫಾಲೋ ಆನ್ ನೀಡಿತ್ತು. ಶನಿವಾರ ದಿನದಾಟದ ಮುಕ್ತಾಯಕ್ಕೆ ಪುದುಚೇರಿ ಎರಡನೇ ಇನಿಂಗ್ಸ್‌ನಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡಿತ್ತು. ಕೊನೆಯ ದಿನದಾಟದಲ್ಲಿ ಕರ್ನಾಟಕದ ಜಯಕ್ಕೆ ಅಗತ್ಯವಿದ್ದ ಆರು ವಿಕೆಟ್‌ಗಳ ಪೈಕಿ ನಾಲ್ಕು ಶ್ರೇಯಸ್ ಗೋಪಾಲ್ ಪಾಲಾದವು. ಅದರಿಂದಾಗಿ ಪುದುಚೇರಿ ತಂಡವು 61 ಓವರ್‌ಗಳಲ್ಲಿ 192 ರನ್ ಗಳಿಸಲಷ್ಟೇ ಶಕ್ತವಾಯಿತು. ಕರ್ನಾಟಕ ಇನಿಂಗ್ಸ್ ಮತ್ತು 20 ರನ್‌ಗಳಿಂದ ಜಯಭೇರಿ ಬಾರಿಸಿತು.

ಸಿ ಗುಂಪಿನಲ್ಲಿ ಒಟ್ಟು 16 ಅಂಕಗಳನ್ನು ಗಳಿಸಿ ಅಗ್ರಸ್ಥಾನಕ್ಕೇರಿತು. ಈ ಬಾರಿ ಗುಂಪು ಹಂತದಲ್ಲಿ ಕೇವಲ ಮೂರು ಪಂದ್ಯಗಳನ್ನು ನಿಗದಿಪಡಿಸಲಾಗಿತ್ತು. ಮನೀಷ್ ಬಳಗವು ಮೊದಲ ಪಂದ್ಯದಲ್ಲಿ ರೈಲ್ವೆಸ್ ವಿರುದ್ಧ ಡ್ರಾ ಮಾಡಿಕೊಂಡಿತ್ತು. ಎರಡನೇ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡವನ್ನು ಸೋಲಿಸಿತ್ತು. ಮೂರನೇ ಪಂದ್ಯದಲ್ಲಿ ಬೋನಸ್ ಅಂಕವನ್ನೂ ಬುಟ್ಟಿಗೆ ಹಾಕಿಕೊಂಡಿತು.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿ ಮುಗಿದ ನಂತರ ಜೂನ್‌ನಲ್ಲಿ ನಾಕೌಟ್ ಹಂತದ ಪಂದ್ಯಗಳನ್ನು ಆಯೋಜಿಸಲಾಗಿದೆ.

ಶ್ರೇಯಸ್ ಸ್ಪಿನ್ ಮೋಡಿ: ಮೂರನೇ ದಿನದಾಟದ ಮುಕ್ತಾಯಕ್ಕೆ ಪುದುಚೇರಿ ತಂಡವು 23 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 62 ರನ್ ಗಳಿಸಿತ್ತು. ಕೊನೆಯ ದಿನದಾಟದಲ್ಲಿ ಕೇವಲ 38 ಓವರ್‌ಗಳಲ್ಲಿ ಪುದುಚೇರಿಯ ಇನಿಂಗ್ಸ್‌ಗೆ ತೆರೆಬಿತ್ತು. 27ನೇ ಓವರ್‌ನಲ್ಲಿ ದಾಮೋದರನ್ ರೋಹಿತ್ (12 ರನ್) ಅವರನ್ನು ಪ್ರಸಿದ್ಧಕೃಷ್ಣ ಕ್ಲೀನ್‌ಬೌಲ್ಡ್ ಮಾಡಿದರು. ಆದರೆ ಹುಬ್ಬಳ್ಳಿ ಹುಡುಗ ಪವನ್ ದೇಶಪಾಂಡೆ (ಔಟಾಗದೆ 54) ಸೋಲು ತಪ್ಪಿಸುವ ಪ್ರಯತ್ನ ಮಾಡಿದರು. ಆದರೆ, ಇನ್ನೊಂದು ಬದಿಯಲ್ಲಿದ್ದ ಬ್ಯಾಟರ್‌ಗಳು ಕಾಲೂರದಂತೆ ಶ್ರೇಯಸ್ ನೋಡಿಕೊಂಡರು.

ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿದ್ದ ಸುಬೋಧ್ ಬಾಟಿ (37) ಔಟಾಗಲೂ ಶ್ರೇಯಸ್ ಕಾರಣರಾದರು. ಗೌತಮ್ ಎಸೆತದಲ್ಲಿ ಶ್ರೇಯಸ್ ಪಡೆದ ಕ್ಯಾಚ್‌ನಿಂದಾಗಿ ಬಾಟಿ ಆಟಕ್ಕೆ ತೆರೆ ಬಿತ್ತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: ಮೊದಲ ಇನಿಂಗ್ಸ್: 8ಕ್ಕೆ 453 ಡಿಕ್ಲೇರ್; ಪುದುಚೇರಿ: ಮೊದಲ ಇನಿಂಗ್ಸ್: 241; ಎರಡನೇ ಇನಿಂಗ್ಸ್ (ಫಾಲೋ ಆನ್) 61 ಓವರ್‌ಗಳಲ್ಲಿ 192 (ಶನಿವಾರ 23 ಓವರ್‌ಗಳಲ್ಲಿ 4ಕ್ಕೆ 62): ಪವನ್ ಔಟಾಗದೆ 54, ಚಿರಂಜೀವಿ 28, ಸುಬೋಧ್ 37; ಪ್ರಸಿದ್ಧ ಕೃಷ್ಣ 38ಕ್ಕೆ3, ವಿದ್ಯಾಧರ ಪಾಟೀಲ 9ಕ್ಕೆ1, ಶ್ರೇಯಸ್ ಗೋಪಾಲ್ 82ಕ್ಕೆ5, ಕೃಷ್ಣಪ್ಪ ಗೌತಮ್ 31ಕ್ಕೆ1.

ಫಲಿತಾಂಶ: ಕರ್ನಾಟಕಕ್ಕೆ ಇನಿಂಗ್ಸ್ ಮತ್ತು 20 ರನ್‌ಗಳ ಗೆಲುವು; ಕ್ವಾರ್ಟರ್‌ಫೈನಲ್ ಪ್ರವೇಶ.

ಪಾಕಿಸ್ತಾನ ವಿರುದ್ಧ ಭಾರತ ಜಯಭೇರಿ

ವಿಶ್ವಕಪ್ ಕ್ರಿಕೆಟ್

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಪಿಟಿಐ): ಪಾಕಿಸ್ತಾನದ ಎದುರು ಆಲ್‌ರೌಂಡ್ ಆಟ ಪ್ರದರ್ಶಿಸಿದ ಭಾರತ ತಂಡದವರು ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿದರು.

ಬೇ ಓವಲ್‌ನಲ್ಲಿ ಭಾನುವಾರ ನಡೆದ ಹಣಾಹಣಿಯಲ್ಲಿ ಸ್ಮೃತಿ ಮಂದಾನ, ಸ್ನೇಹ್ ರಾಣಾ ಮತ್ತು ಪೂಜಾ ವಸ್ತ್ರಕರ್ ಅವರ ಅರ್ಧಶತಕ ಹಾಗೂ ಕರ್ನಾಟಕದ ರಾಜೇಶ್ವರಿ ಗಾಯಕವಾಡ್ ಅವರ ಅಮೋಘ ಸ್ಪಿನ್ ದಾಳಿ ಮಿಥಾಲಿ ರಾಜ್ ಬಳಗದ ಕೈ ಹಿಡಿಯಿತು. ತಂಡ 107 ರನ್‌ಗಳಿಂದ ಎದುರಾಳಿಗಳನ್ನು ಮಣಿಸಿತು.

ಭಾರಿ ಕುತೂಹಲ ಮೂಡಿಸಿದ್ದ ಪಂದ್ಯದಲ್ಲಿ ನಿರೀಕ್ಷಿತ ಪೈಪೋಟಿ ನೀಡುವಲ್ಲಿ ಪಾಕಿಸ್ತಾನ ವಿಫಲವಾಯಿತು. ಭಾರತಕ್ಕೆ ಮೂರನೇ ಓವರ್‌ನಲ್ಲೇ ಪೆಟ್ಟು ನೀಡುವಲ್ಲಿ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳನ್ನು ಬೇಗನೇ ಪೆವಿಲಿಯನ್‌ಗೆ ಅಟ್ಟುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ನಂತರ ಭಾರತ ಆಧಿಪತ್ಯ ಸ್ಥಾಪಿಸಿ ಏಳು ವಿಕೆಟ್‌ಗಳಿಗೆ 244 ರನ್ ಗಳಿಸಿತು.

ಗುರಿ ಬೆನ್ನತ್ತಿದ ಪಾಕಿಸ್ತಾನದ ಯಾರಿಗೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ. ಆರಂಭಿಕ ಬ್ಯಾಟರ್ ಸಿದ್ರಾ ಅಮೀನ್ ಅವರ 30 ರನ್‌ಗಳೇ ತಂಡದ ವೈಯಕ್ತಿಕ ಗರಿಷ್ಠ ಮೊತ್ತವಾಗಿತ್ತು. ವೇಗದ ಬೌಲರ್ ಜೂಲನ್ ಗೋಸ್ವಾಮಿ, ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಮತ್ತು ಆಫ್ ಸ್ಪಿನ್ನರ್ ಸ್ನೇಹ್ ರಾಣಾ ಅವರ ಪರಿಣಾಮಕಾರಿ ದಾಳಿಯಿಂದಾಗಿ ನಾಲ್ಕು ಮಂದಿಗೆ ಎರಡಂಕಿ ಮೊತ್ತ ದಾಟುವುದಕ್ಕೂ ಸಾಧ್ಯವಾಗಲಿಲ್ಲ.

ಸ್ನೇಹ್ , ಪೂಜಾ ಶತಕದ ಜೊತೆಯಾಟ: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ನಾಲ್ಕು ರನ್ ಗಳಿಸಿದ್ದಾಗ ಶೆಫಾಲಿ ವರ್ಮಾ ಶೂನ್ಯಕ್ಕೆ ಔಟಾದರು. ಆದರೆ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (52; 75 ಎಸೆತ, 3 ಬೌಂಡರಿ, 1 ಸಿಕ್ಸರ್) ಮತ್ತು ಮೂರನೇ ಕ್ರಮಾಂಕದ ದೀಪ್ತಿ ಶರ್ಮಾ (40; 57 ಎ, 2 ಬೌಂ) 92 ರನ್‌ಗಳ ಜೊತೆಯಾಟವಾಡಿ ಚೇತರಿಕೆ ತುಂಬಿದರು.

ನಶ್ರಾ ಸಂಧು ಮತ್ತು ನಿದಾ ದಾರ್ ಅವರ ದಾಳಿಗೆ ಭಾರತದ ಮಧ್ಯಮ ಕ್ರಮಾಂಕ ನಲುಗಿತು. 114 ರನ್ ಗಳಿಗೆ 6 ವಿಕೆಟ್ ಕಳೆದುಕೊಂಡು ತಂಡ ಸಂಕಷ್ಟದಲ್ಲಿದ್ದಾಗ ಜೊತೆಗೂಡಿದ ಸ್ನೇಹ್ ರಾಣಾ (53; 48 ಎ, 4 ಬೌಂ) ಮತ್ತು ಪೂಜಾ ವಸ್ತ್ರಕರ್ (67; 59 ಎ, 8 ಬೌಂ) ಶತಕದ (122 ರನ್)ನ ಜೊತೆಯಾಟವಾಡಿ ಮೊತ್ತವನ್ನು 200ರ ಗಡಿ ದಾಟಿಸಿದರು. ಕೊನೆಯ ಓವರ್‌ನಲ್ಲಿ ಪೂಜಾ ಔಟಾದರು. ಸ್ನೇಹ್ ಅಜೇಯವಾಗಿಯೇ ಉಳಿದರು.

ರಾಜೇಶ್ವರಿ ಗಾಯಕವಾಡ್

ಪೂಜಾ ವಸ್ತ್ರಕರ್

ಸ್ಕೋರ್ ಕಾರ್ಡ್

ಭಾರತ 7ಕ್ಕೆ 244 (50 ಓವರ್)

ಸ್ಮೃತಿ ಸಿ ಮತ್ತು ಬಿ ಅನಾಮ್ 52 (75 ಎ, 4x3, 6x1), ಶೆಫಾಲಿ ಬಿ ಡಯಾನ 0 (6 ಎ), ದೀಪ್ತಿ ಬಿ ನಶ್ರಾ 40 (57 ಎ, 4x2), ಮಿಥಾಲಿ ಸಿ ಡಯಾನ ಬಿ ನಶ್ರಾ 9 (36 ಎ), ಹರ್ಮನ್‌ಪ್ರೀತ್ ಎಲ್‌ಬಿಡಬ್ಲ್ಯು ಬಿ ನಿದಾ 5 (14 ಎ), ರಿಚಾ ಬಿ ನಿದಾ 1 (5 ಎ), ಸ್ನೇಹ್ ಔಟಾಗದೆ 53 (48 ಎ, 4x4), ಪೂಜಾ ಬಿ ಫಾತಿಮಾ 67 (59 ಎ, 4x8), ಜೂಲನ್ ಔಟಾಗದೆ 6 (3 ಎ, 4x1))

ಇತರೆ (ಲೆಗ್‌ಬೈ 1, ನೋಬಾಲ್ 3, ವೈಡ್ 7) 11

ವಿಕೆಟ್ ಪತನ: 1-4 (ಶೆಫಾಲಿ ವರ್ಮಾ, 2.6), 2-96 (ದೀಪ್ತಿ ಶರ್ಮಾ, 21.6), 3-98 (ಸ್ಮೃತಿ ಮಂದಾನ, 24.1), 4-108 (ಹರ್ಮನ್‌ಪ್ರೀತ್ ಕೌರ್, 28.4), 5-112 (ರಿಚಾ ಘೋಷ್, 30.5), 6-114 (ಮಿಥಾಲಿ ರಾಜ್, 33.1), 7-236 (ಪೂಜಾ ವಸ್ತ್ರಕರ್, 49.1)

ಪಾಕಿಸ್ತಾನ 137 (43 ಓವರ್))

ಸಿದ್ರಾ ಸಿ ರಿಚಾ ಬಿ ಜೂಲನ್ 30 (64 ಎ, 4x3), ಜವೇರಿಯಾ ಸಿ ಜೂಲನ್ ಬಿ ರಾಜೇಶ್ವರಿ 11 (28 ಎ, 4x1), ಬಿಸ್ಮಾ ಸಿ ರಿಚಾ ಬಿ ದೀಪ್ತಿ 15 (25 ಎ, 4x2), ಒಮೈಮಾ ಸಿ ದೀಪ್ತಿ ಬಿ ಸ್ನೇಹ್ 5 (4 ಎ), ನಿದಾ ಸಿ ರಿಚಾ ಬಿ ಜೂಲನ್ 4 (10 ಎ), ಅಲಿಯಾ ಸಿ ರಿಚಾ ಬಿ ರಾಜೇಶ್ವರಿ 11 (23 ಎ), ಫಾತಿಮಾ ಎಲ್‌ಬಿಡಬ್ಲ್ಯು ಬಿ ರಾಜೇಶ್ವರಿ 17 (35 ಎ, 4x1), ಸಿದ್ರಾ ಎಲ್‌ಬಿಡಬ್ಲ್ಯು ಬಿ ರಾಜೇಶ್ವರಿ 12 (19 ಎ, 4x1), ಡಯಾನ ಸಿ ಹರ್ಮನ್‌ಪ್ರೀತ್ ಬಿ ಮೇಘನಾ 24 (35 ಎ, 4x2), ನಶ್ರಾ ಸಿ ರಿಚಾ ಬಿ ಸ್ನೇಹ್ 0 (5 ಎ), ಅನಾಮ್ ಔಟಾಗದೆ 5 (10 ಎ)

ಇತರೆ (ಬೈ 1, ವೈಡ್ 2) 3

ವಿಕೆಟ್ ಪತನ: 1-28 (ಜವೇರಿಯಾ ಖಾನ್, 10.6), 2-53 (ಬಿಸ್ಮಾ ಮರೂಫ್, 17.4), 3-58 (ಒಮೈಮಾ ಸೊಹೈಲ್, 18.2), 4-67 (ಸಿದ್ರಾ ಅಮೀನ್, 21.2), 5-70 (ನಿದಾ ದಾರ್, 23.1), 6-87 (ಅಲಿಯಾ ರಿಯಾಜ್, 29.6), 7-98 (ಫಾತಿಮಾ ಸನಾ, 33.1), 8-113 (ಸಿದ್ರಾ ನವಾಜ್, 35.5), 9-114 (ನಶ್ರಾ ಸಂಧು, 36.5), 10-137 (ಡಯಾನ ಬೇಗ್, 42.6)

ಬೌಲಿಂಗ್: ಜೂಲನ್ ಗೋಸ್ವಾಮಿ 10–1–26–2, ಮೇಘನಾ ಸಿಂಗ್ 7–3–21–1, ರಾಜೇಶ್ವರಿ ಗಾಯಕವಾಡ್ 10–0–31–4, ದೀಪ್ತಿ ಶರ್ಮಾ 7–0–31–1, ಸ್ನೇಹ್ ರಾಣಾ 9–0–27–2

ಫಲಿತಾಂಶ: ಭಾರತಕ್ಕೆ 107 ರನ್‌ಗಳ ಗೆಲುವು

ಫಲಿತಾಂಶ: ಭಾರತಕ್ಕೆ 107 ರನ್‌ಗಳ ಗೆಲುವು

ಜಾವೇದ್ ಮಿಯಾಂದಾದ್
1975, 1979, 1983, 1988, 1992, 1996

ಸಚಿನ್ ತೆಂಡೂಲ್ಕರ್
1992, 1996, 1999, 2003, 2007, 2011

ಮಿಥಾಲಿ ರಾಜ್
2000, 2005, 2009, 2013, 2017, 2022

ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಕೌಂಟರ್‌ನಲ್ಲಿ ಭಾನುವಾರ, ಭಾರತ ಮತ್ತು ಶ್ರೀಲಂಕಾ ಕ್ರಿಕೆಟ್ ತಂಡಗಳ ನಡುವೆ ಮಾರ್ಚ್ 12ರಿಂದ ನಡೆಯಲಿರುವ ಎರಡನೇ ಟೆಸ್ಟ್ ಪಂದ್ಯದ ಟಿಕೆಟ್ ಖರೀದಿಸಲು ಸೇರಿದ್ದ ಕ್ರೀಡಾಭಿಮಾನಿಗಳು– ಪ್ರಜಾವಾಣಿ ಚಿತ್ರ

ಐಪಿಎಲ್: ಆರ್‌ಸಿಬಿಗೆ ಪಂಜಾಬ್ ಸವಾಲು

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 15ನೇ ಆವೃತ್ತಿಯು ಇದೇ 26ರಿಂದ ಆರಂಭವಾಗಲಿದೆ.

ಟೂರ್ನಿಯ ಉದ್ಘಾಟನೆ ಪಂದ್ಯವು ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ. ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ.

27ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಕನ್ನಡಿಗ ಮಯಂಕ್ ಅಗರವಾಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ಎದುರು ಅಭಿಯಾನ ಆರಂಭಿಸಲಿದೆ.

ಈ ಬಾರಿಯ ಎಲ್ಲ ಪಂದ್ಯಗಳೂ ಮುಂಬೈ ಮತ್ತು ಪುಣೆಯಲ್ಲಿ ನಡೆಯಲಿವೆ. ವಾಂಖೆಡೆ ಕ್ರೀಡಾಂಗಣ ಮತ್ತು ನವೀ ಮುಂಬೈನ ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ತಲಾ 20 ಪಂದ್ಯಗಳು, ಬ್ರೆಬೊರ್ನ್ ಕ್ರೀಡಾಂಗಣ ಮತ್ತು ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ತಲಾ 15 ಪಂದ್ಯಗಳು ನಡೆಯಲಿವೆ.

ಇದೀಗ ಮೇ 22ರವರೆಗಿನ ಪಂದ್ಯಗಳ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ಮೇ 24ರಿಂದ ಪ್ಲೇ ಆಫ್ ಹಂತದ ಪಂದ್ಯಗಳು ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಮೇ 29ರಂದು ಅಲ್ಲಿಯೇ ಫೈನಲ್ ನಡೆಯಲಿದೆ ಎಂದು ತಿಳಿಸಲಾಗಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ವೇಳಾಪಟ್ಟಿ

ದಿನಾಂಕ	ಎದುರಾಳಿ	ಕ್ರೀಡಾಂಗಣ
ಮಾರ್ಚ್ 27	ಪಂಜಾಬ್ ಕಿಂಗ್ಸ್	ಡಾ.ಡಿ.ವೈ.ಪಾಟೀಲ ಕ್ರೀಡಾಂಗಣ, ಮುಂಬೈ
ಮಾರ್ಚ್ 30	ಕೋಲ್ಕತ್ತ ನೈಟ್ ರೈಡರ್ಸ್	ಡಾ.ಡಿ.ವೈ.ಪಾಟೀಲ ಕ್ರೀಡಾಂಗಣ, ಮುಂಬೈ
ಏ.5	ರಾಜಸ್ಥಾನ್ ರಾಯಲ್ಸ್	ವಾಂಖೆಡೆ ಕ್ರೀಡಾಂಗಣ, ಮುಂಬೈ
ಏ.9	ಮುಂಬೈ ಇಂಡಿಯನ್ಸ್	ಎಂಸಿಎ ಕ್ರೀಡಾಂಗಣ ಪುಣೆ
ಏ.12	ಚೆನ್ನೈ ಸೂಪರ್ ಕಿಂಗ್ಸ್	ಡಾ. ಡಿ.ವೈ. ಪಾಟೀಲ ಕ್ರೀಡಾಂಗಣ, ಮುಂಬೈ
ಏ.16	ಡೆಲ್ಲಿ ಕ್ಯಾಪಿಟಲ್ಸ್	ವಾಂಖೆಡೆ ಕ್ರೀಡಾಂಗಣ ಮುಂಬೈ
ಏ.19	ಲಖನೌ ಸೂಪರ್ ಜೈಂಟ್ಸ್	ಡಾ.ಡಿ.ವೈ.ಪಾಟೀಲ ಕ್ರೀಡಾಂಗಣ, ಮುಂಬೈ
ಏ.23	ಸನ್‌ರೈಸರ್ಸ್ ಹೈದರಾಬಾದ್	ಬ್ರೆಬೋರ್ನ್ ಕ್ರೀಡಾಂಗಣ ಮುಂಬೈ
ಏ.26	ರಾಜಸ್ಥಾನ್ ರಾಯಲ್ಸ್	ಎಂಸಿಎ ಕ್ರೀಡಾಂಗಣ, ಪುಣೆ
ಏ.30	ಗುಜರಾತ್ ಟೈಟನ್ಸ್	ಬ್ರೆಬೋರ್ನ್ ಕ್ರೀಡಾಂಗಣ ಮುಂಬೈ
ಮೇ 4	ಚೆನ್ನೈ ಸೂಪರ್ ಕಿಂಗ್ಸ್	ಎಂಸಿಎ ಕ್ರೀಡಾಂಗಣ, ಪುಣೆ
ಮೇ 8	ಸನ್‌ರೈಸರ್ಸ್ ಹೈದರಾಬಾದ್	ವಾಂಖೆಡೆ ಕ್ರೀಡಾಂಗಣ, ಮುಂಬೈ
ಮೇ 13	ಪಂಜಾಬ್ ಕಿಂಗ್ಸ್	ಬ್ರೆಬೋರ್ನ್ ಕ್ರೀಡಾಂಗಣ, ಮುಂಬೈ
ಮೇ 19	ಗುಜರಾತ್ ಟೈಟನ್ಸ್	ವಾಂಖೆಡೆ ಕ್ರೀಡಾಂಗಣ, ಮುಂಬೈ

* ಏಪ್ರಿಲ್ 30 ಮತ್ತು ಮೇ 8ರಂದು ನಡೆಯುವ ಪಂದ್ಯಗಳು ಮಧ್ಯಾಹ್ನ 3.30ಕ್ಕೆ ಮತ್ತು ಇನ್ನುಳಿದ ಪಂದ್ಯಗಳು ರಾತ್ರಿ 7.30ರಿಂದ ಆರಂಭವಾಗಲಿವೆ.

ಖ್ವಾಜಾ ಕೈ ತಪ್ಪಿದ ಶತಕ

ರಾವಲ್ಪಿಂಡಿ (ಎಎಫ್‌ಪಿ): ಆರಂಭಿಕ ಬ್ಯಾಟರ್ ಉಸ್ಮಾನ್ ಖ್ವಾಜಾ (97; 159 ಎಸೆತ, 15 ಬೌಂಡರಿ) ಶತಕದ ಅಂಚಿನಲ್ಲಿ ಎಡವಿದರು. ಆದರೂ ಭರ್ಜರಿ ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಆತಿಥೇಯ ಪಾಕಿಸ್ತಾನಕ್ಕೆ ತಿರುಗೇಟು ನೀಡುವಲ್ಲಿ ಯಶಸ್ವಿಯಾಯಿತು.

ಪಿಂಡಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನದ ಮೊದಲ ಇನಿಂಗ್ಸ್ ಮೊತ್ತವನ್ನು (4ಕ್ಕೆ 476 ಡಿಕ್ಲೇರ್) ಬೆನ್ನತ್ತಿದ ಆಸ್ಟ್ರೇಲಿಯಾ ಮೂರನೇ ದಿನದಾಟದ ಮುಕ್ತಾಯಕ್ಕೆ 2ಕ್ಕೆ 271 ರನ್ ಗಳಿಸಿದೆ. ತಂಡ ಇನ್ನೂ 205 ರನ್‌ಗಳ ಹಿನ್ನಡೆಯಲ್ಲಿದೆ. ಉಸ್ಮಾನ್ ಖಾಜಾ ಶನಿವಾರ ಐದು ರನ್ ಗಳಿಸಿದ್ದರು. ಭಾನುವಾರ ಅಮೋಘ ಆಟ ಮುಂದುವರಿಸಿದ ಅವರು ಡೇವಿಡ್ ವಾರ್ನರ್ ಜೊತೆ ಮೊದಲ ವಿಕೆಟ್‌ಗೆ 156 ರನ್ ಸೇರಿಸಿದರು.

ವಾರ್ನರ್ ಔಟಾದ ನಂತರ ಖ್ವಾಜಾ ಮತ್ತು ಮಾರ್ನಸ್ ಲಾಬುಶೇನ್ ಭರ್ಜರಿ ಆಟವಾಡಿದರು. ಇವರಿಬ್ಬರು 47 ರನ್ ಕಲೆ ಹಾಕಿದರು. 11ನೇ ಶತಕದತ್ತ ಹೆಜ್ಜೆ ಹಾಕಿದ್ದ ಖ್ವಾಜಾ 54ನೇ ಓವರ್‌ನಲ್ಲಿ ಎಡವಿದರು. ಎಡಗೈ ಸ್ಪಿನ್ನರ್ ನೌಮನ್ ಅಲಿ ಅವರಿಗೆ ವಿಕೆಟ್ ಒಪ್ಪಿಸಿದರು.

ಉಸ್ಮಾನ್ ಖ್ವಾಜಾ

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: ಮೊದಲ ಇನಿಂಗ್ಸ್: 162 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 476 ಡಿಕ್ಲೇರ್; ಆಸ್ಟ್ರೇಲಿಯಾ: ಮೊದಲ ಇನಿಂಗ್ಸ್: (ಶನಿವಾರ 1 ಓವರ್‌ನಲ್ಲಿ ವಿಕೆಟ್ ನಷ್ಟವಿಲ್ಲದೆ 5) 73 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 271 (ಉಸ್ಮಾನ್ ಖ್ವಾಜಾ 97, ಡೇವಿಡ್ ವಾರ್ನರ್ 68, ಮಾರ್ನಸ್ ಲಾಬುಶೇನ್ ಬ್ಯಾಟಿಂಗ್ 69, ಸ್ಟೀವನ್ ಸ್ಮಿತ್ ಬ್ಯಾಟಿಂಗ್ 24; ನೌಮಾನ್ ಅಲಿ 49ಕ್ಕೆ 1).

ಡ್ರಾ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್

ಬ್ಯಾಂಬೊಲಿಮ್ (ಪಿಟಿಐ): ಆತಿಥೇಯ ಎಫ್‌ಸಿ ಗೋವಾ ಎದುರಿನ ಪಂದ್ಯವನ್ನು 4–4ರಲ್ಲಿ ಡ್ರಾ ಮಾಡಿಕೊಂಡ ಕೇರಳ ಬ್ಲಾಸ್ಟರ್ಸ್ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ತನ್ನ ಕೊನೆಯ ಪಂದ್ಯವನ್ನು ಸಂಭ್ರಮದಿಂದ ಮುಗಿಸಿತು.

ಶೂಟಿಂಗ್: ಭಾರತಕ್ಕೆ ಚಿನ್ನ

ಕೈರೊ (ಪಿಟಿಐ): ಭಾರತದ ರಾಹಿ ಸರ್ನೋಬತ್, ಇಶಾ ಸಿಂಗ್, ರಿಧಂ ಸಂಗ್ವಾನ್ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ

ಭಾನುವಾರ ನಡೆದ 25 ಮೀಟರ್ಸ್ ಪಿಸ್ತೂಲ್ ತಂಡ ವಿಭಾಗದ ಫೈನಲ್‌ನಲ್ಲಿ ಭಾರತದ ಶೂಟರ್‌ಗಳು 17–13ರಿಂದ ಸಿಂಗಪುರ ತಂಡದ ಎದುರು ಗೆದ್ದರು.

ಇಶಾ ಅವರು ಇದೇ ಟೂರ್ನಿಯ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

ಭಾರತ ಸದ್ಯ ಪದಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ.

ರಾಹಿ ಸರ್ನೋಬತ್– ಪಿಟಿಐ ಚಿತ್ರ

ಚಾಂಪಿಯನ್ ಪಟ್ಟಕ್ಕೇರಿದ ಕರ್ನಾಟಕ ಮಹಿಳಾ ತಂಡ. (ಎಡದಿಂದ): ಕವನಾ, ಸ್ನೇಹಾ, ದಿವ್ಯಾ, ಜಯಲಕ್ಷ್ಮಿ ಜಿ, ಗಾಯತ್ರಿ ಕೆ.ಎಸ್, ಮೇಘನಾ, ಅಕ್ಷತಾ, ಹರ್ಷಿತಾ, ಹೇಮಾ, ಸಹನಾ ಎಚ್‌.ವೈ

ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಟೂರ್ನಿ

ಕರ್ನಾಟಕ ಮಹಿಳಾ ತಂಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಕರ್ನಾಟಕ ಮಹಿಳಾ ತಂಡ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಗಳ ಆಶ್ರಯದಲ್ಲಿ ನಡೆದ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿತು.

ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ 35-22, 35-26ರಲ್ಲಿ ತಮಿಳುನಾಡು ವಿರುದ್ಧ ಜಯ ಸಾಧಿಸಿತು. ಕರ್ನಾಟಕ ತಂಡದಲ್ಲಿದ್ದ ಏಳು ಮಂದಿ ಆತಿಥೇಯ ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿಗಳು.

ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಆಂಧ್ರಪ್ರದೇಶ ತಂಡ ಮಹಾರಾಷ್ಟ್ರ ವಿರುದ್ಧ 35-30, 24-35, 35-16ರಲ್ಲಿ ಜಯ ಗಳಿಸಿತು. ಕೇರಳ ಮತ್ತು ಪುದುಚೇರಿ ಕ್ರಮವಾಗಿ 5 ಹಾಗೂ 6ನೇ ಸ್ಥಾನ ಗಳಿಸಿದವು. ಬಿಹಾರ ಮತ್ತು ಚತ್ತೀಸ್‌ಗಢಕ್ಕೆ ಕ್ರಮವಾಗಿ 7 ಹಾಗೂ 8ನೇ ಸ್ಥಾನ ಲಭಿಸಿತು. ಪುರುಷರ ವಿಭಾಗದಲ್ಲಿ ಕರ್ನಾಟಕ ತಂಡ 5ನೇ ಸ್ಥಾನ ಗಳಿಸಿತು.

ಶೇನ್ ವಾರ್ನ್ ಕೊಠಡಿಯಲ್ಲಿ ರಕ್ತದ ಕಲೆ

ಶೇನ್ ವಾರ್ನ್

ಕೊಹ್ ಸಮುಯಿ, ಥಾಯ್ಲೆಂಡ್ (ಪಿಟಿಐ): ಹೃದಯಾಘಾತದಿಂದ ಸಾವಿಗೀಡಾಗಿದ್ದಾರೆ ಎನ್ನಲಾಗಿರುವ ಸ್ಪಿನ್ ಮಾಂತ್ರಿಕ, ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರು ಇದ್ದ ಕೊಠಡಿಯಲ್ಲಿ ರಕ್ತದ ಕಲೆಗಳು ಕಂಡುಬಂದಿವೆ.

ಥಾಯ್ಲೆಂಡ್‌ನ ವಿಲಾಸಿ ಬಂಗ್ಲೆಯಲ್ಲಿದ್ದ ಶೇನ್ ವಾರ್ನ್ ಶುಕ್ರವಾರ ಅಸ್ವಸ್ಥರಾಗಿದ್ದರು. ಥಾಯ್ ಇಂಟರ್‌ನ್ಯಾಷನಲ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತಾದರೂ ಅಲ್ಲಿಗೆ ತಲುಪುವ ಮುನ್ನ ಕೊನೆಯುಸಿರೆಳೆದಿದ್ದರು ಎಂದು ವೈದ್ಯರು ತಿಳಿಸಿದ್ದರು. ಈ ನಡುವೆ ಕೊಠಡಿಯ ನೆಲದಲ್ಲಿ ಮತ್ತು ಟವೆಲ್‌ನಲ್ಲಿ ಪೊಲೀಸರು ರಕ್ತದ ಕಲೆಗಳನ್ನು ಪತ್ತೆ ಮಾಡಿದ್ದಾರೆ ಎಂದು ಸ್ಕೈ ನ್ಯೂಸ್ ಡಾಟ್ ಕಾಮ್ ಡಾಟ್ ಎಯು ವರದಿ ಮಾಡಿದೆ.

ವಾರ್ನ್ ಅವರಿಗೆ ಸಿಪಿಆರ್ ಆರಂಭಿಸಿದಾಗ ದ್ರವರೂಪದಲ್ಲಿ ಕಫವನ್ನು ಹೊರಹಾಕಿದ್ದರು. ಅವರ ಬಾಯಿಂದ ರಕ್ತವೂ ಬಂದಿತ್ತು ಎಂದು ಸ್ಥಳೀಯ ಪೊಲೀಸ್ ಕಮಾಂಡರ್ ಸತೀತ್ ಪೊಲ್ಪಿನಿತ್ ಮಾಧ್ಯಮಗಳಿಗೆ ತಿಳಿಸಿದ್ದಾರೆ. 'ಹೃದಯ ಚಿಕಿತ್ಸೆಗೆ ಸಂಬಂಧಿಸಿದ ವಾರ್ನ್ ಈಚೆಗೆ ವೈದ್ಯರೊಬ್ಬರನ್ನು ಭೇಟಿಯಾಗಿರುವುದು ಗೊತ್ತಾಗಿದೆ' ಎಂದು ಕೊಹ್ ಸಮುಯಿ ಪೊಲೀಸ್ ಠಾಣೆಯ ಸುಪರಿಂಟೆಂಡೆಂಟ್ ಯುತ್ತಾನ ಸಿರಿಸೊಂಬ ತಿಳಿಸಿದ್ದಾರೆ.

ಕೊಹ್ ಸಮುಯಿಯ ಪ್ರಸಿದ್ಧ ದ್ವೀಪಕ್ಕೆ ವಾರ್ನ್, ತಮ್ಮ ಗೆಳೆಯರ ಜೊತೆ ತೆರಳಿದ್ದರು. ಶುಕ್ರವಾರ ಸಂಜೆ 5 ಗಂಟೆಯ ವೇಳೆ ವಾರ್ನ್ ಅಸ್ವಸ್ಥರಾಗಿರುವುದನ್ನು ಗೆಳೆಯರೊಬ್ಬರು ಪತ್ತೆ ಮಾಡಿದ್ದರು. ಆಂಬುಲೆನ್ಸ್ ಬರುವ ವರೆಗೆ ಗೆಳೆಯರ ಬಳಗದವರು ಸಿಪಿಆರ್ ನೀಡಿದ್ದರು ಎಂದು ತಿಳಿದು ಬಂದಿದೆ.

ಸರ್ಕಾರದಿಂದ ಅಂತ್ಯಕ್ರಿಯೆ: ವಾರ್ನ್ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ನೆರವೇರಿಸಲಾಗುವುದು ಎಂದು ಅಧಿಕೃತವಾಗಿ ತಿಳಿಸಲಾಗಿದೆ.

ಬ್ಯಾಸ್ಕೆಟ್‌ಬಾಲ್: ಮೌಂಟ್ಸ್, ಬೀಗಲ್ಸ್ ಜಯಭೇರಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಮೌಂಟ್ಸ್ ಕ್ಲಬ್ ಮತ್ತು ಬೀಗಲ್ಸ್ ಬಿ.ಸಿ. ತಂಡಗಳು ಎಸ್.ಎಮ್.ಎನ್. ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಮಾತೃಕಪ್ ಮಹಿಳಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಸೂಪರ್ ಲೀಗ್ ಮೊದಲ ಸುತ್ತಿನ ಪಂದ್ಯಗಳಲ್ಲಿ ಜಯ ಸಾಧಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬೀಗಲ್ಸ್ ಬಿ.ಸಿ 66– 49ರಿಂದ ಡಿವೈಇಎಸ್ ಕ್ರೀಡಾ ವಸತಿಶಾಲೆ ಮೈಸೂರು ಎದುರು ಗೆದ್ದಿತು. ವಿಜೇತ ತಂಡದ ಚಂದನಾ 21 ಸ್ಕೋರ್ ದಾಖಲಿಸಿದರು. ಸೂಪರ್ ಲೀಗ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಮೌಂಟ್ಸ್ ಕ್ಲಬ್ 68–44ರಿಂದ ರಾಜ್ ಮಹಲ್ ಬಿ.ಸಿ. ಎದುರು ಗೆದ್ದಿತು.

ಇದಕ್ಕೂ ಮೊದಲು ನಡೆದ ಲೀಗ್ ಪಂದ್ಯಗಳಲ್ಲಿ ಮೌಂಟ್ಸ್ 89–33ರಿಂದ ಡಿವೈಇಎಸ್ ಮಂಡ್ಯ ಎದುರು, ಬೀಗಲ್ಸ್ ಬಿ.ಸಿ. 86–42ರಿಂದ ಡಿವೈಇಸ್ ವಿದ್ಯಾ ನಗರ ಎದುರು ಗೆದ್ದವು. ಡಿವೈಇಎಸ್ ಮೈಸೂರು 63–40ರಿಂದ ಸದರ್ನ್ ಬ್ಲ್ಯೂಸ್ ಎದುರು, ರಾಜ್‌ಮಹಲ್ 55– 39ರಿಂದ ಎಂ.ಎನ್,ಕೆ. ರಾವ್ ಎದುರು ಗೆದ್ದವು. ಇನ್ನುಳಿದ ಪಂದ್ಯಗಳಲ್ಲಿ ಬಿ.ಸಿ ಬಿ.ಸಿ 57–20ರಿಂದ ಮರ್ಚಂಟ್ಸ್ ದಾವಣಗೆರೆ ವಿರುದ್ಧ, ಐಬಿಬಿಸಿ 43–41ರಿಂದ ಭಾರತ್ ಎಸ್.ಯು ಎದುರು, ಜೆಎಸ್‌ಸಿ 65–37ರಿಂದ ಮಲ್ಲಸಜ್ಜನ ಧಾರವಾಡ ವಿರುದ್ಧ, ಪಟ್ಟಾಭಿರಾಮ ಬಿ.ಸಿ. 53–32ರಿಂದ ಮೈಸೂರು ಬಿಸಿ ಎದುರು ಗೆದ್ದವು.